NAVACHETANA EDUCATIONS

**ಬುದ್ಧಿಶಕ್ತಿ ಪರೀಕ್ಷೆಗಳು**

- ವೈಯಕ್ತಿಕ ಪರೀಕ್ಷೆ
  - ಶಾಬ್ದಿಕ ಪರೀಕ್ಷೆ
  - ಅಶಾಬ್ದಿಕ ಪರೀಕ್ಷೆ
  - ಕಾರ್ಯನಿರ್ವಹಣಾ ಪರೀಕ್ಷೆ
- ಸಮೂಹ ಪರೀಕ್ಷೆ
  - ಶಾಬ್ದಿಕ ಪರೀಕ್ಷೆ
  - ಅಶಾಬ್ದಿಕ ಪರೀಕ್ಷೆ

**ವೈಯಕ್ತಿಕ ಮತ್ತು ಸಮೂಹ ಬುದ್ಧಿಶಕ್ತಿ ಪರೀಕ್ಷೆಗಳ ವ್ಯತ್ಯಾಸ :**

| ವೈಯಕ್ತಿಕ ಬುದ್ಧಿಶಕ್ತಿ ಪರೀಕ್ಷೆ | ಸಮೂಹ ಬುದ್ಧಿಶಕ್ತಿ ಪರೀಕ್ಷೆ |
|---|---|
| 1. ಈ ಪರೀಕ್ಷೆಯನ್ನು ಏಕಕಾಲದಲ್ಲಿ ಒಬ್ಬ ವ್ಯಕ್ತಿಗೆ ಮಾತ್ರ ನೀಡಬಹುದು. | 1. ಈ ಪರೀಕ್ಷೆಯನ್ನು ಏಕ ಕಾಲದಲ್ಲಿ ಅನೇಕ ವ್ಯಕ್ತಿಗಳಿಗೆ ನೀಡಬಹುದು. |
| 2. ಈ ಪರೀಕ್ಷೆ ಹಣ ಮತ್ತು ವೇಳೆಯ ದೃಷ್ಟಿಯಿಂದ ಹೆಚ್ಚು ವೆಚ್ಚದಾಯಕ | 2. ಈ ಪರೀಕ್ಷೆ ಹಣ ಮತ್ತು ವೇಳೆಯ ದೃಷ್ಟಿಯಿಂದ ಮಿತವ್ಯಯಕಾರಿ. |
| 3. ಈ ಪರೀಕ್ಷೆಯಲ್ಲಿ ಮುಖಾ ಮುಖಿ ಅಂತರ್‌ಕ್ರಿಯೆ ಏರ್ಪಡುವುದರಿಂದ ಪರೀಕ್ಷೆ ತೆಗೆದುಕೊಳ್ಳುವ ವ್ಯಕ್ತಿಯ ವರ್ತನೆಯನ್ನು ಅಧ್ಯಯನ ಮಾಡಬಹುದು. | 3. ಇಲ್ಲಿ ಪ್ರತಿಯೊಬ್ಬರೊಡನೆ ಮುಖಾ ಮುಖಿ ಅಂತರ್‌ಕ್ರಿಯೆಗೆ ಅವಕಾಶವಿಲ್ಲದಿರುವುದಿಂದ ವ್ಯಕ್ತಿಗಳ ವರ್ತನೆ ಅಧ್ಯಯನ ಸಾಧ್ಯವಿಲ್ಲ |
| 4. ಓದಲು ಬರೆಯಲು ಬಾರದ ಮಕ್ಕಳಿಗೆ ವೈಯಕ್ತಿಕ ಪರೀಕ್ಷೆಗಳು ಸೂಕ್ತವಾಗಿವೆ | 4. ಈ ಪರೀಕ್ಷೆ ಕೇವಲ ದೊಡ್ಡ ಮಕ್ಕಳಿಗೆ ಮತ್ತು ವಯಸ್ಕರಿಗೆ ಅಂದರೆ ಓದು ಬರಹ ಬಲ್ಲ ಮತ್ತು ಸಹಕರಿಸಬಲ್ಲವರಿಗೆ ಮಾತ್ರ ಸೂಕ್ತವಾಗಿವೆ. |
| 5. ವಿದ್ಯುಕ್ತವಲ್ಲದ ರೀತಿಯಲ್ಲಿ ಈ ಪರೀಕ್ಷೆ ನೀಡಬಹುದು. | 5. ಈ ಪರೀಕ್ಷೆ ನೀಡುವಿಕೆ ವಿದ್ಯುಕ್ತವಾಗಿರುತ್ತದೆ. |
| 6. ವೈಯಕ್ತಿಕ ಪರೀಕ್ಷೆಗಳು ಹೆಚ್ಚು ವಿಶ್ವಸನೀಯವಾಗಿವೆ. ಈ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮಗುವಿಗೆ ಮಾರ್ಗದರ್ಶನನೀಡಬಹುದು. | 6. ಈ ಪರೀಕ್ಷೆಗಳು ಮಕ್ಕಳ ಓದುವ ಸಾಮರ್ಥ್ಯ ಮತ್ತು ವೇಗದಿಂದ ಪ್ರಭಾವಿತವಾಗುತ್ತವೆ. |
| 7. ನಿರಾಸಕ್ತಿ ಮತ್ತು ಮೋಸಮಾಡದಂತೆ ತಡೆಯಲು ಸಾಧ್ಯ. | 7. ಪರೀಕ್ಷೆಯಲ್ಲಿ ಆಸಕ್ತಿ ಕಳೆದುಕೊಂಡ ಮಗು ಹೊರಗಡೆ ನೋಡುತ್ತಾ ಕಾಲ ಕಳೆಯಬಹುದು. |
| 8. ವೈಯಕ್ತಿಕ ಪರೀಕ್ಷೆಗಳಲ್ಲಿ ಸ್ಪರ್ಧೆ ಮತ್ತು ಒತ್ತಡಗಳಿಗೆ ಅವಕಾಶವಿಲ್ಲ. | 8. ಈ ಪರೀಕ್ಷೆಗಳಲ್ಲಿ ಸ್ಪರ್ಧೆಗೆ ಅವಕಾಶವಿದೆ. ಕಾರ್ಯಸಾಧನೆಯ ವೇಗವೇ ಇಲ್ಲಿ ಪ್ರಮುಖವಾಗುತ್ತದೆ. |



Scanned with OKEN Scanner

| | |
|---|---|
| 9. ವ್ಯಕ್ತಿಯ ಅವಶ್ಯಕತೆಗಳಿಗೆ ತಕ್ಕಂತೆ ಪರೀಕ್ಷಕ ಮಾರ್ಪಾಟು ಮಾಡಿಕೊಳ್ಳಬಹುದು. ಮತ್ತು ಅವನನ್ನು ಹೊಗಳಿಕೆ ಮತ್ತು ಪ್ರೋತ್ಸಾಹದಿಂದ ಪ್ರೇರೇಪಿಸಬಹುದು. | 9. ಪರೀಕ್ಷಕ ವೈಯಕ್ತಿಕ ವಿದ್ಯಾರ್ಥಿಗಳ ಅಗತ್ಯತೆಗಳಿಗೆ ತಕ್ಕಂತೆ ಮಾರ್ಪಾಡು ಮಾಡಿಕೊಳ್ಳಲು ಸಾಧ್ಯವಿಲ್ಲ |
| ಉದಾ : ಸ್ಟಾನ್‌ಪೋರ್ಡ್ ಬೀನೆ ಪರೀಕ್ಷೆ, ಭಾಟಿಯಾರವರ ಬುದ್ಧಿಶಕ್ತಿ ಪರೀಕ್ಷೆ, ವೆಷ್ಲರ್‌ರವರ ಬುದ್ಧಿಶಕ್ತಿಮಾಪನ ಇತ್ಯಾದಿ. | ಉದಾ : ಆರ್ಮಿ ಆಲ್ಫಾ, ಆರ್ಮಿ ಬೀಟಾ, ರೇವನ್ಸ್ ಪ್ರೊಗ್ರೆಸಿವ್ ಮ್ಯಾಟ್ರಿಸಸ್, ಅಹುಜಾರವರ ಸಮೂಹ ಬುದ್ಧಿಶಕ್ತಿ ಪರೀಕ್ಷೆ ಇತ್ಯಾದಿ. |

ಪರೀಕ್ಷೆಗಳಲ್ಲಿ ಬಳಸಿರುವ ವಿಷಯವಸ್ತು ಮತ್ತು ಸಾಧನಗಳ ಆಧಾರದ ಮೇಲೆ ಬುದ್ಧಿಶಕ್ತಿ ಪರೀಕ್ಷೆಗಳನ್ನು ಶಾಬ್ದಿಕ, ಅಶಾಬ್ದಿಕ ಮತ್ತು ಕಾರ್ಯಾತ್ಮಕ ಪರೀಕ್ಷೆಗಳೆಂದು ವರ್ಗೀಕರಿಸಲಾಗಿದೆ.

**ಬುದ್ಧಿಶಕ್ತಿಯ ಶಾಬ್ದಿಕ ಪರೀಕ್ಷೆಗಳು :** ಇವು ಸಾಮಾನ್ಯವಾಗಿ ಬರವಣಿಗೆಯ (ಪೇಪರ್-ಪೆನ್ಸಿಲ್) ಪರೀಕ್ಷೆಗಳಾಗಿರುತ್ತವೆ. ಶಾಬ್ದಿಕ ಪರೀಕ್ಷೆಗಳು ಹಲವಾರು ರೀತಿಯ ಪ್ರಶ್ನೆಗಳನ್ನೊಳಗೊಂಡಿರುತ್ತವೆ. ಪದಗಳ ಅರ್ಥ, ವಾಕ್ಯ ಪೂರೈಕೆ, ಶಬ್ದ ಅಂಕಿ ಬದಲಾಯಿಸುವಿಕೆ, ಶಾಬ್ದಿಕ ಸಾದೃಶ್ಯಗಳು, ಅಂಕಗಣಿತದ ಸಮಸ್ಯೆಗಳು ಇತ್ಯಾದಿಗಳನ್ನು ಒಳಗೊಂಡಿರುತ್ತವೆ. ಇಲ್ಲಿ ನಿರ್ದೇಶನಗಳನ್ನು ನೀಡಲು ಮತ್ತು ವಿದ್ಯಾರ್ಥಿಗಳಿಂದ ಉತ್ತರ ಪಡೆಯಲು ಭಾಷೆಯನ್ನು ಬಳಸಲಾಗುತ್ತದೆ.

ಉದಾ : ಆರ್ಮಿ ಆಲ್ಫಾ, ವೆಷ್ಲರ್‌ರವರ ಶಾಬ್ದಿಕ ಬುದ್ಧಿಶಕ್ತಿ ಮಾಪನ, ಅಹುಜಾರವರ ಸಮೂಹ ಬುದ್ಧಿಶಕ್ತಿ ಪರೀಕ್ಷೆ ಇತ್ಯಾದಿ.

**ಬುದ್ಧಿಶಕ್ತಿಯ ಅಶಾಬ್ದಿಕ ಪರೀಕ್ಷೆಗಳು :** ಅಶಾಬ್ದಿಕ ಪರೀಕ್ಷೆಗಳು ಸಹ ಬರವಣಿಗೆಯ (ಪೇಪರ್–ಪೆನ್ಸಿಲ್) ಪರೀಕ್ಷೆಗಳಾಗಿರುತ್ತವೆ. ಈ ಪರೀಕ್ಷೆಗಳು ವ್ಯಕ್ತಿಯ ವೀಕ್ಷಣಾ ಸಾಮರ್ಥ್ಯ ಮತ್ತು ಆಲೋಚನಾ ಸಾಮರ್ಥ್ಯಗಳನ್ನು ಅಳೆಯುತ್ತವೆ. ಇದಕ್ಕಾಗಿ ರೇಖಾ ಚಿತ್ರಗಳು, ಪ್ರಾಣಿಗಳು ಮತ್ತು ಮಾನವ ಚಿತ್ರಗಳನ್ನು ಬಳಸಲಾಗಿದೆ. ಪರೀಕ್ಷೆ ತೆಗೆದುಕೊಳ್ಳುವ ವ್ಯಕ್ತಿ ಸಮಸ್ಯೆ ಪರಿಹರಿಸಲು ಹೋಲಿಸಬೇಕಾಗುತ್ತದೆ ಅಥವಾ ಕ್ರೋಢೀಕರಿಸಬೇಕಾಗುತ್ತದೆ ಅಥವಾ ಚಿತ್ರ ಪೂರೈಕೆ ಮಾಡಬೇಕಾಗುತ್ತದೆ. ಈ ಪರೀಕ್ಷೆಗಳನ್ನು ಅನಕ್ಷರಸ್ಥ ಮತ್ತು ಇತರೆ ದೇಶಗಳ ಮಕ್ಕಳಿಗೂ ನೀಡಬಹುದು. ನಿರ್ದೇಶನಗಳನ್ನು ನೀಡಲು ಭಾಷೆ ಬಳಸಲಾಗುತ್ತದೆ (ಮೌಖಿಕವಾಗಿ) ಉದಾ : ರೇವನ್‌ರವರ ಪ್ರೊಗ್ರೆಸಿವ್ ಮ್ಯಾಟ್ರಿಸಸ್, ಆರ್ಮಿಬೀಟಾ, ಕೆಟೆಲ್‌ರವರ ಕಲ್ಚರ್ ಫೇರ್ ಪರೀಕ್ಷೆ, ಪ್ರೇಮಲತಾರವರ ಅಶಾಬ್ದಿಕ ಬುದ್ಧಿಶಕ್ತಿ ಪರೀಕ್ಷೆ ಇತ್ಯಾದಿ.

**ಕಾರ್ಯ ನಿರ್ವಹಣಾ ಪರೀಕ್ಷೆಗಳು :** ಕಾರ್ಯ ನಿರ್ವಹಣಾ ಪರೀಕ್ಷೆಗಳಲ್ಲಿ ಪರೀಕ್ಷೆ ತೆಗೆದುಕೊಳ್ಳುವ ವ್ಯಕ್ತಿಯು ಭಾಷೆಯ ಉಪಯೋಗವನ್ನು ಪಡೆಯದೇ ಸರಳ ವಸ್ತುಗಳೊಂದಿಗೆ ಕ್ರಿಯಾ ಕೌಶಲವನ್ನು ತೋರಿಸುವ ಮೂಲಕ ಸಮಸ್ಯೆಗಳನ್ನು ಬಿಡಿಸಬೇಕಾಗುತ್ತದೆ. ಈ ಪರೀಕ್ಷೆ ಮರದ ಘನಗಳು, ಯಾಂತ್ರಿಕ ಒಗಟುಗಳು, ಚಿತ್ರಗಳು ಮತ್ತು ಇದೇ ರೀತಿಯ ಕೆಲವು ಸಾಮಗ್ರಿಗಳನ್ನು ಒಳಗೊಂಡಿರುತ್ತದೆ. ಈ ಪರೀಕ್ಷೆಗಳಲ್ಲಿ ವಿದ್ಯಾರ್ಥಿಯು ಸರಳ ಆಟದ ಸಾಮಗ್ರಿಗಳಲ್ಲಿ ತನ್ನ ಕರಕೌಶಲವನ್ನು ತೋರಿಸಬೇಕಾಗುತ್ತದೆ. ಇದು ಪ್ರಾಯೋಗಿಕ ಕೌಶಲವನ್ನೊಳಗೊಂಡಿದೆ. ಕಾರ್ಯನಿರ್ವಹಣಾ ಪರೀಕ್ಷೆಗಳು-ಕಿವುಡ ಮತ್ತು ಮೂಗ ಮಕ್ಕಳು, ಅನಕ್ಷರಸ್ಥರು, ನಾಚಿಕೆ ಸ್ವಭಾವದ ಮತ್ತು ಹಿಂಜರಿಯುವ ಪ್ರವೃತ್ತಿಯವರು, ಶೈಕ್ಷಣಿಕ ಕೊರತೆಯ ಮತ್ತು ವಿದೇಶಿ ಮಕ್ಕಳಿಗೆ ಬಳಸಲು ಉಪಯುಕ್ತವಾಗಿವೆ. ಕಾರ್ಯ ನಿರ್ವಹಣಾ ಪರೀಕ್ಷೆಗಳು ಯಾವಾಗಲೂ ವೈಯಕ್ತಿಕ ಪರೀಕ್ಷೆಗಳಾಗಿರುತ್ತವೆ.

ಉದಾ : ಭಾಟಿಯಾರವರ ಕಾರ್ಯ ನಿರ್ವಹಣಾ ಪರೀಕ್ಷೆ, ವೆಷ್ಲರ್‌ರವರ ಕಾರ್ಯ ನಿರ್ವಹಣಾ ಮಾಪನ ಘನ ವಿನ್ಯಾಸ ರಚನೆ ಪರೀಕ್ಷೆ ಇತ್ಯಾದಿ.

ಬುದ್ಧಿಶಕ್ತಿ ಪರೀಕ್ಷೆಗಳ ಎರಡು ವಿಧಗಳನ್ನೂ ಇಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

**ಸ್ಟ್ಯಾಂಡರ್ಡ್ ಪ್ರೋಗ್ರೆಸಿವ್ ಮೆಟ್ರಿಸಸ್ ಪರೀಕ್ಷೆ :**

ಈ ಪರೀಕ್ಷೆಯನ್ನು ರೂಪಿಸಿದವರು ಜೆ.ಸಿ. ರೇವನ್. ಇವರ ಪ್ರೊಗ್ರೆಸಿವ್ ಮೆಟ್ರಿಸಸ್ ಪರೀಕ್ಷೆ ಚಿತ್ರ ಸಾಮಗ್ರಿಗಳ ಸಹಾಯದಿಂದ ತಾರ್ಕಿಕ ಸಾಮರ್ಥ್ಯವನ್ನು ಪರೀಕ್ಷಿಸುವಂತಹ ಅಶಾಬ್ಧಿಕ ಸಮೂಹ ಪರೀಕ್ಷೆಯಾಗಿದೆ. ಈ ಪರೀಕ್ಷೆ ಹೋಲಿಸುವ ಸಾಮರ್ಥ್ಯ, ಸಾದೃಶ್ಯಗಳ ಮೂಲಕ ತರ್ಕಿಸುವ ಸಾಮರ್ಥ್ಯ, ಸ್ಥಳಾವಕಾಶ ಸಂಬಂಧಗಳನ್ನು ಗ್ರಹಿಸಿ ಸಮಪಾರ್ಶ್ವ ಪೂರ್ಣತೆಯನ್ನು ಸಂಘಟಿಸುವುದು ಇತ್ಯಾದಿಗಳನ್ನು ಅಳೆಯುತ್ತದೆ. ಇಲ್ಲಿ ಮಗುವಿಗೆ ಚಿತ್ರದ ಒಂದು ವಿನ್ಯಾಸವನ್ನು ನೀಡಿ ಅದರಲ್ಲಿ ಬಿಟ್ಟು ಹೋಗಿರುವ ಭಾಗವನ್ನು ಕೊಟ್ಟಿರುವ ವಿನ್ಯಾಸದ ಭಾಗಗಳಿಂದ ಗುರ್ತಿಸಿ ವಿನ್ಯಾಸವನ್ನು ಪೂರ್ತಿಗೊಳಿಸಬೇಕು. ಈ ಪರೀಕ್ಷೆ 60 ಪರೀಕ್ಷಾಂಶಗಳನ್ನು ಹೊಂದಿದ್ದು ಅವುಗಳನ್ನು ತಲಾ 12 ರಂತೆ 5 ಗುಂಪುಗಳಾಗಿ ವಿಂಗಡಿಸಲಾಗಿದೆ. ಈ ಪರೀಕ್ಷೆ ನೀಡಲು ಸಾಮಾನ್ಯವಾಗಿ 20 ರಿಂದ 30 ನಿಮಿಷಗಳು ಬೇಕಾಗುತ್ತದೆ.

**ಭಾಟಿಯಾರವರ ಬುದ್ಧಿಶಕ್ತಿಯ ಕಾರ್ಯ ನಿರ್ವಹಣಾ ಪರೀಕ್ಷಾ ಸಮೂಹ (ಟೆಸ್ಟ್ ಬ್ಯಾಟರಿ) :**

ಡಾ|| ಚಂದ್ರಮೋಹನ್ ಭಾಟಿಯಾರವರು ಶಾಲಾ ಮಕ್ಕಳಿಗಾಗಿ ಮತ್ತು ಅನಕ್ಷರಸ್ಥರಿಗೆ ನೀಡಬಹುದಾದ ಕಾರ್ಯನಿರ್ವಹಣೆಯ ಪರೀಕ್ಷೆಗಳನ್ನು ಮೊಟ್ಟ ಮೊದಲು ಪ್ರಮಾಣ ಬದ್ಧಗೊಳಿಸಿರುತ್ತಾರೆ. ಸ್ಮರಣೆಯ ಪರೀಕ್ಷೆಯನ್ನು ಹೊರತುಪಡಿಸಿ, ಉಳಿದ ಮಾಪನ ಅಶಾಬ್ದಿಕವಾಗಿದೆ. ಇದು ಈ ಕೆಳಗಿನ 5 ಉಪ ಪರೀಕ್ಷೆಗಳನ್ನೊಳಗೊಂಡಿದೆ. ಇದು ವೈಯಕ್ತಿಕ ಪರೀಕ್ಷೆಯಾಗಿದೆ.

1. **ಕ್ಹೋ ರವರ ಬ್ಲಾಕ್ ಡಿಜೈನ್ ಪರೀಕ್ಷೆ :** ಭಾಟಿಯಾರವರ ಪರೀಕ್ಷಾ ಸಮೂಹದಲ್ಲಿ ಕ್ಹೋರವರ ಬ್ಲಾಕ್ ಡಿಜೈನ್ ಪರೀಕ್ಷೆಯ 10 ಪರೀಕ್ಷಾಂಶಗಳನ್ನು ಮಾತ್ರ ಇಲ್ಲಿ ಬಳಸಲಾಗಿದೆ. ಪ್ರತಿಯೊಂದು ಕಾರ್ಡಿನ ಮೇಲೆ ಒಂದೊಂದು ಬಣ್ಣದ ಮುದ್ರಿತ ಚಿತ್ರವಿರುತ್ತದೆ. ಪರೀಕ್ಷಾರ್ಥಿ ಈ ಚಿತ್ರವನ್ನು ನೋಡಿ ನಂತರ ತನಗೆ ಕೊಟ್ಟಿರುವ ಬ್ಲಾಕ್‌ಗಳ ಸಹಾಯದಿಂದ ಆ ಚಿತ್ರವನ್ನು ನಿಗದಿತ ಸಮಯದಲ್ಲಿ ರಚಿಸಬೇಕು. ಈ ಮುದ್ರಿತ ಚಿತ್ರ ಪ್ರಾರಂಭದಲ್ಲಿ ತುಂಬಾ ಸರಳವಾಗಿದ್ದು ನಂತರ ಕ್ಲಿಷ್ಟತೆ ಮಟ್ಟ ಹೆಚ್ಚುತ್ತಾ ಹೋಗುತ್ತದೆ.

2. **ಅಲೆಗ್ಸಾಂಡರ್‌ರವರ ಪಾಸ್ ಅಲಾಂಗ್ ಪರೀಕ್ಷೆ :** ಭಾಟಿಯಾರವರ ಪರೀಕ್ಷಾ ಸಮೂಹ ಅಲೆಗ್ಸಾಂಡರ್‌ರವರ ಪಾಸ್ ಅಲಾಂಗ್ ಪರೀಕ್ಷೆಯ ಅಂಶಗಳನ್ನು ಒಳಗೊಂಡಿದೆ. ಇದರಲ್ಲೂ ಸಹ ಕಾರ್ಡ್‌ಗಳಲ್ಲಿ ಕೆಲವು ಮುದ್ರಿತ ಚಿತ್ರಗಳಿವೆ. ಇಲ್ಲಿ ವಿದ್ಯಾರ್ಥಿ ಅಥವಾ ಪರೀಕ್ಷಾರ್ಥಿ ತೆರೆದ ಪೆಟ್ಟಿಗೆಕಾರದ ರಚನೆಯಲ್ಲಿರುವ ಬಣ್ಣದ ಭಾಗಗಳನ್ನು ಪೆಟ್ಟಿಗೆಯೊಳಗೆ ಚಲಿಸುವ ಮೂಲಕ ಕಾರ್ಡ್‌ನಲ್ಲಿರುವಂತೆ ಚಿತ್ರ ರಚಿಸುತ್ತಾನೆ.

3. **ವಿನ್ಯಾಸ ಚಿತ್ರಣ ಪರೀಕ್ಷೆ :** ಈ ಪರೀಕ್ಷೆಯನ್ನು ಡಾ|| ಭಾಟಿಯಾರವರೇ ಸ್ವತಃ ರೂಪಿಸಿದ್ದಾರೆ. ಇದರಲ್ಲಿ 8 ಕಾರ್ಡ್‌ಗಳಿದ್ದು ಪ್ರತಿಯೊಂದರ ಮೇಲೂ ಒಂದು ನಿರ್ದಿಷ್ಟ ವಿನ್ಯಾಸವಿದೆ. ಪರೀಕ್ಷಾರ್ಥಿ ಕಾರ್ಡ್‌ನಲ್ಲಿರುವ ವಿನ್ಯಾಸವನ್ನು ನೋಡಿ ಅದೇ ರೀತಿಯ ನಿರ್ದಿಷ್ಟ ವಿನ್ಯಾಸದ ಚಿತ್ರ ಬರೆಯಬೇಕು. ಈ ಪರೀಕ್ಷಾಂಶಗಳಲ್ಲಿ ಚಿತ್ರ ಬರೆಯಲು ಪ್ರಾರಂಭಿಸಿದ ನಂತರ ಚಿತ್ರ ಪೂರ್ಣಗೊಳ್ಳುವವರೆಗೂ ಕೈ ಎತ್ತದೇ ಬರೆಯಬೇಕು.

4. **ತಕ್ಷಣದ ಸ್ಮೃತಿ ಪರೀಕ್ಷೆ :** ಕೆಲವು ಅಂಕೆಗಳನ್ನು ಹೇಳಲಾಗುವುದು. ಅವುಗಳನ್ನು ಪರೀಕ್ಷಾರ್ಥಿ ಅದೇ ಕ್ರಮದಲ್ಲಿ ಹೇಳಿ ಪುನರಾವರ್ತಿಸಬೇಕು. ಈ ಚಟುವಟಿಕೆ ವ್ಯಕ್ತಿಯ ತಕ್ಷಣದ ಸ್ಮೃತಿಯನ್ನು ಪರೀಕ್ಷಿಸಲು ಸಹಾಯ ಮಾಡುತ್ತದೆ.

5. **ಚಿತ್ರ ಪೂರೈಕೆ ಪರೀಕ್ಷೆ :** ಈ ಉಪ ಪರೀಕ್ಷೆಯಲ್ಲಿ 5 ಪರೀಕ್ಷಾಂಶಗಳಿವೆ. ಗ್ರಾಮೀಣ ಜೀವನವನ್ನು ಪ್ರತಿಬಿಂಬಿಸುವ ಚಿತ್ರಗಳನ್ನೊಳಗೊಂಡ ಕಾರ್ಡ್‌ಬೋರ್ಡನ್ನು 2, 4, 6, 8 ಮತ್ತು 12 ಭಾಗಗಳಾಗಿ ವಿಭಾಜಿಸಲಾಗಿದೆ. ಒಂದು ಚಿತ್ರದ ಭಾಗಗಳನ್ನು ಪರೀಕ್ಷಾರ್ಥಿಗೆ ನೀಡಿದಾಗ ಅವನು ಅವುಗಳನ್ನು ಕ್ರಮಬದ್ಧವಾಗಿ ಜೋಡಿಸಿ ಚಿತ್ರ ಪೂರೈಸುತ್ತಾನೆ.

ಈ 5 ಉಪ ಪರೀಕ್ಷೆಗಳ ಅಂಕಗಳನ್ನು ಬಳಸಿಕೊಂಡು ವ್ಯಕ್ತಿಯ ಬುದ್ಧಿಶಕ್ತಿಯನ್ನು ಅಳೆಯಬಹುದು.

**ಬುದ್ಧಿಶಕ್ತಿ ಪರೀಕ್ಷೆಗಳ ಶೈಕ್ಷಣಿಕ ಉಪಯೋಗಗಳು :**

ಬುದ್ಧಿಶಕ್ತಿ ಪರೀಕ್ಷೆಗಳು ತುಂಬಾ ಮೌಲ್ಯಯುತ ಸಾಧನಗಳಾಗಿವೆ. ಆದರೆ ಅವುಗಳ ಮೌಲ್ಯ ಸ್ಪರ್ಧಾತ್ಮಕ ಬಳಕೆ ಮತ್ತು ಅರ್ಥೈಸುವಿಕೆಯ ಮೇಲೆ ಅವಲಂಬಿಸಿದೆ. ಅವುಗಳನ್ನು ಜಾಗರೂಕತೆಯಿಂದ ಆಯ್ಕೆ ಮಾಡಿಕೊಂಡು ಬಳಸಿದರೆ ಮತ್ತು ಅರ್ಥೈಸಿದರೆ ಅವು ಶಿಕ್ಷಕನಿಗೆ ಈ ಕೆಳಕಂಡ ಕಾರ್ಯಗಳಿಗಾಗಿ ಉಪಯುಕ್ತ ಮಾಹಿತಿ ನೀಡುತ್ತವೆ.

★ ಸಮಾನ ಸಾಮರ್ಥ್ಯದ ಗುಂಪುಗಳನ್ನು ರಚಿಸಲು.

★ ಸಾಮಾನ್ಯ ಕಲಿಕಾ ಸಿದ್ಧತೆಯನ್ನು ಅಳೆಯಲು.

★ ಒಂದೇ ದೈಹಿಕ ವಯಸ್ಸಿನ ಮಕ್ಕಳ ಬುದ್ಧಿಶಕ್ತಿ ಸೂಚ್ಯಾಂಕಗಳಲ್ಲಿರುವ ವ್ಯತ್ಯಾಸಗಳನ್ನು ಸೂಚಿಸಲು.

★ ಮಾನಸಿಕ ನ್ಯೂನತೆಯ ಮಟ್ಟವನ್ನು ನಿಖರವಾಗಿ ನಿರೂಪಿಸಲು.

★ ಪ್ರತಿಭಾವಂತ ಮಕ್ಕಳನ್ನು ಗುರ್ತಿಸಲು.

★ ಶೈಕ್ಷಣಿಕ ಮಾರ್ಗದರ್ಶನಕ್ಕಾಗಿ.

★ ಮಾನಸಿಕ ಬೆಳವಣಿಗೆಯನ್ನು ಅಧ್ಯಯನ ಮಾಡಲು.

★ ವಿವಿಧ ಅಧ್ಯಯನ ವಿಭಾಗಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು.

★ ವಿದ್ಯಾರ್ಥಿಗಳ ತೊಂದರೆಗಳಿಗೆ ಕಾರಣ ತಿಳಿಯಲು ಸಹಾಯಮಾಡುತ್ತವೆ.

NAVACHETANA EDUCATIONS



Scanned with OKEN Scanner

# ಸಂವೇಗಾತ್ಮಕ ಬುದ್ಧಿಶಕ್ತಿ

**ಸಂವೇಗಗಳ ಶಿಕ್ಷಣದ ಪ್ರಾಮುಖ್ಯತೆ :**

ವಿಶ್ವದಾದ್ಯಂತ ಇರುವ ಪೋಷಕರು ಹಾಗ ಶಿಕ್ಷಣ ತಜ್ಞರು ಇಂದಿನ ಮಕ್ಕಳಿಗೆ ಸಾಂಪ್ರದಾಯಿಕ ಶಾಲಾ ಪಠ್ಯಕ್ರಮವನ್ನು ಮಾತ್ರ ಕಲಿಸಲು ಇಚ್ಛಿಸದೇ, ಭವಿಷ್ಯದ ಜೀವನವನ್ನು ರೂಪಿಸಿಕೊಳ್ಳಲು ಅಗತ್ಯವಾದಂತಹ ಶಿಕ್ಷಣವನ್ನು ನೀಡಲು ಬಯಸುತ್ತಿದ್ದಾರೆ. ನಮ್ಮ ಮಕ್ಕಳಿಗೆ ಬದಲಾಗುತ್ತಿರುವ ಸಾಮಾಜಿಕ ಸನ್ನಿವೇಶಗಳಿಗನುಗುಣವಾಗಿ ಉದಯಿಸುತ್ತಿರುವ ಹೊಸ ವೃತ್ತಿಗಳನ್ನು ಕೈಗೊಳ್ಳಲು ಅಗತ್ಯವಾದ ಶಿಕ್ಷಣ ನೀಡಬೇಕಾಗಿದೆ. ಕುಟುಂಬಗಳ ಮತ್ತು ಸಮುದಾಯದ ವ್ಯಕ್ತಿಗಳಲ್ಲಿ ಭಾವನಾತ್ಮಕ ಹೊಂದಾಣಿಕೆ ಇಲ್ಲದಿರುವುದು, ಹತಾಶ ಭಾವನೆ ಹಾಗೂ ಅಜಾಗರೂಕತೆಯಂತಹ ಅನಿರೀಕ್ಷಿತ ಭಾವನಾತ್ಮಕ ಏರಿಳಿತಗಳು ಹಿಂದಿನ ಶತಮಾನದ ಕೊನೆಯ ಭಾಗದಿಂದ ಈ ಶತಮಾನಕ್ಕೆ ಹರಿದು ಬಂದಿರುವುದನ್ನು ಕಾಣುತ್ತಿದ್ದೇವೆ. ಇಂದಿನ ಯುವಜನತೆ ಮತ್ತು ಮಕ್ಕಳಲ್ಲಿ ಆಕ್ರಮಣ ಪ್ರವೃತ್ತಿ, ಖಿನ್ನತೆ, ಆತ್ಮಹತ್ಯಾ ಪ್ರಮಾಣ ಮತ್ತು ಮಾನಸಿಕ ಒತ್ತಡ ಹೆಚ್ಚಾಗಿರುವುದನ್ನು ಕಾಣುತ್ತಿದ್ದೇವೆ.

ಈ ಹಿನ್ನೆಲೆಯಲ್ಲಿ ನಮ್ಮ ಮಕ್ಕಳಲ್ಲಿ ಜೀವನವನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗಲು ಅಗತ್ಯವಾದಂತಹ ಸಾಮರ್ಥ್ಯಗಳನ್ನು ಬೆಳೆಸುವುದರ ಮೂಲಕ ಸರಿಯಾದ ಮಾರ್ಗದಲ್ಲಿ ಮುನ್ನಡೆಯಲು ಮಾರ್ಗದರ್ಶನ ನೀಡಬೇಕಾಗಿದೆ. ತನ್ನ ಹಾಗೂ ಇತರರ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಇತರರ ಭಾವನೆಗಳಿಗೆ ಸ್ಪಂದಿಸುವ ಮತ್ತು ರಚನಾತ್ಮಕವಾಗಿ ವರ್ತಿಸುವ ಸಾಮರ್ಥ್ಯವನ್ನು ಬೆಳೆಸಬೇಕಾಗಿದೆ. ಇದನ್ನೆ ಸಂವೇಗಾತ್ಮಕ ಬುದ್ಧಿಶಕ್ತಿ ಎನ್ನುವರು.

**ಸಂವೇಗಾತ್ಮಕ ಬುದ್ಧಿಶಕ್ತಿಯ ಅರ್ಥ ಮತ್ತು ಘಟಕಾಂಶಗಳು :**

'ಸಂವೇಗಾತ್ಮಕ ಬುದ್ಧಿಶಕ್ತಿ' ಎಂಬ ಪದವನ್ನು ಮನೋವಿಜ್ಞಾನಿಗಳಾದ ಜಾನ್ ಮೇಯರ್ ಮತ್ತು ಪೀಟರ್ ಸಾಲೋವೈರವರು 1990ರಲ್ಲಿ ಮೊಟ್ಟಮೊದಲು ಬಳಕೆಗೆ ತಂದರು. ಇವರ ನಂತರ 1995ರಲ್ಲಿ ಅಮೆರಿಕಾದ ಮನೋವಿಜ್ಞಾನಿ ಹಾಗೂ ಪತ್ರಕರ್ತ ಡೇನಿಯಲ್ ಗೋಲ್‌ಮನ್‌ರವರು ಮೇಯರ್ ಮತ್ತು ಸಾಲೋವೈರವರ ಕಾರ್ಯಾಧಾರಿತವಾದ 'ಸಂವೇಗಾತ್ಮಕ ಬುದ್ಧಿಶಕ್ತಿ' (Emotional Intelligence) ಎಂಬ ಪುಸ್ತಕವನ್ನು ಪ್ರಕಟಿಸುವ ಮೂಲಕ ಈ ಪರಿಕಲ್ಪನೆಯನ್ನು ಹೆಚ್ಚು ಪ್ರಚುರಗೊಳಿಸಿದರು.

ಸಂವೇಗಾತ್ಮಕ ಬುದ್ಧಿಶಕ್ತಿ ಎಂದರೆ ನಮ್ಮ ಹಾಗೂ ಇತರರ ಭಾವನೆಗಳನ್ನು ಗುರುತಿಸುವ ಸಾಮರ್ಥ್ಯ, ಸ್ವಯಂ ಪ್ರೇರಿತರಾಗುವುದು, ನಮ್ಮ ಭಾವನೆಗಳನ್ನು ನಿಯಂತ್ರಿಸಿಕೊಳ್ಳುವ ಹಾಗೂ ಸಂಬಂಧಗಳನ್ನು ಸಮರ್ಥವಾಗಿ ನಿರ್ವಹಿಸುವಂತಹ ಸಾಮರ್ಥ್ಯವಾಗಿದೆ.

*– ಮೇಯರ್ ಜೆ ಮತ್ತು ಸಾಲೋವೈ ಪಿ. 1990*

ಮೇಲಿನ ವ್ಯಾಖ್ಯೆಯನ್ನು ಗಮನಿಸಿದಾಗ, ಸಂವೇಗಾತ್ಮಕ ಬುದ್ಧಿಶಕ್ತಿಯು ಬುದ್ಧಿಶಕ್ತಿ ಸೂಚ್ಯಾಂಕ (IQ) ದ ಆಧಾರದ ಮೇಲೆ ಅಳೆಯಬಹುದಾದ ಬೌದ್ಧಿಕ ಸಾಮರ್ಥ್ಯಕ್ಕಿಂತ ಭಿನ್ನವಾದುದಾಗಿದೆ. ಆದರೆ ಇದು ಶೈಕ್ಷಣಿಕ ಬುದ್ಧಿಶಕ್ತಿಗೆ ಪೂರಕವಾದುದಾಗಿದೆ. ಅನೇಕ ಜನರು ಉತ್ತಮ ಪುಸ್ತಕಾಭ್ಯಾಸಿಗಳಾಗಿರುತ್ತಾರೆ, ಆದರೆ ಅವರಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿಯ ಕೊರತೆಯಿರುತ್ತದೆ, ಮತ್ತು ಕೆಲವರಲ್ಲಿ ಬುದ್ಧಿಶಕ್ತಿ ಸೂಚ್ಯಾಂಕ ಕಡಿಮೆಯಿರುವುದು ಕಂಡುಬರುತ್ತದೆ, ಆದರೆ ಅವರು ಸಂವೇಗಾತ್ಮಕ ಬುದ್ಧಿಶಕ್ತಿ ಕೌಶಲಗಳಲ್ಲಿ ಮುಂದಿರುತ್ತಾರೆ.

ಎರಡು ವಿಭಿನ್ನ ರೀತಿಯ ಬುದ್ಧಿಶಕ್ತಿಗಳು – ಬೌದ್ಧಿಕ ಮತ್ತು ಸಂವೇಗಾತ್ಮಕ ಬುದ್ಧಿಶಕ್ತಿಗಳು ಮೆದುಳಿನ ವಿಭಿನ್ನ ಭಾಗಗಳ ಚಟುವಟಿಕೆಯನ್ನು ವ್ಯಕ್ತಪಡಿಸುತ್ತವೆ. ಬೌದ್ಧಿಕ ಬುದ್ಧಿಶಕ್ತಿಯು ಮೆದುಳಿನಲ್ಲಿ ಇತ್ತೀಚೆಗೆ ಬೆಳವಣಿಗೆಯಾಗಿರುವ ಮೇಲ್ಭಾಗದ ಪೊರೆಯಂತಿರುವ ನಿಯೋಕಾರ್ಟೆಕ್ಸ್ ಭಾಗದ ಕಾರ್ಯದ ಮೇಲೆ ಅವಲಂಬಿಸಿರುತ್ತದೆ. ಸಂವೇಗಾತ್ಮಕ ಅಂಶಗಳು ಮೆದುಳಿನಲ್ಲಿನ ತಳಭಾಗದಲ್ಲಿ ಬಹಳ ಹಿಂದೆಯೇ ಬೆಳವಣಿಗೆಯಾಗಿರುವ ಸಬ್ ಕಾರ್ಟೆಕ್ಸ್ ಭಾಗದ ಕಾರ್ಯದ ಮೇಲೆ ಅವಲಂಬಿಸಿರುತ್ತದೆ. ಸಂವೇಗಾತ್ಮಕ ಬುದ್ಧಿಶಕ್ತಿಯು ಕಾರ್ಯ ನಿರ್ವಹಿಸುವಲ್ಲಿ ಸಂವೇಗಾತ್ಮಕ ಕೇಂದ್ರಗಳು ಮತ್ತು ಬೌದ್ಧಿಕ ಕೇಂದ್ರಗಳು ಒಂದಕ್ಕೊಂದು ಪೂರಕವಾಗಿ ಕಾರ್ಯ ನಿರ್ವಹಿಸುತ್ತವೆ.

ಮೇಯರ್ ಮತ್ತು ಸಾಲೋವೈರವರ ಪ್ರಕಾರ ಸಂವೇಗಾತ್ಮಕ ಬುದ್ಧಿಶಕ್ತಿಯು ನಾಲ್ಕು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಅವುಗಳೆಂದರೆ

1. **ಸಂವೇಗಗಳನ್ನು ಗುರುತಿಸುವಿಕೆ :** ವ್ಯಕ್ತಿ ತನ್ನ ಹಾಗೂ ಇತರರ ಸಂವೇಗಗಳನ್ನು ಗುರುತಿಸುವ ಸಾಮರ್ಥ್ಯ.
2. **ಸಂವೇಗಗಳ ಬಳಕೆ :** ತನ್ನ ಆಲೋಚನೆಗಳಲ್ಲಿ ಮತ್ತು ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಸಂವೇಗಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಿಕೆ.
3. **ಸಂವೇಗಗಳನ್ನು ಅರ್ಥಮಾಡಿಕೊಳ್ಳುವಿಕೆ :** ಸಂವೇಗಗಳ ಜ್ಞಾನ, ಒಂದು ಸಂವೇಗ ಇನ್ನೊಂದು ಸಂವೇಗವಾಗಿ ಬದಲಾಗುವುದನ್ನು ಗುರುತಿಸುವಿಕೆ ಮತ್ತು ಗ್ರಹಿಸುವಿಕೆಯ ಸಾಮರ್ಥ್ಯ
4. **ಸಂವೇಗಗಳ ನಿರ್ವಹಣೆ :** ಭಾವೋದ್ವೇಗಗಳ ಸ್ವಯಂ ನಿಯಂತ್ರಣ ಮಾಡಿಕೊಳ್ಳುವ ಹಾಗೂ ಇತರರೊಂದಿಗೆ ಹೊಂದಿಕೊಳ್ಳುವ ಸಾಮರ್ಥ್ಯ.

**ಸಂವೇಗಾತ್ಮಕ ಬುದ್ಧಿಶಕ್ತಿಯ ಗುಣಲಕ್ಷಣಗಳು :**

ಗೋಲ್‌ಮನ್ ಡೇನಿಯಲ್ 1995ರಲ್ಲಿ ಕೈಗೊಂಡ ತನ್ನ ಅಧ್ಯಯನದಲ್ಲಿ ಸಂವೇಗಾತ್ಮಕ ಹಾಗೂ ಸಾಮಾಜಿಕ ಸಾಮರ್ಥ್ಯಗಳು ಹೇಗೆ ವ್ಯಕ್ತಿಯ ವೃತ್ತಿ ಜೀವನದಲ್ಲಿ ಸಹಾಯ ಮಾಡುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾನೆ. ಇವನ ಅಧ್ಯಯನವು ಸಂವೇಗಾತ್ಮಕ ಬುದ್ಧಿಶಕ್ತಿಯ ಕೆಲವು ಪ್ರಮುಖ ಲಕ್ಷಣಗಳ ಬಗ್ಗೆ ಬೆಳಕು ಚೆಲ್ಲಿದೆ. ಅವುಗಳೆಂದರೆ

1. **ಸ್ವಯಂ ಅರಿವು (Self Awareness) :** ಪ್ರತೀಕ್ಷಣದಲ್ಲಿ ಉಂಟಾಗುವ ಭಾವನೆಗಳನ್ನು ತಿಳಿಯುವುದು, ನಿರ್ಧಾರ ಕೈಗೊಳ್ಳುವಲ್ಲಿ ಮಾರ್ಗದರ್ಶನಕ್ಕಾಗಿ ತಮ್ಮ ಸಾಮರ್ಥ್ಯಗಳ ಬಳಕೆ, ತಮ್ಮ ಸಾಮರ್ಥ್ಯಗಳ ನೈಜವಾದ ಅಳತೆ ಮತ್ತು ಆತ್ಮವಿಶ್ವಾಸ ಬೆಳೆಸಿಕೊಳ್ಳುವಿಕೆಯನ್ನು ಸ್ವಯಂ ಅರಿವು ಎನ್ನಬಹುದು.
2. **ಸ್ವಯಂ ನಿಯಂತ್ರಣ (Self Regulation) :** ನಮ್ಮ ಕೈಯಲ್ಲಿರುವ ಕೆಲಸದ ಸಾಧನೆಗಾಗಿ ಸಂವೇಗಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಿಕೆ, ಸ್ವಯಂ ಪ್ರಜ್ಞೆ ಬೆಳೆಸಿಕೊಳ್ಳುವುದು, ಗುರಿ ಸಾಧನೆಯಾಗುವವರೆಗೆ ಭಾವೋದ್ವೇಗಗಳ ನಿಯಂತ್ರಣ, ಬಾವನಾತ್ಮಕ ವಿಚಲತೆಯಿಂದ ಸಹಜ ಸ್ಥಿತಿಗೆ ಬರುವುದನ್ನು ಸ್ವಯಂ ನಿಯಂತ್ರಣ ಎನ್ನುತ್ತೇವೆ.
3. **ಅಭಿಪ್ರೇರಣೆ (Motivation) :** ಗುರಿಗಳ ಸಾಧನೆಯ ಕಡೆಗೆ ಸಾಗಲು ತಮ್ಮ ಆಯ್ಕೆಗಳನ್ನು ಬಳಸಿಕೊಳ್ಳುವುದು, ಮುನ್ನುಗ್ಗಲು ಮತ್ತು ಸಾಧನೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದು, ಹಿಂಜರಿತ, ಸೋಲು ಮತ್ತು ಆಶಾಭಂಗಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಾಗಿದೆ.

4. **ಅನುಭೂತಿ ಶಕ್ತಿ (Empathy) :** ಇತರರ ಭಾವನೆಗಳಿಗೆ ಸ್ಪಂದಿಸುವದು, ಅವರ ಭಾವನೆಗಳನ್ನು ಅಥವಾ ಅಭಿಪ್ರಾಯಗಳನ್ನು ಪರಿಗಣಿಸುವುದು, ಇತರರೊಂದಿಗೆ ಉತ್ತಮ ಬಾಂಧವ್ಯ ರೂಪಿಸಿಕೊಳ್ಳುವಿಕೆ ಮತ್ತು ವಿಭಿನ್ನ ಮನೋಭಾವದ ಜನಗಳೊಂದಿಗೆ ಹೊಂದಿಕೊಳ್ಳುವುದಾಗಿದೆ.

5. **ಸಾಮಾಜಿಕ ಕೌಶಲಗಳು (Social skills) :** ಸಾಮಾಜಿಕ ಸನ್ನಿವೇಶಗಳನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳುವುದು, ಸಾಮಾಜಿಕ ಸಂಬಂಧಗಳಲ್ಲಿ ಭಾವನೆಗಳನ್ನು ಸರಿಯಾಗಿ ಬಳಸಿಕೊಳ್ಳುವಿಕೆ, ಪರಸ್ಪರ ಸಂಬಂಧ ಬೆಳೆಸಿಕೊಳ್ಳುವಿಕೆ, ಇತರರ ಮನ ಒಪ್ಪಿಸಲು, ಕಲಹಗಳನ್ನು ಬಗೆಹರಿಸಲು, ಸಂಧಾನ ಮಾಡಲು, ಸಹಕಾರ ಮನೋಭಾವ ಬೆಳೆಸಲು ಮತ್ತು ಗುಂಪು ಕಾರ್ಯವನ್ನು ಉತ್ತೇಜಿಸಲು ಬಳಸುವ ಕೌಶಲವನ್ನು ಇದು ಒಳಗೊಂಡಿದೆ.

**ಸಂವೇಗಾತ್ಮಕ ಸೂಚ್ಯಂಕ (Emotional Quotient) ವನ್ನು ಅಳೆಯುವಿಕೆ :**

ಬುದ್ಧಿಶಕ್ತಿ ಸೂಚ್ಯಂಕವನ್ನು ಅಳೆಯಲು ಇರುವ ಬುದ್ಧಿಶಕ್ತಿ ಪರೀಕ್ಷೆಗಳಂತೆ ಇಲ್ಲಿಯವರೆಗೆ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಅಳೆಯುವಂತಹ ಯಾವುದೇ ಒಂದು ಸಮಂಜಸತೆ ಹೊಂದಿರುವ ಬರವಣಿಗೆಯ ಪರೀಕ್ಷೆಯಿಲ್ಲ ಎಂದರೆ ತಪ್ಪಾಗಲಾರದು. ಆದರೆ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಗುರುತಿಸಬಹುದಾದಂತಹ ಹಲವಾರು ಸನ್ನಿವೇಶಗಳುಂಟು. ಈ ಸನ್ನಿವೇಶಗಳು ವ್ಯಕ್ತಿಯ ಸಂವೇಗಾತ್ಮಕ ಸೂಚ್ಯಂಕವನ್ನು ನಿಖರವಾಗಿ ಅಳೆಯದಿದ್ದರೂ ಅದನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಸಂವೇಗಾತ್ಮಕ ಸಾಮರ್ಥ್ಯಗಳನ್ನು ಸ್ವಯಂ ಮೌಲ್ಯಮಾಪನದ ಮೂಲಕ ಅಳೆಯಲು ಸಾಧ್ಯವಿದೆ. ತಮ್ಮ ಭಾವನೆಗಳನ್ನು ತಾವು ಅರ್ಥ ಮಾಡಿಕೊಳ್ಳದವರು, ಸ್ವಯಂ ಅರಿವು ಇಲ್ಲದವರು ತಮ್ಮ ಸಂವೇಗಾತ್ಮಕ ಸೂಚ್ಯಂಕವನ್ನು ಅಳೆಯಲು ಸಾದ್ಯವಾಗದೇ ಹೋಗಬಹುದು.

ಸಂವೇಗಾತ್ಮಕ ಸೂಚ್ಯಂಕವನ್ನು ಅಳೆಯಲು ಹಲವಾರು ಪ್ರಯತ್ನಗಳು ನಡೆದಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಇದಕ್ಕಾಗಿ ರೂಪಿತವಾದ ಕೆಲವು ಪ್ರಮುಖ ಪರೀಕ್ಷೆಗಳೆಂದರೆ ಮೇಯರ್ – ಸಾಲೋವೈ – ಕ್ಯಾರುಡೋ ಸಂವೇಗಾತ್ಮಕ ಬುದ್ಧಿಶಕ್ತಿಮಾಪನ (MEIS), ಸಂವೇಗಾತ್ಮಕ ಸಾಮರ್ಥ್ಯದ ತಪಶೀಲು ಪಟ್ಟಿ – 360 ( ECI – 360), ಕಾರ್ಯ ನಿರ್ವಹಣಾ ಪ್ರಶ್ನಾವಳಿ – ಸಂವೇಗಾತ್ಮಕ ಬುದ್ಧಿಶಕ್ತಿಯ ಮಾದರಿ (WPQ – Ei), ಮತ್ತು ಬ್ಯಾರನ್‌ರವರ ಸಂವೇಗಾತ್ಮಕ ಬುದ್ಧಿಶಕ್ತಿ ಸೂಚ್ಯಂಕದ ತಪಶೀಲು ಪಟ್ಟಿ (EQ - i).

**ಶೈಕ್ಷಣಿಕ ನಿಹಿತಾರ್ಥಗಳು ;**

ಸಂವೇಗಾತ್ಮಕ ಬುದ್ಧಿಶಕ್ತಿ ಪರಿಕಲ್ಪನೆಯು ಬಳಕೆ ಮನೋವೈಜ್ಞಾನಿಕ ಸಂಶೋಧನೆ ಮತ್ತು ಚಿಕಿತ್ಸಾ ಕ್ಷೇತ್ರಗಳ ಹೊರಗೂ ಹರಡಿರುವುವನ್ನು ನಾವು ಕಾಣಬಹುದಾಗಿದೆ. ವೃತ್ತಿಪರ, ಶೈಕ್ಷಣಿಕ ಹಾಗೂ ಸಮುದಾಯದ ಸಂಸ್ಥೆಗಳು ಸಂವೇಗಾತ್ಮಕ ಬುದ್ಧಿಶಕ್ತಿಯ ತತ್ವಗಳನ್ನು ತಮ್ಮ ಸಂಸ್ಥೆಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು, ಉತ್ತಮ ಬಾಂಧವ್ಯಗಳನ್ನು ಬೆಳೆಸಲು, ಉತ್ತಮ ಫಲಿತಾಂಶ ಪಡೆಯಲು ಹಾಗೂ ವೈಯಕ್ತಿಕ ತೃಪ್ತಿಯನ್ನು ಹೆಚ್ಚಿಸಲು ಅಳವಡಿಸಿಕೊಂಡಿವೆ. ಶಿಕ್ಷಣ ವಿವಿಧ ಹಂತಗಳಲ್ಲಿ ಈ ಕೆಳಕಂಡ ನಿಹಿತಾರ್ಥಗಳನ್ನೊಳಗೊಂಡಿದೆ.

✦ ಯಾವುದೇ ಕೌಶಲ ಅಥವಾ ಜ್ಞಾನದ ಬೆಳವಣಿಗೆ ಸ್ವಾಭಾವಿಕವಾದುದ್ದಾಗಿರಬೇಕು. ಯಾವ ಕಲಿಕೆಯಲ್ಲಿ ಮಗುವಿನ ಅಹಂಭಾಗಿತ್ವವಿರುತ್ತದೋ ಆಗ ಮಗು ಸಂತೋಷದಿಂದ ಹಾಗೂ ನಿರಂತರವಾಗಿ ಕಲಿಯುತ್ತದೆ. ಮಗುವಿನ



Scanned with OKEN Scanner

ಸಾಮರ್ಥ್ಯಗಳನ್ನು ತಿಳಿದಂತಹ ಶಿಕ್ಷಕ ಮಗುವಿನ ಉದ್ವೇಗ ಮತ್ತು ನಿರಾಸಕ್ತಿಯನ್ನು ಹೋಗಲಾಡಿಸುವಂತಹ ಶಿಕ್ಷಣವನ್ನು ನೀಡಬೇಕು. ಶಿಕ್ಷಣದಲ್ಲಿ ಇದು ಸಂವೇಗಗಳನ್ನು ನಿರ್ವಹಿಸಲು ಮತ್ತು ಬಳಕೆ ಮಾಡಲು ಪರಿಣಾಮಕಾರಿಯಾದ ಮಾರ್ಗವಾಗಿದೆ.

✦ ತರಗತಿಗಳಲ್ಲಿ ಕೆಲವೊಮ್ಮೆ ಅತಿ ಹೆಚ್ಚು ಬುದ್ಧಿಶಕ್ತಿ ಹೊಂದಿರುವ ವಿದ್ಯಾರ್ಥಿಗಳು ತಮ್ಮಲ್ಲಿ ಬೌದ್ಧಿಕ ಸಾಮರ್ಥ್ಯವಿದ್ದರೂ ಸಹ ಅತಿ ಕಡಿಮೆ ಸಾಧನೆ ತೋರುತ್ತಾರೆ. ಇಂತಹ ಮಕ್ಕಳು ಸಾಮಾನ್ಯವಾಗಿ ತಮ್ಮ ಭಾವನೆಗಳ ಮೇಲೆ ಹಿಡಿತ ಹೊಂದಿರುವುದಿಲ್ಲ ಹಾಗೂ ಇದು ಅವರ ಒತ್ತಡಗಳು ಹಾಗೂ ಉದ್ವೇಗಭರಿತ ವರ್ತನೆಗಳಲ್ಲಿ ಕಂಡುಬರುತ್ತದೆ. ವಿಚಲಿತ ಭಾವನೆಗಳು ನಮ್ಮ ಆಲೋಚನೆಗಳನ್ನು ಕದಡುತ್ತವೆ ಮತ್ತು ಮನಸ್ಸಿನ ಏಕಾಗ್ರತೆಯನ್ನು ಹಾಳು ಮಾಡುತ್ತವೆ. ಸಂವೇಗಾತ್ಮಕ ಸಾಮರ್ಥ್ಯ ನಮ್ಮ ಕ್ಷಣ ಕ್ಷಣದ ನಿರ್ಧಾರಗಳಿಗೆ ಮಾರ್ಗದರ್ಶನ ಮಾಡುತ್ತದೆ ಹಾಗೂ ತಾರ್ಕಿಕ ಮನಸ್ಸಿನಿಂದ ಕೆಲಸ ಮಾಡುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಶಿಕ್ಷಣವು ಬೌದ್ಧಿಕ ಮತ್ತು ಸಂವೇಗಾತ್ಮಕ ಸಾಮರ್ಥ್ಯಗಳನ್ನುಬೆಳೆಸುವುದರ ಜೊತೆಗೆ ಮನಸ್ಸು ಮತ್ತು ಹೃದಯಗಳು ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುವಂತೆ ಮಾಡಬೇಕಾಗಿದೆ.

✦ ಮಕ್ಕಳ ಜೊತೆ ಕೆಲಸ ಮಾಡುವ ಶಿಕ್ಷಕ ಅವರಲ್ಲಿ ಸಂವೇಗಾತ್ಮಕ ಸ್ವಯಂ ಅರಿವು, ಭಾವನೆಗಳನ್ನು ಗುರ್ತಿಸುವ ಮತ್ತು ಭಾವನೆಗಳೊಂದಿಗೆ ಧನಾತ್ಮಕವಾಗಿ ವರ್ತಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಸಹಾಯ ಮಾಡಬೇಕು. ವಿದ್ಯಾರ್ಥಿಗಳಿಗೆ ತಮ್ಮ ಭಾವನಾತ್ಮಕ ವರ್ತನೆಗಳ ಅಂತರಾವಲೋಕನಕ್ಕೆ ಅವಕಾಶ ಕಲ್ಪಿಸಬೇಕು. ಇದು ಮಕ್ಕಳು ತಮ್ಮ ಭಾವನೆಗಳನ್ನು ಹಾಗೂ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಹಾಗೂ ತಮ್ಮ ಭಾವನೆಗಳನ್ನು ನಿರ್ವಹಿಸುವುದನ್ನು ಕಲಿಯಲು ಸಹಾಯ ಮಾಡುತ್ತದೆ.

✦ ನಮ್ಮ ಸಂವೇಗಗಳನ್ನು ಸಮರ್ಪಕವಾಗಿ ನಿರ್ವಹಿಸಿಕೊಳ್ಳುವುದೇ ಒಂದು ಪೂರ್ಣಾವಧಿಯ ಕೆಲಸವಾಗಿದೆ. ನಮ್ಮ ಮಕ್ಕಳು ಬಾಳುತ್ತಿರುವಂತಹ ಈ ಸಮಸ್ಯಾಭರಿತ ಪ್ರಪಂಚದಲ್ಲಿ ಕೋಪ, ಭಯ, ಉದ್ವೇಗ, ಮಾನಸಿಕ ಒತ್ತಡಗಳು ಹೆಚ್ಚಾಗಿ ಮಕ್ಕಳ ಜ್ಞಾನಾತ್ಮಕ ಹಿನ್ನಡೆಗೆ ಕಾರಣವಾಗಿವೆ. ವಿರಾಮ ಪಡೆಯುವ ವಿಧಾನಗಳಾದ ಆಳವಾದ ಉಸಿರಾಟ ಕ್ರಿಯೆ, ಸ್ನಾಯು ವಿರಮಿಸುವಿಕೆ ಮತ್ತು ಕ್ರಿಯಾತ್ಮಕ ಅಭ್ಯಾಸಗಳಲ್ಲಿ ತೊಡಗಿಸುವುದರ ಮೂಲಕ ಅವರನ್ನು ಉದ್ವೇಗಗಳು ಮತ್ತು ಚಿಂತೆಗಳಿಂದ ದೂರ ಮಾಡಬಹುದು. ಇಂತಹ ಕ್ರಮಗಳು ಸೋಲುಗಳನ್ನು ತಾಳಿಕೊಳ್ಳಲು, ವೈಯಕ್ತಿಕ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುವಲ್ಲಿ, ಆರೋಗ್ಯದ ಸಮಸ್ಯೆಗಳು ಮತ್ತು ಆತ್ಮಹತ್ಯಾ ಪ್ರವೃತ್ತಿಯನ್ನು ತಡೆಗಟ್ಟುತ್ತವೆ.

✦ ಸಾಮಾಜಿಕ ಬುದ್ಧಿಶಕ್ತಿ ಅಂತರ್ ವ್ಯಕ್ತಿ ಸಂಬಂಧದ ಅಂಶಗಳನ್ನು ಒಳಗೊಂಡಿದೆ. ಶಿಕ್ಷಣದಲ್ಲಿ ಇದಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುವ ಅಗತ್ಯವಿದೆ. ಕಾರ್ಯಕ್ರಮಗಳಲ್ಲಿ ಸ್ವ ಇಚ್ಛೆಯಿಂದ ಪಾಲ್ಗೊಳ್ಳುವುದು, ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವ ಕೌಶಲ, ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸುವ ಸಾಮರ್ಥ್ಯ, ಮಾನಸಿಕ ಘರ್ಷಣೆಗಳನ್ನು ಬಗೆಹರಿಸಿಕೊಳ್ಳುವುದು, ಶಾಬ್ದಿಕ ಮತ್ತು ಅಶಾಬ್ದಿಕ ಭಾಷೆಯ ಮೂಲಕ ವ್ಯಕ್ತಿಗಳೊಡನೆ ವ್ಯವಹರಿಸುವುದು, ತೊಂದರೆಯಲ್ಲಿರುವವರಿಗೆ ಸಹಾಯ ಮಾಡುವುದು ಇತ್ಯಾದಿ ಗುಣಗಳನ್ನು ಶಾಲೆಯಲ್ಲಿ ಸಹಪಠ್ಯ ಮತ್ತು ಇತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಬೆಳೆಸಲು ಪ್ರಯತ್ನಿಸಬೇಕು.



Scanned with OKEN Scanner

ತರಗತಿಯಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿಗೆ ಒತ್ತು ಕೊಡಬೇಕಾದರೆ ಸಮಸ್ಯಾ ಪರಿಹಾರ, ಮಾನಸಿಕ ಘರ್ಷಣೆಗಳ ಪರಿಹಾರ, ಅನುಭೂತಿ ಶಕ್ತಿ, ಹೊಂದಾಣಿಕೆ ಮತ್ತು ಸಂವಹನಾ ಕೌಶಲಗಳ ಬಗ್ಗೆ ನಾವು ನಮ್ಮ ಗಮನ ಕೇಂದ್ರೀಕರಿಸಬೇಕು. ಇವು ನಿರ್ದಿಷ್ಟ ಕಲಿಕಾ ವಿಧಾನಗಳು ಹಾಗೂ ಜೀವನ ಕೌಶಲಗಳನ್ನು ಪೋಷಿಸುತ್ತವೆ.

## ನೆನಪಿನಲ್ಲಿಡಬೇಕಾದ ಅಂಶಗಳು

★ ಬುದ್ಧಿಶಕ್ತಿಯೆಂದರೆ ವ್ಯಕ್ತಿಯು ಉದ್ದೇಶ ಪೂರ್ವಕವಾಗಿ ವರ್ತಿಸಲು, ತರ್ಕಬದ್ಧವಾಗಿ ಯೋಚಿಸಲು ಮತ್ತು ತನ್ನ ಪರಿಸರದೊಂದಿಗೆ ಸಮರ್ಪಕವಾದ ರೀತಿಯಲ್ಲಿ ಹೊಂದಿಕೊಳ್ಳಲು ಬೇಕಾದ ಒಟ್ಟು ಸಾಮರ್ಥ್ಯ ಅಥವಾ ಸಾಮರ್ಥ್ಯದ ಸಮಷ್ಟಿಯಾಗಿದೆ.

★ ಮಾನಸಿಕ ವಯಸ್ಸು ಒಂದು ದತ್ತ ಸಮಯದಲ್ಲಿ ವ್ಯಕ್ತಿಯ ಬೌದ್ಧಿಕ ವಿಕಾಸದ ಮಟ್ಟವನ್ನು ಅಳೆಯುತ್ತದೆ.

★ ಬುದ್ಧಿ ಶಕ್ತಿ ಸೂಚ್ಯಾಂಕವು ಮಾನಸಿಕ ವಯಸ್ಸು ಮತ್ತು ದೈಹಿಕ ವಯಸ್ಸುಗಳಿಗಿರುವ ಅನುಪಾತವಾಗಿದೆ.

★ ಬುದ್ಧಿ ಶಕ್ತಿ ಸೂಚ್ಯಾಂಕಗಳು ಸಮಷ್ಟಿಯಲ್ಲಿ ಸಾಮಾನ್ಯ ಸಂಭಾವ್ಯ ವಕ್ರದ ರೀತಿಯಲ್ಲಿ ವಿತರಣೆಯಾಗಿರುತ್ತವೆ.

★ ಬುದ್ಧಿಶಕ್ತಿ ಪರೀಕ್ಷೆಗಳನ್ನು ವೈಯಕ್ತಿಕ ಮತ್ತು ಸಮೂಹ ಪರೀಕ್ಷೆಗಳೆಂದು ವರ್ಗೀಕರಿಸಲಾಗಿದೆ. ಪರೀಕ್ಷೆಗಳಲ್ಲಿ ಬಳಸಿರುವ ವಿಷಯವಸ್ತು ಮತ್ತು ಸಾಧನಗಳ ಆಧಾರದ ಮೇಲೆ, ಶಾಬ್ದಿಕ, ಅಶಾಬ್ದಿಕ ಮತ್ತು ಕಾರ್ಯ ನಿರ್ವಹಣೆಯ ಪರೀಕ್ಷೆಗಳೆಂದು ವಿಂಗಡಿಸಲಾಗಿದೆ.

★ ಬುದ್ಧಿಶಕ್ತಿ ಪರೀಕ್ಷೆಗಳ ಶೈಕ್ಷಣಿಕ ಉಪಯೋಗಗಳೆಂದರೆ – ಸಮಾನ ಸಾಮರ್ಥ್ಯದ ಗುಂಪುಗಳನ್ನು ರಚಿಸುವುದು, ಸಾಮಾನ್ಯ ಕಲಿಕಾ ಸಿದ್ಧತೆಯನ್ನು ಅಳೆಯುವುದು, ಪ್ರತಿಭಾವಂತ ಮಕ್ಕಳನ್ನು ಗುರ್ತಿಸುವುದು, ಶೈಕ್ಷಣಿಕ ಮಾರ್ಗದರ್ಶನ ನೀಡುವುದು ಮತ್ತು ಮಾನಸಿಕ ಬೆಳವಣಿಗೆ ಅಧ್ಯಯನ ಮಾಡುವುದು ಇತ್ಯಾದಿ.

★ ಸಂವೇಗಾತ್ಮಕ ಬುದ್ಧಿಶಕ್ತಿ ಎಂದರೆ ನಮ್ಮ ಹಾಗೂ ಇತರರ ಭಾವನೆಗಳನ್ನು ಗುರುತಿಸುವ ಸಾಮರ್ಥ್ಯ, ಸ್ವಯಂ ಪ್ರೇರಿತರಾಗುವುದು, ನಮ್ಮ ಭಾವನೆಗಳನ್ನು ನಿಯಂತ್ರಿಸಿಕೊಳ್ಳುವ ಹಾಗೂ ಸಂಬಂಧಗಳನ್ನು ಸಮರ್ಥವಾಗಿ ನಿರ್ವಹಿಸುವಂತಹ ಸಾಮರ್ಥ್ಯವಾಗಿದೆ.

★ ಸಂವೇಗಾತ್ಮಕ ಬುದ್ಧಿಶಕ್ತಿಯ ನಾಲ್ಕು ಪ್ರಮುಖ ಅಂಶಗಳೆಂದರೆ – ಸಂವೇಗಗಳನ್ನು ಗುರುತಿಸುವಿಕೆ, ಸಂವೇಗಗಳ ಬಳಕೆ, ಸಂವೇಗಗಳನ್ನು ಅರ್ಥಮಾಡಿಕೊಳ್ಳುವಿಕೆ ಮತ್ತು ಸಂವೇಗಗಳ ನಿರ್ವಹಣೆ.

★ ಸಂವೇಗಾತ್ಮಕ ಬುದ್ಧಿಶಕ್ತಿಯ ಗುಣ ಲಕ್ಷಣಗಳೆಂದರೆ – ಸ್ವಯಂ ಅರಿವು, ಸ್ವಯಂ ನಿಯಂತ್ರಣ, ಅಭಿಪ್ರೇರಣೆ, ಅನುಭೂತಿ ಶಕ್ತಿ ಮತ್ತು ಸಾಮಾಜಿಕ ಕೌಶಲಗಳು.

★ **ಶೈಕ್ಷಣಿಕ ನಿಹಿತಾರ್ಥಗಳು : ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಹೆಚ್ಚಿಸಲು ಮಕ್ಕಳ ಸಾಮರ್ಥ್ಯಾನುಸಾರ ಶಿಕ್ಷಣ ಒದಗಿಸಬೇಕು, ಉದ್ವೇಗ ಮತ್ತು ನಿರಾಸಕ್ತಿಯನ್ನು ಹೋಗಲಾಡಿಸಬೇಕು, ಶಿಕ್ಷಣ ಜ್ಞಾನಾತ್ಮಕ ಮತ್ತು ಸಂವೇಗಾತ್ಮಕ ಸಾಮರ್ಥ್ಯಗಳನ್ನು ಹೆಚ್ಚಿಸುವ ಜವಾಬ್ದಾರಿ ಹೊಂದಿದೆ. ಸಂವೇಗಾತ್ಮಕ ಸ್ವಯಂ ಅರಿವು ಬೆಳೆಸಬೇಕು, ಸಂವೇಗಾತ್ಮಕ ನಿರ್ವಹಣಾ ತಂತ್ರಗಳು, ಅಂತರ್ ವ್ಯಕ್ತಿ ಬಾಂಧವ್ಯ ಮತ್ತು ಸಾಮಾಜಿಕ ಕೌಶಲಗಳನ್ನು ಬೆಳೆಸುವ ಕ್ರಮಗಳನ್ನು ಕೈಗೊಳ್ಳಬೇಕು.**



Scanned with OKEN Scanner

## ಅಭ್ಯಾಸ ಪ್ರಶ್ನೆಗಳು

1. ಬುದ್ಧಿಶಕ್ತಿ ಎಂದರೇನು?
2. ಬುದ್ಧಿಶಕ್ತಿಯ ವ್ಯಾಖ್ಯೆಗಳನ್ನು ಪರೀಕ್ಷಿಸಿ ಮತ್ತು ನಿಮ್ಮದೇ ಆದ ವ್ಯಾಖ್ಯೆ ನೀಡಿರಿ.
3. ಮಾನಸಿಕ ವಯಸ್ಸು ಮತ್ತು ಬುದ್ಧಿಶಕ್ತಿ ಸೂಚ್ಯಾಂಕ ಈ ಪರಿಕಲ್ಪನೆಗಳನ್ನು ವಿವರಿಸಿ.
4. ಸಾಮಾನ್ಯ ಸಂಭಾವ್ಯ ವಕ್ರ ರೀತಿಯ ಬುದ್ಧಿಶಕ್ತಿ ವಿತರಣೆಯನ್ನು ವಿವರಿಸಿ.
5. ವೈಯಕ್ತಿಕ ಮತ್ತು ಸಮೂಹ ಬುದ್ಧಿಶಕ್ತಿ ಪರೀಕ್ಷೆಗಳನ್ನು ಹೋಲಿಸಿರಿ.
6. ಭಾಟಿಯಾರವರ ಬುದ್ಧಿಶಕ್ತಿಯ ಕಾರ್ಯ ನಿರ್ವಹಣೆಯ ಪರೀಕ್ಷಾ ಸಮೂಹವನ್ನು ಸಂಕ್ಷಿಪ್ತವಾಗಿ ವಿವರಿಸಿ.
7. ಬುದ್ಧಿಶಕ್ತಿ ಸೂಚ್ಯಾಂಕಗಳನ್ನು ಹೇಗೆ ವರ್ಗೀಕರಿಸಲಾಗಿದೆ?
8. ಬುದ್ಧಿಶಕ್ತಿ ಪರೀಕ್ಷೆಗಳ ಶೈಕ್ಷಣಿಕ ಉಪಯೋಗಗಳನ್ನು ತಿಳಿಸಿರಿ
9. ಬುದ್ಧಿಶಕ್ತಿಯನ್ನು ಅಳೆಯುವುದು ಏಕೆ ಆವಶ್ಯಕ?
10. ಸಮೂಹ ಬುದ್ಧಿಶಕ್ತಿ ಪರೀಕ್ಷೆಗಳನ್ನು ಸೂಕ್ತ ಉದಾಹರಣೆಗಳೊಂದಿಗೆ ವಿವರಿಸಿರಿ. ಅದರ ಅನುಕೂಲಗಳು ಮತ್ತು ಮಿತಿಗಳೇನು?
11. ಈ ಕೆಳಗಿನ ಪ್ರತಿಯೊಂದು ಮಾದರಿ ಪ್ರಶ್ನೆಗಳಿಗೂ ಒಂದೊಂದು ಉದಾಹರಣೆ ಕೊಡಿ ಮತ್ತು ಪ್ರತಿಯೊಂದರ ಪ್ರಮುಖ ಲಕ್ಷಣಗಳನ್ನು ತಿಳಿಸಿರಿ.
    (i) ಶಾಬ್ದಿಕ ಪರೀಕ್ಷೆ
    (ii) ಅಶಾಬ್ದಿಕ ಪರೀಕ್ಷೆ
    (iii) ಕಾರ್ಯ ನಿರ್ವಹಣೆಯ ಪರೀಕ್ಷೆ
12. ಸಂವೇಗಾತ್ಮಕ ಬುದ್ಧಿಶಕ್ತಿ ಎಂದರೇನು?
13. ಸಂವೇಗಾತ್ಮಕ ಬುದ್ಧಿಶಕ್ತಿಯ ಮೂಲ ಘಟಕಾಂಶಗಳಾವುವು?
14. ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಹೇಗೆ ಅಳೆಯುವಿರಿ?
15. ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಹೆಚ್ಚಿಸಲು ಯಾವ ಶೈಕ್ಷಣಿಕ ಕ್ರಮಗಳನ್ನು ಕೈಗೊಳ್ಳಬಹುದು?

NAVACHETANA EDUCATIONS



Scanned with OKEN Scanner

# 5.3

# ವಿಶೇಷ ಸಾಮರ್ಥ್ಯ ಮತ್ತು ಅಗತ್ಯತೆಯುಳ್ಳ ಮಕ್ಕಳು

ವಿಶೇಷ ಸಾಮರ್ಥ್ಯಗಳು ಮತ್ತು ಅಗತ್ಯತೆಗಳಿರುವ ಮಕ್ಕಳನ್ನು ವಿಶಿಷ್ಟ ಮಕ್ಕಳೆಂದು ಪರಿಗಣಿಸಲಾಗಿದೆ. ಸೃಜನಶೀಲರು, ಪ್ರತಿಭಾನ್ವಿತರು, ಮಂದಗತಿಯಲ್ಲಿ ಕಲಿಯುವವರು ಮತ್ತು ಅಪೂರ್ಣ ಸಾಧಕರನ್ನು ಬೌದ್ಧಿಕ ವಿಶಿಷ್ಟ ಮಕ್ಕಳೆನ್ನುವರು. ಸೃಜನಶೀಲತೆ ಎಂಬುದು ತುಂಬಾ ಬೆಲೆ ಬಾಳುವ ಮಾನವ ಗುಣಗಳಲ್ಲೊಂದು. ಸೃಜನಶೀಲ ಚಟುವಟಿಕೆಗಳು ವೈಜ್ಞಾನಿಕ ಪ್ರಗತಿಯನ್ನುನಿರ್ಧರಿಸುತ್ತವೆ. ಯಾವ ರಾಷ್ಟ್ರಗಳು ತನ್ನ ವ್ಯಕ್ತಿಗಳಲ್ಲಿ ಸೃಜನಶೀಲತೆಯನ್ನು ಗುರ್ತಿಸಿ, ಬೆಳೆಸಿ, ಪ್ರೋತ್ಸಾಹಿಸುತ್ತವೆಯೋ ಅಂತಹ ರಾಷ್ಟ್ರಗಳು ತುಂಬಾ ಅನುಕೂಲಕರ ಸ್ಥಾನದಲ್ಲಿವೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಶಿಕ್ಷಕನು ಸೃಜನಶೀಲ ಮಕ್ಕಳ ಜ್ಞಾನ, ಅವರ ಲಕ್ಷಣಗಳು ಮತ್ತು ತನ್ನ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು ಅಭಿವೃದ್ಧಿ ಪಡಿಸುವ ಕ್ರಮಗಳನ್ನು ತಿಳಿದಿರಬೇಕು. ಇದರ ಜೊತೆಗೆ, ಪ್ರತಿಭಾವಂತ ಮಕ್ಕಳು, ಮಂದ ಗತಿಯಲ್ಲಿ ಕಲಿಯುವವರು ಮತ್ತು ಅಪೂರ್ಣ ಸಾಧಕರ ಗುಣಲಕ್ಷಣಗಳು ಮತ್ತು ಶೈಕ್ಷಣಿಕ ಕ್ರಮಗಳ ಬಗ್ಗೆ ಈ ವಿಭಾಗದಲ್ಲಿ ಚರ್ಚಿಸಲಾಗಿದೆ. ಈ ಜ್ಞಾನ ತರಗತಿಯ ಶಿಕ್ಷಕರಿಗೆ ಅಂತಹ ಮಕ್ಕಳನ್ನು ಗುರುತಿಸಲು ಮತ್ತು ಅವರಿಗೆ ಶಿಕ್ಷಣ ನೀಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸಹಾಯ ಮಾಡುತ್ತದೆ.

## ಸೃಜನಶೀಲತೆಯ ಅರ್ಥ

ಸಾಮಾನ್ಯವಾಗಿ, ವಸ್ತುಗಳು ಅಥವಾ ವಿಚಾರಗಳ ನಡುವೆ ಹೊಸ ಸಂಬಂಧವನ್ನು ಕಾಣುವುದನ್ನು ಅಥವಾ ವ್ಯಕ್ತಪಡಿಸುವುದನ್ನು ಸೃಜನಶೀಲತೆ ಎನ್ನುವರು. ಈ ಅರ್ಥದ ದೃಷ್ಟಿಯಿಂದ ನೋಡಿದಾಗ ಪ್ರತಿಯೊಬ್ಬ ಮಗುವು ಸೃಜನಶೀಲನೇ ಆಗಿರುತ್ತಾನೆ. ಆದರೆ ಸೃಜನಶೀಲತೆಯ ಪ್ರಮಾಣ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಸೃಜನಶೀಲ ಮಕ್ಕಳು ಸಮಾಜದ ಆಸ್ತಿಯಿದ್ದಂತೆ. ಒಂದು ರಾಷ್ಟ್ರದ ವಿವಿಧ ಕ್ಷೇತ್ರಗಳಲ್ಲಿನ ಅಭಿವೃದ್ಧಿ ಮತ್ತು ಪ್ರಗತಿ ಆ ರಾಷ್ಟ್ರದಲ್ಲಿರುವ ಸೃಜನಶೀಲ ವ್ಯಕ್ತಿಗಳ ಮೇಲೆ ಅವಲಂಬಿಸಿರುತ್ತದೆ. ನಾವು ಎಲ್ಲಾ ಮಕ್ಕಳಲ್ಲಿಯೂ ಸೃಜನ ಶೀಲತೆಯನ್ನು ಬೆಳೆಸಲು ಪ್ರಯತ್ನಿಸಬೇಕು. ಆಗ ಮಾತ್ರ ಅವರು ತಮಗೆ ಇಷ್ಟವಾದ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವುದರ ಮೂಲಕ ರಾಷ್ಟ್ರವನ್ನು ಮುನ್ನಡೆಸಬಲ್ಲರು. ಅವರು ತಮ್ಮ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಬಲ್ಲರು. ನಮ್ಮ ಶಾಲೆಗಳು ಮಕ್ಕಳಲ್ಲಿ ಸೃಜನಶೀಲತೆಯನ್ನು ಅಭಿವೃದ್ಧಿ ಪಡಿಸುವುದರ ಮೂಲಕ ರಾಷ್ಟ್ರದ ವಿವಿಧ ಕ್ಷೇತ್ರಗಳಿಗೆ ಅಗತ್ಯವಾದ ನಾಯಕರನ್ನು ರೂಪಿಸಬೇಕು. ಶಾಲೆ ಸೃಜನಶೀಲ ಮಕ್ಕಳನ್ನು ಗುರ್ತಿಸಿ, ಅವರಲ್ಲಿರುವ ವಿಶಿಷ್ಟ ಸಾಮರ್ಥ್ಯಗಳನ್ನು ಬೆಳೆಸಲು ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು.

19ನೇ ಶತಮಾನದ ಪ್ರಾರಂಭದಲ್ಲಿ ಕೇವಲ ಹೆಚ್ಚು ಬುದ್ಧಿಶಕ್ತಿಯುಳ್ಳ ವ್ಯಕ್ತಿಗಳು ಮಾತ್ರ ಸೃಜನಶೀಲರು ಎಂದು ತಿಳಿದಿದ್ದರು, ನಂತರ ಕಂಡು ಬಂದ ಅಂಶವೆಂದರೆ ಸೃಜನಶೀಲತೆಗೆ ಬುದ್ಧಿಶಕ್ತಿ ಅವಶ್ಯಕ, ಆದರೆ ಎಲ್ಲಾ ಹೆಚ್ಚು ಬುದ್ಧಿಶಕ್ತಿಯುಳ್ಳವರು ಸೃಜನಶೀಲರಲ್ಲವೆಂಬುದು. ಬುದ್ಧಿವಂತರು ಸೃಜನಶೀಲರಾಗಿರಬಹುದು ಅಥವಾ ಸೃಜನಶೀಲರಾಗಿಲ್ಲದಿರಬಹುದು. ಸೃಜನಶೀಲತೆಗೆ ಹಲವಾರು ವ್ಯಾಖ್ಯೆಗಳನ್ನು ನೀಡಲಾಗಿದೆ. ಚೈಲ್ಡ್ (1973) ರವರು ಗುರುತಿಸಿರುವಂತೆ ಸೃಜನಶೀಲತೆಗೆ ಯಾವುದೇ ಒಂದು ಅರ್ಥಪೂರ್ಣವಾದ, ಅಸ್ಪಷ್ಟವಲ್ಲದ ಮತ್ತು ಎಲ್ಲರೂ ಒಪ್ಪಿಕೊಂಡಂತಹ ವ್ಯಾಖ್ಯೆಯಿಲ್ಲ. ಆದರೂ ಸಹ, ಹಲವಾರು ಸಂಶೋಧಕರು ಸೃಜನಶೀಲತೆಗೆ ಸೂಕ್ತವಾದ ವ್ಯಾಖ್ಯೆ ನೀಡಲು ಪ್ರಯತ್ನಿಸಿದ್ದಾರೆ.



Scanned with OKEN Scanner

ಶಿಕ್ಷಣದ ವಿಶ್ವ ಜ್ಞಾನ ಕೋಶ (1983) ದ ಪ್ರಕಾರ ಸೃಜನಶೀಲತೆಯ ಅರ್ಥ ಈ ರೀತಿ ಇದೆ "ಸೃಜನಶೀಲತೆ ಎಂದರೆ ಎಲ್ಲಾ ಆರೋಗ್ಯವಂತ ವ್ಯಕ್ತಿಗಳು ವಿವಿಧ ಮಟ್ಟಗಳಲ್ಲಿ ಹೊಂದಿರುವ ಸಾಮಾನ್ಯ ಸಾಮರ್ಥ್ಯವಾಗಿದೆ. ಎಲ್ಲಾ ವ್ಯಕ್ತಿಗಳು ವಿವಿಧ ಮಟ್ಟದ ಸೃಜನಾತ್ಮಕ ಚಿಂತನೆ ಹೊಂದಿರುತ್ತಾರೆ".

"ಮುಖ್ಯವಾಗಿ ಹೊಸದಾಗಿರುವ ಮತ್ತು ಸೃಷ್ಟಿಕರ್ತನಿಗೆ ಈ ಮೊದಲೇ ಅರಿವಿಲ್ಲದ ಯಾವುದೇ ರೀತಿಯ ಸಂಯೋಜನೆಗಳನ್ನು, ಉತ್ಪನ್ನಗಳನ್ನು ಅಥವಾ ವಿಚಾರಗಳನ್ನು ಸೃಷ್ಟಿಸುವ ವ್ಯಕ್ತಿಯ ಸಾಮರ್ಥ್ಯವೇ ಸೃಜನಶೀಲತೆ".

*– ಡ್ರೆವ್ಡ್ ಹಾಲ್*

ಸೃಜನಾತ್ಮಕ ಚಿಂತನೆಯೆಂದರೆ "ಒಂದು ಸನ್ನಿವೇಶದಲ್ಲಿ ವ್ಯಕ್ತಿಯ ಊಹೆಗಳು ಮತ್ತು ತೀರ್ಮಾನಗಳು ಹೊಸದಾಗಿರುತ್ತವೆ, ಮೌಲಿಕವಾಗಿರುತ್ತವೆ, ಯುಕ್ತವಾಗಿರುತ್ತವೆ ಮತ್ತು ಅಸಾಮಾನ್ಯವಾಗಿರುತ್ತವೆ. ಸೃಜನಶೀಲ ಚಿಂತಕನೆಂದರೆ ಹೊಸ ಕ್ಷೇತ್ರಗಳನ್ನು ಅನ್ವೇಷಿಸುವವನು, ಹೊಸ ವೀಕ್ಷಣೆ ಮಾಡುವವನು, ಹೊಸ ಊಹೆಗಳನ್ನು ಮಾಡುವವನು ಮತ್ತು ಹೊಸ ತೀರ್ಮಾನಗಳನ್ನು ಕೈಗೊಳ್ಳುವಂತಹ ವ್ಯಕ್ತಿಯಾಗಿದ್ದಾನೆ".

*– ಸ್ಕಿನ್ನರ್*

ಸೃಜನಾತ್ಮಕ ಚಿಂತನೆಯೆಂದರೆ "ಸಮಸ್ಯೆಗಳಿಗೆ ಸಂವೇದನಾ ಶೀಲನಾಗಿರುವುದು, ಸನ್ನಿವೇಶದಲ್ಲಿನ ನ್ಯೂನತೆಗಳು, ಜ್ಞಾನದ ಕೊರತೆ, ಸಾಮರಸ್ಯದ ಕೊರತೆ ಹಾಗೂ ಕ್ಲಿಷ್ಟವಾದ ಅಂಶಗಳನ್ನು ಗುರ್ತಿಸುವುದು; ಪರಿಹಾರಗಳನ್ನು ಹುಡುಕುವುದು, ಊಹೆಗಳನ್ನು ಮಾಡುವುದು ಅಥವಾ ಪ್ರಕಲ್ಪನೆಗಳನ್ನು ರೂಪಿಸುವುದು ಮತ್ತು ಯುಕ್ತ ರೀತಿಯಲ್ಲಿ ಬದಲಿಸಿ ಪರೀಕ್ಷಿಸುವುದು ಮತ್ತು ಮರು ಪರೀಕ್ಷೆ ಮಾಡುವುದು ಹಾಗೂ ಫಲಿತಾಂಶವನ್ನು ಯಶಸ್ವಿಯಾಗಿ ಇತರರಿಗೆ ತಿಳಿಯಪಡಿಸುವ ಪ್ರಕ್ರಿಯೆಯಾಗಿದೆ.

*– ಟಾರೆನ್ಸ್*

## ಸೃಜನಶೀಲ ಮಕ್ಕಳ ಗುಣಲಕ್ಷಣಗಳು

ಟಾರೆನ್ಸ್‌ರವರು ಕೆಲವು ಪ್ರಶ್ನೆಗಳ ಸಹಾಯದೊಂದಿಗೆ ಸೃಜನಶೀಲ ಮಕ್ಕಳ ಗುಣ ಲಕ್ಷಣಗಳನ್ನು ತಿಳಿಯಲು ಸಮೀಕ್ಷೆ ನಡೆಸಿರುತ್ತಾರೆ. ಈ ಸಮೀಕ್ಷೆಯಲ್ಲಿ ಪರಿಣಿತರು ಆಯ್ಕೆ ಮಾಡಿದ ಸೃಜನಶೀಲ ಮಕ್ಕಳ ಗುಣಲಕ್ಷಣಗಳು ಈ ಕೆಳಕಂಡಂತಿವೆ. ಸೃಜನಶೀಲ ಮಗು

- ತನ್ನ ನಂಬಿಕೆಗಳು ಮತ್ತು ಮೌಲ್ಯಗಳಲ್ಲಿ ದೃಢವಿಶ್ವಾಸ ಹೊಂದಿರುತ್ತಾನೆ. ಸಮಾಜ ಒಪ್ಪಿಕೊಂಡ ವರ್ತನೆಗಿಂತ ಮುಂದೆ ಹೋಗಿ ಚಿಂತಿಸಬಲ್ಲ.
- ನಿರ್ಣಾಯಕ ವಿಷಯಗಳಲ್ಲಿ ಸ್ವತಂತ್ರ ತೀರ್ಮಾನ ಕೈಗೊಳ್ಳಬಲ್ಲನು.
- ತನ್ನ ಪರಿಸರದ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳುವ ಕುತೂಹಲ.
- ಸಮಸ್ಯೆಗಳಲ್ಲಿ ತಲ್ಲೀನನಾಗಿರುತ್ತಾನೆ. ಒಂದು ಸಮಸ್ಯೆಯನ್ನು ಕೈಗೆತ್ತಿಕೊಂಡಾಗ ಅವನು ಸಂಪೂರ್ಣ ಆ ಕೆಲಸದಲ್ಲಿ ತಲ್ಲೀನನಾಗಿರುತ್ತಾನೆ. ತನ್ನ ಕೈಯಲ್ಲಿರುವ ಕೆಲಸದ ಕಡೆ ಎಲ್ಲಾ ಮಾನಸಿಕ ಶಕ್ತಿಗಳನ್ನು ಕೇಂದ್ರೀಕರಿಸುತ್ತಾನೆ.
- ಸಮಸ್ಯೆ ಪರಿಹರಿಸುವಾಗ ಒಳನೋಟ ಪಡೆಯುತ್ತಾನೆ.



Scanned with OKEN Scanner

NAVACHETANA EDUCATIONS

- ಸಮಸ್ಯೆಗಳಿಗೆ ಮಾಮೂಲು ಪರಿಹಾರಗಳನ್ನು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ.
- ಅಪಾಯಕ್ಕೆ ಸಿದ್ಧನಾಗಿರುತ್ತಾನೆ.
- ಭವಿಷ್ಯದ ಸಮಸ್ಯೆಗಳ ದೃಷ್ಟಿಕೋನವುಳ್ಳವನು, ಭವಿಷ್ಯದಲ್ಲಿ ಎದುರಾಗಬಹುದಾದ ಸಮಸ್ಯೆಗಳನ್ನು ಊಹಿಸಬಲ್ಲನು.
- ಹೆಚ್ಚಿನ ವಿಷಯಗಳಿಗೆ ಸಂಬಂಧಿಸಿದಂತೆ ಯಾವಾಗಲೂ ಹೊಸ ಚಿಂತನೆಗಳಿಂದ ತುಂಬಿರುತ್ತಾನೆ.
- ವಸ್ತುಗಳನ್ನು, ಪದಗಳನ್ನು ಅಥವಾ ವಿಚಾರಗಳನ್ನು ಹೊಸ ರೀತಿಯಲ್ಲಿ ಬಳಸಬಲ್ಲ.
- ಎರಡು ಅಥವಾ ಹೆಚ್ಚು ವಿಚಾರಗಳನ್ನು ಸೇರಿಸಿ ಹೊಸ ಕಲ್ಪನೆಗಳನ್ನು ಪಡೆಯಬಲ್ಲ.
- ತನ್ನ ಕೆಲಸವೂ ಸೇರಿದಂತೆ ಸನ್ನಿವೇಶಗಳಲ್ಲಿ ತಪ್ಪುಗಳನ್ನು ಹುಡುಕುವ ಪ್ರವೃತ್ತಿಯವನು ಮತ್ತು ಗುರಿಯನ್ನು ತಲುಪಲು ಸೂಕ್ತ ಮಾರ್ಗವನ್ನು ಸೂಚಿಸಬಲ್ಲನು.
- ತನ್ನ ಮನಸ್ಸಿನಲ್ಲಿರುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯೋಗ ಮಾಡಲು ಇಚ್ಛಿಸುತ್ತಾನೆ.
- ಹೆಚ್ಚಿನ ಜ್ಞಾನಾತ್ಮಕ ಕುತೂಹಲವಿರುವುದರಿಂದ ಹಲವಾರು ಪ್ರಶ್ನೆಗಳನ್ನು ಕೇಳುತ್ತಾನೆ.
- ವಿಭಿನ್ನಮುಖಿ ಚಿಂತನ ಸಾಮರ್ಥ್ಯ ಹೊಂದಿರುತ್ತಾನೆ.
- ತನಗೆ ಇಷ್ಟವಾದ ಕ್ಷೇತ್ರದಲ್ಲಿ ಒಂದು ಕೊಡುಗೆಯನ್ನು ನೀಡಬಲ್ಲ. ಉದಾಹರಣೆಗೆ : ಮೂಲ ಕಥೆಗಳು, ನಾಟಕಗಳು, ಪದ್ಯಗಳು, ರಾಗಗಳು, ಚಿತ್ರಗಳು ಹಾಗೂ ಕಾರ್ಯಾತ್ಮಕ ಮಾದರಿ ಇತ್ಯಾದಿಗಳನ್ನು ರಚಿಸಬಲ್ಲನು.
- ಚಲನಶೀಲ ಹಾಗೂ ವಿಶಾಲ ಮನೋಭಾವದವನು, ಹೊಸ ವಿಚಾರಗಳ ಬಗ್ಗೆ ಭಯಗೊಳ್ಳುವುದಿಲ್ಲ ಮತ್ತು ಅದನ್ನು ತಿರಸ್ಕರಿಸುವ ಮೊದಲು ಪರೀಕ್ಷಿಸುತ್ತಾನೆ.
- ಅಂತರ್ಮುಖಿ ಮತ್ತು ಒಂಟಿತನ ಪ್ರೇಮಿ.
- ರಚನಾತ್ಮಕ ಟೀಕೆ ಮಾಡುವವನು.

## ಸೃಜನಶೀಲತೆಯ ಮೇಲೆ ಪ್ರಭಾವ ಬೀರುವ ಕಾರಕಗಳು

ಸೃಜನ ಶೀಲತೆಯ ಮೇಲೆ ಪ್ರಭಾವ ಬೀರುವ ಕಾರಕಗಳೆಂದರೆ ಜ್ಞಾನಾತ್ಮಕ ಕಾರಕಗಳು, ವ್ಯಕ್ತಿತ್ವದ ಕಾರಕಗಳು, ಅಭಿಪ್ರೇರಣಾ ಮತ್ತು ಸಂವೇಗಾತ್ಮಕ ಕಾರಕಗಳು ಮತ್ತು ಪರಿಸರದ ಕಾರಕಗಳು.

**ಜ್ಞಾನಾತ್ಮಕ ಕಾರಕಗಳು :** ಸೃಜನಶೀಲತೆಯ ಮೇಲೆ ಪ್ರಭಾವ ಬೀರುವ ಜ್ಞಾನಾತ್ಮಕ ಅಂಶಗಳೆಂದರೆ ನಿರರ್ಗಳತೆ, ಮೌಲಿಕತೆ ಮತ್ತು ನಮ್ಯತೆ

- **ನಿರರ್ಗಳತೆ :** ವ್ಯಕ್ತಿಯ ಮನಸ್ಸಿನಲ್ಲಿ ವಿಚಾರಗಳು ಉತ್ಪಾದನೆಯಾಗುವ ವೇಗ. ಉದಾಹರಣೆಗೆ ಒಂದು ಸಾಮಾನ್ಯ ಇಟ್ಟಿಗೆಯ ವಿವಿಧ ಉಪಯೋಗಗಳ ಬಗ್ಗೆ ಚಿಂತಿಸಿ ಹೇಳುವುದು.



Scanned with OKEN Scanner

★ **ಮೌಲಿಕತೆ (ಸ್ವಂತಿಕೆ)** : ಹಲವಾರು ಮಾರ್ಗಗಳಲ್ಲಿ ಪ್ರದರ್ಶಿಸಬಹುದಾದ ಒಂದು ಗುಣವಾಗಿದೆ. ಅವುಗಳಲ್ಲಿ ವ್ಯಕ್ತಿ ಹೊಂದಿರುವ ಅಸಾಮಾನ್ಯ ವಿಚಾರಗಳ ಉತ್ಪಾದನೆ, ಕಥೆಗಳಿಗೆ ಮೌಲಿಕ ಶೀರ್ಷಿಕೆ ನೀಡುವ ಚತುರತೆ ಇತ್ಯಾದಿ.

★ **ನಮ್ಯತೆ** : ಸನ್ನಿವೇಶದಲ್ಲಿನ ಇತರೆ ಸಾಧ್ಯತೆಗಳನ್ನು ಪರೀಕ್ಷಿಸುವ ಸಾಮರ್ಥ್ಯ ಅಥವಾ ಲಾಭದಾಯಕವಲ್ಲದ ಆಲೋಚನೆಯನ್ನು ಇನ್ನೊಂದು ದಿಕ್ಕಿಗೆ ತಿರುಗಿಸುವ ಸಾಮರ್ಥ್ಯವಾಗಿದೆ. ಇದು ನಿರರ್ಗಳತೆ ಮತ್ತು ಮೌಲಿಕತೆಗೆ ತುಂಬಾ ಹತ್ತಿರವಾಗಿರುವ ಪರಿಕಲ್ಪನೆ. ಇದು ಒಂದು ವಸ್ತುವಿನ ಬಳಕೆಯ ಪುನರ್ ವ್ಯಾಖ್ಯಾನಿಸುವಿಕೆಯನ್ನು ಒಳಗೊಳ್ಳುತ್ತದೆ. ಉದಾಹರಣೆಗೆ ನಿಮ್ಮಲ್ಲಿ ಸುತ್ತಿಗೆಯಿಲ್ಲದಿದ್ದಾಗ ನೀವು ಗೋಡೆಗೆ ಹೇಗೆ ಮೊಳೆ ಹೊಡೆಯುವಿರಿ?

**ವ್ಯಕ್ತಿತ್ವದ ಕಾರಕಗಳು** : ವ್ಯಕ್ತಿತ್ವದ ಕಾರಕಗಳಲ್ಲಿ ಅಭಿಪ್ರೇರಣೆ ಹೆಚ್ಚು ಮಹತ್ವದ ಕಾರಕವಾಗಿದೆ. ಸೃಜನಶೀಲತೆಗೆ ಅಗತ್ಯವಾದ ಅಂಶಗಳೆಂದರೆ ಆಸಕ್ತಿ, ಕುತೂಹಲ, ಮೋಹ, ಅರ್ಪಣಾ ಮನೋಭಾವ ಮತ್ತು ಉತ್ಸಾಹ. ಈ ಅಭಿಪ್ರೇರಣಾ ಅಂಶಗಳ ಜೊತೆಗೆ, ಕಾರಣವಾಗುವ ಇತರೆ ವ್ಯಕ್ತಿತ್ವದ ಅಂಶಗಳೆಂದರೆ ಅವಿರತಯತ್ನ ಧೈರ್ಯ, ಅನುಭವಗಳಿಗೆ ಮುಕ್ತ ಅವಕಾಶ ಮತ್ತು ಅಭಿವೃದ್ಧಿ ಹೊಂದಬೇಕೆಂಬ ಆಸೆ.

**ಪರಿಸರದ ಕಾರಕಗಳು** : ಪರಿಸರದ ಕಾರಕಗಳನ್ನು ಪ್ರಚೋದಿಸುವ, ಪೋಷಿಸುವ, ಸ್ವಾಭಾವಿಕ, ಅಡ್ಡಿಯನ್ನುಂಟು ಮಾಡುವ ಮತ್ತು ಹಾಳು ಮಾಡುವ ಕಾರಕಗಳೆಂದು ಗುರ್ತಿಸಬಹುದು. ಕೆಲವು ಸಂಸ್ಕೃತಿಗಳಲ್ಲಿ ಮತ್ತು ಗುಂಪುಗಳಲ್ಲಿ ಸೃಜನಾತ್ಮಕ ಚಿಂತನೆಗೆ ಅವರೋಧಿಸುತ್ತಾರೆ (ತಡೆಯೊಡ್ಡುತ್ತಾರೆ). ಇನ್ನೂ ಕೆಲವು ಸಂಸ್ಕೃತಿಗಳಲ್ಲಿ ಇದನ್ನು ಪ್ರೋತ್ಸಾಹಿಸುತ್ತಾರೆ. ಸೃಜನಾತ್ಮಕ ಸಾಮರ್ಥ್ಯಗಳ ಬೆಳವಣಿಗೆಯಲ್ಲಿ ಶಿಕ್ಷಣ ಪ್ರಮುಖ ಪಾತ್ರ ವಹಿಸಬೇಕು. ಸೃಜನಾತ್ಮಕ ಶಕ್ತಿಗಳು ಪರಿಣಾಮಕಾರಿಯಾಗಿ ಹೊರ ಹೊಮ್ಮಬೇಕಾದರೆ ಅದಕ್ಕಿರುವ ಅಡ್ಡಿ ಆತಂಕಗಳನ್ನು ಶಿಕ್ಷಣದ ಮೂಲಕ ತೊಡೆದು ಹಾಕಬೇಕಾಗಿದೆ. ಕೆಲವೊಮ್ಮೆ ಶಾಲೆಗಳು ಸೃಜನಶೀಲ ಚಿಂತನೆಗೆ ವಿರುದ್ಧವಾಗಿರುತ್ತದೆ. ಶಾಲೆಯಲ್ಲಿ ಕಂಡುಬರುವ ಋಣಾತ್ಮಕ ಅಂಶಗಳೆಂದರೆ ಯಾವುದೇ ಅಪಾಯಕ್ಕೆ ಮತ್ತು ನಷ್ಟಕ್ಕೆ ಸಿದ್ಧರಾಗದಿರುವುದು, ತಪ್ಪುಗಳಿಗೆ ಅವಕಾಶ ನೀಡದಿರುವುದು, ವೈಯಕ್ತಿಕತೆಗೆ ಹೆಚ್ಚು ಒತ್ತು ಕೊಡುವುದು, ಪ್ರಶ್ನಿಸುವ ಮನೋಭಾವವನ್ನು ತಡೆಯುವುದು ಇತ್ಯಾದಿ. ಮಕ್ಕಳಲ್ಲಿ ಸೃಜನಶೀಲತೆಯನ್ನು ಬೆಳೆಸಬೇಕಾದರೆ, ಶಿಕ್ಷಣ ಸ್ವತಂತ್ರ ಆಧಾರಿತವಾಗಿರಬೇಕು ಅಥವಾ ಮುಕ್ತವಾಗಿರಬೇಕು. ಮಾರ್ಗದರ್ಶನ ಕಲಿಕಾ ಪ್ರಕ್ರಿಯೆಗಳ ಮೂಲಕ ಸೃಜನಶೀಲತೆಯನ್ನು ಬೆಳೆಸಬಹುದು ಮತ್ತು ಪ್ರೋತ್ಸಾಹಿಸಬಹುದು ಎಂಬುದನ್ನು ಶಿಕ್ಷಣತಜ್ಞರು ಮತ್ತು ಶಿಕ್ಷಕರು ತಿಳಿದಿರಬೇಕು.

## ಸೃಜನ ಶೀಲತೆಯನ್ನು ಅಭಿವೃದ್ಧಿಗೊಳಿಸುವ ಕ್ರಮಗಳು

ಸೃಜನ ಶೀಲತೆಯನ್ನು ಹೆಚ್ಚಿಸಲು ಯಾವುದೇ ನಿರ್ದಿಷ್ಟ ನಿಯಮಗಳು ಮತ್ತು ಕ್ರಮಗಳನ್ನು ನಾವು ಹೊಂದಿಲ್ಲ. ಇದು ಕಲಿಯುವ ವ್ಯಕ್ತಿಯ ಸ್ವರೂಪ, ಅವನ ಪರಿಪಕ್ವತೆ ಮಟ್ಟ, ಬೋಧನೆಗೆ ಸಿಗುವ ಸಮಯಾವಕಾಶ ಮತ್ತು ಶಿಕ್ಷಕರ ಸಾಮರ್ಥ್ಯದ ಮೇಲೆ ಅವಲಂಬಿಸಿದೆ. ಸೃಜನಶೀಲ ಚಿಂತನೆಯನ್ನು ಅಭಿವೃದ್ಧಿಪಡಿಸಲು ಬಳಸಬಹುದಾದ ಕೆಲವು ವಿಧಾನಗಳ ಬಗ್ಗೆ ತಿಳಿಯೋಣ.

1. **ಮೆದುಳನ್ನು ಕಾರ್ಯ ಪಟುತ್ವಗೊಳಿಸುವುದು (Brain Storming)** : ಈ ತಂತ್ರವನ್ನು ಮೊಟ್ಟಮೊದಲು ಕೈಗಾರಿಕಾ ಮತ್ತು ನಿರ್ವಹಣಾ ಕ್ಷೇತ್ರದಲ್ಲಿ ಬಳಸಿದವನು ಅಲೆಕ್ಸ್ ಆಸ್‌ಬರ್ನ್. ಈ ವಿಧಾನವನ್ನು ತರಗತಿಗಳಲ್ಲಿಯೂ ಸಹ ವಿಚಾರಗಳ ನಿರರ್ಗಳತೆಯನ್ನು ಹೆಚ್ಚಿಸಲು ಬಳಸಬಹುದು. ಇಲ್ಲಿ ಒಂದು ಸಮಸ್ಯೆಯನ್ನು ಪರಿಹರಿಸಲು ವಿದ್ಯಾರ್ಥಿಗಳು ತಮಗೆ ಸಾಧ್ಯವಾದಷ್ಟೂ ವಿಚಾರಗಳನ್ನು ಉತ್ಪಾದಿಸಲು ಪ್ರೋತ್ಸಾಹಿಸಲಾಗುವುದು. ಹೆಚ್ಚು ಹೆಚ್ಚು ವಿಚಾರಗಳು ಉತ್ಪಾದನೆಯಾದಲ್ಲಿ ತುಂಬಾ ಪರಿಣಾಮಕಾರಿಯಾದ ವಿಚಾರಗಳು ಉತ್ಪಾದನೆಯಾಗುವ



Scanned with OKEN Scanner

ಸಾಧ್ಯತೆಯಿರುತ್ತದೆ. ಈ ವಿಧಾನ ಒಂದು ಸಮಸ್ಯೆಗೆ ವಿವಿಧ, ಪರಿಹಾರಗಳಿದ್ದ ಸಂದರ್ಭಗಳಲ್ಲಿ ಹೆಚ್ಚು ಉಪಯುಕ್ತವಾಗುತ್ತದೆ. ಉದಾಹರಣೆಗೆ : "ನಮ್ಮ ಶಾಲೆಯನ್ನು ಹೇಗೆ ಸುಧಾರಿಸಬಹುದು?" "ಶಕ್ತಿಯನ್ನು ಹೇಗೆ ಉಳಿಸಬಹುದು?" "ಅಂಕಗಣಿತದ ಕಲಿಕೆಯಲ್ಲಿ ಒಂದು ಮಗುವಿನಲ್ಲಿ ಹೇಗೆ ಹೆಚ್ಚು ಆಸಕ್ತಿಯನ್ನು ಮೂಡಿಸಬಹುದು?" "ಆಟದ ಮೈದಾನದಲ್ಲಿ ಶಿಸ್ತನ್ನು ನೀವು ಹೇಗೆ ಕಾಪಾಡುವಿರಿ?" ಈ ವಿಧಾನದಲ್ಲಿ ಉತ್ಪಾದನೆಯಾದ ವಿಭಿನ್ನ ವಿಚಾರಗಳನ್ನು ದಾಖಲು ಮಾಡಿಕೊಳ್ಳಲಾಗುತ್ತದೆ. ನಂತರ ಅವುಗಳಲ್ಲಿ ಸೂಕ್ತವಾದುದನ್ನು ಸಮಸ್ಯಾ ಪರಿಹಾರಕ್ಕೆ ಬಳಸಿಕೊಳ್ಳಲಾಗುತ್ತದೆ.

2. **ವಿಸ್ತೃತಿ ಗೊಳಿಸುವಿಕೆ :** ಸೃಜನಾತ್ಮಕ ಚಿಂತನೆಯ ಒಂದು ಪ್ರಮುಖ ಅಂಶವೆಂದರೆ ವಿಸ್ತೃತಿಗೊಳಿಸುವಿಕೆ. ವ್ಯಕ್ತಿಗೆ ಸಮಸ್ಯೆಗೆ ಸಂಬಂಧಿಸಿದಂತೆ ಸಂಕ್ಷಿಪ್ತ ಮಾಹಿತಿ ನೀಡಲಾಗುವುದು. ಅವನು ತನ್ನ ಕಲ್ಪನಾಶಕ್ತಿಯನ್ನು ಬಳಸಿಕೊಂಡು ಸಮಸ್ಯೆಯನ್ನು ಬಿಡಿಸುತ್ತಾನೆ ಅಥವಾ ಪೂರ್ಣಗೊಳಿಸುತ್ತಾನೆ. ವಿಸ್ತೃತಿಗೊಳಿಸುವಿಕೆಯ ಪ್ರಕ್ರಿಯೆ ವ್ಯಕ್ತಿಯು ತನ್ನಲ್ಲಿ ಸೃಜನಶೀಲತೆಯ ಪ್ರಮುಖ ಅಂಶಗಳಾದ ತಾರ್ಕಿಕ ಶಕ್ತಿ, ಆಲೋಚನಾ ಶಕ್ತಿ ಮತ್ತು ಸಮಸ್ಯಾ ಪರಿಹಾರ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅವಕಾಶ ನೀಡುತ್ತದೆ. ತರಗತಿಯ ಶಿಕ್ಷಕ ತನ್ನ ಬೋಧನೆಯಲ್ಲಿ ಈ ತಂತ್ರವನ್ನು ಬಳಸಿಕೊಳ್ಳಬಹುದು. ಉದಾಹರಣೆಗೆ ಮಾರ್ಗದರ್ಶಿತ ಪ್ರಬಂಧ ಬರೆಸುವ ಮೂಲಕ.

3. ವಿದ್ಯಾರ್ಥಿಗಳು ಮುಕ್ತವಾಗಿ ಪ್ರಶ್ನೆ ಕೇಳುವಂತಹ ಮತ್ತು ಹೊಸ ವಿಚಾರಗಳನ್ನು ಬೆಳೆಸಿಕೊಳ್ಳುವಂತಹ ಮುಕ್ತ ತರಗತಿಯ ವಾತಾವರಣವನ್ನು ಶಿಕ್ಷಕನು ನಿರ್ಮಾಣ ಮಾಡಬೇಕು.

4. ಸೃಜನಶೀಲ ವಿದ್ಯಾರ್ಥಿಗಳಿಗೆ ಅಡ್ಡಿಯಾಗಿರುವಂತಹ ಅಂಶಗಳನ್ನು ಶಿಕ್ಷಕ ತೊಡೆದುಹಾಕಲು ಪ್ರಯತ್ನಿಸಭೇಕು. ಅವರಿಗೆ ಅಗತ್ಯವಿರುವ ಪುಸ್ತಕಗಳು, ಉಪಕರಣಗಳು, ಚಿತ್ರರಚಿಸಲು ಬಣ್ಣಗಳು ಇತ್ಯಾದಿಗಳನ್ನು ಒದಗಿಸಲು ಸಹಾಯ ಮಾಡಬೇಕು.

5. ಶಾಲೆಯು ತನ್ನ ನಿರ್ಬಂಧಿತ ಶಾಲಾ ಅವಧಿ ಮತ್ತು ಆಡಳಿತಾತ್ಮಕ ನಿಬಂಧನೆಗಳಿಂದ ಸೃಜನಶೀಲ ಮಕ್ಕಳಿಗೆ ಸ್ವಾತಂತ್ರ್ಯ ನೀಡಬೇಕು. ವಿದ್ಯಾರ್ಥಿಗಳು ಶಾಲಾ ನೀತಿ ನಿಯಮಗಳು ತುಂಬಾ ಬಿಗಿಯಾಗಿವೆ ಮತ್ತು ತಮ್ಮ ಸೃಜನಾತ್ಮಕ ಚಟುವಟಿಕೆಗಳಿಗೆ ಅಡ್ಡಿಯಾಗುತ್ತವೆ ಎಂದು ಭಾವಿಸಿದಾಗ, ಅವರಿಗೆ ವಿನಾಯಿತಿ ನೀಡಬೇಕು.

6. ಮಕ್ಕಳ ಅಸಾಮಾನ್ಯ ಪ್ರಶ್ನೆಗಳನ್ನು, ಅಸಾಧಾರಣ ಮತ್ತು ವಿಭಿನ್ನ ಉತ್ಪಾದನೆಗಳನ್ನು ಶಿಕ್ಷಕನು ಗೌರವಿಸಬೇಕು.

7. ಆತ್ಮವಿಶ್ವಾಸ ಸೃಜನ ಶೀಲತೆಯನ್ನು ಹೆಚ್ಚಿಸುತ್ತವೆ, ಆದ್ದರಿಂದ ಶಿಕ್ಷಕನು ತನ್ನ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಬೆಳೆಸಲು ಪ್ರಯತ್ನಿಸಬೇಕು. ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ಕೊರತೆಯಿದ್ದರೆ ಅವರು ನಾಚಿಕೆ ಸ್ವಭಾವ ಬೆಳೆಸಿಕೊಳ್ಳುತ್ತಾರೆ ಮತ್ತು ತಮ್ಮಲ್ಲಿರುವ ಸಾಮರ್ಥ್ಯವನ್ನು ವ್ಯಕ್ತಪಡಿಸುವುದಿಲ್ಲ.

8. ವಿದ್ಯಾರ್ಥಿಗಳು ವಿಚಾರಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಅವಕಾಶ ನೀಡಬೇಕು. ಹಲವಾರು ಚಟುವಟಿಕೆಗಳ ಮೂಲಕ ಉದಾಹರಣೆಗೆ ಸಂಗ್ರಹಣಾ ಕೌಶಲ್ಯ, ಉತ್ತಮ ಹವ್ಯಾಸಗಳ ಪ್ರದರ್ಶನ, ಪ್ರಯೋಗ ಕೈಗೊಳ್ಳುವ ಮೂಲಕ ವಿಶೇಷ ಜ್ಞಾನ ಬೆಳೆಸಿಕೊಳ್ಳುವ ಆಸಕ್ತಿ ರೂಢಿಸಲು ಮಕ್ಕಳನ್ನು ಅಭಿಪ್ರೇರಿಸಬೇಕು. ಯಾವುದೇ ಸಮಸ್ಯೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಅಸಾಮಾನ್ಯ ವಿಚಾರಗಳನ್ನು ವ್ಯಕ್ತಪಡಿಸಿದಾಗ ಶಿಕ್ಷಕ ಅವುಗಳನ್ನು ತಿರಸ್ಕರಿಸಬಾರದು.

9. ಶಿಕ್ಷಕನು ತನ್ನ ವಿದ್ಯಾರ್ಥಿಗಳಲ್ಲಿ ರಚನಾತ್ಮಕ ವಿಮರ್ಶಾ ಕೌಶಲವನ್ನು ಬೆಳೆಸಬೇಕು.



Scanned with OKEN Scanner

10. ಸೃಜನಶೀಲತೆಗೆ ಅಭಿಪ್ರೇರಣೆ ಅವಶ್ಯಕವಾಗಿದೆ. ಆದ್ದರಿಂದ ಶಿಕ್ಷಕನು ಮಕ್ಕಳ ಆಸಕ್ತಿಗಳು, ಹವ್ಯಾಸ ಮತ್ತು ಸಾಮರ್ಥ್ಯಗಳಿಗನುಗುಣವಾಗಿ ಅವರನ್ನು ಪ್ರೇರೇಪಿಸಬೇಕು.

11. ಸೃಜನಶೀಲತೆಯ ಉಗಮಕ್ಕೆ ಮಾನಸಿಕ ಸುರಕ್ಷತೆ ಮತ್ತು ಮಾನಸಿಕ ಸ್ವಾತಂತ್ರ್ಯಗಳು ಅತ್ಯಾವಶ್ಯಕ. ಆದ್ದರಿಂದ ಮಕ್ಕಳು ಮಾನಸಿಕ ಸುರಕ್ಷತೆ ಮತ್ತು ಮಾನಸಿಕ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಅವರ ಮಾನಸಿಕ ಆರೋಗ್ಯ ಉತ್ತಮವಾಗಿರುವಂತೆ ನೋಡಿಕೊಳ್ಳಬೇಕು

12. ಶಿಕ್ಷಕನು ತನ್ನ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ವಿಚಾರಶೀಲತೆಯನ್ನು ಬೆಳೆಸಬೇಕು. ಹೊಸ ವಿಚಾರಗಳೊಡನೆ ಪ್ರಯೋಗ ಕೈಗೊಳ್ಳಲು ಪೂರ್ಣ ಸ್ವಾತಂತ್ರ್ಯ ನೀಡಬೇಕು.

13. ವಿದ್ಯಾರ್ಥಿಗಳು ತಮ್ಮ ಕಾರ್ಯವನ್ನು ತಾವೇ ಮೌಲ್ಯಮಾಪನ ಮಾಡಿಕೊಳ್ಳುವುದನ್ನೂ ಪ್ರೋತ್ಸಾಹಿಸಬೇಕು.

14. ವಿದ್ಯಾರ್ಥಿಗಳು ತಮ್ಮ ಸೃಜನಶೀಲ ಸಾಮರ್ಥ್ಯಗಳನ್ನು ಪ್ರದರ್ಶಿಸಿದಾಗ ಅವರಿಗೆ ಬಹುಮಾನ ಮತ್ತು ಪುನರ್ಬಲನಗಳನ್ನು ಒದಗಿಸಬೇಕು.

## ಪ್ರತಿಭಾವಂತ ಮಕ್ಕಳು - ಅರ್ಥ, ಗುಣಲಕ್ಷಣಗಳು ಮತ್ತು ಶೈಕ್ಷಣಿಕ ಕ್ರಮಗಳು

ಹೆಚ್ಚಿನ ಬೌದ್ಧಿಕ ಸಾಮರ್ಥ್ಯ, ವಿಶೇಷ ಸಾಮರ್ಥ್ಯಗಳು ಮತ್ತು ಪ್ರತಿಭೆಗಳನ್ನು ಹೊಂದಿರುವ ಮಕ್ಕಳನ್ನು ಪ್ರತಿಭಾವಂತರೆನ್ನುವರು. ರಾಷ್ಟ್ರದ ವಿವಿಧ ಕ್ಷೇತ್ರಗಳಲ್ಲಿನ ಪ್ರಗತಿ ನಾವು ಎಷ್ಟರ ಮಟ್ಟಿಗೆ ಈ ವಿಶೇಷ ಸಾಮರ್ಥ್ಯಗಳನ್ನು ಪೋಷಿಸಿದ್ದೇವೆ ಮತ್ತು ಸಮಾಜದ ಬೆಳವಣಿಗೆಯಲ್ಲಿ ಬಳಸಿಕೊಂಡಿದ್ದೇವೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಈ ಅಗಾಧವಾದ ತಾಂತ್ರಿಕ ಬೆಳವಣಿಗೆ ಮತ್ತು ತೀವ್ರಗತಿಯ ಸಾಮಾಜಿಕ ಬದಲಾವಣೆಗೆ ಹೆಚ್ಚಿನ ಸಾಮರ್ಥ್ಯವಿರುವ ವ್ಯಕ್ತಿಗಳ ಅಗತ್ಯತೆಯಿದೆ. ಪ್ರತಿಭಾವಂತ ಮಕ್ಕಳು ಸಮಾಜದ ಬೆಲೆ ಕಟ್ಟಲಾಗದ ಒಂದು ಆಸ್ತಿಯಿದ್ದಂತೆ. ಹೆಚ್ಚಿನ ಬುದ್ಧಿಶಕ್ತಿ ಮಗುವಿಗೆ ಪ್ರಕೃತಿದತ್ತವಾಗಿ ಬಂದ ಕೊಡುಗೆ ಅದನ್ನು ಹಾಳಾಗಲು ಬಿಡಬಾರದು. ಶಿಕ್ಷಣ ತಜ್ಞರು ಮಕ್ಕಳ ಮಾನಸಿಕ ಸಾಮರ್ಥ್ಯಗಳ ಗರಿಷ್ಠ ಮಟ್ಟದ ಬೆಳವಣಿಗೆಗೆ ಹೆಚ್ಚು ಒತ್ತು ಕೊಡಬೇಕಾಗಿದೆ.

ಪ್ರತಿಭಾವಂತರನ್ನು ಹಲವಾರು ಮನೋವಿಜ್ಞಾನಿಗಳು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

"ಒಂದು ಉಪಯುಕ್ತವಾದ ಕ್ಷೇತ್ರದಲ್ಲಿ ನಿರಂತರವಾಗಿ ವಿಶಿಷ್ಟ ಸಾಧನೆ ತೋರಬಲ್ಲ ವ್ಯಕ್ತಿಯೇ ಪ್ರತಿಭಾವಂತ"

*– ಹ್ಯಾವಿಗ್ ಹರ್ಸ್ಟ್*

"ಪ್ರತಿಭಾವಂತ ಮಗುವೆಂದರೆ ತನ್ನ ಉತ್ಪಾದನೆಯ ಪ್ರಮಾಣ, ದರ ಮತ್ತು ಗುಣಮಟ್ಟದಲ್ಲಿ ವಿಶಿಷ್ಟನಾಗಿರುವವನು"

*– ಆರ್.ಎನ್. ಟೈಲರ್*

"ಪ್ರತಿಭಾವಂತ ಮಕ್ಕಳೆಂದರೆ ಅವರ ಬೌದ್ಧಿಕ ಸಾಮರ್ಥ್ಯಗಳು ಉತ್ಪಾದನಾ ಮತ್ತು ಮೌಲ್ಯಾಧಾರಣ ಚಿಂತನೆ ಎರಡರಲ್ಲೂ ಉನ್ನತ ವಿಚಾರಾತ್ಮಕ ಮಟ್ಟದಲ್ಲಿರುತ್ತವೆ. ಇವರಿಗೆ ಸೂಕ್ತ ಶೈಕ್ಷಣಿಕ ಅನುಭವಗಳನ್ನು ಒದಗಿಸಿದರೆ, ಅವರು ಭವಿಷ್ಯದ ಸಮಸ್ಯೆ ಪರಿಹರಿಸುವವರು, ಸಂಶೋಧಕರು ಹಾಗೂ ಸಂಸ್ಕೃತಿಯ ಮೌಲ್ಯಮಾಪಕರು ಆಗಬಲ್ಲರು"

*– ಗಿಲ್ ಫೋರ್ಡ್*

"ಪ್ರತಿಭಾವಂತ ಮಕ್ಕಳೆಂದರೆ ಅವರು ಸಂಗೀತ, ಕಲೆ, ಸಾಮಾಜಿಕ ನಾಯಕತ್ವ ಮತ್ತು ಅಭಿವ್ಯಕ್ತಿಯ ಇತರ ರೂಪಗಳಲ್ಲಿ ನಿರಂತರವಾಗಿ ಗಮನಾರ್ಹ ಸಾಧನೆ ಮಾಡಬಲ್ಲವರು"

*– ವಿಟಿ*



Scanned with OKEN Scanner

ಪ್ರತಿಭಾವಂತ ಮಕ್ಕಳೆಂದರೆ ಬುದ್ಧಿಶಕ್ತಿ ಸೂಚ್ಯಂಕ 140 ಮತ್ತು ಅದಕ್ಕಿಂತ ಹೆಚ್ಚು ಬುದ್ಧಿಶಕ್ತಿ ಹೊಂದಿರುವವರು"

– *ಟರ್ಮನ್*

**ಪ್ರತಿಭಾವಂತ ಮಕ್ಕಳ ಗುಣಲಕ್ಷಣಗಳು :**

ಸಾಮಾನ್ಯ ಮಕ್ಕಳೊಡನೆ ಹೋಲಿಸಿದಾಗ ಪ್ರತಿಭಾವಂತ ಮಕ್ಕಳು ಕೆಲವು ವಿಶೇಷ ಗುಣಲಕ್ಷಣಗಳನ್ನು ಹೊಂದಿರುವುದು ಕಂಡುಬರುತ್ತದೆ. ಅವು ಈ ಕೆಳಕಂಡಂತಿವೆ.

1. **ದೈಹಿಕ ಗುಣಲಕ್ಷಣಗಳು :** ಪ್ರತಿಭಾವಂತ ಮಕ್ಕಳು –

* ಸಾಮಾನ್ಯ ಮಗುವಿಗಿಂತ ಉತ್ತಮ ದೈಹಿಕ ಮತ್ತು ಸಾಮಾನ್ಯ ಆರೋಗ್ಯ ಹೊಂದಿರುತ್ತಾರೆ. ಸಾಮಾನ್ಯವಾಗಿ ಅವರು ಉದ್ದನೆಯ, ದಪ್ಪನೆಯ ದೇಹ ಹಾಗೂ ಉತ್ತಮ ವರ್ತನೆಯುಳ್ಳವರಾಗಿರುತ್ತಾರೆ.
* ಉತ್ತಮ ಸಮನ್ವಯ ಹಾಗೂ ಸ್ನಾಯು ನಿಯಂತ್ರಣ ಹೊಂದಿರುತ್ತಾರೆ.
* ಸಾಮಾನ್ಯ ಮಕ್ಕಳಿಗಿಂತ ಬೇಗ ನಡೆಯಲು ಮತ್ತು ಮಾತನಾಡಲು ಕಲಿಯುತ್ತಾರೆ.
* ತೀಕ್ಷ್ಣ ಜ್ಞಾನೇಂದ್ರಿಯಗಳನ್ನು ಹೊಂದಿರುತ್ತಾರೆ.
* ತಕ್ಷಣ ಪ್ರತಿಕ್ರಿಯೆಸುತ್ತಾರೆ ಮತ್ತು ಶೀಘ್ರಗತಿಯಲ್ಲಿ ಬೆಳೆಯುತ್ತಾರೆ
* ಚಿಕ್ಕ ವಯಸ್ಸಿನಲ್ಲಿ ಶಾಲೆಯನ್ನು ಪ್ರವೇಶಿಸುತ್ತಾರೆ.

2. **ಬೌದ್ಧಿಕ ಗುಣಲಕ್ಷಣಗಳು :** ಪ್ರತಿಭಾವಂತ ಮಕ್ಕಳು –

* ಪ್ರತಿಭಾವಂತ ಮಕ್ಕಳು ಹೆಚ್ಚಿನ ಪದಸಂಪತ್ತು ಹೊಂದಿರುತ್ತಾರೆ.
* ವೇಗವಾಗಿ ಕಲಿಯುವ ಮತ್ತು ಗ್ರಹಿಸುವ ಸಾಮರ್ಥ್ಯ.
* ತಕ್ಷಣ ಮತ್ತು ಸ್ಪಷ್ಟ ಸ್ವಯಂ ಅಭಿವ್ಯಕ್ತಿ.
* ಸೂಕ್ಷ್ಮ ಹಾಗೂ ನಿಖರವಾದ ವೀಕ್ಷಣಾ ಸಾಮರ್ಥ್ಯ.
* ಉತ್ತಮ ಸಾಮಾನ್ಯ ಪ್ರಜ್ಞೆ ಮತ್ತು ಸಾಮಾನ್ಯ ಜ್ಞಾನ ಹೊಂದಿರುತ್ತಾರೆ.
* ಜ್ಞಾಪಕ ಶಕ್ತಿ, ಕಲ್ಪನಾ ಶಕ್ತಿ, ತಾರ್ಕಿಕ ಶಕ್ತಿ, ಸಂಕಲ್ಪ ಶಕ್ತಿ ಮತ್ತು ಇಂತಹ ಇತರೆ ಮಾನಸಿಕ ಗುಣಗಳು ಚೆನ್ನಾಗಿರುತ್ತವೆ.
* ವೈವಿಧ್ಯಮಯ ಆಸಕ್ತಿಗಳು.



Scanned with OKEN Scanner

* ದೀರ್ಘಕಾಲ ಅವಧಾನ ಕೇಂದ್ರಿಕರಿಸುವ ಸಾಮರ್ಥ್ಯ.
* ಸಂಘಟಿಸುವ, ವಿಶ್ಲೇಷಿಸುವ, ನೆನಪಿಟ್ಟುಕೊಳ್ಳುವ, ಸಂಶ್ಲೇಷಿಸುವ ಮತ್ತು ತರ್ಕಿಸುವ ಹೆಚ್ಚಿನ ಸಾಮರ್ಥ್ಯ ಕಂಡುಬರುತ್ತದೆ.

3. ವ್ಯಕ್ತಿತ್ವದ ಗುಣಲಕ್ಷಣಗಳು : ಪ್ರತಿಭಾವಂತ ಮಕ್ಕಳು –

* ಅನ್ವೇಷಿಸುವ ಮತ್ತು ಸೃಷ್ಟಿಸುವ ಅಧಮ್ಯ ಬಯಕೆ ಹೊಂದಿರುತ್ತಾರೆ.
* ಪ್ರಶ್ನಿಸುವುದನ್ನು ಇಚ್ಛಿಸುತ್ತಾರೆ.
* ನಿಷ್ಕಪಟ ಹಾಗೂ ಕಾರ್ಯತತ್ಪರರಾಗಿರುತ್ತಾರೆ.
* ತಮಗಿಂತ ಹೆಚ್ಚಿನ ವಯಸ್ಸಿನ ಮತ್ತು ಉನ್ನತ ತರಗತಿಯ ಮಕ್ಕಳ ಸ್ನೇಹ ಹೊಂದಿರುತ್ತಾರೆ.
* ಸಾಮಾಜಿಕ ಗುಣ ಹಾಗೂ ಉತ್ತಮ ಸ್ವಭಾವದವರು ಆಗಿರುತ್ತಾರೆ.
* ಸೃಜನಶೀಲರಾಗಿರುತ್ತಾರೆ ಮತ್ತು ಸಾಂಪ್ರದಾಯಿಕತೆ ಇಚ್ಛಿಸುವುದಿಲ್ಲ.
* ಸ್ವಯಂ ಪ್ರೇರಿತ ಕಲಿಕೆಯಲ್ಲಿ ಮುಂದಿರುತ್ತಾರೆ.
* ತರಗತಿಯಲ್ಲಿ ನಿರಾಸಕ್ತಿ ತಾಳುತ್ತಾರೆ, ತರಗತಿ ಅವರಿಗೆ ಆಸಕ್ತಿದಾಯಕವಾಗಿಲ್ಲದಿದ್ದಲ್ಲಿ ಮತ್ತು ಅವರ ಮಟ್ಟಕ್ಕೆ ಇಲ್ಲದೇ ಹೋದಾಗ.
* ಸಾಮಾನ್ಯವಾಗಿ ಭಾವನಾತ್ಮಕ ಪರಿಪಕ್ವರು.
* ಸಹಪಠ್ಯ ಚಟುವಟಿಕೆಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳುವರು.
* ಧನಾತ್ಮಕ ಮನೋಭಾವ ಹೊಂದಿರುತ್ತಾರೆ.
* ತರಗತಿಯಲ್ಲಿ ಹೆಚ್ಚಿನ ಸಾಧನೆ ಹೊಂದಿರುವವರು.

**ಶೈಕ್ಷಣಿಕ ಕ್ರಮಗಳು**

ಪ್ರತಿಭಾವಂತ ಮಗು ವಿಶೇಷ ಶೈಕ್ಷಣಿಕ ಅಗತ್ಯತೆಗಳನ್ನು ಹೊಂದಿರುತ್ತಾನೆ. ಅವನು ಅಭಿವೃದ್ಧಿ ಹೊಂದಲು ಮತ್ತು ಸ್ವತಂತ್ರ ಓದುವ ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಇಚ್ಛಿಸುತ್ತಾನೆ. ಹೊಸ ಸಮಸ್ಯೆಗಳನ್ನು ಪರಿಹರಿಸಲು ತನ್ನನ್ನು ತಾನು ಅರ್ಪಿಸಿಕೊಳ್ಳಲು, ಪ್ರೋತ್ಸಾಹವನ್ನು ಪಡೆಯಲು, ಉತ್ಪಾದನಾತ್ಮಕ ಚಿಂತನೆಯಲ್ಲಿ ತೊಡಗಲು ಬಯಸುತ್ತಾನೆ. ಓದಲು, ಬರೆಯಲು, ಪ್ರಯೋಗ ಮಾಡಲು ಮತ್ತು ಅರ್ಥಪೂರ್ಣ ಚಟುವಟಿಕೆಗಳಲ್ಲಿ ತೊಡಗಲು ಸೂಕ್ತ ಸೌಲಭ್ಯ ಒದಗಿಸಬೇಕು.

ಪ್ರತಿಭಾವಂತ ಮಕ್ಕಳಿಗೆ ಬೋಧಿಸಲು ಶಿಕ್ಷಕರ ವಿಶೇಷ ಗಮನದ ಅಗತ್ಯವಿದೆ. ಅವನ ಹೊಸ ಜ್ಞಾನದ ಅನ್ವೇಷಣೆ ಮತ್ತು ಅವನ ಪ್ರತಿಭೆಗಳ ವಿಕಾಸಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಪ್ರತಿಭಾವಂತ ಮಕ್ಕಳ ಶಿಕ್ಷಣಕ್ಕಾಗಿ ಸೂಚಿಸಿರುವ ಕೆಲವು ಸಲಹೆಗಳ ಬಗ್ಗೆ ಈಗ ಚರ್ಚಿಸೋಣ.



Scanned with OKEN Scanner

1. **ಸಂಪದ್ಭರಿತ ಕಾರ್ಯಕ್ರಮ :** ಪ್ರತಿಭಾವಂತ ಮಕ್ಕಳ ಶೈಕ್ಷಣಿಕ ಕಾರ್ಯಕ್ರಮ ಅವರ ಬೆಳವಣಿಗೆಗಾಗಿ ಸಂಪದ್ಭರಿತ ಅನುಭವಗಳನ್ನು ಒಳಗೊಂಡಿರಬೇಕು. ಅವರ ಪ್ರತಿಭೆಗಳನ್ನು ಬೆಳೆಸಲು ಮತ್ತು ಅವರ ಶಕ್ತಿಗಳನ್ನು ಸರಿಯಾದ ದಾರಿಯಲ್ಲಿ ಹರಿಸಲು ಹೆಚ್ಚಿನ ಅವಕಾಶಗಳನ್ನು ಒದಗಿಸಬೇಕು. ಶೈಕ್ಷಣಿಕ ಕಾರ್ಯಕ್ರಮವನ್ನು ವೈಯಕ್ತಿಕ ಕಾರ್ಯಗಳು, ಗ್ರಂಥಾಲಯ ಸೌಲಭ್ಯ, ಅಭಿನಯ, ಯೋಜನಾ ಪದ್ಧತಿ, ಮತ್ತು ಪ್ರವಾಸಗಳು ಹಾಗೂ ಹೊರ ಸಂಚಾರಗಳ ಮೂಲಕ ಸಂಪದ್ಭರಿತಗೊಳಿಸಬೇಕು.

2. **ವೇಗವರ್ಧನ :** ಪ್ರತಿಭಾವಂತ ಮಕ್ಕಳ ವಿಶೇಷ ಶೈಕ್ಷಣಿಕ ಅಗತ್ಯತೆಗಳನ್ನು ಪೂರೈಸಲು ಈ ವಿಧಾನವನ್ನು ಸೂಚಿಸಲಾಗಿದೆ. ವೇಗವರ್ಧನ ಎಂದರೆ ಸಾಮಾನ್ಯ ಮಕ್ಕಳಿಗಿಂತ ವೇಗವಾಗಿ ಪ್ರಗತಿ ಹೊಂದುವ ಶೈಕ್ಷಣಿಕ ಕಾರ್ಯಕ್ರಮವಾಗಿದೆ.ವೇಗವರ್ಧನ ವಿವಿಧ ಹಂತಗಳಲ್ಲಿ ವಿವಿಧ ರೂಪಗಳಲ್ಲಿ ನಡೆಯಬಹುದು. ವೇಗವರ್ಧನ ಕಾರ್ಯಕ್ರಮದಲ್ಲಿ ಪ್ರತಿಭಾವಂತ ಮಕ್ಕಳಿಗೆ ಅವರ ಮಾನಸಿಕ ಬೆಳವಣಿಗೆಗೆ ಅನುಗುಣವಾಗಿ ಮುಂದಿನ ತರಗತಿಗಳಿಗೆ ಬಡ್ತಿ ನೀಡಲಾಗುವುದು. ವೇಗವರ್ಧನದ ವಿವಿಧ ಸೌಲಭ್ಯಗಳೆಂದರೆ – ನಿಗದಿತ ವಯಸ್ಸಿಗಿಂತ ಮುಂಚಿನ ಪ್ರವೇಶಗಳು, ವೇಗದ ಬಡ್ತಿಗಳು, ವರ್ಗಬೇಧವಿಲ್ಲದ ತರಗತಿ, ಹೆಚ್ಚಿನ ವಿಷಯಗಳ ಕಲಿಕೆ ಇತ್ಯಾದಿ.

3. **ಸಾಮರ್ಥ್ಯಾನುಸಾರ ಗುಂಪು ರಚಿಸುವುದು ಅಥವಾ ಪ್ರತ್ಯೇಕಿಸುವುದು :** ತರಗತಿ ಅಥವಾ ಗುಂಪನ್ನು ಅವರ ಸಾಮರ್ಥ್ಯಾನುಸಾರ ವಿವಿಧ ವಿಭಾಗಗಳಾಗಿ ವಿಂಗಡಿಸಲಾಗುವುದು. ಪ್ರತಿಯೊಂದು ವಿಭಾಗದಲ್ಲೂ ಸಮಾನ ಸಾಮರ್ಥ್ಯದ ಮಕ್ಕಳಿರುತ್ತಾರೆ. ಆಗ ಅವರ ಅಗತ್ಯತೆಗಳನ್ನು ಪೂರೈಸುವಂತಹ ಪಠ್ಯ ಸಾಮಗ್ರಿ ಮತ್ತು ಬೋಧನಾ ವಿಧಾನಗಳನ್ನು ಯೋಜಿಸಲಾಗುವುದು.

   ಪ್ರತ್ಯೇಕಿಕರಣವನ್ನು ಹಲವಾರು ರೀತಿಯಲ್ಲಿ ಮಾಡಬಹುದು ಅವುಗಳೆಂದರೆ ವಿಶೇಷ ವಿಭಾಗ, ಬೋಧನಾ ವಿಭಾಗ, ವಿಜ್ಞಾನ ಸಂಘ, ಭಾಷಾಸಂಘ, ಹವ್ಯಾಸ ಸಂಘಗಳು ಇತ್ಯಾದಿ. ವಿಶೇಷ ಶಾಲೆಗಳಲ್ಲಿ ಬೋಧಿಸುವುದು, ಪ್ರಾವೀಣ್ಯತೆಯ ಕಾರ್ಯಕ್ರಮ ಇತ್ಯಾದಿ

4. ವೈಯಕ್ತಿಕರಿಸುವ ಬೋಧನಾ ವಿಧಾನಗಳಾದ ಕಾರ್ಯಕ್ರಮನ್ವಯ ಕಲಿಕಾ ವಿಧಾನ, ಕಂಪ್ಯೂಟರ್ ಸಹಾಯದಿಂದ ಕಲಿಕೆ ಇತ್ಯಾದಿಗಳನ್ನು ಪ್ರತಿಭಾವಂತರ ಶಿಕ್ಷಣದಲ್ಲಿ ಬಳಸಬಹುದಾಗಿದೆ. ಅವರಿಗೆ ತಮ್ಮದೇ ಆದ ವೇಗದಲ್ಲಿ ಕಲಿಯಲು ಈ ವಿಧಾನಗಳು ಸಹಾಯ ಮಾಡುತ್ತವೆ.

5. ಶೈಕ್ಷಣಿಕ ಮತ್ತು ವೈಯಕ್ತಿಕ ಮಾರ್ಗದರ್ಶನ ನೀಡುವುದು ಇನ್ನೊಂದು ಕ್ರಮವಾಗಿದೆ. ಪ್ರತಿಭಾವಂತ ಮಕ್ಕಳು ಯಾವ ಕ್ಷೇತ್ರದಲ್ಲಿ ವಿಶೇಷ ಸಾಮರ್ಥ್ಯ ತೋರುತ್ತಾರೋ ಆ ಕ್ಷೇತ್ರದಲ್ಲಿನ ಪರಿಣಿತರೊಂದಿಗೆ ಸಂಪರ್ಕಿಸಲು ಅವಕಾಶ ನೀಡಬೇಕು. ಪರಿಣಿತ ವ್ಯಕ್ತಿಗಳು ವಿದ್ಯಾರ್ಥಿಗಳಿಗೆ ತಮ್ಮ ವಿಶೇಷ ಆಸಕ್ತಿಯ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಅವಕಾಶ ಮತ್ತು ಮಾರ್ಗದರ್ಶನ ನೀಡಬೇಕು.

6. ವಿಶೇಷ ಆಸಕ್ತಿಯುಳ್ಳ ವಿಷಯಗಳಲ್ಲಿ ಉನ್ನತ ಅಧ್ಯಯನವನ್ನು ಪ್ರಾರಂಭಿಸಬಹುದು. ಉದಾಹರಣೆಗೆ ಒಬ್ಬ ಮಗು ಗಣಿತದಲ್ಲಿ ಪ್ರತಿಭಾವಂತನಾಗಿದ್ದರೆ ಅವನಿಗೆ ಗಣಿತ ಕಲಿಕೆಗೆ ವಿಶೇಷ ತರಗತಿಗೆ ಹಾಜರಾಗಲು ಅವಕಾಶ ನೀಡಿ, ಇತರೆ ವಿಷಯಗಳನ್ನು ತನ್ನ ಸಾಮಾನ್ಯ ತರಗತಿಯಲ್ಲಿ ಕಲಿಯಲು ಅವಕಾಶ ನೀಡಬಹುದು. ಇದರಿಂದ ಅವನು ಗಣಿತದಲ್ಲಿ ವಿಶೇಷ ಜ್ಞಾನ ಪಡೆಯಲು ಸಾಧ್ಯವಾಗುತ್ತದೆ.



Scanned with OKEN Scanner

**ಶಿಕ್ಷಕರ ಪಾತ್ರ :** ಪ್ರತಿಭಾವಂತ ಮಕ್ಕಳಿಗೆ ಶಿಕ್ಷಣ ನೀಡುವಂತಹ ಶಿಕ್ಷಕ ನಮ್ಯವಾಗಿರಬೇಕು. ಅವನು ತನ್ನ ವಿದ್ಯಾರ್ಥಿಗಳಿಗೆ ಹೊಸ ಸಂಶೋಧನೆಗಳನ್ನು ಕೈಗೊಳ್ಳಲು ಮತ್ತು ತಮ್ಮ ಸಾಮಥ್ಯಗಳನ್ನು ವ್ಯಕ್ತ ಪಡಿಸಲು ಸ್ವಾತಂತ್ರ್ಯ ನೀಡಬೇಕು. ಶಿಕ್ಷಕ ಮಕ್ಕಳನ್ನು ಉತ್ತೇಜಿಸಬೇಕು, ಪ್ರೋತ್ಸಾಹಿಸಬೇಕು ಮತ್ತು ತಮ್ಮ ಸಾಮರ್ಥ್ಯಗಳನ್ನು ಪರೀಕ್ಷಿಸಿಕೊಳ್ಳಲು ಅವಕಾಶ ನೀಡಬೇಕು. ಈ ಮಕ್ಕಳು ಉತ್ತೇಜಿತ ಮಾರ್ಗದರ್ಶನ ಮತ್ತು ನಿರ್ದೇಶನಗಳನ್ನು ಬಯಸುತ್ತಾರೆ, ಆದರೆ ಅದು ಅವರ ಸ್ವಯಂ ಪ್ರೇರಿತ ಚಟುವಟಿಕೆಗಳಿಗೆ ಅಡ್ಡಿಯನ್ನುಂಟು ಮಾಡಬಾರದು. ಈ ಮಕ್ಕಳಿಗೆ ಪರಿಣಾಮಕಾರಿಯಾದ ಮತ್ತು ಉತ್ಪಾದನಾ ಕಲಿಕೆಗೆ ಮಾರ್ಗದರ್ಶನಮಾಡುವುದು ಶಿಕ್ಷಕನ ತುಂಬಾ ಪ್ರಮುಖವಾದ ಮತ್ತು ಜವಾಬ್ದಾರಿಯುತ ಕೆಲಸವಾಗಿದೆ.

## ಮಂದಗತಿಯಲ್ಲಿ ಕಲಿಯುವವರು

### ಅರ್ಥ, ಲಕ್ಷಣಗಳು ಮತ್ತು ಶೈಕ್ಷಣಿಕ ಕ್ರಮಗಳು :

ಎಲ್ಲಾ ಶಿಕ್ಷಕರು ಶಾಲಾ ಕೆಲಸದಲ್ಲಿ ಅಥವಾ ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಸಮಸ್ಯೆಯನ್ನು ಎದುರಿಸುತ್ತಾರೆ. ನೀವು, ಶಿಕ್ಷಕರಾಗಿ ತರಗತಿಯ ಇತರ ಮಕ್ಕಳಿಗಿಂತ ಶಾಲಾ ಸಾಧನೆಯಲ್ಲಿ ಭಿನ್ನರಾಗಿರುವ ಮಕ್ಕಳನ್ನು ವೀಕ್ಷಿಸಿರುತ್ತೀರಿ. ಇವರು ತರಗತಿಯ ಸಾಮಾನ್ಯ ಬೋಧನೆಯಿಂದ ಹೆಚ್ಚು ಪ್ರಯೋಜನ ಪಡೆಯಲಾರರು. ತರಗತಿಯ ಶಿಕ್ಷಕ ಇವರನ್ನು ಅವರ ಮುಖಭಾವಗಳು, ಅಲಕ್ಷ್ಯ, ಸರಳ ಪ್ರಶ್ನೆಗಳಿಗೂ ತರಗತಿಯಲ್ಲಿ ಉತ್ತರಿಸದಿರುವುದು ಇಂತಹ ಲಕ್ಷಣಗಳ ಮೂಲಕ ಗುರುತಿಸಬಹುದು.

ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳನ್ನು ಮಂದ ಗತಿಯಲ್ಲಿ ಕಲಿಯುವವರು ಎನ್ನುತ್ತಾರೆ. ಅವರಲ್ಲಿ ವ್ಯಾಸಂಗದ ಚಟುವಟಿಕೆಗಳಲ್ಲಿ ಸಾಮಾನ್ಯ ವೇಗದಲ್ಲಿ ಪ್ರಗತಿ ಹೊಂದುವ ಸಾಮರ್ಥ್ಯ ಕಂಡುಬರುವುದಿಲ್ಲ. ಈ ಮಕ್ಕಳು ತಾವಿರುವ ತರಗತಿಯ ಮಟ್ಟಕ್ಕೆ ಅಥವಾ ಅದಕ್ಕಿಂತ ಒಂದು ಕೆಳಗಿನ ತರಗತಿಯ ಮಟ್ಟಕ್ಕೆ ಸಾಧನೆ ಮಾಡಲಾಗದವರು. ಅದೇ ವಯಸ್ಸಿನ ಮಕ್ಕಳೊಡನೆ ಇವರನ್ನು ಹೋಲಿಸಿದಾಗ ಇವರಲ್ಲಿ ಸಾಕಷ್ಟು ಕೊರತೆ ಕಂಡುಬರುತ್ತದೆ. ಇವರು ಸಾಮಾನ್ಯವಾಗಿ ಸಾಧಾರಣ ಶಾಲಾ ಪಠ್ಯಕ್ರಮಕ್ಕೆ ಸ್ಪಂದಿಸಲಾರರು.

"ಯಾರು ತಮ್ಮ ಸ್ವಾಭಾವಿಕ ಸಾಮರ್ಥ್ಯಗಳಿಗಿಂತ ಕೆಳಮಟ್ಟದ ಶೈಕ್ಷಣಿಕ ಸಾಧನೆ ಮಾಡುತ್ತಾರೋ ಅವರನ್ನು ಕಲಿಕೆಯಲ್ಲಿ ಹಿಂದುಳಿದವರು" ಎನ್ನುವರು

*– ಬರ್ಟನ್ ಹಾಲ್*

"ಕಲಿಕೆಯಲ್ಲಿ ಹಿಂದುಳಿದ ಮಗು ಎಂದರೆ – ಮಧ್ಯಮ ಶಾಲಾ ಹಂತದಲ್ಲಿ ಅವನ ವಯಸ್ಸಿಗೆ ಅನುಗುಣವಾದ ತರಗತಿಗಿಂತ ಕೆಳಗಿನ ತರಗತಿಯ ಕೆಲಸವನ್ನು ಮಾಡಲಾಗದವನು' ಎನ್ನುವರು.

*– ಸಿರಿಲ್ ಬರ್ಟ್*

ಸಿರಿಲ್ ಬರ್ಟ್‌ರವರ ಪ್ರಕಾರ ಕಲಿಕೆಯಲ್ಲಿ ಹಿಂದುಳಿದ ಮಗುವಿನ ಶೈಕ್ಷಣಿಕ ಅನುಪಾತ ಅಥವಾ ಶೈಕ್ಷಣಿಕ ಸೂಚ್ಯಾಂಕ 85 ಕ್ಕಿಂತ ಕಡಿಮೆಯಿರುವುದು, ಆದರೆ ಸಾಮಾನ್ಯ ಮಗುವಿನ ಶೈಕ್ಷಣಿಕ ಸೂಚ್ಯಾಂಕ 85 ರಿಂದ 155 ರ ಮಧ್ಯೆ ಇರುತ್ತದೆ.

**ಮಂದಗತಿಯಲ್ಲಿ ಕಲಿಯುವವರ ಗುಣಲಕ್ಷಣಗಳು :**

1. **ದೈಹಿಕ ಗುಣ ಲಕ್ಷಣಗಳು**

   * ನಿಧಾನವಾದ ಸಂವೇದನಾ ಗತಿ ವಿಕಾಸ
   * ದೃಷ್ಟಿ, ಮಾತಿನ ಮತ್ತು ಶ್ರವಣ ದೋಷ
   * ಪ್ರತಿಕ್ರಿಯಿಸಲು ಹೆಚ್ಚಿನ ಸಮಯ ಬೇಕಾಗುತ್ತದೆ.
   * ಸ್ನಾಯು ಸಮನ್ವಯದ ಕೊರತೆ
   * ಕನಿಷ್ಟ ಮಟ್ಟದ ಗತಿ ಕೌಶಲ

2. **ಬೌದ್ಧಿಕ ಗುಣಲಕ್ಷಣಗಳು ;**

   * ಕಡಿಮೆ ಬುದ್ಧಿಶಕ್ತಿ ಅಂದರೆ ಬುದ್ಧಿ ಶಕ್ತಿ ಸೂಚ್ಯಾಂಕ 76 ರಿಂದ 89 ರೊಳಗೆ
   * ಅಮೂರ್ತ ಚಿಂತನೆಯ ಕೊರತೆ
   * ತಾರ್ಕಿಕ ಸಾಮರ್ಥ್ಯದ ಕೊರತೆ
   * ಸಹಜತೆಗಿಂತ ಕೆಳಮಟ್ಟದ ಜ್ಞಾಪಕ ಶಕ್ತಿ, ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆ.
   * ಯೋಜನೆ ತಯಾರಿಕೆ ಮತ್ತು ಸ್ವತಃ ಕೆಲಸ ಮಾಡುವಲ್ಲಿ ಕನಿಷ್ಟ ಮಟ್ಟದ ಸಾಮರ್ಥ್ಯ.
   * ನಿಧಾನ ಗತಿಯಲ್ಲಿ ಕಲಿಯುವವರು ಮತ್ತು ಕಲಿತಿದ್ದನ್ನು ನೆನಪಿಟ್ಟುಕೊಳ್ಳುವಲ್ಲಿ ತೊಂದರೆ ಎದುರಿಸುವವರು.
   * ಸಾಮಾನ್ಯ ಜ್ಞಾನ ಮತ್ತು ತೀರ್ಮಾನ ಕೈಗೊಳ್ಳುವ ಶಕ್ತಿಯ ಕೊರತೆ
   * ಚಿಕ್ಕದಾದ ಅವಧಾನ ವ್ಯಾಪ್ತಿ ಹೊಂದಿರುವವರು.

3. **ಶೈಕ್ಷಣಿಕ ಗುಣಲಕ್ಷಣಗಳು :**

   * ಕನಿಷ್ಟ ಮಟ್ಟದ ಭಾಷಾ ಸಾಮರ್ಥ್ಯ (ಓದುವುದು, ಬರೆಯುವುದು ಮತ್ತು ಕಾಗುಣಿತದಲ್ಲಿ)
   * ಕಲಿಕೆಯ ಬಗ್ಗೆ ಋಣಾತ್ಮಕ ಮನೋಭಾವ
   * ಕನಿಷ್ಟ ಮಟ್ಟದ ಶಾಬ್ದಿಕ ಅಭಿವ್ಯಕ್ತಿ
   * ಮೌನ ಓದಿಗಿಂತ ಬಾಯ್ದೆರೆ ಓದು ತುಂಬಾ ಕಷ್ಟ.
   * ಸಾಕಷ್ಟು ವ್ಯಾಸಂಗದ ಮತ್ತು ವಿಚಾರಣಾ ಕೌಶಲಗಳ ಕೊರತೆ.



Scanned with OKEN Scanner

**4. ಸಾಮಾಜಿಕ ಗುಣಲಕ್ಷಣಗಳು :**

* ಸಮವಯಸ್ಕರು ಇವರನ್ನು ಅಲ್ಪರೆಂದು ಭಾವಿಸುತ್ತಾರೆ ಮತ್ತು ತಿರಸ್ಕರಿಸುತ್ತಾರೆ.
* ಅನಪೇಕ್ಷಿತ ಸಾಮಾಜಿಕ ಗುಣಗಳು ಕಂಡುಬರುತ್ತವೆ.
* ಸಾಮಾನ್ಯ ಮಕ್ಕಳೊಂದಿಗೆ ಹೋಲಿಸಿದಾಗ ಇವರು ಹೆಚ್ಚು ಹಗಲು ಗನಸುಗಳನ್ನು ಕಾಣುತ್ತಾರೆ.

**ಶೈಕ್ಷಣಿಕ ಕ್ರಮಗಳು :** ಶಿಕ್ಷಣ ಪ್ರಕ್ರಿಯೆಯಲ್ಲಿ ಮಂದ ಗತಿಯಲ್ಲಿ ಕಲಿಯುವವರಿಗೆ ಮಾರ್ಗದರ್ಶನ ನೀಡುವಲ್ಲಿ ಈ ಕೆಳಗೆ ಸೂಚಿಸಿರುವ ಶೈಕ್ಷಣಿಕ ಕಾರ್ಯಕ್ರಮಗಳು ಉಪಯುಕ್ತವಾಗಿವೆ.

1. **ಸ್ಥಿತಿ ಸ್ಥಾಪಕ ಪಠ್ಯಕ್ರಮ :** ಶಿಕ್ಷಣ ತಜ್ಞರು ಮಂದ ಗತಿಯಲ್ಲಿ ಕಲಿಯುವವರಿಗಾಗಿ ಪಠ್ಯಕ್ರಮ ರಚಿಸುವಾಗ ಅದು ನಮ್ಯವಾಗಿರುವಂತೆ ನೋಡಿಕೊಳ್ಳಬೇಕು. ಅಂದರೆ ಪ್ರತಿಯೊಬ್ಬ ವಿದ್ಯಾರ್ಥಿಯ ಅಗತ್ಯತೆಗಳಿಗೆ ಹೊಂದುವಂತಹ ಪಠ್ಯಕ್ರಮ ರಚಿಸಬೇಕು. ಮಂದಗತಿಯಲ್ಲಿ ಕಲಿಯುವವರು ಸಾಮಾನ್ಯವಾಗಿ ಸರಳ ಪ್ರತ್ಯಕ್ಷಾನುಭವಗಳಲ್ಲಿ ಆಸಕ್ತಿ ಹೊಂದಿರುತ್ತಾರೆ. ಆದ್ದರಿಂದ ಸರಳ ಅನುಭವಗಳನ್ನು ಒದಗಿಸುವಂತಹ ಚಟುವಟಿಕೆಗಳಿಗೆ ಗಮನ ನೀಡಬೇಕು.

2. **ಪರಿಹಾರ ಶಿಕ್ಷಣ :** ಪ್ರತಿಭಾವಂತ ಮಕ್ಕಳಿಗೆ ಸಮೃದ್ಧ ಕಾರ್ಯಕ್ರಮಗಳನ್ನು ಒದಗಿಸಿದಂತೆ, ಮಂದಗತಿಯಲ್ಲಿ ಕಲಿಯುವವರಿಗೆ ಪರಿಹಾರ ಶಿಕ್ಷಣ ಒದಗಿಸಬೇಕು. ನಿರ್ದಿಷ್ಟ ವಿಷಯದಲ್ಲಿ ನಿರ್ದಿಷ್ಟ ಕ್ಷೇತ್ರದಲ್ಲಿ ನಿಧಾನತೆ ಕಂಡು ಬಂದಾಗ ಅಂತಹ ಸಂದರ್ಭಗಳಲ್ಲಿ ಪರಿಹಾರ ಶಿಕ್ಷಣ ಹೆಚ್ಚು ಪ್ರಯೋಜನಕಾರಿಯಾಗಿರುವುದು ಕಂಡು ಬರುತ್ತದೆ. ನೈದಾನಿಕ ಪರೀಕ್ಷೆಗಳ ಸಹಾಯದಿಂದ ಕಂಡು ಬಂದ ಕೊರತೆಗಳಿಗನುಗುಣವಾಗಿ ಪರಿಹಾರ ಕಾರ್ಯಕ್ರಮವನ್ನು ಯೋಜಿಸಬೇಕು. ಮಂದಗತಿಯಲ್ಲಿ ಕಲಿಯುವ ಮಕ್ಕಳಿಗೆ ಬೋಧಿಸುವಾಗ ಅಭ್ಯಾಸ, ತರಬೇತಿ, ಪುನರಾವರ್ತನೆಗಳನ್ನು ಶಿಕ್ಷಕರು ಬಳಸಿಕೊಳ್ಳಬೇಕು. ಪುನರ್‌ಕಲಿಕೆ ಮತ್ತು ನಿರ್ದೇಶನಕ್ಕೆ ಹೆಚ್ಚು ಒತ್ತು ಕೊಡಬೇಕು.

3. **ಆರೋಗ್ಯಕರ ಪರಿಸರ :** ಇಂತಹ ಮಕ್ಕಳಿಗೆ ಶಾಲಾ ವಾತಾವರಣ ಆರೋಗ್ಯಕರ ಹಾಗೂ ಮುಕ್ತವಾಗಿರಬೇಕು. ಆಗಾಗ್ಗೆ ಮಂದಗತಿಯಲ್ಲಿ ಕಲಿಯುವ ಮಕ್ಕಳು ಭಾವನಾತ್ಮಕ ಸಮಸ್ಯೆಗಳಿಂದ ಬಳಲುತ್ತಾರೆ. ಆದ್ದರಿಂದ ಅವರು ಸುರಕ್ಷಿತ ವಾತಾವರಣದಲ್ಲಿರುವಂತೆ ಎಚ್ಚರ ವಹಿಸಬೇಕು.

4. **ನಿಯಮಿತ ಆರೋಗ್ಯ ತಪಾಸಣೆ :** ದೈಹಿಕ ತೊಂದರೆಗಳು ಮಂದಗತಿಯ ಕಲಿಕೆಗೆ ಕಾರಣವಾಗುವ ಅಂಶಗಳು, ದೈಹಿಕ ಅನಾರೋಗ್ಯ ಮತ್ತು ಇತರೆ ಕಾರ್ಯಾತ್ಮಕ ತೊಂದರೆಗಳು ಸಹ ಕಲಿಕೆಗೆ ಅಡ್ಡಿಯುಂಟುಮಾಡುತ್ತವೆ. ನಿರ್ದಿಷ್ಟ ದೈಹಿಕ ತೊಂದರೆಯನ್ನು ಗುರ್ತಿಸಿ ಅದನ್ನು ಸರಿಪಡಿಸಿದರೆ, ಸಾಮಾನ್ಯವಾಗಿ ಕಲಿಯುವವನಾಗುತ್ತಾನೆ. ಆದ್ದರಿಂದ ಮಂದಗತಿಯ ಕಲಿಕೆಯವರಿಗೆ ನಿಯಮಿತವಾಗಿ ಆರೋಗ್ಯ ತಪಾಸಣೆ ಕಾರ್ಯಕ್ರಮ ವ್ಯವಸ್ಥೆಗೊಳಿಸಬೇಕು.

5 **ಅಭಿಪ್ರೇರಣೆ :** ಮಂದಗತಿಯಲ್ಲಿ ಕಲಿಯುವ ಮಕ್ಕಳಿಗೆ ಮನೆಯಲ್ಲಿ ಪುನರ್ಬಲನದ ಅನುಭವ ದೊರೆಯುವುದಿಲ್ಲ. ದಿನನಿತ್ಯದ ಶಾಲಾ ಚಟುವಟಿಕೆಗಳಲ್ಲಿ ಸೋಲಿನ ಭಯ ಮತ್ತು ನಿರಾಸಕ್ತಿ ಅವರನ್ನು ಕಾಡುತ್ತವೆ. ಆದ್ದರಿಂದ ಅವರ ವ್ಯಾಸಾಂಗ ಮಟ್ಟವನ್ನು ಹೆಚ್ಚಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಇಂತಹ ಮಕ್ಕಳಲ್ಲಿ ಸ್ವಲ್ಪ ಮಟ್ಟಿನ ಸುಧಾರಣೆ ಕಂಡುಬಂದಾಗ ಅವರನ್ನು ಪ್ರೋತ್ಸಾಹಿಸಲು ಕೆಲವು ಅಭಿಪ್ರೇರಣಾ ತಂತ್ರಗಳನ್ನು ಬಳಸಿಕೊಳ್ಳಬೇಕು. ಸೂಕ್ತ ನಿದರ್ಶನಗಳು, ಉದಾಹರಣೆಗಳು ಮತ್ತು ಬೋಧನೋಪಕರಣಗಳನ್ನು ಬಳಕೆ ಮಾಡಿಕೊಂಡು ತರಗತಿಯಲ್ಲಿ ಅವರನ್ನು ಅಭಿಪ್ರೇರಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡಬೇಕು.



Scanned with OKEN Scanner

6. **ವೈಯಕ್ತಿಕ ಗಮನ :** ಶಿಕ್ಷಕ ಮಂದಗತಿಯಲ್ಲಿ ಕಲಿಯುವ ಮಕ್ಕಳಿಗೆ ವೈಯಕ್ತಿಕ ಗಮನ ನೀಡಬೇಕು. ಶಿಕ್ಷಕ ಮಗುವಿನ ವೈಯಕ್ತಿಕತೆಯನ್ನು ಅವನಿಗೆ ಸಹಾಯಕವಾಗುವ ವಾತಾವರಣದ ಮೂಲಕ ಗೌರವಿಸಬೇಕು. ಶಿಕ್ಷಕರು ಇಂತಹ ಮಕ್ಕಳ ಬಗ್ಗೆ ದಯೆ ಮತ್ತು ಕರುಣೆಯನ್ನು ಹೊಂದಿರಬೇಕು. ಮಕ್ಕಳು ತಮ್ಮದೇ ಆದ ವೇಗದಲ್ಲಿ ಕಲಿಯಲು ಅವಕಾಶ ನೀಡಬೇಕು.

7. **ವಿಶೇಷ ಬೋಧನಾ ವಿಧಾನಗಳು :** ಮಂದಗತಿಯ ಕಲಿಕೆಯ ಮಕ್ಕಳಿಗೆ ಶಿಕ್ಷಣ ನೀಡಲು ಕಡಿಮೆ ಅವಧಿಯ ಪಿರಿಯಡ್‌ಗಳು ಮತ್ತು ಸರಳ ಅನುಭವಗಳನ್ನು ಒದಗಿಸುವಂತಹ ಬೋಧನಾ ವಿಧಾನಗಳನ್ನು ಬಳಸಿಕೊಳ್ಳಬೇಕು. ಶಾಬ್ದಿಕ ಬೋಧನೆ ಕಡಿಮೆಯಾಗಬೇಕು. ಐತಿಹಾಸಿಕ, ಭೌಗೋಳಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಹೊಂದಿರುವಂತಹ ಸ್ಥಳಗಳಿಗೆ ಶೈಕ್ಷಣಿಕ ಪ್ರವಾಸಗಳನ್ನು ಏರ್ಪಡಿಸಬೇಕು. ಬೋಧನೆಯಲ್ಲಿ ಬಹುಮಾಧ್ಯಮ ವಿಧಾನವನ್ನು ಬಳಸಿಕೊಳ್ಳಬೇಕು. ನೇರ ಅನುಭವಗಳು ಮತ್ತು ಸರಳ ಉದಾಹರಣೆಗಳು ಇವರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯಕವಾಗುತ್ತವೆ.

8. **ಶಿಕ್ಷಕರಿಂದ ಮನೆಗಳಿಗೆ ಭೇಟಿ :** ಮಂದ ಗತಿಯ ಕಲಿಕೆಯ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಶಿಕ್ಷಕರು ಅವರ ಮನೆಗಳಿಗೆ ಬೇಟಿ ನೀಡಲು ಆಸಕ್ತಿ ವಹಿಸಬೇಕು. ಪ್ರಚೋದನೆಯಿಲ್ಲದ ಮನೆಯ ವಾತಾವರಣ ಮತ್ತು ನಿರಂಕುಶ ಪ್ರಭುತ್ವವುಳ್ಳ ಮನೆ ಮಂದಗತಿಯ ಕಲಿಯುವಿಕೆಗೆ ಕಾರಣವಾಗುವ ಅಂಶಗಳು.

   ಶಿಕ್ಷಕರು ಇಂತಹ ಮಕ್ಕಳ ಪೋಷಕರಿಗೆ ಪರಿಹಾರ ಕಾರ್ಯಕ್ರಮಗಳನ್ನು ಸೂಚಿಸುವುದರ ಮೂಲಕ ಮನೆಯ ವಾತಾವರಣವನ್ನು ಮಾರ್ಪಡಿಸಲು ಸೂಚಿಸಬೇಕು ಮತ್ತು ಕುಟುಂಬದ ವಾತಾವರಣ ಆರೋಗ್ಯಕರ ಹಾಗೂ ಸಂತೋಷದಾಯಕವಾಗಿರುವಂತೆ ನೋಡಿಕೊಳ್ಳಬೇಕು.

9. **ರಚನಾತ್ಮಕ ಮತ್ತು ಸೃಜನಾತ್ಮಕ ಕಾರ್ಯಗಳಿಗೆ ಸೌಲಭ್ಯ :** ರಚನಾತ್ಮಕ ಮತ್ತು ಸೃಜನಾತ್ಮಕ ಕಾರ್ಯಗಳ ಕಲಿಕೆಗೆ ಸೂಕ್ತ ವ್ಯವಸ್ಥೆ ಮಾಡಬೇಕು. ಇದು ಓದಿನಲ್ಲಿ ಆಸಕ್ತಿಯಿಲ್ಲದ ಮಕ್ಕಳಿಗೆ ಸಹಾಯಕವಾಗುತ್ತದೆ ಮತ್ತು ಸೃಜನಾತ್ಮಕ ಕೆಲಸಗಳಲ್ಲಿ ಪ್ರಗತಿ ಸಾಧಿಸಲು ಸಹಾಯ ಮಾಡುತ್ತದೆ.

10. **ಪ್ರಗತಿಯ ಮೌಲ್ಯಮಾಪನ :** ಪ್ರತಿಯೊಂದು ಮಗುವಿನ ಪ್ರಗತಿಯನ್ನು ಅಳೆಯಲು ಸಾಕಷ್ಟು ಅವಕಾಶವಿರಬೇಕು. ಈ ಉದ್ದೇಶಕ್ಕಾಗಿ, ಪರಿಣಿತರು ಹಲವಾರು ಪ್ರಾಮಾಣೀಕೃತಗೊಳಿಸಿದ ಪರೀಕ್ಷೆಗಳನ್ನು ಸೂಚಿಸಿದ್ದಾರೆ. ಅವುಗಳಲ್ಲಿ ಪದ ಗುರುತಿಸುವ ಪರೀಕ್ಷೆ, ಗ್ರಹಿಕೆಗಾಗಿ ಓದುವ ಪರೀಕ್ಷೆ, ಕಾಗುಣಿತ ಪರೀಕ್ಷಿಸುವ ಪರೀಕ್ಷೆ ಇತ್ಯಾದಿಗಳನ್ನು ನೀಡಬಹುದು. ಪರಿಣಾಮಕಾರಿಯಾದ ಮತ್ತು ವೈಯಕ್ತಿಕವಾದ ತರಬೇತಿ ನೀಡಲು ಅಥವಾ ಕ್ರಮ ಕೈಗೊಳ್ಳಲು ಪ್ರತಿಯೊಂದು ಮಗುವಿನ ಪ್ರಗತಿಯ ದಾಖಲೆಯನ್ನಿಡುವ ಅಗತ್ಯವಿದೆ.

**ಶಿಕ್ಷಕನ ಪಾತ್ರ :** ಮಂದಗತಿಯ ಕಲಿಕೆಯ ಮಕ್ಕಳಿಗೆ ಶಿಕ್ಷಣ ನೀಡುವ ಉತ್ತಮ ಶಿಕ್ಷಕ ನಾಯಕನಾಗಿರಬೇಕು, ನೈದಾನಿಕ ಪರೀಕ್ಷಕನಾಗಿರಬೇಕು. ಅವನು ಕೇವಲ ಬೋಧಕ ಅಥವಾ ಆಡಳಿತಗಾರನಾಗಿರಬಾರದು. ಮಂದಗತಿಯಲ್ಲಿ ಕಲಿಯುವವರಿಗೆ ಶಿಕ್ಷಣ ನೀಡಲು ವಿಶಿಷ್ಟ ಸಾಮರ್ಥ್ಯಗಳು ಮತ್ತು ಹೆಚ್ಚಿನ ಸಂಪನ್ಮೂಲ ಹೊಂದಿದ ಶಿಕ್ಷಕರ ಅಗತ್ಯತೆಯಿದೆ, ಶಿಕ್ಷಕ ಅನುಭವಿ, ಸ್ಪರ್ಧಾತ್ಮಕ ಮತ್ತು ಪ್ರಗತಿಪರ ಮನೋಭಾವದವನಾಗಿರಬೇಕು. ಶಿಕ್ಷಕ ಪ್ರತಿಯೊಂದು ಮಗುವನ್ನು ಗೌರವಿಸಬೇಕು. ಶಿಕ್ಷಕ ತಾಳ್ಮೆ, ಸಹಾನುಭೂತಿ ಮತ್ತು ಹೆಚ್ಚಿನ ಸಾಮರ್ಥ್ಯ ಹೊಂದಿರಬೇಕು.

## ಅಪೂರ್ಣ ಸಾಧಕರು – ಅರ್ಥ ಗುಣ ಲಕ್ಷಣಗಳು ಮತ್ತು ಶೈಕ್ಷಣಿಕ ಕ್ರಮಗಳು :

ಉನ್ನತ ಹಾಗೂ ಕೆಳಮಟ್ಟದ ಸಾಧನೆಗಳು ಮೇಲ್ಮಟ್ಟದ ಹಾಗೂ ಕೆಳಮಟ್ಟದ ಸರಾಸರಿ ಸಾಧಕರನ್ನು ಸೂಚಿಸುತ್ತವೆ. ಅಧಿಕ ಸಾಧನೆ ಹಾಗೂ ಅಪೂರ್ಣ ಸಾಧನೆಯ ಪರಿಕಲ್ಪನೆಗಳನ್ನು ವ್ಯಕ್ತಿಯ ಶೈಕ್ಷಣಿಕ ಸಾಧನೆಯನ್ನು ಅವನ ಬುದ್ಧಿಶಕ್ತಿ ಮಟ್ಟಕ್ಕೆ ಸಂಬಂಧಿಸಿ ಪರಿಗಣಿಸಲಾಗುವುದು.

ಒಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಸಾಮರ್ಥ್ಯ ಅವನ ಮಾನಸಿಕ ಸಾಮರ್ಥ್ಯಕ್ಕಿಂತ ತುಂಬಾ ಕಡಿಮೆ ಮಟ್ಟದಲ್ಲಿದ್ದರೆ ಅವನನ್ನು ಅಪೂರ್ಣ ಸಾಧಕ ಎನ್ನುವರು.

ದೌಡ್‌ರವರ ಪ್ರಕಾರ ಅಪೂರ್ಣ ಸಾಧನೆಯ ವಿದ್ಯಾರ್ಥಿಗಳಲ್ಲಿ ವ್ಯಾಸಂಗದ ಅಭಿಕ್ಷಮತೆಯ ಮಟ್ಟ ಅವರ ಸಹಪಾಠಿಗಳಿಗಿಂತ ಶೇ. 90 ರಷ್ಟು ಹೆಚ್ಚಾಗಿರುತ್ತದೆ. ಆದರೆ ಶೈಕ್ಷಣಿಕವಾಗಿ ಶೇ. 50 ವಿದ್ಯಾರ್ಥಿಗಳನ್ನು ಮೀರಿಸಲು ವಿಫಲರಾಗುತ್ತಾರೆ.

ಹಿಲ್ಡ್ರೆತ್‌ರವರ ಪ್ರಕಾರ ಅಪೂರ್ಣ ಸಾಧಕರೆಂದರೆ ವಸ್ತುನಿಷ್ಠ ಪರೀಕ್ಷೆಗಳ ಮೂಲಕ ಅಳೆದಾಗ ಈ ಮಕ್ಕಳು ತಮ್ಮ ಸಾಮರ್ಥ್ಯದಲ್ಲಿ ತರಗತಿಯ ಮೇಲ್ದರ್ಜೆಯ $1/3$ ಭಾಗ ಅಥವಾ ¼ ಭಾಗದಲ್ಲಿರುತ್ತಾರೆ. ಆದರೆ ಶೈಕ್ಷಣಿಕ ಸಾಧನೆಯಲ್ಲಿ ಒಂದು ನಿರ್ದಿಷ್ಟ ವಿಷಯ ಅಥವಾ ಅವರ ಪೂರ್ಣ ಶಾಲಾ ಕೆಲಸದಲ್ಲಿ ತರಗತಿಯ ಮಧ್ಯಮ ಅಥವಾ ಕೆಳಭಾಗದಲ್ಲಿರುತ್ತಾರೆ.

### ಅಪೂರ್ಣ ಸಾಧಕರ ಗುಣಲಕ್ಷಣಗಳು

**ಅಪೂರ್ಣ ಸಾಧಕರ ಗುಣಲಕ್ಷಣಗಳು ಈ ಕೆಳಕಂಡಂತಿವೆ.–**

* ಅಪೂರ್ಣ ಸಾಧಕರ ವ್ಯಕ್ತಿತ್ವದ ಲಕ್ಷಣಗಳೆಂದರೆ, ಅಲ್ಪ ತೃಪ್ತರು ಮತ್ತು ಸನ್ನಿವೇಶದಿಂದ ಹೊರ ಹೋಗುವ ಪ್ರವೃತ್ತಿಯವರು, ಕಡಿಮೆಮಟ್ಟದ ಭಾವನಾತ್ಮಕ ಸ್ಥಿರತೆ, ನಾಚಿಕೆಸ್ವಭಾವ, ಕೀಳರಿಮೆ ಮನೋಭಾವ, ಆತ್ಮವಿಶ್ವಾಸದ ಕೊರತೆ, ನಿರಾಶವಾದಿ, ಚಿಂತಾಕ್ರಾಂತನಾಗಿರುವುದು, ಖಿನ್ನತೆ ಮತ್ತು ಉದ್ವೇಗ ಭರಿತರು.
* ಅಧ್ಯಯನದಲ್ಲಿ ಕಡಿಮೆ ಆಸಕ್ತಿ, ತಿರುಗಾಟದಲ್ಲಿ ಸಮಯ ಕಳೆಯುವವರು, ಅವಿಧೇಯರು, ನಿಯಮಿತ ಹಾಜರಾತಿಯಿಲ್ಲದಿರುವುದು.
* ಉತ್ತಮ ಓದುವ ಹವ್ಯಾಸದ ಕೊರತೆ.
* ಶಾಲಾ ಸಂಬಂಧಿತ ಚಟುವಟಿಕೆಗಳಲ್ಲಿ ಆಸಕ್ತಿಯ ಕೊರತೆ.
* ಮನೆಯಲ್ಲಿ ಸೂಕ್ತವಾದ ಜ್ಞಾನಾತ್ಮಕ ವಾತಾವರಣ ದೊರೆಯದಿರುವುದು ಮತ್ತು ಪೋಷಕರಿಂದ ಜ್ಞಾನಾತ್ಮಕ ಪ್ರೋತ್ಸಾಹ ಇಲ್ಲದಿರುವುದು.
* ಸಹಜತೆಗಿಂತ ಕೆಳಮಟ್ಟದ ಶೈಕ್ಷಣಿಕ ಸಾಧನೆ.

**ಅಪೂರ್ಣ ಸಾಧನೆಗೆ ಕಾರಣಗಳು :**

ಭಾರತೀಯ ಸಂಶೋಧಕರು ತಮ್ಮ ಅಧ್ಯಯನಗಳಲ್ಲಿ ಕಂಡುಕೊಂಡಂತಹ ಅಪೂರ್ಣ ಸಾಧನೆಗೆ ಕಾರಣವಾಗುವ ಅಂಶಗಳು ಈ ಕೆಳಗಿನಂತಿವೆ.



Scanned with OKEN Scanner

ಕನಿಷ್ಠ ಮಟ್ಟದ ಓದುವ ಹವ್ಯಾಸಗಳು, ಕನಿಷ್ಠ ಮಟ್ಟದ ಓದುವ ಸಾಮರ್ಥ್ಯ, ಕೆಳಮಟ್ಟದ ಸಾಧನಾ ಪ್ರೇರಣೆ, ಕನಿಷ್ಠ ಮಟ್ಟದ ಸಾಮಾಜಿಕ ಮತ್ತು ಸಂವೇಗಾತ್ಮಕ ಹೊಂದಾಣಿಕೆ, ಕುಟುಂಬ ಮತ್ತು ಶಾಲೆ ಸಂಬಂಧಿತ ಸಮಸ್ಯೆಗಳು, ಉನ್ನತ ಮಟ್ಟದ ಉದ್ವೇಗ, ಕೆಳಮಟ್ಟದ ಸಾಮಾಜಿಕ ಆರ್ಥಿಕ ಸ್ಥಿತಿಗತಿ, ಕೆಳಮಟ್ಟದ ಸ್ವಬಿಂಬ ಪರಿಕಲ್ಪನೆ, ಮತ್ತು ಅವಾಸ್ತವಿಕ ಆಕಾಂಕ್ಷೆಯ ಮಟ್ಟ.

**ಶೈಕ್ಷಣಿಕ ಕ್ರಮಗಳು :**

1. ಶಾಲೆ ಮತ್ತು ಶಿಕ್ಷಕರು ಅಪೂರ್ಣ ಸಾಧನೆಯ ಮಕ್ಕಳಲ್ಲಿ ಉತ್ತಮ ಓದುವ ಹವ್ಯಾಸಗಳನ್ನು ಅಥವಾ ಕೌಶಲಗಳನ್ನು ಬೆಳೆಸಲು ಸೂಕ್ತ ಸನ್ನಿವೇಶಗಳನ್ನು ಸೃಷ್ಟಿಸಬೇಕು ಅಥವಾ ಅವಕಾಶಗಳನ್ನು ಒದಗಿಸಬೇಕು. ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ಓದುವ ಕೌಶಲಗಳು, ಟಿಪ್ಪಣಿ ಮಾಡಿಕೊಳ್ಳುವ ಕೌಶಲ, ಮನಸ್ಸನ್ನು ಕೇಂದ್ರಿಕರಿಸುವುದು, ಕಂಠಪಾಠ ಮಾಡುವುದು, ನಿಘಂಟುಗಳ ಬಳಕೆ, ಗುಂಪು ಚರ್ಚೆ ಮತ್ತು ಪರೀಕ್ಷೆ ಎದುರಿಸಲು ಅವಶ್ಯಕವಾದ ಕೌಶಲಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡಬೇಕು.

2. ಪೋಷಕರು ಮತ್ತು ಶಿಕ್ಷಕರು ಜಾಗರುಕತೆಯಿಂದ ಅಪೂರ್ಣ ಸಾಧಕರೊಡನೆ ಧನಾತ್ಮಕವಾಗಿ ವರ್ತಿಸುವ ಮೂಲಕ ಅವರ ಸಾಮಾಜಿಕ, ಸಂವೇಗಾತ್ಮಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿನ ಹೊಂದಾಣಿಕೆಯನ್ನು ಉತ್ತೇಜಿಸಬೇಕು. ಎಲ್ಲಾ ಮಕ್ಕಳಿಗೂ ಅದರಲ್ಲೂ ವಿಶೇಷವಾಗಿ ಕನಿಷ್ಠಮಟ್ಟದ ಹೊಂದಾಣಿಕೆಯ ಮಕ್ಕಳಿಗೆ ಶ್ರದ್ಧೆಯಿಂದ ವ್ಯವಸ್ಥೆಗೊಳಿಸಿದ ಮಾರ್ಗದರ್ಶನ ಮತ್ತು ಸಲಹೆ ಕಾರ್ಯಕ್ರಮವನ್ನು ಏರ್ಪಡಿಸುವುದರ ಮೂಲಕ ಅವರಲ್ಲಿ ಉತ್ತಮ ಹೊಂದಾಣಿಕೆ ತರಲು ಪ್ರಯತ್ನಿಸಬೇಕು.

3. ಮಾನಸಿಕ ಉದ್ವೇಗ ಶಾಲಾಸಾಧನೆಗೆ ಋಣಾತ್ಮಕ ಸಂಬಂಧ ಹೊಂದಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಆದ್ದರಿಂದ ಅಪೂರ್ಣ ಸಾಧಕರಲ್ಲಿ ಕಂಡುಬರುವ ಹೆಚ್ಚಿನ ಉದ್ವೇಗವನ್ನು ಕಡಿಮೆ ಮಾಡಲು ಅವರಲ್ಲಿ ಭದ್ರತೆಯ ವಾತಾವರಣ, ಸ್ನೇಹದ ವಾತಾವರಣ, ಶಾಂತತೆ, ಸಮಾಧಾನ, ಸಹಾನುಭೂತಿ, ಸಾಮಾಜೀಕರಣ, ದಯಾಳುತನ ಮತ್ತು ಸಹಕಾರ ಮನೋಭಾವವನ್ನು ಬೆಳೆಸುವಂತಹ ವಾತಾವರಣವನ್ನು ಶಾಲೆ ಮತ್ತು ಮನೆಯಲ್ಲಿ ಸೃಷ್ಟಿಸಬೇಕು.

4. ಪರಿಹಾರಾತ್ಮಕ ಶಿಕ್ಷಣ ಕಾರ್ಯಕ್ರಮಗಳನ್ನು ವೈಜ್ಞಾನಿಕವಾಗಿ ಯೋಜಿಸಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಒದಗಿಸಬೇಕು. ಶಿಕ್ಷಣ ಸಂಸ್ಥೆಗಳು ಪ್ರತಿಯೊಂದು ಮಗುವಿನ ಕೌಟುಂಬಿಕ ಹಿನ್ನೆಲೆಯನ್ನೊಳಗೊಂಡಂತಹ ಸಮಗ್ರ ತಃಖ್ತೆಯನ್ನು ಮತ್ತು ಪ್ರಗತಿಯ ವರದಿಯನ್ನು ಹೊಂದಿರಬೇಕು. ಇದರ ಸಹಾಯದಿಂದ ಮಗುವಿನ ಕುಟುಂಬದ ಹಿಂದುಳಿದಿರುವಿಕೆಯನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ಮತ್ತು ಸೂಕ್ತಕ್ರಮಗಳನ್ನು ಕೈಗೊಳ್ಳುವ ಮೂಲಕ ಇದರಿಂದ ಉಂಟಾಗಬಹುದಾದಂತಹ ಅಪೂರ್ಣ ಸಾಧನೆಯ ಸಮಸ್ಯೆಯನ್ನು ಗಣನೀಯವಾಗಿ ಕಡಿಮೆಮಾಡಲು ಸಾಧ್ಯವಾಗುತ್ತದೆ.

5. ಅಪೂರ್ಣ ಸಾಧನೆಯ ಮಕ್ಕಳಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮತ್ತು ಸಲಹೆ ಕಾರ್ಯಕ್ರಮಗಳಾದ ಸಮಸ್ಯಾತ್ಮಕ ವ್ಯಕ್ತಿಗಳ ಸಮೀಳನ, ವೈಯಕ್ತಿಕ ಸಲಹೆ, ಚಿಕ್ಕಗುಂಪಿನ ಸಲಹೆ, ಗುಂಪು ಸಲಹಾ ಕಾರ್ಯಕ್ರಮಗಳು ಮತ್ತು ಗುಂಪು ಚರ್ಚೆಗಳನ್ನು ಏರ್ಪಡಿಸಬೇಕು. ಸಲಹಾ ಅವಧಿಗಳು ಅಪೂರ್ಣ ಸಾಧನೆಯ ಮಕ್ಕಳಲ್ಲಿ ಆಸಕ್ತಿಯನ್ನು ಹೆಚ್ಚಿಸುತ್ತವೆ, ಹೆಚ್ಚಿನ ಸಾಧನೆಯ ಬಯಕೆ ಉಂಟು ಮಾಡುತ್ತವೆ, ಆಕಾಂಕ್ಷೆಯ ಮಟ್ಟವನ್ನು ಹೆಚ್ಚಿಸುತ್ತವೆ ಮತ್ತು ನಿರಂತರವಾಗಿ ಶೈಕ್ಷಣಿಕ ಸಾಧನೆಯ ಸುಧಾರಣೆಗೆ ಸಹಾಯ ಮಾಡುತ್ತವೆ.



Scanned with OKEN Scanner

## ನೆನಪಿನಲ್ಲಿಡಬೇಕಾದ ಅಂಶಗಳು

★ ಸೃಜನಶೀಲತೆ ಎಲ್ಲಾ ಆರೋಗ್ಯವಂತ ವ್ಯಕ್ತಿಗಳು ವಿವಿಧಮಟ್ಟಗಳಲ್ಲಿ ಹೊಂದಿರುವ ಸಾಮಾನ್ಯ ಸಾಮರ್ಥ್ಯವಾಗಿದೆ. ಮುಖ್ಯವಾಗಿ ಹೊಸದಾಗಿರುವ ಮತ್ತು ಸೃಷ್ಟಿಕರ್ತನಿಗೆ ಈ ಮೊದಲೇ ಅರಿವಿಲ್ಲದ ಯಾವುದೇ ರೀತಿಯ ಸಂಯೋಜನೆಗಳನ್ನು, ಉತ್ಪನ್ನಗಳನ್ನು ಅಥವಾ ವಿಚಾರಗಳನ್ನು ಸೃಷ್ಟಿಸುವ ಸಾಮರ್ಥ್ಯವೇ ಸೃಜನಶೀಲತೆ,

★ ಸೃಜನಶೀಲ ಮಕ್ಕಳ ಗುಣಲಕ್ಷಣಗಳು - ಸ್ವತಂತ್ರ ತೀರ್ಮಾನ ಕೈಗೊಳ್ಳಬಲ್ಲವರು, ಸ್ವತಂತ್ರ ಚಿಂತನೆ, ಕುತೂಹಲ, ಸಮಸ್ಯಾ ಪರಿಹಾರಕ್ಕೆ ಒಳನೋಟ ದೊರೆಯುತ್ತದೆ, ಅಪಾಯಕ್ಕೆ ಸಿದ್ಧನಾಗಿರುತ್ತಾನೆ, ಯಾವಾಗಲೂ ಹೊಸವಿಚಾರಗಳಿಂದ ತುಂಬಿರುತ್ತಾರೆ, ವಿಭಿನ್ನಮುಖಿ ಚಿಂತನಾ ಸಾಮರ್ಥ್ಯ ಮತ್ತು ರಚನಾತ್ಮಕ ವಿಮರ್ಶೆ ಇತ್ಯಾದಿ.

★ ಸೃಜನಶೀಲತೆಯ ಮೇಲೆ ಪ್ರಭಾವ ಬೀರುವ ಕಾರಕಗಳು - ಜ್ಞಾನಾತ್ಮಕ ಕಾರಕಗಳು, ವ್ಯಕ್ತಿತ್ವದ ಕಾರಕಗಳು ಮತ್ತು ಪರಿಸರ ಕಾರಕಗಳು.

★ ಸೃಜನಶೀಲತೆಯನ್ನು ಅಭಿವೃದ್ಧಿಗೊಳಿಸುವ ಕ್ರಮಗಳು - ಮೆದುಳನ್ನು ಕಾರ್ಯಪಟುತ್ವಗೊಳಿಸುವುದು, ವಿಸ್ಮೃತಿಗೊಳಿಸುವಿಕೆ, ಅಸಾಮಾನ್ಯ ಪ್ರಶ್ನೆಗಳು ಮತ್ತು ವಿಭಿನ್ನ ಉತ್ಪನ್ನಗಳನ್ನು ಗೌರವಿಸುವಿಕೆ, ಆತ್ಮವಿಶ್ವಾಸ ವೃದ್ಧಿಸುವುದು, ಅಭಿಪ್ರೇರಣೆ, ಮಾನಸಿಕ ಸುರಕ್ಷತೆ ಮತ್ತು ಮಾನಸಿಕ ಸ್ವಾತಂತ್ರ್ಯ, ವೈಜ್ಞಾನಿಕ ವಿಚಾರಶೀಲತೆಯ ಅಭಿವೃದ್ಧಿ ಇತ್ಯಾದಿ.

★ ಹೆಚ್ಚಿನ ಬುದ್ಧಿಶಕ್ತಿ ಮಟ್ಟ ಮತ್ತು ವಿಶೇಷ ಸಾಮರ್ಥ್ಯಗಳನ್ನು ಹೊಂದಿದ ಮಕ್ಕಳನ್ನು ಪ್ರತಿಭಾವಂತರೆನ್ನುವರು.

★ ಪ್ರತಿಭಾವಂತ ಮಕ್ಕಳ ಶೈಕ್ಷಣಿಕ ಕಾರ್ಯಕ್ರಮಗಳು - ಸಂಪದ್ಭರಿತ ಕಾರ್ಯಕ್ರಮ, ವೇಗವರ್ಧನ, ಸಾಮರ್ಥ್ಯಾನುಸಾರ ಗುಂಪುಗಳ ರಚನೆ, ವೈಯಕ್ತೀಕರಿಸುವ ಶಿಕ್ಷಣ ವಿಧಾನಗಳು, ಶೈಕ್ಷಣಿಕ ಮತ್ತು ವೈಯಕ್ತಿಕ ಮಾರ್ಗದರ್ಶನ ಇತ್ಯಾದಿ.

★ ಮಂದಗತಿಯಲ್ಲಿ ಕಲಿಯುವವರು ವ್ಯಾಸಂಗದ ಚಟುವಟಿಕೆಗಳಲ್ಲಿ ಸಾಮಾನ್ಯ ಮಕ್ಕಳಂತೆ ಪ್ರಗತಿ ತೋರಲು ಅಸಮರ್ಥರು. ಅವರು ಅಧ್ಯಯನ ಮಾಡುತ್ತಿರುವ ತರಗತಿಯ ಮಕ್ಕಳಂತೆ ಅಥವಾ ಅದಕ್ಕಿಂತ ಒಂದು ಕೆಳಗಿನ ತರಗತಿಯ ಮಕ್ಕಳಷ್ಟು ಕಾರ್ಯನಿರ್ವಹಿಸಲು ಸಾಧ್ಯವಿಲ್ಲದವರು.

★ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಗುಣಗಳ ಕೊರತೆ ಕಂಡುಬರುತ್ತದೆ.

★ ಶೈಕ್ಷಣಿಕ ಕ್ರಮಗಳು - ಸ್ಥಿತಿಸ್ಥಾಪಕ ಪಠ್ಯಕ್ರಮ, ಪರಿಹಾರ ಶಿಕ್ಷಣ, ವೈಯಕ್ತಿಕ ಗಮನ, ಅಭಿಪ್ರೇರಣೆ, ವಿಶೇಷ ಬೋಧನಾ ವಿಧಾನಗಳು, ಶಿಕ್ಷಕರಿಂದ ಮನೆಗಳ ಭೇಟಿ, ರಚನಾತ್ಮಕ ಮತ್ತು ಸೃಜನಾತ್ಮಕ ಕಾರ್ಯಗಳಿಗೆ ಅವಕಾಶ ಇತ್ಯಾದಿ.

★ ಒಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಸಾಮರ್ಥ್ಯ ಅವನ ಮಾನಸಿಕ ಸಾಮರ್ಥ್ಯಕ್ಕಿಂತ ತುಂಬಾ ಕಡಿಮೆ ಮಟ್ಟದಲ್ಲಿದ್ದರೆ ಅವನನ್ನು ಅಪೂರ್ಣ ಸಾಧಕ ಎನ್ನುವರು.

★ ಅಪೂರ್ಣ ಸಾಧಕರ ಗುಣಲಕ್ಷಣಗಳು - ಅಲ್ಪತೃಪ್ತರು ಮತ್ತು ಸನ್ನಿವೇಶದಿಂದ ಹೊರಹೋಗುವ ಪ್ರವೃತ್ತಿ, ಕಡಿಮೆ ಮಟ್ಟದ ಭಾವನಾತ್ಮಕ ಸ್ಥಿರತೆ, ಕೀಳರಿಮೆ ಮನೋಭಾವ, ಚಿಂತಾಕ್ರಾಂತನಾಗಿರುವುದು, ಖಿನ್ನತೆ ಮತ್ತು

b



Scanned with OKEN Scanner

ಉದ್ವೇಗಭರಿತರು, ಅಧ್ಯಯನದಲ್ಲಿ ಆಸಕ್ತಿ ಕಡಿಮೆ, ಉತ್ತಮ ಒದುವ ಹವ್ಯಾಸಗಳ ಕೊರತೆ ಮತ್ತು ಕಡಿಮೆ ಶೈಕ್ಷಣಿಕ ಸಾಧನೆ.

★ ಶೈಕ್ಷಣಿಕ ಕ್ರಮಗಳು - ಉತ್ತಮ ಓದುವ ಹವ್ಯಾಸಗಳ ಬೆಳವಣಿಗೆ, ಮಾರ್ಗದರ್ಶನ ಮತ್ತು ಸಲಹೆಯ ಅವಧಿಗಳು, ಪರಿಹಾರಾತ್ಮಕ ಶಿಕ್ಷಣ ಕಾರ್ಯಕ್ರಮಗಳು, ಹೊಂದಾಣಿಕೆಯ ಕೊರತೆಯಿರುವವರಿಗೆ ಮಾರ್ಗದರ್ಶನ ಕಾರ್ಯಕ್ರಮ ಮತ್ತು ಉದ್ವೇಗ ಕಡಿಮೆ ಮಾಡಲು ಕಾರ್ಯಕ್ರಮಗಳು.

## ಅಭ್ಯಾಸ ಪ್ರಶ್ನೆಗಳು

1. ಸೃಜನ ಶೀಲತೆ ಎಂದರೇನು?
2. ಸೃಜನಶೀಲ ಮಕ್ಕಳ ಲಕ್ಷಣಗಳೇನು?
3. ಸೃಜನಶೀಲತೆಯ ಮೇಲೆ ಪ್ರಭಾವ ಬೀರುವ ಕಾರಕಗಳನ್ನು ವಿವರಿಸಿ.
4. ಮೆದುಳನ್ನು ಕಾರ್ಯ ಪಟುತ್ವಗೊಳಿಸುವಿಕೆ (Brain Storming) ಹೇಗೆ ಸೃಜನಶೀಲತೆಯನ್ನು ಉತ್ತೇಜಿಸುತ್ತದೆ?
5. ಶಾಲಾ ಮಕ್ಕಳಲ್ಲಿ ಸೃಜನಶೀಲತೆಯನ್ನು ನೀವು ಹೇಗೆ ಅಭಿವೃದ್ಧಿಗೊಳಿಸುವಿರಿ?
6. ಸೃಜನಶೀಲ ವ್ಯಕ್ತಿಗಳಲ್ಲಿ ಕಂಡುಬರುವ ವ್ಯಕ್ತಿತ್ವದ ಗುಣಲಕ್ಷಣಗಳಾವುವು?
7. ಪ್ರತಿಭಾವಂತ ಮಕ್ಕಳೆಂದರೆ ಯಾರು? ಪ್ರತಿಭಾವಂತ ಮಕ್ಕಳನ್ನು ಗುರ್ತಿಸುವ ವಿವಿಧ ವಿಧಾನಗಳನ್ನು ವಿವರಿಸಿ.
8. ಪ್ರತಿಭಾವಂತ ಮಕ್ಕಳ ಪ್ರಮುಖ ಗುಣಲಕ್ಷಣಗಳೇನು?
9. 'ಪ್ರತಿಭಾವಂತ ಮಗು' ವಿನ ವ್ಯಾಖ್ಯೆ ನೀಡಿರಿ. ಪ್ರತಿಭಾವಂತ ಮಕ್ಕಳಿಗೆ ಶಿಕ್ಷಣ ನೀಡಲು ಪಠ್ಯಕ್ರಮವನ್ನು ನೀವು ಹೇಗೆ ಸಮೃದ್ಧಗೊಳಿಸುವಿರಿ?
10. ಪ್ರತಿಭಾವಂತ ಮಕ್ಕಳಿಗೆ ಶಿಕ್ಷಣ ನೀಡಲು ವಿವಿಧ ಕಾರ್ಯಕ್ರಮಗಳನ್ನು ಚರ್ಚಿಸಿರಿ.
11. ಈ ಕೆಳಗಿನವುಗಳಿಗೆ ತಲಾ ಹತ್ತು ಸಾಲುಗಳಲ್ಲಿ ಉತ್ತರಿಸಿ.

    (ಅ) ಸಮಾನ ಸಾಮರ್ಥ್ಯದ ಗುಂಪುಗಳ ರಚನೆ.

    (ಆ) ಪ್ರತಿಭಾವಂತ ಮಕ್ಕಳ ವ್ಯಕ್ತಿತ್ವದ ಲಕ್ಷಣಗಳು.

    (ಇ) ಸಂಪಧ್ವರಿತ ಕಾರ್ಯಕ್ರಮಗಳು

    (ಈ) ವೇಗವರ್ಧನ

    (ಉ) ಪ್ರತಿಭಾವಂತ ಮಕ್ಕಳನ್ನು ಗುರ್ತಿಸುವಿಕೆ



Scanned with OKEN Scanner

12. ಮಂದಗತಿಯಲ್ಲಿ ಕಲಿಯುವವರೆಂದರೆ ಯಾರು? ಮಂದಗತಿಯಲ್ಲಿ ಕಲಿಯುವವರಿಗೆ ಸೂಕ್ತವಾದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು ಚರ್ಚಿಸಿರಿ.

13. ತರಗತಿ ಸನ್ನಿವೇಶದಲ್ಲಿ ಮಂದಗತಿಯಲ್ಲಿ ಕಲಿಯುವವರಿಗೆ ಕೈಗೊಳ್ಳಬಹುದಾದ ಪರಿಹಾರ ಕ್ರಮಗಳನ್ನು ಸೂಚಿಸಿರಿ.

14. ಈ ಕೆಳಗಿನವುಗಳ ಬಗ್ಗೆ ತಲಾ ಹತ್ತು ಸಾಲುಗಳಲ್ಲಿ ಉತ್ತರಿಸಿ.

    (ಅ) ಪರಿಹಾರ ಶಿಕ್ಷಣ

    (ಆ) ಶಿಕ್ಷಣದ ವೈಯಕ್ತಿಕರಣ

    (ಇ) ಮಂದಗತಿಯಲ್ಲಿ ಕಲಿಯುವವರನ್ನು ಗುರ್ತಿಸುವುದು

    (ಈ) ಮಂದಗತಿಯಲ್ಲಿ ಕಲಿಯುವವರಿಗೆ ಶೈಕ್ಷಣಿಕ ಕಾರ್ಯಕ್ರಮಗಳು.

15. ಈ ಕೆಳಗಿನವುಗಳ ಮಧ್ಯೆ ವ್ಯತ್ಯಾಸ ತಿಳಿಸಿರಿ.

    (ಅ) ಮಂದಗತಿಯಲ್ಲಿ ಕಲಿಯುವವರು ಮತ್ತು ಅಪೂರ್ಣ ಸಾಧಕರು

    (ಆ) ವೈಯಕ್ತಿಕ ಶಿಕ್ಷಣ ಕ್ರಮ ಮತ್ತು ಪರಿಹಾರ ಶಿಕ್ಷಣ

16. ಅಪೂರ್ಣ ಸಾಧಕರು ಎಂದರೆ ಯಾರು?

17. ಅಪೂರ್ಣ ಸಾಧಕರ ಲಕ್ಷಣಗಳೇನು?

18. ಅಪೂರ್ಣ ಸಾಧನೆಗೆ ಪ್ರಮುಖ ಕಾರಣಗಳಾವುವು?

19. ಅಪೂರ್ಣ ಸಾಧಕರಿಗೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

20. ಅಪೂರ್ಣ ಸಾಧಕರ ಶಿಕ್ಷಣದಲ್ಲಿ ಮಾರ್ಗದರ್ಶನ ಮತ್ತು ಸಲಹೆಯ ಪಾತ್ರವನ್ನು ವಿವರಿಸಿ.



Scanned with OKEN Scanner

NAVACHETANA EDUCATIONS

# 5.4

# ಮಾನಸಿಕ ಮತ್ತು ದೈಹಿಕ ಸವಾಲುಗಳುಳ್ಳ ಮಕ್ಕಳು

ಹಿಂದಿನ ವಿಭಾಗದಲ್ಲಿ ನಾವು ವಿಶೇಷ ಸಾಮರ್ಥ್ಯಗಳು ಹಾಗೂ ವಿಶೇಷ ಅವಶ್ಯಕತೆಗಳುಳ್ಳ ಮಕ್ಕಳ ವಿಷಯ ಚರ್ಚಿಸಿದ್ದೇವೆ. ಈ ವಿಭಾಗದಲ್ಲಿ ಮಾನಸಿಕ ಮತ್ತು ದೈಹಿಕ ಸವಾಲುಗಳುಳ್ಳ ಮಕ್ಕಳು, ಅವರನ್ನು ಗುರುತಿಸುವಿಕೆ, ಅವರ ಶಿಕ್ಷಣಕ್ಕಾಗಿ ವಿಶೇಷ ಕಾರ್ಯಕ್ರಮಗಳು ಮತ್ತು ಇಂತಹ ವಿಶೇಷ ಸವಾಲುಗಳುಳ್ಳ ಮಕ್ಕಳೊಂದಿಗೆ ವ್ಯವಹರಿಸುವಲ್ಲಿ ಶಿಕ್ಷಕರ ಪಾತ್ರ ಇವುಗಳನ್ನು ಚರ್ಚಿಸಲಿದ್ದೇವೆ. ಈ ಜ್ಞಾನ ತರಗತಿ ಶಿಕ್ಷಕರಿಗೆ ಇಂತಹ ಮಕ್ಕಳನ್ನು ಗುರುತಿಸಲು ಮತ್ತು ಅವರಿಗೆ ಶಿಕ್ಷಣ ನೀಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸಹಾಯಕವಾಗುತ್ತದೆ.

## ಮಾನಸಿಕ ಮತ್ತು ದೈಹಿಕ ಸವಾಲುಗಳುಳ್ಳ ಮಕ್ಕಳು

ವಿಶೇಷ ಶೈಕ್ಷಣಿಕ ಅಗತ್ಯಗಳುಳ್ಳ ಮಕ್ಕಳು ಮಾನಸಿಕ ಮತ್ತು ದೈಹಿಕ ಸವಾಲುಗಳನ್ನೆದುರಿಸುತ್ತಿರುವರು. ಇವರು ಮಾನಸಿಕ ಮತ್ತು ದೈಹಿಕ ಗುಣಲಕ್ಷಣಗಳಲ್ಲಿ ಸಾಧಾರಣ ಮಕ್ಕಳಿಂದ ಭಿನ್ನವಾಗಿದ್ದು ಇವರಿಗಾಗಿ ಶಾಲಾ ಕಾರ್ಯಕ್ರಮಗಳಲ್ಲಿ ಮಾರ್ಪಾಡುಗಳ ಅಗತ್ಯವಿರುವುದು ಅಥವಾ ಅವರಲ್ಲಿರುವ ಸಾಮರ್ಥ್ಯಗಳ ಗರಿಷ್ಠ ವಿಕಾಸಕ್ಕಾಗಿ ವಿಶೇಷ ಶೈಕ್ಷಣಿಕ ಕಾರ್ಯಕ್ರಮಗಳೇ ಬೇಕಾಗುವುದು.

ಈಗ ನಾವು ವಿವಿಧ ರೀತಿಯ ಮಾನಸಿಕ ಹಾಗೂ ದೈಹಿಕ ಸವಾಲುಗಳುಳ್ಳ ಮಕ್ಕಳ ವಿಷಯವಾಗಿ ಅರಿಯೋಣ.

**ಮಾನಸಿಕ ಸವಾಲುಗಳುಳ್ಳ ಮಕ್ಕಳು :** ಮಾನಸಿಕ ಸವಾಲುಗಳುಳ್ಳ ಮಕ್ಕಳೆಂದರೆ - ಬೌದ್ಧಿಕ ಕಾರ್ಯನಿರ್ವಹಣೆಯಲ್ಲಿ ಅವರು ಸಾಧಾರಣ ಮಟ್ಟಕ್ಕಿಂತ ತುಂಬಾ ಕೆಳಗಿರುತ್ತಾರೆ. ಇದು ಮಕ್ಕಳ ವಿಕಾಸದ ಅವಧಿಯಲ್ಲಿ ಕಂಡು ಬರುತ್ತದೆ ಮತ್ತು ಅವರ ಹೊಂದಾಣಿಕಾ ವರ್ತನೆ ಅಸಮರ್ಪಕವಾಗಿರುತ್ತದೆ.

ಮಾನಸಿಕ ಸವಾಲುಗಳುಳ್ಳ ಮಕ್ಕಳನ್ನು ಹಿಂದೆ ಮಾನಸಿಕ ನ್ಯೂನತೆಯುಳ್ಳವರೆಂದು ಕರೆಯುತ್ತಿದ್ದರು. ಮಾನಸಿಕ ನ್ಯೂನತೆಗೆ ಬುದ್ಧಿಶಕ್ತಿ ಕಡಿಮೆ ಇರುವುದೇ ಸೂಚಕವಾಗಿದೆ. ಶಿಕ್ಷಣದ ಉದ್ದೇಶಕ್ಕಾಗಿ ಇಂತಹ ಮಕ್ಕಳನ್ನು ಅವರ ಬುದ್ಧಿಶಕ್ತಿಯ ಮಟ್ಟಕ್ಕನುಗುಣವಾಗಿ ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ.

| ಕ್ರಮಸಂಖ್ಯೆ | ಬುದ್ಧಿಶಕ್ತಿ ಸೂಚ್ಯಾಂಕದ ವ್ಯಾಪ್ತಿ | ಶೈಕ್ಷಣಿಕ ವರ್ಗೀಕರಣ |
|---|---|---|
| 1. | 25 ಕ್ಕಿಂತ ಕಡಿಮೆ | ಆಶ್ರಿತ ಮಾನಸಿಕ ನ್ಯೂನತೆಯುಳ್ಳವರು. |
| 2. | 26 - 50 | ತರಬೇತಿ ಪಡೆಯಬಲ್ಲ ಮಾನಸಿಕ ನ್ಯೂನತೆಯುಳ್ಳವರು. |
| 3. | 51 -75 | ಶಿಕ್ಷಣಾರ್ಹ ಮಾನಸಿಕ ನ್ಯೂನತೆಯುಳ್ಳವರು. |

**ಗುರುತಿಸುವಿಕೆ :** ಮಾನಸಿಕ ಸವಾಲುಗಳುಳ್ಳ ಮಕ್ಕಳನ್ನು ಬುದ್ಧಿಶಕ್ತಿ ಪರೀಕ್ಷೆಗಳು, ವ್ಯಕ್ತಿ ಅಧ್ಯಯನ, ಸಂಚಿತ ದಾಖಲೆಗಳ ಸಹಾಯದಿಂದ ಹಾಗೂ ಅವರ ಹೊಂದಾಣಿಕೆಯ ವರ್ತನೆಗಳನ್ನು ಅಳತೆ ಮಾಡುವುದರ ಮೂಲಕ ಪತ್ತೆ ಮಾಡಬಹುದು.



Scanned with OKEN Scanner

ಶಿಕ್ಷಕರು ಮತ್ತು ಪೋಷಕರು ಇಂತಹ ಮಕ್ಕಳನ್ನು ಅವರ ವರ್ತನೆಗಳ ಸ್ವರೂಪವನ್ನು ವೀಕ್ಷಿಸುವುದರ ಮೂಲಕ ಗುರುತಿಸಬಹುದು. ಇಂತಹ ವರ್ತನೆಗಳು ಯಾವುವೆಂದರೆ,

- ನಿಧಾನವಾಗಿ ಕಲಿಯುವುದು, ಸಮಸ್ಯಾ ಪರಿಹಾರ ಕೌಶಲ್ಯಗಳಲ್ಲಿ ತುಂಬಾ ಹಿಂದುಳಿದಿರುವುದು, ಪರಿಸರದ ಬೇಡಿಕೆಗಳಿಗೆ ನಿಧಾನವಾಗಿ ಪ್ರತಿಕ್ರಿಯೆ ತೋರುವುದು ಮುಂತಾದ ಲಕ್ಷಣಗಳಿಂದ ಕೂಡಿದ ಸಾಮಾನ್ಯ ಶೈಕ್ಷಣಿಕ ಹಿಂದುಳಿಯುವಿಕೆ.
- ಸ್ಮರಣ ಶಕ್ತಿ ಕಡಿಮೆ ಇದ್ದು, ವಿಷಯಗಳನ್ನು ದೀರ್ಘಕಾಲ ನೆನಪಿನಲ್ಲಿಡಲು ಅಸಮರ್ಥತೆ.
- ಕಲ್ಪನಾ ಶಕ್ತಿ ಮತ್ತು ಸೃಜನಾತ್ಮಕ ಚಿಂತನೆಯಲ್ಲಿ ಹಿಂದುಳಿದಿರುವುದು. (ಸಾಧಾರಣ ಮಟ್ಟಕ್ಕಿಂತ ಕೆಳಗಿರುವುದು)
- ಭಾಷಾ ಕಲಿಕೆಯ ವಿಕಾಸ ನಿಧಾನವಾಗಿದ್ದು, ಶಬ್ದ ಭಂಡಾರ ಮತ್ತು ವೈವಿಧ್ಯತೆಯಲ್ಲಿ ತುಂಬಾ ಸೀಮಿತವಾಗಿರುವುದು.
- ಅವಧಾನ ಸಾಮರ್ಥ್ಯ ಕಡಿಮೆ ಇರುವುದು.
- ಮಿತವಾದ ಆಟ ಮತ್ತು ಸಾಮಾಜಿಕ ಆಸಕ್ತಿಗಳು ಕಡಿಮೆಯಾಗಿರುವುದು.
- ಅವಧಾನ ಕೇಂದ್ರೀಕರಿಸಲಾಗದಿರುವುದು, ಬಹು ಬೇಗ ಅವಧಾನ ಭಂಗವಾಗುವುದು.
- ಸ್ವ ಸಹಾಯ ಕೌಶಲ್ಯಗಳಲ್ಲಿ ಸಮನ್ವಯದ ಕೊರತೆ.
- ಪರಿಕಲ್ಪನೆಗಳು, ಅದರಲ್ಲಿಯೂ ಅಮೂರ್ತ ಪರಿಕಲ್ಪನೆಗಳ ವಿಕಾಸ ಕಠಿಣವಾಗಿರುವುದು.

**ವ್ಯಕ್ತಿತ್ವದ ಮೇಲೆ ಮನೋವೈಜ್ಞಾನಿಕ ಪರಿಣಾಮ**

ಮಾನಸಿಕ ಸವಾಲುಗಳನ್ನೆದುರಿಸುವ ಮಕ್ಕಳಲ್ಲಿ ಸ್ವಬಿಂಬ ಪರಿಕಲ್ಪನೆ ಸಾಕಷ್ಟಿರುವುದಿಲ್ಲ. ಇವರು ಆವೇಗದಿಂದ ವರ್ತಿಸುವರು. ವಸ್ತುಗಳನ್ನು / ವಿಷಯಗಳನ್ನು ಒಟ್ಟಾರೆ ವ್ಯಾಪಕವಾಗಿ ನೋಡುವರು. ಇವರಿಗೆ ಫಲಪ್ರದ ಅನುಭವಗಳನ್ನು ಒದಗಿಸುವ ಧನಾತ್ಮಕ ಕಲಿವಿನ ಪರಿಸರ ಸಹಾಯಕವಾಗುವುದು. ಸಾಧಾರಣ ಮಟ್ಟದ ಮಕ್ಕಳಿಗಿಂತ ಹೆಚ್ಚು ಮೂರ್ತ ಅನುಭವಗಳನ್ನು ಮತ್ತು ಹೆಚ್ಚಿನ ಪುನರಾವರ್ತನೆಯ ಅವಶ್ಯಕತೆಯುಳ್ಳ, ನಿಧಾನವಾಗಿ ಕಲಿಯುವ ಮಕ್ಕಳಿಗಾಗಿ ಭೋಧನೆಯನ್ನು ಹೊಂದಿಸಿ ಮಾರ್ಪಡಿಸಿಕೊಳ್ಳುವುದರಿವದ ಇವರಲ್ಲಿರುವ ಕೀಳರಿಮೆಯ ಭಾವನೆಯನ್ನು ಬಹುಮಟ್ಟಿಗೆ ತಡೆಗಟ್ಟಬಹುದು. ವಿಫಲತೆ ಮತ್ತು ಟೀಕೆಗಳೊಂದಿಗೆ ವ್ಯವಹರಿಸುವುದನ್ನು ಕಲಿಯುವುದಲ್ಲದೆ ಇವರು ಅವುಗಳನ್ನು ಒಪ್ಪಿಕೊಳ್ಳುವುದನ್ನು ಕಲಿಯಬೇಕು.

**ಶೈಕ್ಷಣಿಕ ಅವಕಾಶಗಳು :**

ಮಾನಸಿಕ ಸವಾಲುಗಳುಳ್ಳ ಮಕ್ಕಳ ಶಿಕ್ಷಣದ ಉದ್ದೇಶಗಳು ಆತ್ಮಸಾಕ್ಷಾತ್ಕಾರ, ಮಾನವೀಯ ಸಂಬಂಧಗಳು, ಆರ್ಥಿಕ ಕ್ಷಮತೆ ಮತ್ತು ಪೌರ ಜವಾಬ್ದಾರಿ - ಇವುಗಳನ್ನು ಬೆಳೆಸುವುದೇ ಆಗಿದೆ.

ಶಾಲಾ ಪೂರ್ವ ಹಂತದಲ್ಲಿ (3 ರಿಂದ 6 ವರ್ಷಗಳು) ಮಾನಸಿಕ ಸವಾಲುಗಳುಳ್ಳ ಮಕ್ಕಳಿಗೆ ಸಂವಹನ ಕೌಶಲ್ಯಗಳಲ್ಲಿ, ಸ್ವಸಹಾಯ ಕೌಶಲಗಳು ಮತ್ತು ಸಾಮಾಜೀಕರಣ ಕೌಶಲಗಳಲ್ಲಿ ತರಬೇತಿ ನೀಡಬೇಕು ಮತ್ತು ಪೂರ್ವ ಪ್ರಾಥಮಿಕ t^ ,.^daSes



Scanned with OKEN Scanner

ಕೇಂದ್ರಗಳು, ಅಂಗನವಾಡಿಗಳು ಅಥವಾ ಸಮಗ್ರ ಶಿಶು ಅಭಿವೃದ್ಧಿ ಯೋಜನಾ ಕೇಂದ್ರಗಳಲ್ಲಿ ಪ್ರತ್ಯಾಕ್ಷಾನುಭವಗಳನ್ನು ಒದಗಿಸಬೇಕು.

ಆರರಿಂದ ಒಂಭತ್ತು ವರ್ಷ ವಯಸ್ಸಿನ ಅವಧಿಯಲ್ಲಿ ಇವರನ್ನು ಶಾಲಾ ವ್ಯವಸ್ಥೆಯಲ್ಲಿ ಸಮನ್ವಯಗೊಳಿಸಬೇಕು. ಇಲ್ಲಿ ಇಂತಹ ಮಕ್ಕಳ ಮೂಲ ಕೌಶಲಗಳನ್ನು ಬೆಳೆಸಲು ಹಾಗೂ ಸಂಪನ್ಮೂಲ ಕೊಠಡಿ ಬೋಧನೆಗೂ ಅವಕಾಶವಿರಬೇಕು.

ಒಂಭತ್ತರಿಂದ ಹನ್ನೆರೆಡು ವರ್ಷಗಳಲ್ಲಿ, ಈ ಮಕ್ಕಳನ್ನು ನಿಯಮಿತ ತರಗತಿಗಳಲ್ಲಿ ಸೇರಿಸಬೇಕು. ಈ ತರಗತಿಗಳಲ್ಲಿ ಓದು, ಬರಹ ಮತ್ತು ಮೌಖಿಕ ಅಭಿವ್ಯಕ್ತಿ, ಗಣಿತ, ಗತಿ ಮತ್ತು ಪ್ರತ್ಯಾಕ್ಷಾನುಭವಗಳ ವಿಕಾಸದಲ್ಲಿ ಔಪಚಾರಿಕ ಶೈಕ್ಷಣಿಕ ತರಬೇತಿ ಒದಗಿಸಬೇಕು.

**ಶಿಕ್ಷಕರ ಪಾತ್ರ :**

ತರಗತಿ ಶಿಕ್ಷಕರು ಈ ಕೆಳಗಿನ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರವಹಿಸಬೇಕು.

* ನ್ಯೂನತೆಯುಳ್ಳ ಮತ್ತು ಸಾಧಾರಣ ಮಕ್ಕಳ ನಡುವೆ ಸೂಕ್ತ ಅಂತರ್‌ಕ್ರಿಯೆಗಳ ಅನುಭವಗಳನ್ನು ರೂಪಿಸಿ, ಅವಕಾಶ ನೀಡುವುದು.
* ಯೋಜಿತ ಬೋಧನೆಯನ್ನು ರೂಪಿಸುವುದು.
* ಸಮವಯಸ್ಕ ಗುಂಪುಗಳ ನಡುವೆ ಮನೋಭಾವ ಬದಲಾವಣೆಗಳನ್ನು ಅಳತೆಮಾಡಿ, ಅವರಲ್ಲಿ ಸೂಕ್ತ ಮನೋಭಾವಗಳನ್ನು ಬೆಳೆಸುವುದು.
* ಮಾನಸಿಕ ಸವಾಲುಗಳುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಜವಾಬ್ದಾರಿಯನ್ನು ಒಪ್ಪಿಕೊಳ್ಳುವುದು. ಈ ಕಾರ್ಯವು ಸವಾಲಿನದಾಗಿದ್ದು ಅದನ್ನು ಹೇಗೆ ಎದುರಿಸಬೇಕೆಂಬುದನ್ನು ಶಿಕ್ಷಕನು ತಿಳಿದಿರಬೇಕು.
* ಕೌಶಲ ತರಬೇತಿ, ಅವಧಾನ, ತರಬೇತಿ, ಪುನರಭ್ಯಾಸ ತರಬೇತಿ, ಕಲಿಯಲು ಕಲಿಯುವಿಕೆ ಮತ್ತು ಉಪಕರಣ ಬಳಕೆ, ಸಂಪದೀಕರಣ ಮುಂತಾದವುಗಳನ್ನು ಕ್ರಮಬದ್ಧಗೊಳಿಸುವುದಕ್ಕಾಗಿ ಅಭಿವೃದ್ಧಿ ಕೌಶಲ ತರಬೇತಿ ಮಾರ್ಗವನ್ನು ಬಳಸಬೇಕು. ಸಾಮಾಜಿಕ ಹೊಂದಾಣಿಕೆಯ ಕೌಶಲಗಳನ್ನು ಸಹ ಬೆಳೆಸಬೇಕು.
* ಜ್ಞಾನಾತ್ಮಕ ತಂತ್ರ ವಿಧಾನವನ್ನು ಅಳವಡಿಸಬೇಕು. ಸ್ವಯಂ ಬೋಧನೆ ಹಾಗೂ ಸಮಸ್ಯಾ ಪರಿಹಾರ ವಿಧಾನಗಳು ಸೂಕ್ತ ತಂತ್ರಗಳಾಗಿವೆ.

**ದೃಷ್ಟಿ ಸವಾಲುಗಳುಳ್ಳ ಮಕ್ಕಳು**

ವ್ಯಕ್ತಿ ತನ್ನ ಸುತ್ತಲಿನ ಪ್ರಪಂಚದ ಅನುಭವ, ಅರಿವನ್ನು ಜ್ಞಾನೇಂದ್ರೀಯಗಳ ಮೂಲಕವೇ ಪಡೆಯುತ್ತಾನೆ. ಇತರ ಎಲ್ಲಾ ಇಂದ್ರಿಯಗಳ ಮೂಲಕ ಒಟ್ಟಾಗಿ ಸಿಗುವ ಅನುಭವಗಳಿಗಿಂತ ಹೆಚ್ಚಿನ ಅನುಭವಗಳು ದೃಶ್ಯೇಂದ್ರಿಯದ ಮೂಲಕವೇ ಮೆದುಳನ್ನು ತಲುಪುತ್ತವೆ. ಹೀಗೆ ದೃಷ್ಟಿ ಸಂಬಂಧಿತ ಕಠಿಣತೆಗಳು ವ್ಯಕ್ತಿಯ ಜೀವನದ ದೈಹಿಕ, ಮಾನಸಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ವೃತ್ತಿಪರ ಅಂಶಗಳೆಲ್ಲದರ ಮೇಲೆ ಪ್ರಭಾವ ಬೀರುತ್ತವೆ.

ದೃಷ್ಟಿಗೆ ಸಂಬಂಧಿಸಿದ ಸವಾಲುಗಳುಳ್ಳ ಮಕ್ಕಳಲ್ಲಿ ಭಾಗಶಃ ದೃಷ್ಟಿ ಸಾಮರ್ಥ್ಯವಿದ್ದು, ದೃಷ್ಟಿಕಾರ್ಯ ಸಾಮರ್ಥ್ಯ

ಕೆಳಮಟ್ಟದ್ದಾಗಿರುವವರಲ್ಲದೆ, ಅತ್ಯಂತ ಕ್ಷೀಣ ದೃಷ್ಟಿ ಸಾಮರ್ಥ್ಯವುಳ್ಳವರು, ಪೂರ್ಣ ದೃಷ್ಟಿ ದೋಷವಿದ್ದು, ಅಂಧರಾಗಿರುವವರೂ ಸೇರಿರುತ್ತಾರೆ.

ಎಲ್ಲ ವಿಧದ ವೈದ್ಯಕೀಯ ಮತ್ತು ದೃಷ್ಟಿ ಉಪಕರಣಗಳ ಸಹಾಯ ಪಡೆದ ನಂತರ 20/70 ರಿಂದ 20/200 ರವರೆಗಿನ ದೃಷ್ಟಿ ತೀಕ್ಷ್ಣತೆ ಹೊಂದಿರುವ ಮಕ್ಕಳನ್ನು ಭಾಗಶಃ ಅಥವಾ ಅಪೂರ್ಣ ದೃಷ್ಟಿಯುಳ್ಳವರೆಂದು ಪರಿಗಣಿಸಲಾಗಿದೆ. 20/200 ಕ್ಕಿಂತ ಕಡಿಮೆ ದೃಷ್ಟಿ ತೀಕ್ಷ್ಣತೆಯುಳ್ಳವರು ಅಂಧರೆನಿಸುವರು.

**ಗುರುತಿಸುವಿಕೆ :** ಶಿಕ್ಷಕರು ದೃಷ್ಟಿ ಸಾಮರ್ಥ್ಯ ಕಡಿಮೆ ಇರುವ ಮಕ್ಕಳನ್ನು ಈ ಕೆಳಕಂಡ ಲಕ್ಷಣಗಳ ಸಹಾಯದಿಂದ ಗುರುತಿಸಬಹುದು.

- ಕಣ್ಣಂಚುಗಳು ಕೆಂಪಾಗಿದ್ದು, ನೀರು ತುಂಬಿದ ಕೆಂಪು ಕಣ್ಣುಗಳು.
- ಗಟ್ಟಿಯಾದ, ಊದಿದ ಕಣ್ಣೆವೆಗಳು
- ಪದೇ ಪದೇ ಕಣ್ಣುಗಳನ್ನು ಉಜ್ಜುತ್ತಿರುವುದು.
- ಅತಿಯಾಗಿ ರೆಪ್ಪೆ ಮಿಟುಕಿಸುವುದು.
- ಕಣ್ಣೀರಿನ ನಾಳಗಳು ಪ್ರತಿಬಂಧಿತವಾಗಿರುವುದು.
- ಆಗಾಗ್ಗೆ ತಲೆನೋವೆಂದು, ಅಥವಾ ಕಣ್ಣುಗಳ ಸೋಂಕು ತಗುಲಿದೆಯೆಂದು ಹೇಳುವುದು.
- ವಸ್ತುಗಳನ್ನು, ಪುಸ್ತಕಗಳನ್ನು ಕಣ್ಣುಗಳಿಗೆ ಅತಿ ಸಮೀಪದಲ್ಲಿ ಹಿಡಿಯುವುದು.
- ದೃಷ್ಟಿಯನ್ನು ಉತ್ತಮವಾಗಿ ಕೇಂದ್ರೀಕರಿಸುವುದಕ್ಕಾಗಿ ತಲೆಯನ್ನು ಬಾಗಿಸುವುದು ಅಥವಾ ಓರೆಗಣ್ಣಿನಿಂದ ನೋಡುವುದು.
- ಇತರರ ಮುಖದಲ್ಲಿ ಕಾಣುವ ಅಭಿವ್ಯಕ್ತಿಗಳಿಗೆ ಸರಿಯಾಗಿ ಪ್ರತಿಕ್ರಿಯೆ ತೋರದಿರುವುದು.
- ಕಣ್ಣು - ಕೈಗಳ ನಡುವೆ ಸಮನ್ವಯ ಇಲ್ಲದಿರುವುದು.
- ಕಪ್ಪು ಹಲಗೆಯ ಮೇಲಿನ ಬರಹವನ್ನು ನೋಡಿ ಬರೆಯುವಾಗ ಇತರ ಮಕ್ಕಳ ಸಹಾಯ ಕೇಳುವುದು.
- ಇತರ ಇಂದ್ರಿಯಗಳ ಮೇಲೆ ಹೆಚ್ಚಾಗಿ ಅವಲಂಬಿಸಿರುವದು, ನೋಡುವುದಕ್ಕಿಂತ ಕೇಳಲು, ಮುಟ್ಟಿನೋಡಲು ಇಚ್ಛಿಸುವುದು.
- ಕಣ್ಣುಗಳ ನಡುವೆ ಹೊಂದಾಣಿಕೆ ಇಲ್ಲದಿರುವುದು - ಉದಾಹರಣೆಗೆ ಮೆಳ್ಳಗಣ್ಣು
- ಬಣ್ಣಗಳ ವ್ಯತ್ಯಾಸ ತಿಳಿಯಲು ಅಸಮರ್ಥತೆ.
- ಮಿತವಾದ ಪರಿಧಿಯ ದೃಷ್ಟಿ.

ಇವೆಲ್ಲ ಲಕ್ಷಣಗಳಿಂದಲ್ಲದೆ ಸ್ನೆಲೆನ್ ಚಿತ್ರಪಟದ ಸಹಾಯದಿಂದಲೂ ಗುರ್ತಿಸಬಹುದು.



Scanned with OKEN Scanner

**ದೃಷ್ಟಿ ಸವಾಲುಗಳುಳ್ಳ ಮಕ್ಕಳ ಸಮನ್ವಯ ಶಿಕ್ಷಣ :**

ದೃಷ್ಟಿ ಸವಾಲುಗಳುಳ್ಳ ಮಕ್ಕಳಿಗೆ ಸಾಮಾನ್ಯ ತರಗತಿಗಳಲ್ಲಿ ಶಿಕ್ಷಣ ನೀಡಬಹುದು. ಇವರಿಗೆ ಪಠ್ಯಕ್ರಮವೂ ಒಂದೇ ಆಗಿರಬೇಕು. ಆದರೆ ಇಂತಹ ಮಗು ಪ್ರಧಾನವಾಗಿ ಸ್ಪರ್ಶ ಹಾಗೂ ಶ್ರವಣ ಅನುಭವಗಳ ಮೂಲಕ ವಿಷಯ ಗ್ರಹಿಸುತ್ತದೆ. ಆದ್ದರಿಂದಲೇ ಇವರಿಗೆ ವಿಶೇಷ ಪಠ್ಯಕ್ರಮ ಅಗತ್ಯವಿರುವುದಿಲ್ಲ. ಆದರೆ ಇವರಿಗೆ ಕಲಿಸಲು ಬಹು ಇಂದ್ರಿಯ ಅನುಭವಗಳ ತಂತ್ರವನ್ನು ಅಳವಡಿಸುವುದಲ್ಲದೆ ಹೆಚ್ಚುವರಿ ಪಠ್ಯಕ್ರಮಕ್ಕೂ ಒಳಪಡಿಸಬೇಕು.

ದೃಷ್ಟಿ ದೋಷ ಉಳ್ಳವರಿಗೆ ಹೆಚ್ಚುವರಿ ಪಠ್ಯಕ್ರಮವೆಂದರೆ ನಿಗದಿತ ಪಠ್ಯಕ್ರಮಕ್ಕಿಂತ ಹೆಚ್ಚಿನದೆಂದಲ್ಲ. ಬದಲಿಗೆ ಅದು ಪೂರಕ ಪಠ್ಯಕ್ರಮವಷ್ಟೇ. ಅಪೇಕ್ಷಿತ ಕೌಶಲಗಳ ಅಭಿವೃದ್ಧಿ ಉತ್ತಮ ಕಲಿಕೆಯನ್ನು ಯಾವಾಗಲೂ ಪ್ರಚೋದಿಸುತ್ತದೆ.

ಹೆಚ್ಚುವರಿ ಪಠ್ಯಕ್ರಮ ಕ್ಷೇತ್ರಗಳು ಯಾವುದೆಂದರೆ :

a) ಬ್ರೈಲ್ ಲಿಪಿ

b) ಏರಿಸಲ್ಪಟ್ಟ ಸಂಖ್ಯೆಗಳುಳ್ಳ ಕೈಗೆಡಿಯಾರಗಳು, ಗಣಕ ಯಂತ್ರಗಳು, ಕಡಿಮೆ ದೃಷ್ಟಿಗೆ ಸಹಾಯಕ ಉಪಕರಣಗಳು, ದೃಷ್ಟಿಯನ್ನು ವೃದ್ಧಿಗೊಳಿಸುವ ಮಸೂರಗಳು ಇಂತಹ ಎಲೆಕ್ಟ್ರಾನಿಕ್ ಸಾಧನಗಳು - ಮುಂತಾದ ಉಪಕರಣಗಳ ಬಳಕೆ.

c) ಪರಿಚಯಾತ್ಮಕ ಮತ್ತು ಸಂಚಲನ ಕೌಶಲಗಳು.

d) ಸಾಮಾಜಿಕ ಕೌಶಲಗಳು

e) ದೈನಂದಿನ ಜೀವನದ ಕೌಶಲಗಳು

f) ಇಂದ್ರಿಯ ತರಬೇತಿ

ಇವರಿಗಾಗಿ ಸಹಪಠ್ಯ ಚಟುವಟಿಕೆಗಳಲ್ಲಿ ಬೌದ್ಧಿಕ ಚಟುವಟಿಕೆಗಳು (ಸಂಗೀತ, ಚರ್ಚೆ, ಬರಹ ಇತ್ಯಾದಿ) ಜೊತೆಗೆ ದೈಹಿಕ ಮತ್ತು ಬೌದ್ಧಿಕ ಚಟುವಟಿಕೆಗಳಾದ ದೈಹಿಕ ಅಭ್ಯಾಸಗಳು, ನೃತ್ಯಗಳನ್ನು ಅಂಧರಿಗಾಗಿ ರೂಪಿಸಬಹುದು. ಸಮನ್ವಯ ಸನ್ನಿವೇಶದಲ್ಲಿ ಅಂಧರಿಗೆ ಕಲಿಸುವಾಗ ನಿಧಾನವಾಗಿ ಕಲಿಸುವುದೇ ನಿದೇಶಕವಾಗಬೇಕು.

**ಶಿಕ್ಷಕರ ಪಾತ್ರ :** ತರಗತಿ ಶಿಕ್ಷಕರು ಮೂರ್ತ ಅನುಭವಗಳನ್ನು ಒದಗಿಸಿ, ಮಾಡಿಕಲಿಯಲು ಸಹಾಯಮಾಡಬೇಕು. ಘಟಕ ಪದ್ಧತಿಯಿಂದ ಬೋಧಿಸಬೇಕು. ಓದುವುದು, ಬರೆಯುವುದು, ಗಣಿತ, ಕಲೆ ಮತ್ತು ದೈಹಿಕ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದರಿಂದ ಪೂರ್ಣರೀತಿ ಅನುಭವ ಪಡೆಯಲು ಅತ್ಯುತ್ತಮ ಅವಕಾಶ ಲಭಿಸುತ್ತದೆ. ಭಾಗಶಃ ದೃಷ್ಟಿ ಸಾಮರ್ಥ್ಯವುಳ್ಳ ಮಕ್ಕಳಿಗೆ ವೃದ್ಧಿಗೊಳಿಸುವ ಮಸೂರಗಳನ್ನು ಒದಗಿಸುವುದು, ಹೊಂದಾಣಿಕೆ ಮಾಡಬಲ್ಲ ಮೇಜುಗಳನ್ನು ಒದಗಿಸುವುದರ ಮೂಲಕ ಉತ್ತಮ ಭಂಗಿಯನ್ನು ಗರಿಷ್ಟ ಮಟ್ಟದ ದೃಷ್ಟಿದಕ್ಷತೆಯನ್ನು ಪಡೆಯಬಹುದು.

**ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳು :**

ಶ್ರವಣ ಸಾಮರ್ಥ್ಯ ಎಷ್ಟು ಅಂಶ ಕಡಿಮೆ ಇದೆ ಎಂಬುದರ ಆಧಾರದ ಮೇಲೆ ಶ್ರವಣದೋಷವಿರುವ ಮಕ್ಕಳ ವ್ಯಾಖ್ಯೆ ನೀಡಲಾಗುವುದು. ಶ್ರವಣ ಸಾಮರ್ಥ್ಯ ಪೂರ್ಣವಾಗಿ ಇಲ್ಲದಿರುವುದು ಕಿವುಡುತನ, ಆದರೆ ಶ್ರವಣೇಂದ್ರಿಯ



Scanned with OKEN Scanner

ದೋಷಯುಕ್ತವಾಗಿದ್ದು ಶ್ರವಣ ಸಾಧನ (hearing aids) ಗಳ ಸಹಾಯದಿಂದ ಅಥವಾ ಶ್ರವಣಸಾಧನ ಇಲ್ಲದೆ ಹೇಗೋ ನಿರ್ವಹಿಸಿಕೊಂಡು ಹೋಗುವವರು ಶ್ರವಣ ಮಾಂದ್ಯತೆಯುಳ್ಳವರೆನಿಸುವರು.

ಸಾಮಾನ್ಯವಾಗಿ 70 ಡಿಸಿಬಲ್‌ಗಳಷ್ಟು ಶ್ರವಣ ಸಾಮರ್ಥ್ಯದ ಕೊರತೆಯಿದ್ದು, ಶ್ರವಣ ಸಾಧನದ ಸಹಾಯದಿಂದಾಗಲಿ, ಇಲ್ಲದೆ ಆಗಲಿ ಕಿವಿಗಳ ಮೂಲಕ ಮಾತ್ರವೇ ಇತರರ ಮಾತುಗಳನ್ನು ಗ್ರಹಿಸಲು ಸಾಧ್ಯವಿಲ್ಲದ ವ್ಯಕ್ತಿಯನ್ನು 'ಕಿವುಡನೆಂದು ಹೇಳುತ್ತೇವೆ; ಶ್ರವಣ ಸಾಧನದ ಸಹಾಯದಿಂದಾಗಲಿ, ಇಲ್ಲದೆ ಆಗಲಿ ಇತರರ ಮಾತನ್ನು ಗ್ರಹಿಸುವುದು ಕಠಿಣವಾಗಿದ್ದು ಶ್ರವಣ ಸಾಮರ್ಥ್ಯದ ಕೊರತೆ 35 ರಿಂದ 69 ಡೆಸಿಬಲ್‌ಗಳಷ್ಟು ಇರುವ ವ್ಯಕ್ತಿ ಶ್ರವಣದೋಷ ಇರುವ ವ್ಯಕ್ತಿ ಎನಿಸುತ್ತಾನೆ.

ಶ್ರವಣದೋಷ ಜನ್ಮದಿಂದ ಬಂದಿರಬಹುದು ಅಥವಾ ಜೀವನದ ಯಾವುದೇ ವಯಸ್ಸು ಅಥವಾ ಹಂತದಲ್ಲಿ ಉಂಟಾಗಿರಬಹುದು.

**ಗುರ್ತಿಸುವಿಕೆ :** ಈ ಕೆಳಕಂಡ ವರ್ತನಾತ್ಮಕ ಸುಳಿವುಗಳ ಸಹಾಯದಿಂದ ಶಿಕ್ಷಕರು ಶ್ರವಣದೋಷದ ಸವಾಲುಗಳನ್ನೆದುರಿಸುತ್ತಿರುವ ಮಕ್ಕಳನ್ನು ಗುರ್ತಿಸಬಹುದು. ಇಂತಹ ಮಗು ಈ ಕೆಳಗಿನವುಗಳಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚು ವರ್ತನೆಗಳನ್ನು ಪ್ರದರ್ಶಿಸುತ್ತದೆ:

- ತರಗತಿಯಲ್ಲಿ ಅವಧಾನ ಇಲ್ಲದಂತೆ ತೋರುವುದು.
- ಪ್ರಶ್ನೆಗಳು ಅರ್ಥವಾಗುವುದಿಲ್ಲವಾದ್ದರಿಂದ ಸೂಕ್ತವಲ್ಲದ ಅಥವಾ ಅಸಂಬದ್ಧ ಉತ್ತರಗಳನ್ನು ನೀಡಬಹುದು.
- ಸೂಚನೆಗಳನ್ನು, ಪ್ರಶ್ನೆಗಳನ್ನು ಪುನರುಚ್ಚರಿಸುವಂತೆ ಆಗಾಗ್ಗೆ ಕೇಳುವನು.
- ತರಗತಿಯಲ್ಲಿ ನಡೆಯುವ ಚರ್ಚೆಯಲ್ಲಿ ಭಾಗವಹಿಸುವುದಿಲ್ಲ.
- ತನಗೆ ಯಾರಾದರೂ ಏನನ್ನಾದರೂ ಹೇಳಿದಾಗ ವ್ಯಗ್ರನಾದಂತೆ ತೋರುವುದು. ಅಥವಾ ಆಲಿಸುವುದಕ್ಕಾಗಿ ಮುಂದೆ ಬಾಗುವುದು.
- ಮಾತನಾಡುತ್ತಿರುವವರ ಮುಖವನ್ನು ಅಥವಾ ತುಟಿಗಳ ಚಲನೆಯನ್ನು ಸಾಮಾನ್ಯಕ್ಕಿಂತ ಹೆಚ್ಚು ತೀಕ್ಷ್ಣವಾಗಿ ಅವಲೋಕಿಸುವುದು.
- ಉಕ್ತಲೇಖನ ನೀಡಿದಾಗ ಇತರರ ಪುಸ್ತಕ ನೋಡಿ ಬರೆಯಲು ಪ್ರಯತ್ನಿಸುವುದು ಅಥವಾ ಸುಮ್ಮನೆ ಕುಳಿತಿರುವುದು.
- ಮಾತನಾಡುವವರ ಅಥವಾ ಶಬ್ದದ ದಿಕ್ಕನ್ನು ಗುರ್ತಿಸುವುದು ಕಠಿಣವಾಗಿರುವುದು.
- ಮಾತನಾಡುವವರ ಕಡೆಗೆ ಆಗಾಗ ತಿರುಗುವುದು, ಕಿವಿಯ ಹಿಂದೆ ಕೈಯಿಟ್ಟು ಕಿವಿಚಾಚಿ ಆಲಿಸುವುದು.
- ಕಿವಿನೋವು, ಕಿವಿ ಸೋರುವುದು, ಕಿವಿಯಲ್ಲಿ ಗುಂಯ್‌ಗುಡುವ ಶಬ್ದ ಮುಂತಾಗಿ ದೂರುತ್ತಿರುವುದು.
- ದೇಹದ ಸಮತೋಲನ ಕಾಪಾಡಿಕೊಳ್ಳುವುದು, ಅದರಲ್ಲಿಯೂ ಕತ್ತಲಿನಲ್ಲಿ ಕಾಪಾಡಿಕೊಳ್ಳುವುದು ಕಠಿಣವಾಗಿರುವುದು.
- ವಾಗ್ದೋಷಗಳಿರುವುದು, ಶ, ಷ, ಝ, ಛ, ಫ ಇತ್ಯಾದಿ ಮಹಾಪ್ರಾಣವಿರುವ ಶಬ್ದಗಳ ಉಚ್ಚಾರಣೆ ಕಠಿಣವಾಗಿರುವುದು.



Scanned with OKEN Scanner

- ✦ ಸಾಮಾಜಿಕವಾಗಿ ಉತ್ತಮ ಹೊಂದಾಣಿಕೆ ಇಲ್ಲದಿರುವುದು.
- ✦ ಸೀಮಿತ ಶಬ್ದ ಸಂಪತ್ತು ಹೊಂದಿರುವುದು
- ✦ ಅತಿ ಜೋರಾಗಿ ಅಥವಾ ಅತಿ ಮೆಲ್ಲಗೆ ಮಾತನಾಡುವ ಅಭ್ಯಾಸ.

**ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳಿಗಾಗಿ ಸಮನ್ವಯ ಶಿಕ್ಷಣ :**

ಶ್ರವಣ ದೋಷವುಳ್ಳ ಮಕ್ಕಳ ವಿಶೇಷ ಅಗತ್ಯತೆಗಳನ್ನು ಪೂರೈಸಲು ಈ ಕೆಳಗಿನ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲಾಗುವುದು.

**ಶಬ್ದ ಹೆಚ್ಚಿಸುವುದು ಮತ್ತು ಶ್ರವಣ ತರಬೇತಿ :**

ಶಬ್ದ ಹೆಚ್ಚಿಸುವುದರಿಂದ ಶ್ರವಣದೋಷವುಳ್ಳ ಅನೇಕ ಮಕ್ಕಳು ತಮ್ಮಲ್ಲಿರುವ ಕಳೆದುಳಿದ ಅಲ್ಪ ಪ್ರಮಾಣದ ಶ್ರವಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಸಾಧ್ಯವಾಗುವುದು. ಶ್ರವಣ ಸಾಧನದ ಸಹಾಯದಿಂದ ಶಬ್ದವನ್ನು ಹೆಚ್ಚಿಸಬಹುದು (ಶ್ರವಣ ಸಾಧನವು ಶಬ್ದವನ್ನು ಗ್ರಹಿಸಿ ಅದರ ಶಕ್ತಿಯನ್ನು ವೃದ್ಧಿಗೊಳಿಸಿ ಹೀಗೆ ಹೆಚ್ಚಿಸಲ್ಪಟ್ಟ ಶಬ್ದವನ್ನೇ ಸಾಧನ ಬಳಸುವವರ ಕಿವಿಗೆ ಹಾಗೂ ಮೆದುಳಿಗೆ ತಲುಪಿಸುತ್ತದೆ.) ಶ್ರವಣ ಸಾಧನವನ್ನು ಚಿಕ್ಕವಯಸ್ಸಿನಲ್ಲಿಯೇ ಹಾಕಿಸಬೇಕು. ಇದರಿಂದ ಶ್ರವಣಸಾಮರ್ಥ್ಯವನ್ನು ಸಂವಹನ ಮತ್ತು ಅರಿವಿಗಾಗಿ ಬಳಸಿಕೊಳ್ಳಬಹುದು. ಸಾಧನದಿಂದ ಗರಿಷ್ಠ ಲಾಭ ಪಡೆಯುವುದಕ್ಕಾಗಿ ಮಗು ಅದನ್ನು ದಿನಪೂರ್ತಿ ಧರಿಸಿರಬೇಕು.

ಇಂತಹ ಮಕ್ಕಳಿಗೆ ಶ್ರವಣ ತರಬೇತಿಗಾಗಿ ವೈಯಕ್ತಿಕ ಹಾಗೂ ಸಾಮೂಹಿಕ ಮಾದರಿಯ ಸಾಧನಗಳೆರಡನ್ನು ಒದಗಿಸಬೇಕು. ಸಾಮೂಹಿಕ ಶ್ರವಣ ತರಬೇತಿ ಘಟಕವು ಹೆಡ್‌ಫೋನ್ (Head Phone)ಗಳನ್ನು ಮತ್ತು ಧ್ವನಿವರ್ಧಕ ಸಾಧನವನ್ನೂ ಬಳಸಿ ಮಕ್ಕಳು ಸ್ಪಷ್ಟವೂ ಪ್ರಬಲವೂ ಆಗಿರುವ ಶಬ್ದ ಕೇಳುವಂತೆ ಮಾಡಬೇಕು. ವೈಯಕ್ತಿಕವಾಗಿ ಮಕ್ಕಳು ಧರಿಸಬಹುದಾದ ಶ್ರವಣ ಸಾಧನ ಬಳಸಬೇಕು.

**ಶ್ರವಣ ಕಲಿಕೆ :** ಇಂತಹ ತರಬೇತಿ ಮಗುವಿಗೆ ವಿವಿಧ ವಾಕ್ ಶಬ್ದಗಳನ್ನು ಗ್ರಹಿಸಲು ಸಹಾಯ ಮಾಡುತ್ತದೆ. ಒಂದು ಧ್ವನಿಗೂ ಮತ್ತೊಂದಕ್ಕೂ ಇರುವ ವ್ಯತ್ಯಾಸ ತಿಳಿಯುವ ಸಾಮರ್ಥ್ಯಗಳಿಸಬಹುದು. ಮಕ್ಕಳಿಗೆ ಶಬ್ದಗಳನ್ನು ಕಂಡುಹಿಡಿಯುವುದು, ಭೇದಗುರ್ತಿಸುವುದು ಮತ್ತು ಗುರ್ತಿಸುವುದರಲ್ಲಿ ತರಬೇತಿ ನೀಡಲಾಗುವುದು.

**ವಾಕ್ ವಾಚನ (Speech Reading) :** ಮಾತನ್ನು ಓದುವುದೆಂದರೆ ಮಾತನಾಡುವವರ ಮುಖ, ತುಟಿಗಳು ಮತ್ತು ನಾಲಗೆಯ ಚಲನೆಗಳನ್ನು ವೀಕ್ಷಿಸುವುದರ ಮೂಲಕ ವಾಕ್ ಸಂದೇಶವನ್ನು ಗ್ರಹಿಸುವುದು ಎಂದರ್ಥ. ಶಿಕ್ಷಕರು ಶ್ರವಣದೋಷವುಳ್ಳ ಮಕ್ಕಳ ಮುಂದೆ ನಿಂತು, ತುಟಿಗಳನ್ನು ಅಥವಾ ಮುಖವನ್ನು ಮರೆಮಾಡದೆ, ಸ್ಪಷ್ಟವಾಗಿ ಮಾತನಾಡಬೇಕು. ಇದರಿಂದ ಮಕ್ಕಳು ಕೇಳುವುದರ ಬದಲಾಗಿ ಮುಖ, ಹಣೆಗಳ ಮೇಲಿನ ಸಂಕೇತಗಳು, ಸಂಜ್ಞೆಗಳು ಮತ್ತು ಮಡಿಕೆಗಳು ಹಾಗೂ ಭಾವಾಭಿವ್ಯಕ್ತಿಗಳನ್ನು ವೀಕ್ಷಿಸಿ ಕಲಿಯಬಹುದು. ತುಟಿಗಳು, ಮುಖ ಭಾವಗಳು ಕಾಣುವಂತಿರಲು, ಶಿಕ್ಷಕರು ತಮ್ಮ ಕೈಗಳನ್ನು ಮುಖದಿಂದ ದೂರವಿಡಬೇಕು.

**ತರಗತಿ ವ್ಯವಸ್ಥೆ :** ಆಲಿಸುವುದನ್ನು ಉತ್ತಮ ಪಡಿಸಲು ತರಗತಿಯಲ್ಲಿ ಶ್ರವಣ ದೋಷವುಳ್ಳ ಮಕ್ಕಳನ್ನು ಶಿಕ್ಷಕರ ಸಮೀಪದಲ್ಲಿ ಕೂರಿಸಬೇಕು. ಶಿಕ್ಷಕರು ಮಾತನಾಡುವಾಗ ಸಾಕಷ್ಟು ಏರುಧ್ವನಿ ಬಳಸಬೇಕು. ವೇಗವಾಗಿ ಮಾತನಾಡಬಾರದು



Scanned with OKEN Scanner

ಪಠ್ಯಪುಸ್ತಕಗಳಿಂದ ಓದುವಾಗ ಇಂತಹ ಮಕ್ಕಳು ಆಲಿಸುವುದಕ್ಕೆ ಪೂರಕವಾಗಿ ತುಟಿಗಳನ್ನು ಓದಲು ಸಾಧ್ಯವಾಗುವಂತೆ ಶಿಕ್ಷಕರು ತಮ್ಮ ತುಟಿ ಚಲನೆ ಕಾಣುವಂತೆ ಪುಸ್ತಕ ಹಿಡಿಯಬೇಕು. ಶಿಕ್ಷಕರು ಮಾತನಾಡುವಾಗ ಓಡಾಡಬಾರದು. ಸ್ನೇಹಿತರೂ, ಸಮವಯಸ್ಕರೂ ಈ ಮಕ್ಕಳೊಡನೆ ಅಂತರ್‌ಕ್ರಿಯೆ ನಡೆಸಿ, ಪರಸ್ಪರ ಕಲಿಯಲು ಸಹಾಯ ಮಾಡುವಂತೆ ಉತ್ತೇಜಿಸಬೇಕು. ಸಾಮಾನ್ಯ ಬೋಧನೆಯ ಪದ್ಧತಿಗೆ / ಅನುಭವಗಳಿಗೆ ಪೂರಕವಾಗುವಂತೆ ವೈಯಕ್ತಿಕವಾಗಿಯಾಗಲಿ, ಗುಂಪಿನಲ್ಲಾಗಲಿ ಹೆಚ್ಚಿನ ದೃಶ್ಯ ಉಪಕರಣಗಳನ್ನು ಬಳಸಬೇಕು.

ಶಿಕ್ಷಕರ ಪಾತ್ರ : ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರು ಕೆಳಕಂಡ ಅಂಶಗಳನ್ನು ಗಮನದಲ್ಲಿಡಬೇಕು.

- ಸಾಧ್ಯವಾದಷ್ಟು ಮಟ್ಟಿಗೆ ಮಾತನಾಡುವವರು ಮತ್ತು ವಿದ್ಯಾರ್ಥಿಯ ನಡುವಿನ ದೂರವನ್ನು (ಅಂತರವನ್ನು) ಕಡಿಮೆ ಮಾಡಬೇಕು.
- ನಿಧಾನವಾಗಿ ಮಾತನಾಡಿ, ಸ್ಪಷ್ಟ ಉಚ್ಚಾರಣೆಯಿಂದ ಒತ್ತಿ ಹೇಳಬೇಕು.
- ಹಿನ್ನೆಲೆಯಲ್ಲಿರಬಹುದಾದ ಶಬ್ದವನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕು.
- ಸಾಧ್ಯವಾದಷ್ಟು ಮಟ್ಟಿಗೆ ಮುಖಾಮುಖಿ ಸಂಪರ್ಕ ಬಳಸಬಹುದು.
- ಹೆಚ್ಚಿನ ಸಂಪರ್ಕ ಒದಗಿಸುವುದಕ್ಕಾಗಿ ಸಂಭಾಷಣೆಯಲ್ಲಿ ಅಥವಾ ಬೋಧನೆ ನೀಡುವಾಗ ಪೂರ್ಣವಾಕ್ಯಗಳನ್ನು ಬಳಸಬಹುದು.
- ತರಗತಿಯಲ್ಲಿ ವಸ್ತುಗಳನ್ನು ಸೂಚಿಸುವಾಗ ಅಥವಾ ಬೋಧನಾ ಸನ್ನಿವೇಶಗಳಲ್ಲಿ ದೃಶ್ಯಸೂಚನೆ / ಸಂಕೇತಗಳನ್ನು ಬಳಸಬಹುದು.
- ಮೌಖಿಕ ಪ್ರದರ್ಶನ / ವಿವರಣೆ ಸಮಯದಲ್ಲಿ ಸಹಪಾಠಿಗಳು ಮುಖ್ಯಾಂಶಗಳನ್ನು ಬರೆದುಕೊಳ್ಳುವಂತೆ ಹೇಳಿ, ಪಾಠದ ನಂತರ ಈ ಮಕ್ಕಳು ನೋಡಿ ಬರೆದುಕೊಳ್ಳುವಂತೆ ತಿಳಿಸುವುದು.
- ಶ್ರವಣ ಸಾಧನವು ಸುಸ್ಥಿತಿಯಲ್ಲಿದ್ದು, ಕೆಲಸ ಮಾಡುತ್ತಿದೆಯೇ ಎಂದು ಖಾತ್ರಿ ಮಾಡಿಕೊಳ್ಳುವುದು.
- ಸ್ವತಂತ್ರ ಚಟುವಟಿಕೆಗಳನ್ನು ಉತ್ತೇಜಿಸುವುದು ಮತ್ತು ಸಾಮಾಜಿಕ ಕೌಶಲಗಳನ್ನು ಕಲಿಸುವುದು.

## ಮೂಳೆ ಕೀಲುಗಳಿಗೆ ಸಂಬಂಧಿಸಿದ ಸವಾಲುಗಳುಳ್ಳ ಮಕ್ಕಳು

ಮೂಳೆಗಳು ಮತ್ತು ಕೀಲುಗಳ ಪ್ರಮಾಣ ಮತ್ತು ರಚನೆಗಳಲ್ಲಿ ದೋಷಗಳಿದ್ದು ಸ್ನಾಯುಶಕ್ತಿ ಹೊಂದಾಣಿಕೆ ಅಥವಾ ನಿಯಂತ್ರಣದಲ್ಲಿ ಸಾಧಾರಣ ಮಕ್ಕಳಿಂದ ಭಿನ್ನವಾಗಿರುವ ಮಕ್ಕಳನ್ನು ಮೂಳೆದೋಷಗಳಿರುವವರೆನ್ನುತ್ತೇವೆ. ಕೆಲವು ದೈಹಿಕ ನ್ಯೂನತೆಗಳಿರುವ ಮಕ್ಕಳಲ್ಲಿ ಮೂಳೆದೋಷದ ಸವಾಲುಗಳಿರುವುವು ಹೀಗೆ ಮೂಳೆ ಸಂಬಂಧಿತ ಸವಾಲುಗಳು ಸ್ನಾಯು ಮತ್ತು ಕೀಲುಗಳಿಗೆ ಸಂಬಂಧಿಸಿದ ನ್ಯೂನತೆಗಳಾಗಿರುತ್ತವೆ. ಈ ನ್ಯೂನತೆಗಳು ಕೈಕಾಲುಗಳ ಚಲನೆಯ ಮೇಲೆ ಪರಿಣಾಮ ಬೀರುತ್ತವೆ. ಇಂತಹ ಮಕ್ಕಳು ಓಡಾಡುವಲ್ಲಿ ಕಠಿಣತೆ ಎದುರಿಸುವರೇ ವಿನಃ ಕಲಿಕೆಯಲ್ಲಿ ಸಾಧಾರಣ ಸಾಮರ್ಥ್ಯ ಹೊಂದಿರುವವರು. ಆದರೂ, ಕಲಿಕೆಗೆ ಅಡ್ಡಿಯುಂಟು ಮಾಡಬಲ್ಲ ಕೆಲವು ನಿರ್ದಿಷ್ಟ ಸಮಸ್ಯೆಗಳನ್ನು ಎದುರಿಸಬಹುದು. ಉದಾಹರಣೆಗೆ, ಕೈಬೆರಳುಗಳ ಸ್ನಾಯುಗಳಲ್ಲಿ ಬಿಗಿತ ಇರುವ ಮಗು ಬರೆಯುವುದರಲ್ಲಿ ಸಮಸ್ಯೆ ಎದುರಿಸಬಹುದು. ಕೆಲವು ಮಕ್ಕಳು ಭಂಗಿಯ (ನಿಲುವಿನ) ಸಮಸ್ಯೆಯನ್ನು ಎದುರಿಸುತ್ತಿದ್ದು, ಇದರಿಂದಾಗಿ ಆಯಾಸಗೊಂಡು, ಕೆಲವು ಕಲಿಕೆಯ



Scanned with OKEN Scanner

ಚಟುವಟಿಕೆಗಳಲ್ಲಿ ಅವರ ಕಾರ್ಯಕ್ಷಮತೆ ಸೀಮಿತವಾಗಬಹುದು. ಸ್ನೇಹಿತರು ಇವರನ್ನು ಒಪ್ಪಿಕೊಳ್ಳದಿರುವುದರಿಂದ ಅಥವಾ ಪರಿಹಾಸ್ಯದಿಂದಾಗಿ ಈ ಮಕ್ಕಳು ಹೊಂದಾಣಿಕೆ ಸಮಸ್ಯೆಗಳನ್ನು ಎದುರಿಸುವರು.

**ಗುರುತಿಸುವಿಕೆ :** ಈ ಕೆಳಗಿನ ವರ್ತನಾತ್ಮಕ ಲಕ್ಷಣಗಳ ಸಹಾಯದಿಂದ ಮೂಳೆ ದೋಷ ಸಂಬಂಧಿತ ಸವಾಲುಗಳುಳ್ಳ ಮಕ್ಕಳನ್ನು ಗುರ್ತಿಸಬಹುದು.

- ಇದ್ದಕ್ಕಿದ್ದಂತೆ ಸ್ನಾಯುಗಳನ್ನು ಹಿಗ್ಗಿಸಿದಾಗ ಅನೈಚ್ಛಿಕವಾಗಿ ಕುಗ್ಗುವುದು ಅಥವಾ ಮುದುರಿಕೊಳ್ಳುವುದು.
- ಕೈ ಬೆರಳುಗಳು ಅಥವಾ ಕಾಲ್ಬೆರಳುಗಳ ಮೇಲೆ ಐಚ್ಛಿಕ ನಿಯಂತ್ರಣ ಇಲ್ಲದಿರುವುದು.
- ಶರೀರದ ಎರಡು ಅಥವಾ ಮೂರು ಭಾಗಗಳ ಚಲನೆಯನ್ನು ಹೊಂದಾಣಿಕೆ ಮಾಡುವ ಸಾಮರ್ಥ್ಯ ಇಲ್ಲದಿರುವುದು. ಉದಾ: ಆಟ ಆಡುವಾಗ ಕೈಗಳು ಮತ್ತು ಕಾಲುಗಳನ್ನು ಏಕಕಾಲದಲ್ಲಿ ಚಲಿಸುವುದು ಕಠಿಣವಾಗಿರುವುದು.
- ಒಂದು ಅಥವಾ ಎರಡೂ ಪಾದಗಳು ಪಾದದ ಕೀಲುಗಳ ಬಳಿ ಕೆಳಮುಖವಾಗಿ ಅಥವಾ ಹೊರಕ್ಕೆ ಬಾಗಿರುವುದು.
- ಬೆನ್ನೆಲುಬು ಒಂದು ಪಾರ್ಶ್ವಕ್ಕೆ ಬಾಗಿರುವುದು ದೇಹದಲ್ಲಿ ಸಮತೆಯಿಲ್ಲದೆ ವಿಕಾರಗಳುಂಟಾಗುವುದು.
- ಹುಟ್ಟಿನಿಂದಲೇ ಕೈಕಾಲುಗಳ ಊನವಾಗಿರುವುದು (ಕೈ ಕಾಲುಗಳು, ಕೈ ಬೆರಳುಗಳು ಅಥವಾ ಕಾಲ್ಬೆರಳುಗಳು ಇಲ್ಲದೆ ಇರುವುದು ಅಥವಾ ಇತರೆ ಸಹಜಾತ ವಿಕಾರಗಳು)
- ನಡಿಗೆಯಲ್ಲಿ ಹೊಯ್ದಾಟದ ಚಲನೆ.
- ನಿಲ್ಲುವ ಮತ್ತು ಕುಳಿತುಕೊಳ್ಳುವ ವಿನ್ಯಾಸದಲ್ಲಿ ಭಿನ್ನತೆ.
- ಎಸೆಯುವುದು ಮತ್ತು ಹಿಡಿಯುವುದರಲ್ಲಿ ಭಿನ್ನತೆಗಳು ಉದಾ : ಎಸೆಯುವಾಗ, ಹಿಡಿಯುವಾಗ ಸಮತೋಲನ ಇಲ್ಲದಿರುವುದು, ವಸ್ತುವನ್ನು ಹಿಡಿಯುವಾಗ ವಿವಿಧ ವೇಗಗಳಿಗೆ, ಎತ್ತರಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗದಿರುವುದು.
- ಬೆರಳುಗಳು, ಕಾಲುಗಳು, ಕೈಗಳು, ಮತ್ತು ಕತ್ತಿನಲ್ಲಿನ ವಿರೂಪ.

**ವ್ಯಕ್ತಿತ್ವದ ಮೇಲೆ ಮನೋವೈಜ್ಞಾನಿಕ ಪರಿಣಾಮ :**

ಮೂಳೆ ದೋಷಗಳುಳ್ಳ ಮಕ್ಕಳು ನಿಷ್ಕ್ರಿಯರಾಗಿದ್ದು, ಅವಧಾನ ಸಾಮರ್ಥ್ಯ ಸೀಮಿತವಾಗಿದ್ದು, ಅನ್ವೇಷಣಾ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ, ಪ್ರೇರಣೆಯೂ ಕಡಿಮೆ ಇರುತ್ತದೆ. ಹೆಚ್ಚಾಗಿ ವಯಸ್ಕರನ್ನೇ ಅವಲಂಬಿಸಿದ್ದು ಸಮವಯಸ್ಕರೊಡನೆ ಅಂತರ್‌ಕ್ರಿಯೆ ಕಡಿಮೆಯಾಗಿರುವುದು ಅವರಲ್ಲಿ ದೇಹದ ಬಗ್ಗೆ ಕಲ್ಪನೆ ಕೆಳಮಟ್ಟದಾಗಿದ್ದು ಹೆಚ್ಚಾದ ಆತಂಕ ಮತ್ತು ಆಶಾಭಂಗ ಕಂಡು ಬರುತ್ತದೆ. ಶಾಂತರಾಗಿಯೂ, ಅನುಸರಣ ಶೀಲರಾಗಿಯೂ, ಮೃದು ಮನಸ್ಸಿನವರೂ ಸ್ವಲ್ಪಮಟ್ಟಿಗೆ ಉದ್ವೇಗಕ್ಕೊಳಗಾದವರೂ ಆಗಿರುತ್ತಾರೆ.



Scanned with OKEN Scanner

**ಮೂಳೆ-ಕೀಲು ಸಂಬಂಧಿತ ಸವಾಲುಗಳುಳ್ಳ ಮಕ್ಕಳಿಗಾಗಿ ಸಮನ್ವಯ ಶಿಕ್ಷಣ :**

ಮೂಳೆ ದೋಷಗಳುಳ್ಳ ಮಕ್ಕಳ ಶಾಲಾ ಶಿಕ್ಷಣದ ವ್ಯವಸ್ಥೆಯಲ್ಲಿ ವಿಶೇಷ ಸನ್ನಿವೇಶವನ್ನೊದಗಿಸುವ ಅಗತ್ಯವಿರುವುದಿಲ್ಲ. ಇತರ ಮಕ್ಕಳೊಂದಿಗೆ ಸಾಮಾನ್ಯಶಾಲೆಯಲ್ಲಿ ಅವರಿಗೆ ಉತ್ತಮ ಶಿಕ್ಷಣ ನೀಡಬಹುದು.

- ಈ ಮಕ್ಕಳಿಗೆ ಸ್ವಾವಲಂಬನೆ, ಮುನ್ನುಗ್ಗುವ ಮತ್ತು ಆಯ್ಕೆ ಮಾಡುವ ಸಾಮರ್ಥ್ಯಗಳನ್ನು ಕಲಿಸಬೇಕು. ಚಲನೆ ಹಾಗೂ ಸಹಾಯಗಳಿಂದಾಗಿ ಪೂರ್ವಯೋಜನೆ ಮಾಡಿಕೊಳ್ಳಲು ಅವರು ಕಲಿಯಬೇಕು. ಕೈಕಾಲುಗಳ ಚಲನೆಗೆ ಸಹಾಯಕವಾಗುವ ಸಾಧನೆಗಳನ್ನು ಒದಗಿಸಬೇಕು.
- ತಮ್ಮ ದೇಹದ ವಿವಿಧ ಭಾಗಗಳನ್ನು ಹೇಗೆ ಬಳಸಿಕೊಳ್ಳಬೇಕೆಂಬುದನ್ನು ಕಲಿಸಬೇಕು.
- ಕಾರ್ಯಾತ್ಮಕ ಸ್ವಯಂ ಪರಿಕಲ್ಪನೆ ಬೆಳೆಸಿಕೊಳ್ಳುವಂತೆ ಶಿಕ್ಷಕರು ನೋಡಿಕೊಳ್ಳಬೇಕು. ಈ ಮಕ್ಕಳು ತಮ್ಮ ಸಹಪಾಠಿಗಳಾಗಿರುವ ಸಾಮಾನ್ಯ ಮಕ್ಕಳೊಂದಿಗೆ ಬೆರೆತು ಆಟವಾಡಬೇಕು.
- ಶಾಲೆಯು ಈ ಮಕ್ಕಳಲ್ಲಿ ಕಲೆ, ಸಂಗೀತ, ನಾಟಕ ಮುಂತಾದವುಗಳಿಗೆ ಸಂಬಂಧಿಸಿದಂತೆ ಸೃಜನ ಶೀಲತೆಯನ್ನು ವಿಕಾಸಗೊಳಿಸಬೇಕು. ಸಾಮಾಜಿಕ ಅನುಭವಗಳನ್ನು ಒದಗಿಸಿ ವೈಯಕ್ತಿಕ ವಿಕಾಸಕ್ಕೆ ಅವಕಾಶ ನೀಡಿ ಉತ್ತೇಜಿಸಬೇಕು.
- ಚಲನಾದೋಷವುಳ್ಳ ಮಕ್ಕಳಿಗೆ ವಿಶೇಷ ತರಗತಿ ಕೊಠಡಿಗಳು ಶಾಲಾ ಕಟ್ಟಡದ ತಳಮನೆಯಲ್ಲಿದ್ದು ಅಲ್ಲಿ ವಿಶೇಷ ಉಪಕರಣಗಳು ಲಭ್ಯವಿರಬೇಕು. ಉದಾ : ನಿಲುವು ಮೇಜುಗಳು, ಸಮಾನಾಂತರ ಸರಳುಗಳು, ವಿಶ್ರಾಂತಿಗಾಗಿ ವಿರಾಮ ಖುರ್ಚಿಗಳು ಇತ್ಯಾದಿ.
- ಶಿಕ್ಷಕರು ಪರಸ್ಪರ ಗೌರವ, ಸಹಾಯ ಮತ್ತು ಸಹಕಾರಗಳ ಆಧಾರದ ಮೇಲೆ ಸಮವಯಸ್ಕರಲ್ಲಿ ಅಂತರ್‌ಕ್ರಿಯೆಯನ್ನು ಉತ್ತೇಜಿಸಬೇಕು.
- ತರಗತಿಯಲ್ಲಿ ನ್ಯೂನತೆಗನುಗುಣವಾಗಿ ಆಸನ ವ್ಯವಸ್ಥೆಯಲ್ಲಿ ಸೂಕ್ತ ಹೊಂದಾಣಿಕೆಯನ್ನು ಮಾಡಬೇಕು. ಉದಾ: ಇಂತಹ ಮಕ್ಕಳು ತರಗತಿಯ ಮುಂದಿನ ಬಲಭಾಗದಲ್ಲಿ ಕುಳಿತುಕೊಳ್ಳುವಂತಿದ್ದರೆ ಇತರ ಮಕ್ಕಳ ಓಡಾಟ, ಚಲನೆಯಿಂದ ಇವರಿಗೆ ತೊಂದರೆಯಾಗುವುದಿಲ್ಲ. ಗಾಲಿ ಕುರ್ಚಿಯನ್ನು ಬಳಸುವ ಮಗು ಇದ್ದಲ್ಲಿ ಶಾಲೆ ಮತ್ತು ತರಗತಿಗೆ ಬರಲು ಹೆಚ್ಚು ನುಣುಪಿಲ್ಲದ ಇಳಿಜಾರು ದಾರಿಯನ್ನು ನಿರ್ಮಿಸಬೇಕು.
- ಶಾಲೆಯಲ್ಲಿ ಸಂವೇಗಾತ್ಮಕ ಮತ್ತು ಸಾಮಾಜಿಕ ವಿಕಾಸದ ಚಟುವಟಿಕೆಗಳನ್ನು ರೂಪಿಸಬಹುದು.
- ಅರ್ಥಪೂರ್ಣವಾದ, ಉದ್ದೇಶ ಪೂರ್ವಕವಾದ ಮತ್ತು ಆಸಕ್ತಿಯುತ ಸಾಮಗ್ರಿಗಳನ್ನು ಬಳಸುವುದರಿಂದ ಈ ಮಕ್ಕಳ ಬೌದ್ಧಿಕ ವಿಕಾಸದ ವೇಗವನ್ನು ಹೆಚ್ಚಿಸಬಹುದು.

**ಶಿಕ್ಷಕರ ಪಾತ್ರ :**

ಮನೋವೈಜ್ಞಾನಿಕ ದುಷ್ಪರಿಣಾಮಗಳನ್ನು ತಡೆಗಟ್ಟಲು ಶಿಕ್ಷಕರು ಇಂತಹ ಮಕ್ಕಳು ತಮ್ಮಲ್ಲಿರುವ ನ್ಯೂನತೆಯನ್ನು ಒಪ್ಪಿಕೊಳ್ಳಲು ಸಹಾಯ ಮಾಡಬೇಕು. ಶಿಕ್ಷಕರು ಸ್ನೇಹಭಾವ, ಮಮತೆ, ಆಸಕ್ತಿ, ತಾಳ್ಮೆ, ದಯೆ ಮತ್ತು ಪ್ರಾಮಾಣಿಕ ಆಲೋಚನೆಗಳಿಂದ ಕೂಡಿರಬೇಕು. ಶಿಕ್ಷಕರು ಮಾಡುವ ಪ್ರತೀ ಪ್ರಯತ್ನವೂ ಮಗು ಅತ್ಯುನ್ನತ ಮಟ್ಟದಲ್ಲಿ ತನ್ನನ್ನು ತಾನು ಒಪ್ಪಿಕೊಳ್ಳುವಿಕೆ, ಆತ್ಮವಿಶ್ವಾಸ ಮತ್ತು ತನ್ನ ಇತಿಮಿತಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಕಲಿಯಲು



Scanned with OKEN Scanner

ಸಹಾಯ ಮಾಡುವಂತಿರಬೇಕು. ಈ ಮಕ್ಕಳ ಕೌಟುಂಬಿಕ ಹಿನ್ನಲೆಯೂ ಶಿಕ್ಷಕರಿಗೆ ತಿಳಿದಿರಬೇಕು. ಹೊಂದಾಣಿಕೆ ಸಮಸ್ಯೆಗಳನ್ನೆದುರಿಸಲು ಶಿಕ್ಷಕರೇ ಸಹಾಯ ಮಾಡಬೇಕು.

## ಕಲಿಕೆಯ ಸವಾಲುಗಳುಳ್ಳ ಮಕ್ಕಳು

ಕಲಕೆಯಲ್ಲಿ ಸೀಮಿತ ಸಾಮರ್ಥ್ಯವುಳ್ಳ ಮಕ್ಕಳನ್ನು ಕಲಿಕೆಯ ಸವಾಲುಗಳುಳ್ಳ ಮಕ್ಕಳೆನ್ನುತ್ತೇವೆ. ಒಬ್ಬ ವ್ಯಕ್ತಿ ವಿವಿಧ ಮಟ್ಟದ ಬೌದ್ಧಿಕ ಕ್ರಿಯೆಗಳನ್ನು ಒಳಗೊಂಡ ಹಲವು ವಿದಧ ಕಾರ್ಯಗಳನ್ನು ಕಲಿಯುವುದರಲ್ಲಿ ನ್ಯೂನತೆ ಹೊಂದಿದ್ದು ಅಥವಾ ಸೀಮಿತ ಸಾಮರ್ಥ್ಯ ಹೊಂದಿದ್ದರೆ ಅಂತಹವನನ್ನು ಸಾಮಾನ್ಯ ಬುದ್ಧಿ ಮಾಂಧ್ಯತೆ ಹೊಂದಿರುವವನೆಂದು ಪರಿಗಣಿಸಬಹುದು. ಇದಕ್ಕೆ ಬದಲಾಗಿ ಕೊರತೆಯ ಕಲಿಕೆಯು ಯಾವುದಾದರೊಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿದ್ದರೆ, ಅದರಲ್ಲಿಯೂ ವಿಶೇಷವಾಗಿ ಭಾಷೆ ಮತ್ತು ಸಂಖ್ಯಾಕಲಿಕೆಗೆ ಸಂಬಂಧಿಸಿದ್ದರೆ ಇಂತಹ ಮಗುವನ್ನು ಕಲಿಕೆಯ ಸಮಸ್ಯೆಗಳುಳ್ಳ ಮಗುವೆಂದು ಹೇಳಬಹುದು. ನಿರ್ದಿಷ್ಟ ಕಲಿಕೆಯ ಸಮಸ್ಯೆಗಳು ಸಾಮಾನ್ಯವಾಗಿ ಓದು, ಬರಹ, ಮತ್ತು ಗಣಿತ ಕಲಿಕೆಯ ಸಮಸ್ಯೆಗಳೆಂದು ಸೂಚಿಸಲ್ಪಡುತ್ತವೆ.

ಕಲಿಕೆಯ ಸಮಸ್ಯೆಯುಳ್ಳ ಮಗುವೆಂದು ಪರಿಗಣಿಸಬೇಕಾದರೆ ಆ ಮಗು :

(i) ಇತರರ ಮಾತನ್ನು ಗ್ರಹಿಸುವಲ್ಲಿ, ಮಾತನಾಡುವಲ್ಲಿ, ಓದುವಲ್ಲಿ, ಬರೆಯುವಲ್ಲಿ ಕಾಗುಣಿತಬಳಕೆ ಮತ್ತು ಗಣಿತಗಳಲ್ಲಿ ಬೆಳವಣಿಗೆಯ ಅವಧಿಯಲ್ಲಿ ಸಾಕಷ್ಟು ಕಠಿಣತೆಯನ್ನು ಎದುರಿಸುವನು.

(ii) ದೃಷ್ಟಿಯ, ಶ್ರವಣದ, ಚಲನೆಗೆ ಸಂಬಂಧಿಸಿದ ಅಥವಾ ಸಂವೇಗಾತ್ಮಕ ಮತ್ತು ಬೌದ್ಧಿಕ ಸಮಸ್ಯೆಗಳಿಂದ ಮುಕ್ತವಾಗಿರುವನು.

(iii) ಕಲಿಯಲು ಸಾಕಷ್ಟು ಅನುಕೂಲತೆಗಳು, ಆಸಕ್ತಿ ಮತ್ತು ಅಭಿಪ್ರೇರಣೆಗಳನ್ನು ಹೊಂದಿರುತ್ತಾನೆ.

**ಗುರುತಿಸುವಿಕೆ :** ಸಾಮಾನ್ಯವಾಗಿ ಮಕ್ಕಳು ಶಾಲೆ ಪ್ರವೇಶಿಸಿದ ನಂತರವೇ ಅವರನ್ನು ಕಲಿಕೆಯ ಸಮಸ್ಯೆಗಳಿರುವವರೆಂದು ಗುರ್ತಿಸಲಾಗುವುದು. ತರಗತಿ ಶಿಕ್ಷಕರು ಮಕ್ಕಳ ವರ್ತನಾತ್ಮಕ ಲಕ್ಷಣಗಳನ್ನು ವೀಕ್ಷಿಸುವುದರ ಮೂಲಕ ಕಲಿಕೆಯ ಸಮಸ್ಯೆಗಳುಳ್ಳ ಮಕ್ಕಳನ್ನು ಗುರ್ತಿಸಬಹುದು.

- ಶಾಲಾ / ಪಠ್ಯ ವಿಷಯಗಳನ್ನು ಕಲಿಯುವುದರಲ್ಲಿ ಕಠಿಣತೆ. ಕೆಲವು ವೇಳೆ ವಿದ್ಯಾರ್ಥಿಯು ಒಂದು ವಿಷಯದಲ್ಲಿ ಮಾತ್ರ ಹಿಂದುಳಿದಿರಬಹುದು ಅಥವಾ ಹೆಚ್ಚು ವಿಷಯಗಳಲ್ಲಿ ಹಿಂದುಳಿದಿರಬಹುದು.
- ಗಡಿಯಾರ ನೋಡಿ ಗಂಟೆ ಹೇಳುವುದು, ದಿನಗಳು, ತಿಂಗಳುಗಳು ಮತ್ತು ಋತುಗಳ ಅನುಕ್ರಮವನ್ನು ನೆನಪಿಡಲು ಕಷ್ಟವಾಗಿರುವುದು.
- ಬರವಣಿಗೆಯಲ್ಲಿ ನಿರ್ದಿಷ್ಟ ದೋಷಗಳು-ಸದಾ ಕಾಲವು ಬರೆಯುವಾಗ ಕೆಲವು ಅಕ್ಷರಗಳನ್ನು ಹಿಂದು-ಮುಂದಾಗಿ ಬರೆಯುವುದು. ಅಕ್ಷರಗಳ ಲೋಪ, ಅಕ್ಷರಗಳನ್ನು ಒತ್ತಾಗಿ ಅಥವಾ ದೂರ ದೂರ ಬರೆಯುವುದು.
- ಸಮವಯಸ್ಕರಿಗೆ ಹೋಲಿಸಿದರೆ ಕೈ ಬರಹ ಅಂದವಾಗಿಲ್ಲದಿರುವುದು.
- ಸಮವಯಸ್ಕರಿಗೆ ಹೋಲಿಸಿದರೆ ಚಿತ್ರ ಬಿಡಿಸುವುದರಲ್ಲಿ ಹಿಂದುಳಿದಿರುವುದು.



Scanned with OKEN Scanner

- ಓದುವ ವೇಗ ಕಡಿಮೆಯಾಗಿರುವುದು; ಓದುವಾಗ ಅಕ್ಷರಗಳ ಲೋಪ ಅಥವಾ ಅಕ್ಷರಗಳ ಜೋಡಣೆ ಹಿಂದು ಮುಂದು ಮಾಡುವುದು.
- ಬಹುಮಟ್ಟಿನ ಸಮವಯಸ್ಕರು ಅನುಸರಿಸುವಂತಹ ಲಿಖಿತ ನಿರ್ದೇಶನಗಳನ್ನು ಇವರು ಅನುಸರಿಸಲಾರರು.
- ಅಂಕಗಣಿತದಲ್ಲಿ ತೊಂದರೆ - ಉದಾಹರಣೆ B ಮತ್ತು 8ರ ನಡುವೆ, b ಮತ್ತು 6ರ ನಡುವೆ ಗೊಂದಲ, ಸಹಪಾಠಿಗಳಿಗೆ ಹೋಲಿಸಿದರೆ ಕೂಡುವುದು, ಕಳೆಯುವುದರಲ್ಲಿ ಹೆಚ್ಚಿನ ತೊಂದರೆ, ಉದಾ.: ವ್ಯವಕಲನ ಸಮಸ್ಯೆಯ ನಡುವೆಯೇ ಕೂಡಲು ಪ್ರಾರಂಭಿಸಬಹುದು.
- ಸುಲಭವಾಗಿ ಚಿತ್ತ ಚಂಚಲಗೊಳ್ಳುವುದು.
- ಸಹಪಾಠಿಗಳಿಗೆ ಹೋಲಿಸಿದರೆ ಅತಿ ಚುರುಕಾಗಿರುವುದು, ಸ್ವಲ್ಪಕಾಲವೂ ಸಹ ತರಗತಿಯಲ್ಲಿ ಸುಮ್ಮನೆ ಕುಳಿತಿರಲಾರರು.
- ಆವೇಗಕ್ಕೊಳಗಾಗುವುದು, ಇದ್ದಕ್ಕಿದ್ದಂತೆ ಚಟುವಟಿಕೆಯಲ್ಲಿ ತೊಡಗುವುದು, ತಾನು ಪ್ರಾರಂಭಿಸಿದ ಕೆಲಸದ ಪರಿಣಾಮಗಳನ್ನು ಯೋಚಿಸುವುದಕ್ಕೂ ಕಾಯದಿರುವುದು.
- ಅಂಕಗಣಿತದ ಚಿಹ್ನೆಗಳ ನಡುವೆ ಗೊಂದಲ ( + − x ÷ > < )
- ಸಾಮಾಜಿಕವಾಗಿ ಅಪರಿಪಕ್ವರು, ಅಜಾಗರೂಕತೆ, ಬೇಜವಾಬ್ದಾರಿ, ಪ್ರಾರಂಭಿಸಿದ ಕೆಲಸವನ್ನು ಪೂರ್ಣಗೊಳಿಸದಿರುವುದು.
- ಮಂಕುಕವಿದಂತೆ ಇರುವುದು.

**ಕಲಿಕೆಯ ಸವಾಲುಗಳುಳ್ಳ ಮಕ್ಕಳಿಗೆ ಸಮನ್ವಯ ಶಿಕ್ಷಣ :**

ಕಲಿಕೆಯ ಸಮಸ್ಯೆಗಳುಳ್ಳ ಮಕ್ಕಳಿಗಾಗಿ ಶೈಕ್ಷಣಿಕ ಅವಕಾಶಗಳು / ಕಾರ್ಯಕ್ರಮಗಳು ಮಕ್ಕಳಲ್ಲಿರುವ ಕಲಿಕೆಯ ಸಮಸ್ಯೆಯ ವಿಧಗಳು ಮತ್ತು ನ್ಯೂನತೆ ಇರುವ ನಿರ್ದಿಷ್ಟ ಕ್ಷೇತ್ರದಲ್ಲಿ ಆ ಮಗು ಪ್ರದರ್ಶಿಸುವ ವರ್ತನೆಯ ಲಕ್ಷಣಗಳನ್ನು ಅವಲಂಬಿಸಿರುತ್ತವೆ.

**ನರ ಸಂಬಂಧಿತ - ಮನೋವೈಜ್ಞಾನಿಕ ಪ್ರಕ್ರಿಯೆಯನ್ನು ವಿಕಾಸಗೊಳಿಸುವುದು :**

ಪ್ರತ್ಯಕ್ಷಾನುಭವ - ಸ್ಮರಣೆ - ಧಾರಣೆ ಮತ್ತು ಸಂಬಂಧ ಕಲ್ಪನೆ - ಇವು ಮಗು ಕೊರತೆ ಹೊಂದಿರಬಹುದಾದ ಮಾತುಗಾರಿಕೆ, ಓದುವುದು, ಬರೆಯುವುದು ಮತ್ತು ಅಂಕಗಣಿತ ಕೌಶಲಗಳ ಮೇಲೆ ಪ್ರಭುತ್ವ ಸಾಧಿಸಲು ಅತ್ಯವಶ್ಯ. ಇದನ್ನು ಬಹು ಇಂದ್ರಿಯ ಪ್ರಚೋದನೆಗಳನ್ನೊಳಗೊಂಡ ವ್ಯವಸ್ಥಿತ ಚಟುವಟಿಕೆಗಳ ಸರಣಿಯ ಮೂಲಕ ಸಾಧಿಸಬಹುದು. ಪ್ರಾರಂಭದಲ್ಲಿ ಒಂದೊಂದೇ ಸಾಮರ್ಥ್ಯವನ್ನು ಬೆಳೆಸಲು ಅಭ್ಯಾಸಗಳನ್ನು ನೀಡಿ ನಂತರದ ಹಂತದಲ್ಲಿ ಎಲ್ಲ ಸಾಮರ್ಥ್ಯಗಳ ಸಮನ್ವಯದ ಯತ್ನ ನಡೆಸಲಾಗುವುದು. ಈ ಕ್ರಮವನ್ನು ಕೊರತೆ ಆಧಾರಿತ ಕ್ರಮವೆನ್ನಬಹುದು.

- ಬಲಯುತ ಮಾರ್ಗಗಳ ಮೂಲಕ ಶೈಕ್ಷಣಿಕ ಕೌಶಲಗಳನ್ನು ಬೆಳೆಸುವುದು. ಇವು ಕಲಿಕೆಯ ದೋಷಗಳುಳ್ಳ ಮಕ್ಕಳ ಬೋಧನೆಗೆ ಸಂಬಂಧಿಸಿದ ನಿರ್ದಿಷ್ಟ ತತ್ವಗಳು, ಬೆಳೆಸಬೇಕಾದ ಕೌಶಲಗಳ ಸ್ವರೂಪ, ಆ ಕೌಶಲದ ಕ್ಷೇತ್ರದಲ್ಲಿ ಮಗುವಿನ ಅನುಭವಕ್ಕೆ ಬಂದ ಕಠಿಣತೆಗಳ ಆಧಾರದ ಮೇಲೆ ರೂಪುಗೊಳ್ಳಬೇಕು.



Scanned with OKEN Scanner

- ಭಾಷಾ ಅನುಭವ ಮಾರ್ಗ ಅತ್ಯಂತ ಉಪಯುಕ್ತ ಏಕೆಂದರೆ ಅದು ಕಥೆಗಳು, ವೈಯಕ್ತಿಕ ಅನುಭವಗಳು, ಮಗುವಿನ ಮೌಖಿಕ ಭಾಷೆಯನ್ನು ಬಳಸುತ್ತದೆ. ನಿರ್ದಿಷ್ಟ ಕೌಶಲ ಅಭಿವೃದ್ಧಿಯನ್ನು ಅಳವಡಿಸಿಕೊಂಡು ಭಾಷಾ ಕೌಶಲ, ದೃಶ್ಯ ಮತ್ತು ಗತಿ ಸಾಮರ್ಥ್ಯಗಳನ್ನು ಬಳಸುತ್ತದೆ. ಕಾರ್ಯಕ್ರಮನ್ವಯ ಬೋಧನೆ ಮತ್ತೊಂದು ಉಪಯುಕ್ತ ತಂತ್ರವಾಗಿದೆ. (programmed instruction) ಓದುವಿಕೆ ಕಲಿಸಲು ಬಹು ಇಂದ್ರಿಯ ಅನುಭವ ಮಾರ್ಗ ಮತ್ತು ಚಿತ್ರಗಳನ್ನು ಬಳಸಬಹುದು.
- ಕರಕೌಶಲ ಅಭ್ಯಾಸಗಳನ್ನು ಬಳಸಿ ಮಕ್ಕಳ ಸ್ನಾಯುಬಲ ಹೆಚ್ಚಿಸಬಹುದು. ಇದು ಅವರ ಬರವಣಿಗೆಯನ್ನು ಸುಧಾರಿಸುವಲ್ಲಿ ಸಹಾಯ ಮಾಡುತ್ತದೆ.
- ಅಂಕಗಣಿತದ ಕಲಿಕೆಯ ದೋಷ ನಿವಾರಣೆಗೆ ನಿರ್ದಿಷ್ಟ ಪರಿಹಾರ ಬೋಧನೆ ಸಹಾಯಕವಾಗಿದೆ.

ಕಲಿಕೆಯ ಸವಾಲುಗಳುಳ್ಳ ಮಕ್ಕಳಿಗಾಗಿ ಈ ಕೆಳಗಿನ ಸಾಮಾನ್ಯ ಬೋಧನಾ ತಂತ್ರಗಳನ್ನು ಬಳಸಬಹುದು.

- ಸಂಕ್ಷಿಪ್ತ, ಚಿಕ್ಕದಾದ ಸೂಚನೆಗಳನ್ನು, ದಪ್ಪ ಮುದ್ರಣಗಳನ್ನು ಬಳಸಬಹುದು.
- ಸೂಚನೆಗಳನ್ನು ಅಥವಾ ಹಂತಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಮುಖ್ಯ ಪದಗಳ ಕೆಳಗೆ ಗೆರೆ ಎಳೆಯಬಹುದು.
- ಸ್ಪಷ್ಟವಾಗಿ, ಜೋರಾಗಿ ಮಾತನಾಡುವುದು.
- ಸದಾ ಒಂದೇ ರೀತಿಯ ಭಾಷೆ ಮತ್ತು ಬಣ್ಣದ ಸಂಕೇತಗಳನ್ನು ಬಳಸುವುದು.
- ರೇಖಾ ಚಿತ್ರಗಳು ಅಥವಾ ಚಿತ್ರರೂಪದ ನಿದರ್ಶನಗಳನ್ನು ಬಳಸುವುದು.
- ಪಾಠದ ಸಮಗ್ರ ನೋಟವನ್ನು ಬಳಸುವುದು, ಪ್ರಶ್ನೆಗಳನ್ನು ಕೇಳುವುದು, ವಸ್ತು ವಿಷಯವನ್ನು ಓದಲು, ಗಟ್ಟಿಯಾಗಿ ಹೇಳಲು, ಪುನರಾವಲೋಕನ ಮಾಡುವಂತೆ ತಿಳಿಸುವುದು.
- ಬೋಧನೆಯಲ್ಲಿ ವಿವಿಧ ದೃಕ್-ಶ್ರವಣ ಸಾಧನಗಳನ್ನು ಬಳಸುವುದು. ವರ್ತನಾತ್ಮಕ ಸಮಸ್ಯೆಗಳನ್ನು ಪರಿಹರಿಸಲು ಈ ಕೆಳಗಿನ ಮಾರ್ಗೋಪಾಯಗಳನ್ನು ಬಳಸಬಹುದು.
- ಅವಧಾನದ ಮಟ್ಟವನ್ನು ಹೆಚ್ಚಿಸಿ, ಭಂಗಕಾರಕಗಳನ್ನು ನಿವಾರಿಸುವುದು.
- ಮಗು ತನ್ನ ಜವಾಬ್ದಾರಿಯನ್ನು ಒಪ್ಪಿಕೊಂಡು ಅದನ್ನು ಫಲಪ್ರದವಾಗಿ ನಿರ್ವಹಿಸುವಂತೆ ಪ್ರೇರೇಪಿಸುವುದು.
- ಕಲಿಕೆಯ ಸಮಸ್ಯೆಯುಳ್ಳ ಮಕ್ಕಳನ್ನು ಕೂಟಗಳಲ್ಲಿ, ಪ್ರವಾಸಗಳಲ್ಲಿ ಮತ್ತು ಶಾಲಾ ಸಮಾರಂಭಗಳಲ್ಲಿ ತೊಡಗಿಸುವುದು.
- ಶಾಲೆಯ ವಿವಿಧ ಸಹ-ಪಠ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು
- ಸಹಕಾರ, ಚಾತುರ್ಯ, ಜವಾಬ್ದಾರಿಯನ್ನು ಒಪ್ಪಿಕೊಳ್ಳುವಿಕೆ, ನಿಯೋಜಿತ ಕಾರ್ಯವನ್ನು ಮಾಡಿ ಮುಗಿಸುವುದು, ಹೊಸ ಸನ್ನಿವೇಶಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವುದು, ಸಾಮಾಜಿಕ ಒಪ್ಪಿಗೆ ಪಡೆಯುವುದು ಇತ್ಯಾದಿ ಸಾಮಾಜಿಕ ಕೌಶಲಗಳನ್ನು ವಿಕಾಸಗೊಳಿಸುವುದು,



Scanned with OKEN Scanner

**ಶಿಕ್ಷಕರ ಪಾತ್ರ :**

ಸಮನ್ವಯ ತರಗತಿಯಲ್ಲಿ ಶಿಕ್ಷಕರು ವೈಯಕ್ತಿಕ ಭಿನ್ನತೆಗಳನ್ನು ಒಪ್ಪಿ ಅವರನ್ನು ಗೌರವಿಸಲು ತರಗತಿಯನ್ನು ವೈಯಕ್ತೀಕರಿಸಬೇಕು.

- ✦ ಸ್ವತಂತ್ರ ಮತ್ತು ಸಣ್ಣಗುಂಪು ಚಟುವಟಿಕೆಯನ್ನು ಉತ್ತೇಜಿಸಬೇಕು.
- ✦ ವಿದ್ಯಾರ್ಥಿಗಲ್ಲಿ ಅರ್ಪಣಾಭಾವ, ನಿಯಂತ್ರಣ ಮತ್ತು ಜವಾಬ್ದಾರಿಗಳನ್ನು ಹೆಚ್ಚಿಸಬೇಕು.
- ✦ ಪ್ರತಿ ಮಗುವಿನ ಪ್ರಗತಿಯನ್ನು ತಿಳಿಯಲು ನಿರಂತರ ವಿದ್ಯಾರ್ಥಿ ಮೌಲ್ಯಮಾಪನ ನಡೆಯಬೇಕು.
- ✦ ಪೋಷಕರೊಡನೆ ನಿಕಟ ಸಂಪರ್ಕವಿಟ್ಟುಕೊಳ್ಳಬೇಕು.
- ✦ ವಿದ್ಯಾರ್ಥಿಯ ಅಗತ್ಯಕ್ಕನುಸಾರವಾಗಿ ಕಾರ್ಯಕ್ರಮ ರೂಪಿಸಬೇಕು.
- ✦ ಕಾರ್ಯ ವಿಶ್ಲೇಷಣೆ ಮಾಡಿ ವಿದ್ಯಾರ್ಥಿ ಹಂತಹಂತವಾಗಿ ಕಲಿಯುವಂತೆ ಮುನ್ನಡೆಸಬೇಕು.

ಮಾನಸಿಕ ಹಾಗೂ ದೈಹಿಕ ಸವಾಲುಗಳನ್ನೆದುರಿಸುತ್ತಿರುವ ಮಕ್ಕಳಿಗೆ ವಿಶೇಷ ಶಾಲೆಗಳಲ್ಲಿಯೂ ಕಲಿಸಬಹುದು, ಸಮನ್ವಯ ತರಗತಿಗಳಲ್ಲಿಯೂ ಕಲಿಸಬಹುದು. ಸಮನ್ವಯ ಶಿಕ್ಷಣವು ಮಕ್ಕಳ ನಿರ್ದಿಷ್ಟ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸುತ್ತದೆ. ಹೊಂದಾಣಿಕೆಯ ಸಮಸ್ಯೆಗಳನ್ನು ನೀಗಿಸಲು ಸಹಾಯ ಮಾಡುತ್ತದೆ ಮತ್ತು ಇಂತಹ ಮಕ್ಕಳಲ್ಲಿ ಅಗತ್ಯ ಕೌಶಲಗಳನ್ನು ಬೆಳೆಸುತ್ತವೆ. ಸಮಸ್ಯೆಗಳುಳ್ಳ ಮಕ್ಕಳಿಗೆ ಸಮನ್ವಯ ಶಿಕ್ಷಣ ಒದಗಿಸುವುದಕ್ಕಾಗಿ ಇತ್ತೀಚೆಗೆ ವಿವಿಧ ನವೀನ ವಿಧಾನಗಳನ್ನು ಬಳಸಲಾಗುತ್ತಿದೆ. ಅವು ಯಾವುವೆಂದರೆ - ಸಹಪಾಠಿಗಳನ್ನು ಶಿಕ್ಷಕರಂತೆ ಬಳಸಿ ಸಣ್ಣಗುಂಪುಗಳಲ್ಲಿ ಬೋಧಿಸುವುದು, ಪ್ರಭುತ್ವ ಕಲಿಕೆಯನ್ನು ಅಳವಡಿಸುವುದು, ಕಾರ್ಯವಿಶ್ಲೇಷಣಾ ತಂತ್ರಗಳು, ಸಂಪನ್ಮೂಲ ಕೊಠಡಿಗಳನ್ನು ಬಳಸುವುದು, ಸಂಪನ್ಮೂಲ ಶಿಕ್ಷಕರ ಸಾಮರ್ಥ್ಯಗಳು, ಕಾರ್ಯಕ್ರಮಾನ್ವಯ ಸಾಮಗ್ರಿಗಳು, ಸೂಕ್ಷ್ಮ ಗಣಕಯಂತ್ರಗಳ ಬಳಕೆ ಮತ್ತು ಸಾಮಾನ್ಯ ತರಗತಿ ಶಿಕ್ಷಕರನ್ನು ಪುನಶ್ಚೇತನಗೊಳಿಸಿ, ತಮ್ಮ ಸಾಮಾನ್ಯ ತರಗತಿಗಳಲ್ಲಿ ದೈಹಿಕ ಮತ್ತು ಮಾನಸಿಕ ಸವಾಲುಗಳುಳ್ಳ ಮಕ್ಕಳನ್ನು ಸಮನ್ವಯಗೊಳಿಸಲು ಅಗತ್ಯವಾದ ಪ್ರಾಯೋಗಿಕ ಕೌಶಲಗಳನ್ನು ಕಲಿಸಲಾಗುತ್ತಿದೆ.

## ನೆನಪಿಡಬೇಕಾದ ಅಂಶಗಳು

- ★ ಮಾನಸಿಕ / ಬೌದ್ಧಿಕ ಸವಾಲುಗಳುಳ್ಳ ಮಕ್ಕಳೆಂದರೆ, ಬೌದ್ಧಿಕ ಸಾಮರ್ಥ್ಯ ಸಾಧಾರಣ ಮಟ್ಟಕ್ಕಿಂತ ಬಹು ಕಡಿಮೆ ಇದ್ದು, ವಿಕಾಸದ ಹಂತದಲ್ಲಿ ಪ್ರಕಟವಾಗಿ ಹೊಂದಾಣಿಕೆಯ ವರ್ತನೆಗಳ ಕೊರತೆಯ ಲಕ್ಷಣಗಳು ಕಂಡು ಬರುತ್ತವೆ.
- ★ ಮಕ್ಕಳ ವರ್ತನಾ ಚಿಹ್ನೆಗಳನ್ನು ವೀಕ್ಷಿಸುವುದರ ಮೂಲಕ ಶಿಕ್ಷಕರು ಮಾನಸಿಕ ಸವಾಲುಗಳುಳ್ಳ ಮಕ್ಕಳನ್ನು ಗುರ್ತಿಸಬಹುದು.
- ★ ಈ ಮಕ್ಕಳ ಶೈಕ್ಷಣಿಕ ಅವಕಾಶಗಳಲ್ಲಿ ಸಂವಹನ ಕೌಶಲಗಳು, ಸ್ವ-ಸಹಾಯ ಕೌಶಲಗಳು, ಸಾಮಾಜೀಕರಣ ಕೌಶಲಗಳು ಮತ್ತು ಪ್ರತ್ಯಾಕ್ಷಾನುಭವಗಳು ಮತ್ತು ಶೈಕ್ಷಣಿಕ ತರಬೇತಿ ಇವೆಲ್ಲವೂ ಸೇರಿವೆ.



Scanned with OKEN Scanner

★ ದೃಷ್ಟಿ ಸಂಬಂಧಿತ ಸವಾಲುಗಳುಳ್ಳ ಮಕ್ಕಳಲ್ಲಿ ಭಾಗಶಃ ದೃಷ್ಟಿಸಾಮರ್ಥ್ಯವುಳ್ಳವರೂ, ಅಂಧರೂ ಸೇರಿದ್ದಾರೆ.

★ ಸ್ನೆಲೆನ್ ಚಿತ್ರಪಟ ಮತ್ತು ವರ್ತನಾತ್ಮಕ ಲಕ್ಷಣಗಳ ಸಹಾಯದಿಂದ ದೃಷ್ಟಿ ಸಂಬಂಧಿತ ಸಮಸ್ಯೆಗಳುಳ್ಳ ಮಕ್ಕಳನ್ನು ಗುರ್ತಿಸಬಹುದು.

★ ಇವರಿಗಾಗಿ ಶೈಕ್ಷಣಿಕ ಅವಕಾಶಗಳಲ್ಲಿ ಪಠ್ಯಕ್ರಮದಲ್ಲಿ ಬಹು ಇಂದ್ರಿಯ ಅನುಭವ ಕ್ರಮ ಸೇರಿರುತ್ತದೆ. ಇದರಲ್ಲಿ ಬ್ರೈಲ್ ಲಿಪಿ, ಚಲನಾ ಕೌಶಲಗಳ ತರಬೇತಿ, ಸಾಮಾಜಿಕ ಕೌಶಲಗಳು ಮತ್ತು ದೈನಂದಿನ ಜೀವನ ಕೌಶಲಗಳು ಮತ್ತು ಇಂದ್ರಿಯ ತರಬೇತಿಗಳು ಅವಶ್ಯವಾಗಿ ಸೇರಿರಬೇಕು.

★ ಶ್ರವಣ ಸಾಮರ್ಥ್ಯ ಎಷ್ಟು ಪ್ರಮಾಣದಲ್ಲಿ ಕಡಿಮೆ ಇದೆ ಎಂಬುದರ ಆಧಾರದ ಮೇಲೆ ಶ್ರವಣದೋಷವುಳ್ಳ ಮಕ್ಕಳನ್ನು ವ್ಯಾಖ್ಯಾನಿಸಲಾಗುವುದು. 35 ರಿಂದ 69 ಡೆಸಿಬಲ್‌ಗಳ ನಡುವೆ ಶ್ರವಣ ಸಾಮರ್ಥ್ಯ ಕಡಿಮೆಯಿದ್ದಲ್ಲಿ ಅವರು ಶ್ರವಣ ದೋಷವುಳ್ಳವರೆಂದೂ, 70 ಡೆಸಿಬಲ್‌ಗಳಿಗಿಂತ ಹೆಚ್ಚಿನ ಶ್ರವಣ ದೌರ್ಬಲ್ಯವಿದ್ದಲ್ಲಿ ಕಿವುಡನೆಂದೂ ಪರಿಗಣಿಸಲಾಗುವುದು.

★ ವರ್ತನಾತ್ಮಕ ಸುಳಿವುಗಳ ಸಹಾಯದಿಂದ ಶ್ರವಣದೋಷಗಳುಳ್ಳ ಮಕ್ಕಳನ್ನು ಗುರ್ತಿಸಬಹುದು.

★ ಶ್ರವಣ ದೋಷವುಳ್ಳ ಮಕ್ಕಳಿಗಾಗಿ ಸಮನ್ವಯ ಶಿಕ್ಷಣವು ಶಬ್ದವನ್ನು ವೃದ್ಧಿಸುವುದು. ಶ್ರವಣ ತರಬೇತಿ, ವಾಕ್‌ವಾಚನ ಮತ್ತಿತರ ತರಗತಿ ಮಾರ್ಪಾಡುಗಳನ್ನೊಳಗೊಂಡಿರುವುದು.

★ ಮೂಳೆ ಸಂಬಂಧಿತ ಸವಾಲುಗಳುಳ್ಳ ಮಕ್ಕಳಲ್ಲಿ ಮೂಳೆಗಳು ಮತ್ತು ಕೀಲುಗಳು ಗಾತ್ರ ಮತ್ತು ರಚನೆಯಲ್ಲಿ ದೋಷಗಳು ಇದ್ದು, ಸ್ನಾಯುಶಕ್ತಿ ಹೊಂದಾಣಿಕೆ ಅಥವಾ ನಿಯಂತ್ರಣದಲ್ಲಿ ದೋಷಗಳಿರುತ್ತವೆ.

★ ದೈಹಿಕ ವಿಕಾರಗಳು ಮತ್ತಿತರ ವೈಪರೀತ್ಯಗಳ ಆಧಾರದ ಮೇಲೆ ಈ ಮಕ್ಕಳನ್ನು ಗುರ್ತಿಸಬಹುದು.

★ ಮೂಳೆ ದೋಷವಿರುವ ಮಕ್ಕಳಿಗೆ ಇತರ ಮಕ್ಕಳೊಂದಿಗೆ ಸಾಮಾನ್ಯ ಶಾಲೆಗಳಲ್ಲಿ ಶಿಕ್ಷಣ ನೀಡಬಹುದು. ಬೌದ್ಧಿಕ, ಸಾಮಾಜಿಕ-ಮತ್ತು ಸಂವೇಗಾತ್ಮಕ ವಿಕಾಸಕ್ಕಾಗಿ ಚಟುವಟಿಕೆಗಳನ್ನು ವಿನ್ಯಾಸಗೊಳಿಸಲಾಗುವುದು. ಶಾಲೆಗಳು ಇಂತಹ ಮಕ್ಕಳಲ್ಲಿ ಕಂಡು ಬರುವ ಸೃಜನಾತ್ಮಕ ಸಾಮರ್ಥ್ಯಗಳನ್ನು ವಿಕಾಸಗೊಳಿಸಬೇಕು.

★ ಕಲಿಕೆಯ ಸಾಮರ್ಥ್ಯ ಸೀಮಿತವಾಗಿರುವ ಅದರಲ್ಲಿಯೂ ಭಾಷೆ ಮತ್ತು ಗಣಿತ ಸಂಬಂಧಿತ ಕಲಿಕೆಯ ಸಾಮರ್ಥ್ಯ ಸೀಮಿತವಾಗಿರುವ ಮಕ್ಕಳನ್ನು ಕಲಿಕೆಯ ಸವಾಲುಗಳುಳ್ಳ ಮಕ್ಕಳೆನ್ನಬಹುದು.

★ ಕಲಿಕೆಯ ಸಮಸ್ಯೆಗಳುಳ್ಳ ಮಕ್ಕಳು ಶಾಲೆಗೆ ದಾಖಲಾದ ನಂತರವೇ ಗುರ್ತಿಸಲ್ಪಡುತ್ತಾರೆ. ಓದುವುದು, ಬರೆಯುವುದು ಮತ್ತು ಅಂಕಗಣಿತದಲ್ಲಿ ನಿರ್ದಿಷ್ಟ ಸಮಸ್ಯೆಗಳಿಂದ ಅವಚ್ಛರನ್ನು ಪತ್ತೆಹಚ್ಚಬಹುದು.

★ ಕಲಿಕೆಯ ಸವಾಲುಗಳುಳ್ಳ ಮಕ್ಕಳಿಗಾಗಿ ಸಮನ್ವಯ-ಶಿಕ್ಷಣವು ನರಸಂಬಂಧಿತ ಮನೋವೈಜ್ಞಾನಿಕ ಪ್ರಕ್ರಿಯಗಳಾದ ಭಾಷಾ ಅನುಭವ ಮಾರ್ಗ, ಬಹು ಇಂದ್ರಿಯಾನುಭವ ಮಾರ್ಗ, ಕರಕೌಶಲ ಅಭ್ಯಾಸಗಳು ಮತ್ತು ನಿರ್ದಿಷ್ಟ ಪರಿಹಾರ ಬೋಧನೆ ಕ್ರಮಗಳನ್ನೊಳಗೊಂಡಿರುವುದು.

★ ದೈಹಿಕ ಮತ್ತು ಬೌದ್ಧಿಕ ಸವಾಲುಗಳುಳ್ಳ ಮಕ್ಕಳ ಶಿಕ್ಷಣದಲ್ಲಿ ಸಾಮಾನ್ಯ ಶಿಕ್ಷಕರು ಮತ್ತು ಸಂಪನ್ಮೂಲ ಶಿಕ್ಷಕರು ಮಹತ್ವದ ಪಾತ್ರ ವಹಿಸುತ್ತಾರೆ.



Scanned with OKEN Scanner

## ಅಭ್ಯಾಸ ಪ್ರಶ್ನೆಗಳು

1. ಮಾನಸಿಕ ಸವಾಲುಗಳುಳ್ಳ ಮಕ್ಕಳೆಂದರೆ ಯಾರು?
2. ಮಾನಸಿಕ ಸವಾಲುಗಳುಳ್ಳ ಮಗುವನ್ನು ಹೇಗೆ ಗುರ್ತಿಸುವಿರಿ?
3. ಮಾನಸಿಕ ಸವಾಲುಗಳುಳ್ಳ ಮಕ್ಕಳ ಶಿಕ್ಷಣಕ್ಕಾಗಿ ಯಾವ ಶೈಕ್ಷಣಿಕ ಸೌಲಭ್ಯಗಳನ್ನು ರೂಪಿಸಬಹುದು?
4. ಸಮನ್ವಯ ತರಗತಿಯಲ್ಲಿ ಮಾನಸಿಕ ಸವಾಲುಗಳುಳ್ಳ ಮಕ್ಕಳಿಗೆ ಬೋಧಿಸುವಲ್ಲಿ ನಿಯಮಿತ ಶಿಕ್ಷಕನ ಪಾತ್ರವನ್ನು ವಿವರಿಸಿ.
5. ದೃಷ್ಟಿ ಸವಾಲುಗಳುಳ್ಳ ಮಕ್ಕಳೆಂದರೆ ಯಾರು?
6. ದೃಷ್ಟಿ ದೋಷವುಳ್ಳ ಮಗುವನ್ನು ನೀವು ಹೇಗೆ ಗುರ್ತಿಸುವಿರಿ?
7. ದೃಷ್ಟಿ ಸವಾಲುಗಳುಳ್ಳ ಮಕ್ಕಳಿಗೆ ನೀಡುವ ಸಮನ್ವಯ ಶಿಕ್ಷಣ ಕ್ರಮವನ್ನು ಸಂಕ್ಷಿಪ್ತವಾಗಿ ವಿವರಿಸಿ.
8. ದೃಷ್ಟಿ ಸವಾಲುಗಳುಳ್ಳ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಶಿಕ್ಷಕನ ಪಾತ್ರವೇನು?
9. ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಗುವೆಂದರೆ ಯಾರು?
10. ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳ ವರ್ತನಾ ಚಿಹ್ನೆಗಳನ್ನು ತಿಳಿಸಿರಿ.
11. ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಗುವನ್ನು ನೀವು ಹೇಗೆ ಗುರ್ತಿಸುವಿರಿ?
12. ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳಿಗೆ ಯಾವ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವಿರಿ?
13. ಸಮನ್ವಯ ತರಗತಿಯಲ್ಲಿ ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳಿಗೆ ಬೋಧಿಸುವಲ್ಲಿ ಶಿಕ್ಷಕನ ಪಾತ್ರವೇನು?
14. ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳಿಗೆ ಬೋಧಿಸಲು ತರಗತಿ ವ್ಯವಸ್ಥೆಯಲ್ಲಿ ಅಥವಾ ಪರಿಸರದಲ್ಲಿ ಯಾವ ರೀತಿಯ ಮಾರ್ಪಾಟುಗಳನ್ನು ಮಾಡುತ್ತೀರಿ?
15. ಮೂಳೆ-ಕೀಲು ಸಂಬಂಧಿತ ಸವಾಲುಗಳುಳ್ಳ ಮಕ್ಕಳೆಂದರೆ ಯಾರು?
16. ಮೂಳೆ-ಕೀಲು ಸಂಬಂಧಿತ ಸವಾಲುಗಳುಳ್ಳ ಮಕ್ಕಳನ್ನು ಗುರ್ತಿಸುವ ಚಿಹ್ನೆಗಳಾವುವು?
17. ಮೂಳೆ-ಕೀಲು ಸಂಬಂಧಿತ ಸವಾಲುಗಳುಳ್ಳ ಮಕ್ಕಳಿಗಾಗಿ ಇರುವ ಸಮನ್ವಯ ಶಿಕ್ಷಣವನ್ನು ಸಂಕ್ಷಿಪ್ತವಾಗಿ ವಿವರಿಸಿ.
18. ಕಲಿಕೆಯ ಸವಾಲುಗಳುಳ್ಳ ಮಕ್ಕಳಿಗೆ ನೀವು ಹೇಗೆ ವ್ಯಾಖ್ಯೆ ನೀಡುವಿರಿ?



Scanned with OKEN Scanner

19. ಕಲಿಕೆಯ ಸವಾಲುಗಳುಳ್ಳ ಮಕ್ಕಳನ್ನು ತರಗತಿಯ ಶಿಕ್ಷಕರು ಹೇಗೆ ಗುರ್ತಿಸಬಹುದು?

20. ಕಲಿಕೆಯ ಸವಾಲುಗಳುಳ್ಳ ಮಕ್ಕಳಿಗೆ ಪರಿಣಾಮಕಾರಿಯಾಗಿ ಬೋಧಿಸಲು ಯಾವ ನಿರ್ದಿಷ್ಟ ತಂತ್ರಗಳನ್ನು ಉಪಯೋಗಿಸುವಿರಿ?

21. ಕಲಿಕೆಯ ಸವಾಲುಗಳುಳ್ಳ ಮಕ್ಕಳ ವರ್ತನಾ ಸಮಸ್ಯೆಗಳನ್ನು ಹೋಗಲಾಡಿಸಲು ಯಾವ ವಿಧಾನಗಳನ್ನು ಬಳಸಬಹುದು.?

22. ಸಮನ್ವಯ ತರಗತಿಯಲ್ಲಿ ಕಲಿಕಾ ಸಮಸ್ಯೆಯುಳ್ಳ ಮಕ್ಕಳೊಡನೆ ವ್ಯವಹರಿಸುವಾಗ ಶಿಕ್ಷಕನ ಪಾತ್ರವನ್ನು ವಿವರಿಸಿ.

## ಚಟುವಟಿಕೆಗಳು

1. ಬುದ್ಧಿಶಕ್ತಿ ಪರೀಕ್ಷೆ - ಬಳಕೆ, ಅಂಕ ನೀಡುವಿಕೆ ಮತ್ತು ಅರ್ಥೈಸುವುದು.
2. ಮಂದಗತಿ ಕಲಿಯುವವನ / ಅಪೂರ್ಣ ಸಾಧಕನ / ಪ್ರತಿಭಾನ್ವಿತ ವಿದ್ಯಾರ್ಥಿಯ ವ್ಯಕ್ತಿ ಅಧ್ಯಯನ ಕೈಗೊಳ್ಳುವುದು.
3. ಈ ಕೆಳಗಿನ ಯಾವುದಾದರೂ ಒಂದು ಶಾಲೆಗೆ ಭೇಟಿ ನೀಡಿ ಅದರ ಕಾರ್ಯವಿಧಾನವನ್ನು ಅಧ್ಯಯನ ಮಾಡಿರಿ.
   - ಮಾನಸಿಕ ಸವಾಲುಗಳುಳ್ಳ ಮಕ್ಕಳ ಶಾಲೆ.
   - ಕಿವುಡ ಮತ್ತು ಮೂಕರ ಶಾಲೆ.
   - ಅಂಧ ಮಕ್ಕಳ ಶಾಲೆ.
   - ಮೂಳೆ ಕೀಲುಗಳಿಗೆ ಸಂಬಂಧಿಸಿದ ಸವಾಲುಗಳುಳ್ಳ ಮಕ್ಕಳ ಶಾಲೆ.
   - ಬಾಲ ಮಂದಿರ / ಬಾಲಾಪರಾಧಿ ಗೃಹ.
4. ಶ್ರವಣದೋಷ / ಭಾಗಶಃ ದೃಷ್ಟಿದೋಷ / ವಾಗ್ದೋಷ / ಕಲಿಕಾ ದೌರ್ಬಲ್ಯವುಳ್ಳ ಮಕ್ಕಳನ್ನು ಗುರ್ತಿಸಿರಿ.
5. ಒಂದು ಶಾಲೆಯ ಕೆಲವು ಶಿಕ್ಷಕರನ್ನು ಭೇಟಿ ಮಾಡಿ ಅವರು ಸೃಜನಶೀಲ ಮಕ್ಕಳನ್ನು ಹೇಗೆ ಗುರ್ತಿಸುತ್ತಾರೆ ಮತ್ತು ಅವರ ಪ್ರತಿಭೆಗಳನ್ನು ಪೋಷಿಸಲು ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ಎಂಬುದನ್ನು ಚರ್ಚಿಸಿರಿ.



Scanned with OKEN Scanner

## *Reference Books*


1. Chintamani kar, 1996, Exceptional children – Their Psychology and Education, Sterling Publishers Private Limited, New Delhi.
2. Crow L.D. and Crow Alice, 1969, Educational Psychology, Revised Edition, Eurasia Publishing House Pvt. Ltd., New Delhi.
3. Dandapani S. 2000, A text book of Advanced Educational Psychology, Anmol Publications Pvt. Ltd., New Delhi.
4. Daniel Goleman. 1999, Working with Emotional Intelligence, Bantom Books, New York.
5. Hilgard E.R., Atkinson R.C. and Atkinson R.L. 1975, Introduction to Psychology, Sixth Edition, Oxford and IBH publishing Co. Pvt. Ltd., New Delhi.
6. Heward, William L. and Orlansky Michael D. 1992, Exceptional Children, Fourth Edition, Mac Millan Publishing Company, New York.
7. Krishna Maitra, 1991, Gifted Underachievers – A Challenge in Education, Discovery Publishing House. New Delhi.
8. Narayana Rao S. 1990, Educational Psychology, Wiley Eastern Limited, New Delhi.
9. Nataraj P. 1981, Manual of Experiments in Psychology, Second Revised Edition, Srinivasa Publications, Mysore.
10. Panda K.C. 2000, Education of Exceptional Children, Vikas Publishing House Pvt. Ltd., New Delhi.
11. Parameswaran E.G. and Beena C. 1988, Invitation to Psychology, Tata MC Graw Hill Publishing Company Ltd., New Delhi.
12. Ramaa S. 1992, Handbook on Learning Disabilities, Regional College of Education, Mysore.
13. Rastogi K.G. 1978, Educational Psychology, Rastogi Publications, Meerut.




Scanned with OKEN Scanner

14. Sahu. B.K. 1990, Education of the Exceptional Children, Kalyani Publishers, New Delhi.

15. Sharma R.N. Fundamentals of Educational Psychology, Kedarnath Ramnath Publishers, Meerut.

16. Udayshankar, 1984, Exceptional Children, Second Edition, Sterling Publishers Pvt. Ltd. New Delhi.

17. Walter B. Kolesnik 1963, Educational Psychology, Mc. Graw Hill Book Company Inc. New York.



Scanned with OKEN Scanner

## ಘಟಕ – 6

# ವ್ಯಕ್ತಿತ್ವ ಮತ್ತು ಹೊಂದಾಣಿಕೆ

ಬಹಳ ಹಿಂದಿನಿಂದಲೂ ಮಾನವನ ವ್ಯಕ್ತಿತ್ವದ ಅಧ್ಯಯನ ಎಲ್ಲರ ಆಸಕ್ತಿಯನ್ನು ಕೆರಳಿಸಿದೆ. ದಾರ್ಶನಿಕರು, ಲೇಖಕರು, ವೈದ್ಯರು ವೈವಿಧ್ಯಮಯ ವ್ಯಕ್ತಿತ್ವದ ವಿಧಗಳನ್ನು ಗುರ್ತಿಸಿದ್ದು, ಮಾನವ ವ್ಯಕ್ತಿತ್ವದ ಸ್ವರೂಪವನ್ನು ಅರಿಯುವಲ್ಲಿ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಪ್ರಗತಿಯಾಗಿದ್ದು, ಹಲವು ಮನೋವಿಜ್ಞಾನಿಗಳು ವ್ಯಕ್ತಿತ್ವದ ವ್ಯವಸ್ಥಿತ, ವೈಜ್ಞಾನಿಕ ಅಧ್ಯಯನ ಮಾಡಿದ್ದಾರೆ. ಈ ವಿಭಾಗದಲ್ಲಿ ನೀವು ವ್ಯಕ್ತಿತ್ವದ ಅರ್ಥ ಮತ್ತು ಸ್ವರೂಪವನ್ನು ತಿಳಿಯುವಿರಿ. ವ್ಯಕ್ತಿತ್ವ ವಿಕಾಸದ ಮೇಲೆ ಹಲವು ಅಂಶಗಳು ಪ್ರಭಾವ ಬೀರುತ್ತವೆ. ವಿವಿಧ ತಂತ್ರ, ಸಾಧನಗಳನ್ನು ಬಳಸಿ ವ್ಯಕ್ತಿತ್ವ ಪರೀಕ್ಷೆ ಮಾಡಬಹುದು ಎಂಬುದನ್ನು ಅರಿಯುವುದಲ್ಲದೇ ಕೆಲವು ವ್ಯಕ್ತಿತ್ವ ಪರೀಕ್ಷೆಗಳ ಪರಿಚಯವನ್ನು ಮಾಡಿಕೊಳ್ಳೋಣ. ಈ ವಿಭಾಗದಲ್ಲಿ ವ್ಯಕ್ತಿತ್ವದ ಅಪಸಮಾಯೋಜನೆಗೆ ಕಾರಣಗಳನ್ನು ಅರಿಯುವುದಲ್ಲದೆ ಮಾರ್ಗದರ್ಶನ ಮತ್ತು ಸಮಾಲೋಚನೆಗಳ ಸಹಾಯದಿಂದ ವ್ಯಕ್ತಿತ್ವದಲ್ಲಿ ಹೊಂದಾಣಿಕೆ ಉಂಟು ಮಾಡಬಹುದೆಂಬುದನ್ನೂ ತಿಳಿಯೋಣ.

ವ್ಯಕ್ತಿತ್ವ ಮನೋವಿಜ್ಞಾನವು ಫ್ರಾನ್ಸಿಸ್ ಗಾಲ್ಟನ್ (1822–1911) ಹಾಗೂ ಸಿಗ್‌ಮಂಡ್ ಫ್ರಾಯ್ಡ್‌ರ ಕಾಲದ ನಂತರವೇ ಒಂದು ವ್ಯವಸ್ಥಿತ ರೂಪಕ್ಕೆ ಬಂದಿತು. ಇವರುಗಳ ಕಾಲದಿಂದ 'ವ್ಯಕ್ತಿತ್ವ' ಎಂಬ ಪದದ ಅರ್ಥವನ್ನು ಸ್ಪಷ್ಟೀಕರಿಸಲು, ವ್ಯಾಖ್ಯಾನಿಸಲು ಪ್ರಯತ್ನಗಳು ನಡೆದಿವೆ. ವ್ಯಕ್ತಿತ್ವದ ಪರಿಕಲ್ಪನೆ ಅಮೂರ್ತವಾಗಿದ್ದು ಹಲವಾರು ಕಾರಕಾಂಶಗಳು ಮತ್ತು ಆಯಾಮಗಳನ್ನು ಹೊಂದಿರುವುದರಿಂದ ಅದರ ವ್ಯಾಖ್ಯೆ ಅಷ್ಟು ಸುಲಭವಲ್ಲ.

ಮೂಲತಃ 'ಪರ್ಸನಾಲಿಟಿ' ಎಂಬುದು ಲ್ಯಾಟಿನ್ ಭಾಷೆಯ 'ಪರ್ಸನಾ' (Persona) ಎಂಬ ಪದದಿಂದ ರೂಪುಗೊಂಡಿದ್ದು 'ಮುಖವಾಡ' ಅದರ ಅರ್ಥವಾಗಿದೆ. ಹೀಗೆ ವ್ಯಕ್ತಿತ್ವ ಎಂದರೆ ವೇದಿಕೆಯ ಮೇಲೆ ನಾಟಕಗಳಲ್ಲಿ ಅಭಿನಯಿಸುವ ಪಾತ್ರಧಾರಿಗಳು ಧರಿಸುತ್ತಿದ್ದ ಬಾಹ್ಯ ರೂಪವೆಂದೇ ಅರ್ಥವಿತ್ತು. ಆದರೆ ಈಗ ಇದರ ಅರ್ಥದ ವ್ಯಾಪ್ತಿ ವಿಶಾಲವಾಗಿದ್ದು ಅದು ನಿಜ ಸ್ವರೂಪವನ್ನು ಮರೆಮಾಚಿದ ಬಾಹ್ಯ ಆಕಾರಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ವ್ಯಕ್ತಿ ತನ್ನ ನಡೆನುಡಿ ಹಾಗೂ ಕ್ರಿಯೆಗಳ ಮೂಲಕ ವ್ಯಕ್ತಪಡಿಸುವ ಪೂರ್ಣ, ನೈಜ ವ್ಯಕ್ತಿತ್ವವೇ ಸ್ವರೂಪವಾಗಿದೆ. ಕೆಲವು ವ್ಯಾಖ್ಯೆಗಳನ್ನು ಅಧ್ಯಯನ ಮಾಡುವುದರಿಂದ ಈ ಪದದ ಸ್ಪಷ್ಟ ಅರಿವನ್ನು ಪಡೆಯಬಹುದು.

ವುಡ್‌ವರ್ತ್‌ರವರ ಪ್ರಕಾರ ವ್ಯಕ್ತಿತ್ವ ಎಂದರೆ "ಒಬ್ಬ ವ್ಯಕ್ತಿಯ ವರ್ತನೆಯ ಒಟ್ಟು ಗುಣಮಟ್ಟ".

"ವ್ಯಕ್ತಿತ್ವವು ಜೀವಿಯು ತನ್ನ ನರಮಂಡಲದ ಮಾಧ್ಯಮದ ಮೂಲಕ ಪರಿಸರದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದಕ್ಕಾಗಿ ಉದ್ದೀಪನಗಳಿಗೆ ತೋರುವ ಅನುಕ್ರಿಯೆಗಳನ್ನೊಳಗೊಂಡಿರುತ್ತದೆ."

– ವ್ಯಾಟ್ಸನ್



Scanned with OKEN Scanner

ಒಬ್ಬ ವ್ಯಕ್ತಿಯಲ್ಲಿ ಇತರರಿಗಿಂತ ಭಿನ್ನವಾಗಿ ಸಮನ್ವಯಗೊಂಡು ವ್ಯವಸ್ಥಿತವಾಗಿರುವ ಜ್ಞಾನಾತ್ಮಕ, ಸಂವೇಗಾತ್ಮಕ, ಚಲನಾತ್ಮಕ ಮತ್ತು ಶಾರೀರಿಕ ಗುಣಲಕ್ಷಣಗಳೇ ವ್ಯಕ್ತಿತ್ವ – ವಾರೆನ್.

ಇವೆಲ್ಲಕ್ಕಿಂತ ವ್ಯಾಪಕವಾದ ವ್ಯಾಖ್ಯೆಯನ್ನು ಆಲ್‌ಪೋರ್ಟ್‌ರವರು ನೀಡಿದ್ದಾರೆ. "ಒಬ್ಬ ವ್ಯಕ್ತಿ ತನ್ನ ಪರಿಸರದೊಂದಿಗೆ ಮಾಡಿಕೊಳ್ಳುವ ಅದ್ವಿತೀಯ ಹೊಂದಾಣಿಕೆಗಳನ್ನು ನಿರ್ಧರಿಸುವ ಮನೋದೈಹಿಕ ವ್ಯವಸ್ಥೆಗಳು ವ್ಯಕ್ತಿಯಲ್ಲಿ ಹೊಂದಿರುವ ಗತಿಶೀಲ ಸಂಘಟನೆಯೇ ವ್ಯಕ್ತಿತ್ವ."

ಮೇಲಿನ ವ್ಯಾಖ್ಯೆಗಳ ಸಹಾಯದಿಂದ ನಮಗೆ ತಿಳಿಯುವುದೇನೆಂದರೆ,

- ವ್ಯಕ್ತಿತ್ವವು ಗತಿಶೀಲವಾದುದೇ ವಿನಃ ಅನಮ್ಯವಾದುದಲ್ಲ.
- ವ್ಯಕ್ತಿತ್ವಕ್ಕೆ ತನ್ನದೇ ಆದ ರಚನೆ ಇದ್ದು ಶಾರೀರಿಕ, ಜ್ಞಾನಾತ್ಮಕ ಮತ್ತು ಸಂವೇಗಾತ್ಮಕ ಆಯಾಮಗಳನ್ನು ಹೊಂದಿದೆ.
- ವ್ಯಕ್ತಿತ್ವವು ಬದಲಾವಣೆ ಮತ್ತು ಹೊಂದಾಣಿಕೆಗಳ ಗತಿಶೀಲ ಪ್ರಕ್ರಿಯೆಯ ಫಲವಾಗಿದೆ.
- ಇಂತಹ ಬದಲಾವಣೆ ಮತ್ತು ಹೊಂದಾಣಿಕೆಯ ಪ್ರಕ್ರಿಯೆಯು ಶಾರೀರಿಕ, ಜ್ಞಾನಾತ್ಮಕ ಮತ್ತಿತರ ಆಂತರಿಕ ಕ್ರಿಯೆಗಳ ಪರಿಣಾಮವಾಗಿದೆ.

**ವ್ಯಕ್ತಿತ್ವ ವಿಕಾಸವನ್ನು ನಿರ್ಧರಿಸುವ ಅಂಶಗಳು.**

ವ್ಯಕ್ತಿತ್ವ ವಿಕಾಸವು ಗತಿಶೀಲ ಹಾಗೂ ನಿರಂತರ ಪ್ರಕ್ರಿಯೆ ಎಂಬುದನ್ನು ತಿಳಿದಿದ್ದೇವೆ. ವ್ಯಕ್ತಿತ್ವ ವಿಕಾಸವನ್ನು ಹಲವು ಅಂಶಗಳು ನಿರ್ಧರಿಸುತ್ತವೆ. ಈ ಅಂಶಗಳನ್ನು ಮುಖ್ಯವಾಗಿ ಎರಡು ವರ್ಗಗಳಾಗಿ ವಿಂಗಡಿಸಬಹುದು.

ಅ) ಜೈವಿಕ ಬ) ಪರಿಸರಾತ್ಮಕ

ಜೈವಿಕ ಅಂಶಗಳಲ್ಲಿ ವಂಶವಾಹೀ ಅಥವಾ ಅನುವಂಶೀಯತೆ, ಬಾಹ್ಯ ಮೈಕಟ್ಟು ಮತ್ತು ನಿರ್ನಾಳ ಗ್ರಂಥಿಗಳ ಕಾರ್ಯಗಳು ಸೇರಿವೆ. ಪರಿಸರಾತ್ಮಕ ಅಂಶಗಳಲ್ಲಿ ಕುಟುಂಬ, ನೆರೆಹೊರೆ, ಶಾಲೆ ಮತ್ತು ಸಂಸ್ಕೃತಿಗಳ ಪ್ರಭಾವಗಳು ಸೇರಿವೆ.

**ವಂಶವಾಹೀ ಅಥವಾ ಅನುವಂಶೀಯ ಅಂಶಗಳು:–** ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಕೇವಲ ಅನುವಂಶೀಯತೆ ಮಾತ್ರವೇ ನಿರ್ಧರಿಸುತ್ತದೆ ಎಂದು ದೃಢವಾಗಿ ನಂಬಿದ್ದ ಕಾಲವಿತ್ತು. ಅನುವಂಶೀಯತೆ ಎಂದರೆ ಪೋಷಕರ ಗುಣಾಣುಗಳ ಮೂಲಕ ಮಗುವಿಗೆ ವರ್ಗಾಯಿಸಲ್ಪಡುವ ಎಲ್ಲ ಗುಣಲಕ್ಷಣಗಳು ಎಂದರ್ಥ. ಇತ್ತೀಚಿನ ದಶಕಗಳಲ್ಲಿ ಅನುವಂಶೀಯತೆಯೊಂದೇ ವ್ಯಕ್ತಿತ್ವದ ಸ್ವರೂಪವನ್ನು ನಿರ್ಧರಿಸುವುದೆಂಬ ಪರಿಕಲ್ಪನೆಯಲ್ಲಿ ಅಥವಾ ಆಲೋಚನೆಯಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಅನುವಂಶೀಯತೆ ಒಬ್ಬ ವ್ಯಕ್ತಿಯ ವಿಶಿಷ್ಟ ಶಾರೀರಿಕ ಅಥವಾ ಭೌತಿಕ ಗುಣಲಕ್ಷಣಗಳನ್ನು ನಿರ್ಧರಿಸುತ್ತವೆ. ಆದರೆ ಇತರ ಸಾಮರ್ಥ್ಯಗಳು ಹಾಗೂ ಲಕ್ಷಣಗಳ ಮೇಲೆ ಬೇರೆ ಹಲವು ಅಂಶಗಳ ಪ್ರಭಾವ ಇರುತ್ತದೆ. ಮಾನವ ಶರೀರವು ನಮಗೆ ಅನುವಂಶೀಯತೆಯಿಂದಲೇ ಬಂದಿದೆ. ನಮ್ಮಲ್ಲಿರುವ ವಿಶಿಷ್ಟ ಶಾರೀರಿಕ ಸ್ವರೂಪಕ್ಕೆ ಅನುವಂಶೀಯತೆಯೇ ಕಾರಣವಾಗಿದೆ.



Scanned with OKEN Scanner

ಬಾಹ್ಯ ಮೈಕಟ್ಟು : ಇದು ಒಬ್ಬ ವ್ಯಕ್ತಿಯ ಎತ್ತರ, ತೂಕ, ಶರೀರದ ರಚನೆ, ಚರ್ಮದ ಬಣ್ಣ ಮುಂತಾದ ಬಾಹ್ಯ ಲಕ್ಷಣಗಳನ್ನು ಒಳಗೊಂಡಿದೆ. ವ್ಯಕ್ತಿತ್ವ ವಿಕಾಸದ ಮೇಲೆ ಇವೆಲ್ಲ ಲಕ್ಷಣಗಳು ಸ್ವಲ್ಪಮಟ್ಟಿಗೆ ಪ್ರಭಾವ ಬೀರುತ್ತವೆ. ಉದಾಹರಣೆಗೆ, ಉತ್ತಮ ಶಾರೀರಿಕ ಬೆಳವಣಿಗೆ ಇರುವ ಮಗುವಿನ ಸ್ವಯಂ ಪರಿಕಲ್ಪನೆಯೂ ಉತ್ತಮವಾಗಿರುತ್ತದೆ. ದೈಹಿಕವಾಗಿ ಬಲಶಾಲಿಯೂ, ಕ್ರಿಯಾಶೀಲನೂ, ಆರೋಗ್ಯವಂತವೂ ಆಗಿರುವ ಮಗು ಪರಿಸರಕ್ಕೆ ಉತ್ತಮವಾಗಿ ಹೊಂದಿಕೊಳ್ಳಬಲ್ಲದು. ಇಂತಹ ಮಗು ಸಾಮಾಜಿಕ ಒಪ್ಪಿಗೆಯನ್ನೂ ಸುಲಭವಾಗಿ ಪಡೆಯುತ್ತದೆ.

ರಾಸಾಯನಿಕ ಕ್ರಿಯೆಗಳ ಅಂಶಗಳು : ಇದು ನಮ್ಮ ದೇಹದಲ್ಲಿರುವ ವಿವಿಧ ಗ್ರಂಥಿಗಳ ಸ್ರವಿಸುವಿಕೆಗೆ ಸಂಬಂಧಿಸಿದೆ. ಗ್ರಂಥಿಗಳಲ್ಲಿ ನಿರ್ನಾಳ ಹಾಗೂ ನಾಳವಿರುವ ಗ್ರಂಥಿಗಳೆಂಬ ಎರಡು ವಿಧಗಳಿವೆ. ಜೊಲ್ಲುರಸದ, ಬೆವರಿನ, ಕಣ್ಣೀರಿನ ಗ್ರಂಥಿಗಳು ನಾಳಗಳ ಮೂಲಕ ದ್ರವ್ಯಗಳನ್ನು ಸ್ರವಿಸುತ್ತವೆ. ಸ್ರವಿಸುವಿಕೆಯ ಪ್ರಮಾಣವು ವ್ಯಕ್ತಿಯ ದೈಹಿಕ ಆರೋಗ್ಯವನ್ನು ನಿರ್ಧರಿಸುತ್ತದೆ.

ನಿರ್ನಾಳ ಅಥವಾ ಎಂಡೋಕ್ರೈನ್ ಗ್ರಂಥಿಗಳು ವ್ಯಕ್ತಿತ್ವ ವಿಕಾಸದ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತದೆ. ಈ ಗ್ರಂಥಿಗಳು ಹಾರ್ಮೋನುಗಳನ್ನು ನೇರವಾಗಿ ರಕ್ತದೊಳಕ್ಕೆ ಸ್ರವಿಸುತ್ತವೆ. ಥೈರಾಯ್ಡ್, ಪಿಟ್ಯೂಟರಿ ಮತ್ತು ಅಡ್ರಿನಲ್ ಮುಂತಾದ ನಿರ್ನಾಳ ಗ್ರಂಥಿಗಳು ವ್ಯಕ್ತಿಯ ದೈಹಿಕ ಬೆಳವಣಿಗೆ, ರಾಸಾಯನಿಕ ಕ್ರಿಯೆಗಳು ಮತ್ತು ಸಂವೇದನೆಗಳ ಮಟ್ಟವನ್ನು ನಿರ್ಧರಿಸುತ್ತವೆ. ಅತಿಯಾದ ಸ್ರವಿಸುವಿಕೆಯಾಗಲಿ, ಅತಿ ಕಡಿಮೆ ಸ್ರವಿಸುವಿಕೆಯಾಗಲಿ ವ್ಯಕ್ತಿತ್ವದ ವಿಕಾಸದಲ್ಲಿ ವೈಪರೀತ್ಯಗಳನ್ನು ಉಂಟು ಮಾಡುತ್ತವೆ.

ಪರಿಸರಾತ್ಮಕ ಅಂಶಗಳು : ಪ್ರತಿ ಮಗುವೂ ಸಾಮಾಜಿಕ ಸಂವೇದನಾತ್ಮಕ ಪರಿಸರದಲ್ಲಿ ಹುಟ್ಟಿ ಬೆಳೆಯುತ್ತದೆ. ಮಗುವು ತನ್ನ ಪರಿಸರದೊಂದಿಗೆ ವ್ಯವಹರಿಸುವುದು ಹಾಗೂ ಪ್ರತಿಕ್ರಿಯೆಗಳ ಪರಿಣಾಮವಾಗಿ ಬೆಳೆದು ದೊಡ್ಡದಾಗುತ್ತದೆ. ಈ ಪ್ರಕ್ರಿಯೆಯಲ್ಲಿ, ಮಗು ಅಪೇಕ್ಷಿತ ಪಾತ್ರ ನಿರ್ವಹಿಸಲು ಕಲಿಯುತ್ತದೆ. ಪ್ರಮಾಣಕಗಳನ್ನು ಅನುಸರಿಸುತ್ತದೆ ಹಾಗೂ ಪರಿಸರದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ. ಸಾಮಾಜಿಕ ಸಂಹಿತೆಯನ್ನು ಅನುಸರಿಸಬೇಕಾದ ಅಗತ್ಯತೆಯನ್ನು ಮನಗಾಣುತ್ತದೆ.

ಇವೆಲ್ಲವೂ ಸಾಧ್ಯವಾಗಲು ಸಮಾಜದ ಮೂಲ ಘಟಕವಾದ ಕುಟುಂಬವೇ ಕಾರಣವಾಗಿದೆ. ಪೋಷಕರ ಸ್ವಭಾವ, ಮಗುವಿನ ಜನನ ಅನುಕ್ರಮ ಸ್ಥಾನ (ಕುಟುಂಬದಲ್ಲಿ ಎಷ್ಟನೆಯ ಮಗು) ಸಾಮಾಜಿಕ ಆರ್ಥಿಕ ಮಟ್ಟ, ಕೌಟುಂಬಿಕ ಸಂಬಂಧಗಳು, ಇವೇ ಮುಂತಾದ ಅಂಶಗಳು ಮಗುವಿನ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಪೋಷಕರು ಸರ್ವಾಧಿಕಾರೀ ಮನೋಭಾವದವರಾಗಿದ್ದರೆ ಮಗುವು ಆತ್ಮವಿಶ್ವಾಸದ ಕೊರತೆಯಿಂದ ದೀನ ಭಾವ ಬೆಳೆಸಿಕೊಳ್ಳುತ್ತದೆ. ಬದಲಾಗಿ, ಕುಟುಂಬದ ಸದಸ್ಯರಲ್ಲಿ ಸೌಹಾರ್ದಯುತ ಪ್ರೀತಿಯಿಂದ ಕೂಡಿದ ಸಂಬಂಧವಿದ್ದಲ್ಲಿ, ಅದರಲ್ಲಿಯೂ ಪೋಷಕರು ಮತ್ತು ಮಗುವಿನ ನಡುವೆ ಸಂಬಂಧ ಉತ್ತಮವಾಗಿದ್ದರೆ, ಸಂತೋಷಕರ ಆರೋಗ್ಯಕರ ವ್ಯಕ್ತಿತ್ವ ವಿಕಾಸವಾಗುತ್ತದೆ. ಒಡೆದ ಕುಟುಂಬದಿಂದ ಬರುವ ಮಗು ಅಥವಾ ಮಗುವಿನ ಮುಂದೆ ವಾದ ಮಾಡುವ, ಜಗಳವಾಡುವ ಪೋಷಕರಿರುವ ಕುಟುಂಬವಾದರೆ ಮಗು ದುಃಖಿಯೂ, ಸಂವೇಗಾತ್ಮಕವಾಗಿ ಅಪ ಸಮಾಯೋಜಿತವೂ ಆಗಿರುತ್ತದೆ. ಉತ್ತಮ ಹೊಂದಾಣಿಕೆಯುಳ್ಳ ಸಂತೋಷದಿಂದ ಕೂಡಿದ ಕುಟುಂಬದಲ್ಲಿ ಪೋಷಕರು ಪ್ರಜಾಸತ್ತಾತ್ಮಕ ಮನೋಭಾವ ಉಳ್ಳವರೂ, ವಾತ್ಸಲ್ಯದಿಂದ ಕೂಡಿದವರೂ, ಕಾಳಜಿಯುಳ್ಳವರೂ ಆಗಿದ್ದರೆ ಉತ್ತಮ ಹೊಂದಾಣಿಕೆಯುಳ್ಳ, ಸಂತೋಷದಿಂದ ಕೂಡಿದ ವ್ಯಕ್ತಿತ್ವ ವಿಕಾಸ ಮಾಡಬಹುದು. ಮಗು ದೊಡ್ಡದಾದಂತೆ, ನೆರೆಹೊರೆಯವರ, ಓರಗೆಯವರ, ಸಮುದಾಯದ ಹಾಗೂ ವಿಶಾಲ ಸಮಾಜದ ಪ್ರಭಾವಕ್ಕೊಳಗಾಗುವುದು. ಸಾಮಾಜಿಕ ನಿಯಮಾವಳಿಗಳು (ಪ್ರಮಾಣಕಗಳು), ನಿಷೇಧಗಳು, ಸಂಸ್ಕೃತಿ ಮತ್ತು ಪರಂಪರೆಗಳು ತಮ್ಮ ಪ್ರಭಾವ ಬೀರುತ್ತವೆ.



Scanned with OKEN Scanner

ಮಗು ಸಮಾಜದ ರೂಢಿ ರೀತಿ, ಪರಂಪರೆಗಳನ್ನು ಉಲ್ಲಂಘಿಸಿದರೆ ಹೀಯಾಳಿಕೆ, ದಂಡನೆಗಳಿಗೆ ಗುರಿಯಾಗಬೇಕಾಗುವುದು. ಯಾವ ವ್ಯಕ್ತಿಯೂ ಗುಂಪಿನಿಂದ ಹೊರಹಾಕಲ್ಪಡುವುದನ್ನಾಗಲಿ, ಬೇರೆಯಾಗಿದ್ದು ಒಬ್ಬಂಟಿಯಾಗದಿರುವುದನ್ನಾಗಲಿ ಇಚ್ಛಿಸುವುದಿಲ್ಲ. ಆದುದರಿಂದ ಪರಿಸರ ಹಾಗೂ ಸಮಾಜಕ್ಕೆ ಹೊಂದಾಣಿಕೆ ಮಾಡಿಕೊಳ್ಳುವ, ನಿಯಮಾವಳಿಗಳಿಗೆ ಒಳಪಡುವ ವ್ಯಕ್ತಿತ್ವ ವಿಕಾಸವಾಗುವುದು.

ಮೇಲೆ ಹೇಳಿದ ಎಲ್ಲಾ ಕಾರಕಗಳೂ, ಘಟಕಗಳೂ ಸಾಮರಸ್ಯದಿಂದ ಕೆಲಸ ಮಾಡಿದಾಗ ಹೊಂದಾಣಿಕೆಯುಳ್ಳ, ಉತ್ತಮ ಮಟ್ಟದಲ್ಲಿ ಸಮಾಯೋಜಿತ ವ್ಯಕ್ತಿತ್ವ ವಿಕಾಸವಾಗುತ್ತದೆ.

**ವ್ಯಕ್ತಿತ್ವದ ಮಾಪನ (ಪರೀಕ್ಷೆ) :**

ಮಕ್ಕಳ ಸರ್ವತೋಮುಖ ಸಮಗ್ರ ವ್ಯಕ್ತಿತ್ವದ ವಿಕಾಸದಲ್ಲಿ ಶಿಕ್ಷಕರು ಮತ್ತು ಶಿಕ್ಷಣ ಅತಿ ಮುಖ್ಯ ಪಾತ್ರ ವಹಿಸುತ್ತಾರೆ. ಶಿಕ್ಷಕರು ಮಕ್ಕಳ ವರ್ತನೆಗಳ ವಿನ್ಯಾಸಗಳನ್ನು, ಸ್ವರೂಪವನ್ನು ಮಾರ್ಪಡಿಸಿ, ವ್ಯಕ್ತಿತ್ವ ವಿಕಾಸಕ್ಕೆ ಸಹಾಯ ಮಾಡುವರಲ್ಲದೆ ಸಮಾಜದ ಅಭಿವೃದ್ಧಿಗೂ ನೆರವಾಗುವರು. ಹೀಗೆ ಶಿಕ್ಷಕರು ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದರಿಂದ ತಮ್ಮ ವಿದ್ಯಾರ್ಥಿಗಳ ವ್ಯಕ್ತಿತ್ವದ ಪರಿಪೂರ್ಣತೆಯನ್ನು, ಅಪೇಕ್ಷಣೀಯತೆಯನ್ನು ತಿಳಿಯಲು ಪರೀಕ್ಷಿಸುವುದು ಹೇಗೆಂಬುದನ್ನು ತಿಳಿದಿರಬೇಕು.

ವ್ಯಕ್ತಿತ್ವ ಪರೀಕ್ಷಣಗಳು ಒಬ್ಬ ವ್ಯಕ್ತಿಯ ವ್ಯಕ್ತಿತ್ವದ ಸ್ವರೂಪ ಮತ್ತು ಗುಣಲಕ್ಷಣಗಳನ್ನು ತಿಳಿಯಲು ಸಹಾಯ ಮಾಡುತ್ತವೆ. ವ್ಯಕ್ತಿತ್ವ ಪರೀಕ್ಷಣದ ಉದ್ದೇಶಗಳಾವುವೆಂದರೆ, ವ್ಯಕ್ತಿತ್ವವನ್ನು

1) ಗ್ರಹಿಸುವುದು (ಅರಿಯುವುದು)

2) ಭವಿಷ್ಯಿಸುವುದು (Predict)

3) ಮಾರ್ಪಡಿಸುವುದೇ ಆಗಿದೆ.

ವ್ಯಕ್ತಿತ್ವ ಪರೀಕ್ಷೆಗಳನ್ನು ಕೆಳಕಂಡಂತೆ ಮುಖ್ಯವಾಗಿ ಮೂರು ವರ್ಗಗಳಾಗಿ ವಿಂಗಡಿಸಬಹುದು.

**ವ್ಯಕ್ತಿತ್ವ ಪರೀಕ್ಷೆಗಳು**

**ವ್ಯಕ್ತಿನಿಷ್ಠ**

1. ಆತ್ಮ ಚರಿತ್ರೆ
2. ವ್ಯಕ್ತಿ ಅಧ್ಯಯನ
3. ಸಂದರ್ಶನ
4. ತಪಶೀಲು ಪಟ್ಟಿಗಳು

**ವಸ್ತುನಿಷ್ಠ**

i. ವೀಕ್ಷಣೆ
ii. ಸಾಂದರ್ಭಿಕ ಪರೀಕ್ಷೆಗಳು
iii. 'ಕ್ಯೂ' ವಿಂಗಡಣೆ ತಂತ್ರಗಳು
iv. ದರ್ಜಾ ಮಾಪನಿಗಳು

**ಪ್ರಕ್ಷೇಪಣ**

1. ರೋರ್‌ಷಾಕ್‌ನ ಇಂಕ್ ಬ್ಲಾಟ್ ಪರೀಕ್ಷೆ
2. ಥಿಮ್ಯಾಟಿಕ್ ಅಪ್ಪರ್‌ಸೆಪ್ಷನ್ ಪರೀಕ್ಷೆ
3. ವಾಕ್ಯಪೂರ್ಣಗೊಳಿಸುವುದು
4. ನಾಟಕ ತಂತ್ರ
5. ಪಾತ್ರಾಭಿನಯ
6. ಚಿತ್ರ ಬಿಡಿಸುವುದು



Scanned with OKEN Scanner

ಪ್ರತಿ ವರ್ಗಕ್ಕೆ ಸೇರಿದ ಕನಿಷ್ಠ ಒಂದು ಪರೀಕ್ಷೆಯಂತೆ ಆಯ್ದುಕೊಂಡು ಕೆಲವು ವ್ಯಕ್ತಿತ್ವ ಪರೀಕ್ಷೆಗಳನ್ನು ವಿವರಿಸಲಾಗಿದೆ.

**ವ್ಯಕ್ತಿತ್ವ ತಪಶೀಲು ಪಟ್ಟಿಗಳು :** ಇವು ಸ್ವಯಂ ದರ್ಜೆ ಮಾಪನೀಕಾದ ಪ್ರಶ್ನಾವಳಿಗಳಾಗಿದ್ದು ಕೇವಲ ಬಾಹ್ಯ ವರ್ತನೆಗಳನ್ನು ಮಾತ್ರವಲ್ಲದೆ ಅಂತರಾವಲೋಕನದಿಂದ ತಿಳಿಯುವ ವ್ಯಕ್ತಿ ತನ್ನ ಬಗ್ಗೆ ಹೊಂದಿರುವ ಭಾವನೆಗಳು, ಇತರರ ಬಗ್ಗೆ, ತನ್ನ ಪರಿಸರದ ಬಗ್ಗೆ ಹೊಂದಿರುವ ಭಾವನೆಗಳಿಗೆ ಸಂಬಂಧಿಸಿರುತ್ತವೆ.

ವ್ಯಕ್ತಿತ್ವ ತಪಶೀಲು ಪಟ್ಟಿ ಪ್ರಮಾಣೀಕೃತ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪರೀಕ್ಷೆಗೊಳಗಾಗುವ ವ್ಯಕ್ತಿ ಹೌದು ಅಥವಾ ಇಲ್ಲ ಅಥವಾ ಆಗಾಗ ಅಥವಾ ಕೆಲವು ವೇಳೆ ಅಥವಾ ಯಾವಾಗಲೂ ಇಲ್ಲ ಎಂದಾಗಲಿ, ಅಥವಾ ಐದು ಅಂಶಗಳ ಮಾಪನದಲ್ಲಿಯಾಗಲಿ ತನ್ನ ಭಾವನೆಗಳು, ಇಚ್ಛೆಗಳು, ಆಲೋಚನೆಗಳು, ಇತರರೊಂದಿಗಿರುವ ಸಂಬಂಧವನ್ನು ವಿವರಿಸಬೇಕಾಗುತ್ತದೆ.

ಬೆಲ್‌ನ ಹೊಂದಾಣಿಕೆಯ ತಪಶೀಲು ಪಟ್ಟಿ ಚಿರಪರಿಚಿತವಾದ ಮತ್ತು ವ್ಯಾಪಕವಾಗಿ ಬಳಸಲ್ಪಡುತ್ತಿರುವ ಪರೀಕ್ಷಣವಾಗಿದೆ. ಇದರಲ್ಲಿರುವ ಪ್ರಶ್ನೆಗಳಿಗೆ ಹೌದು/ಇಲ್ಲ ಅಥವಾ ಎಂಬ ರೀತಿಯಲ್ಲಿ ಉತ್ತರಿಸಬೇಕಾಗಿದೆ.

ಇದು ನಾಲ್ಕು ಕ್ಷೇತ್ರಗಳಲ್ಲಿ ಎಂದರೆ ಕುಟುಂಬ, ಆರೋಗ್ಯ, ಸಾಮಾಜಿಕ ಮತ್ತು ಸಂವೇಗಾತ್ಮಕ ವ್ಯಕ್ತಿತ್ವದ ಹೊಂದಾಣಿಕೆಯನ್ನು ಅಧ್ಯಯನ ಮಾಡುವ ಗುರಿ ಹೊಂದಿದೆ. ಪರೀಕ್ಷೆ ತೆಗೆದುಕೊಳ್ಳುವ ವ್ಯಕ್ತಿ 'ಹೌದು' 'ಇಲ್ಲ' 'ಅಥವಾ'? ಇವುಗಳಲ್ಲಿ ಯಾವುದಾದರೊಂದರ ಸುತ್ತ ವೃತ್ತ ಹಾಕುವುದರ ಮೂಲಕ ತನ್ನ ಉತ್ತರಗಳನ್ನು ಸೂಚಿಸಬೇಕು. ಸರಿಯುತ್ತರಗಳು, ತಪ್ಪು ಉತ್ತರಗಳು ಎಂದೇನೂ ಇರುವುದಿಲ್ಲ ಅಲ್ಲದೆ ಕಾಲ ಮಿತಿಯೂ ಇರುವುದಿಲ್ಲ. ಈ ಪರೀಕ್ಷಣದಲ್ಲಿರುವ ಪ್ರಶ್ನೆಗಳು ಹೀಗಿರುತ್ತವೆ.

ನೀವು ನಾಚಿಕೆಯ ಪ್ರವೃತ್ತಿಯವರೆ?

ನೀವು ಆಗಾಗ್ಗೆ ಹಗಲುಗನಸು ಕಾಣುವಿರಾ?

ನೀವು ಮಾಡುವ ಕೆಲಸದ ಬಗ್ಗೆ ಪಶ್ಚಾತ್ತಾಪ ಪಡುವಿರಾ?

ಇತ್ಯಾದಿ.

ಮಿನ್ನೆಸೋಟ ಮಲ್ಟಿಫೇಸಿಕ್ ವ್ಯಕ್ತಿತ್ವ ತಪಶೀಲುಪಟ್ಟಿ, ಐಸೆಂಕ್‌ನ ವ್ಯಕ್ತಿತ್ವ ತಪಶೀಲು ಪಟ್ಟಿ ಇವು ಇತರ ಜನಪ್ರಿಯ ತಪಶೀಲು ಪಟ್ಟಿಗಳಾಗಿವೆ.

ವ್ಯಕ್ತಿತ್ವ ತಪಶೀಲು ಪಟ್ಟಿಗಳ ಇತಿಮಿತಿಗಳು ಹೀಗಿವೆ.

(ಅ) ಒಬ್ಬನು ತಾನು ಉತ್ತಮ ಸಮಾಯೋಜಿತ ವ್ಯಕ್ತಿ ಎಂದು ತೋರಿಸಿಕೊಳ್ಳುವುದಕ್ಕಾಗಿ ಸುಳ್ಳು ಉತ್ತರಗಳನ್ನು ನೀಡಬಹುದು.

(ಬ) ಒಬ್ಬನು ಅತ್ಯಂತ ಪ್ರಾಮಾಣಿಕನಾಗಿರಬಹುದು. ಆದರೆ ತನ್ನ ಬಗ್ಗೆ ವಸ್ತುನಿಷ್ಠವಾಗಿ ಪ್ರತಿಕ್ರಿಯೆಗಳನ್ನು ನೀಡುವುದಕ್ಕೆ ಅಗತ್ಯವಾದ ಒಳನೋಟ ಇಲ್ಲದಿರಬಹುದು.



Scanned with OKEN Scanner

(ಕ) ಪ್ರತಿಕ್ರಿಯೆಗಳು ಅದರಲ್ಲಿಯೂ ಆಗಾಗ್ಗೆ ಪದೇ ಪದೇ ಕೆಲವುವೇಳೆ ಎಲ್ಲರಿಗೂ ಒಂದೇ ಅರ್ಥ ಕೊಡದಿರಬಹುದು. ಇದರಿಂದಾಗಿ ತಪಶೀಲು ಪಟ್ಟಿಗಳ ಸಮಂಜಸತೆ ಸೀಮಿತವಾಗಿರುತ್ತದೆ.

ಆದರೂ, ತಪಶೀಲು ಪಟ್ಟಿಗಳನ್ನು ಪೂರ್ಣವಾಗಿ ಕೈಬಿಡಬೇಕಾಗಿಲ್ಲ. ಅವು ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವದ ಲಕ್ಷಣಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಿಕೊಳ್ಳುವಂತೆ ಪ್ರಚೋದಿಸಲು ಉಪಯುಕ್ತವಾಗಿದೆ ಸಮಾಯೋಜನೆಯ ಕೊರತೆ ಇದ್ದು ಮಾರ್ಗದರ್ಶನದ ಅಗತ್ಯವುಳ್ಳ ಮಕ್ಕಳನ್ನು ಗುರ್ತಿಸಲೂ ಸಹ ಅವು ಉಪಯುಕ್ತವಾಗಿವೆ.

**ದರ್ಜಾ ಮಾಪಕಗಳು :**

ವ್ಯಕ್ತಿತ್ವದ ಕೆಲವು ಲಕ್ಷಣಗಳನ್ನು ಅಥವಾ ಮನೋಭಾವಗಳನ್ನು ಕುರಿತು ಮಾಡಿದ ವೀಕ್ಷಣೆಗಳನ್ನು ಅಥವಾ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಬಳಸುವ ಸಾಧನವೇ ದರ್ಜಾಮಾಪನಿ.

ಇದು ಒಂದು ವಸ್ತುನಿಷ್ಠ ಸಾಧನವಾಗಿದೆ. ಇದನ್ನು ಬಳಸಿ ಶಿಕ್ಷಕರು ಅಥವಾ ಮಾರ್ಗದರ್ಶಕರು ವ್ಯಕ್ತಿಗಳ ಲಕ್ಷಣಗಳು ಅಥವಾ ಮನೋಭಾವಗಳ ದರ್ಜೆ ನಿರ್ಧರಿಸಬಹುದು. ದರ್ಜೆಯನ್ನು ಮೂರು ಅಂಶಗಳ/ಐದು ಅಂಶಗಳ/ಏಳು ಅಂಶಗಳ ಪಟ್ಟಿಯ ಮೇಲೆ ಮಾಪನ ಮಾಡಬಹುದು. ಒಂದು ದರ್ಜಾಮಾಪನದಲ್ಲಿ ವ್ಯಕ್ತಿತ್ವದ ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ಲಕ್ಷಣಗಳನ್ನು ಎಡಭಾಗದಲ್ಲಿ ಪಟ್ಟಿ ಮಾಡಿದ್ದು, ಬಲಭಾಗದಲ್ಲಿ ದರ್ಜೆಗಳನ್ನು ಪಟ್ಟಿ ಮಾಡಲಾಗುತ್ತದೆ.

**ಉದಾಹರಣೆಗೆ**

(ಅ) ಐದು ಅಂಶಗಳ ದರ್ಜಾಮಾಪಕ

ನಿರ್ಣಯ ಮಾಡುವಾಗ ಹಠಾತ್ತನೆ ವರ್ತಿಸುವನೆ ಅಥವಾ ಎಚ್ಚರಿಕೆಯಿಂದಿರುವನೇ?

| 1 | 2 | 3 | 4 | 5 |
|---|---|---|---|---|
| ಯಾವಾಗಲೂ ಆಗಿಂದಾಗಲೇ ಪೂರ್ವ ವಿಚಾರವಿಲ್ಲದೇ ವರ್ತಿಸುತ್ತಾನೆ | ಯಾವಾಗಲೂ ಕ್ಷಿಪ್ರವಾಗಿ ನಿರ್ಣಯಿಸುವನು | ಮಿತವಾದ ಚಿಂತನೆ ಮಾಡುತ್ತಾನೆ. | ಎಚ್ಚರಿಕೆಯಿಂದ ಯೋಚಿಸಿ ಮಾಡಿದ ವಿವೇಚನೆಯಿಂದ ಕೂಡಿದ ನಿರ್ಣಯ | ತೀವ್ರ ಹಿಂಜರಿತ ಎಚ್ಚರಿಕೆಯಿಂದ ಪರಿಶೀಲಿಸಿದ ನಂತರವೇ ಕೆಲಸ ಮಾಡುತ್ತಾನೆ. |

(ಬ) ಎಡ್ವರ್ಡ್ ಕೆ. ಸ್ಟ್ರಾಂಗ್‌ರವರ ವೈಯಕ್ತಿಕ ದರ್ಜಾ ನಮೂನೆ

ಅವನ ನಡವಳಿಕೆ ಮತ್ತು ಬಾಹ್ಯ ಚಹರೆಗಳು ಇತರರ ಮೇಲೆ ಹೇಗೆ ಪ್ರಭಾವ ಬೀರುತ್ತವೆ?

| | | | | | |
|---|---|---|---|---|---|
| ಇತರರು ದೂರವಿರಿಸುತ್ತಾರೆ | ಇತರರು ಸ್ವೀಕರಿಸಿಕೊಳ್ಳುವರು | ಇತರರು ಗಮನಿಸುವುದೇ ಇಲ್ಲ | ಇತರರು ಬಹಳ ಇಷ್ಟಪಡುತ್ತಾರೆ | ಇತರರು ಅರಸುತ್ತಾರೆ | ವೀಕ್ಷಿಸಲು ಅವಕಾಶವಿಲ್ಲ |

ಒಂದು ಉತ್ತಮ ದರ್ಜಾ ಮಾಪನಿ ಕೆಳಕಂಡ ಗುಣಲಕ್ಷಣಗಳನ್ನು ಹೊಂದಿರಬೇಕು.

i) ವ್ಯಕ್ತಿತ್ವದ ಗುಣಲಕ್ಷಣಗಳು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿರಬೇಕು.

ii) ಗುಣಲಕ್ಷಣಗಳು ಸುಲಭವಾಗಿ ವೀಕ್ಷಿಸುವಂತಿರಬೇಕು.

iii) ಗುಣಲಕ್ಷಣದ ಶ್ರೇಣಿಗಳನ್ನು ಸ್ಪಷ್ಟವಾಗಿ ನಿರೂಪಿಸಿರಬೇಕು.

ವಿವಿಧ ಲಕ್ಷಣಗಳನ್ನು ದರ್ಜೆಗಳನ್ನು ಪಡೆದ ನಂತರ ದತ್ತಾಂಶಗಳನ್ನು ವ್ಯಕ್ತಿತ್ವ ಚಿತ್ರ (Profile) ದ ರೂಪದಲ್ಲಿ ವ್ಯಕ್ತಪಡಿಸಬೇಕು.

ದರ್ಜಾಮಾಪನಿಗಳ ಕೆಲವು ಪ್ರಯೋಜನಗಳಿವೆ.

i) ತಪಶೀಲು ಪಟ್ಟಿಗಳಿಗಿಂತ ಹೆಚ್ಚು ವಸ್ತುನಿಷ್ಠವಾಗಿವೆ.

ii) ವ್ಯಕ್ತಿತ್ವದ ಲಕ್ಷಣಗಳ ವಿಶ್ಲೇಷಣಾತ್ಮಕ ತೀರ್ಪುಸಾಧ್ಯ.

iii) ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳ ಗುಣಲಕ್ಷಣಗಳ ಹೋಲಿಕೆ ಮಾಡಲು ಸಹಾಯಕವಾಗಿವೆ.

**ದರ್ಜಾಮಾಪನಿಗಳ ಇತಿಮಿತಿಗಳು ಹೀಗಿವೆ.**

i) ದರ್ಜಾ ಮಾಪನ ಮಾಡುವವರ ಪೂರ್ವಾಗ್ರಹ ಅಥವಾ ಪಕ್ಷಪಾತವು ಹೆಚ್ಚಿನ ವ್ಯಕ್ತಿ ನಿಷ್ಠತೆಯನ್ನುಂಟು ಮಾಡಬಹುದು.

ii) ಮಾಪನ ಮಾಡುವ ವ್ಯಕ್ತಿ ಪರೀಕ್ಷಾರ್ಥಿಯಲ್ಲಿ ಒಂದು ಒಳ್ಳೆಯ ಲಕ್ಷಣವನ್ನು ಕಂಡಾಗ ಇತರ ಲಕ್ಷಣ ಗಳಲ್ಲಿಯೂ ಉನ್ನತ ದರ್ಜೆ ನೀಡುವ ಸಾಧ್ಯತೆ ಇದೆ. ಇದನ್ನು "ಪ್ರಭಾವಳಿ ಪರಿಣಾಮ' ಎನ್ನಬಹುದು.

iii) ಔದಾರ್ಯ ಅಥವಾ ನಿಷ್ಠುರತೆಯ ಕಾರಣದಿಂದಾಗಿ ತಪ್ಪುಗಳಾಗಬಹುದು.

**ಪ್ರಕ್ಷೇಪಣಾ ತಂತ್ರಗಳು :**

ಸಮೀಕರಿಸಿಕೊಳ್ಳುವುದರ ಮೂಲಕ ತನ್ನ ವ್ಯಕ್ತಿತ್ವವನ್ನು ಬಹಿರಂಗ ಪಡಿಸುವ ತಂತ್ರವನ್ನು ಪ್ರಕ್ಷೇಪಣಾ ತಂತ್ರವೆನ್ನುವರು. ಒಬ್ಬನು ತನ್ನನ್ನು ಒಂದು ಸನ್ನಿವೇಶದೊಂದಿಗೆ, ವಸ್ತುವಿನೊಂದಿಗೆ ಅಥವಾ ತನ್ನ ಮುಂದೆ ಬಂದ ವ್ಯಕ್ತಿಗಳೊಂದಿಗೆ ಸಮೀಕರಿಸಿಕೊಂಡು ತನ್ನ ಮನಸ್ಸಿನಾಳದ ಕ್ರಿಯೆಗಳಿಗೆ ಅಭಿವ್ಯಕ್ತಿ ನೀಡುತ್ತಾನೆ.

ವ್ಯಕ್ತಿತ್ವ ಮಾಪನಕ್ಕಾಗಿ ಬಳಸುವ ಕೆಲವು ಮುಖ್ಯ ಪ್ರಕ್ಷೇಪಣಾ ತಂತ್ರಗಳನ್ನು ಈ ಕೆಳಗೆ ವಿವರಿಸಲಾಗಿದೆ.

1. ಪದ ಸಂಯೋಜನೆ ಪರೀಕ್ಷೆ
2. ವಾಕ್ಯ ಪೂರ್ಣಗೊಳಿಸುವ ಪರೀಕ್ಷೆ
3. ರೋರ್ಷಾಕ್ ಮಸಿ ಗುರುತು ಪರೀಕ್ಷೆ
4. ಥೆಮಾಟಿಕ್ ಅಪ್ಪರ್ಸೆಪ್ಷನ್ ಪರೀಕ್ಷೆ

ಮೇಲಿನ ಪ್ರತಿಯೊಂದು ಪರೀಕ್ಷಣದ ಸಂಕ್ಷಿಪ್ತ ವಿವರ ತಿಳಿಯೋಣ.



Scanned with OKEN Scanner

ಪದ ಸಂಯೋಜನೆ ಪರೀಕ್ಷೆ : ಈ ಪರೀಕ್ಷೆಯಲ್ಲಿ ಹಲವು ಪದಗಳ ಪಟ್ಟಿ ಇರುತ್ತದೆ. ಪರೀಕ್ಷಾರ್ಥಿಗೆ ಒಂದಾದ ನಂತರ ಒಂದರಂತೆ ಈ ಪದಗಳನ್ನು ಪ್ರದರ್ಶಿಸಲಾಗುವುದು. ಒಂದು ಪದವನ್ನು ನೋಡಿದ ತಕ್ಷಣ ಅವನ ಮನಸ್ಸಿಗೆ ಬರುವ ಮೊದಲ ಸಂಬಂಧಿತ ಪದವನ್ನು ಹೇಳಬೇಕೆಂದು ನಿರೀಕ್ಷಿಸಲಾಗುವುದು. 1910ರಲ್ಲಿ ಕೆಂಟ್ ಮತ್ತು ರೋಸನಾಫ್‌ರವರು ಇಂತಹ ಪರೀಕ್ಷೆಯನ್ನು ಬಳಸಿದರು. ಅದೇ ವರ್ಷದಲ್ಲಿ ಕಾರ್ಲ್‌ಯುಂಗ್‌ರವರು ಸಂಯೋಜನಾ ವಿಧಾನವನ್ನು ಪ್ರಕಟಿಸಿದರು.

ಈ ವಿಧಾನದ ವಿಶಿಷ್ಟ ಗುಣ ಲಕ್ಷಣವೆಂದರೆ ಇದಕ್ಕೆ ಯಾವ ಉಪಕರಣವೂ ಬೇಕಿಲ್ಲ. ಕೇವಲ ಪದಗಳ ಒಂದು ಪಟ್ಟಿ, ಬರೆಯುವ ಸಾಧನಗಳು ಮತ್ತು ಬೇಕಾದಾಗ ನಿಲ್ಲಿಸಬಹುದಾದ ಒಂದು ಚಿಕ್ಕ ಗಡಿಯಾರ (ಸಾಧ್ಯವಾದರೆ) ಸಾಕಾಗುತ್ತದೆ. ಸಂವೇಗಾತ್ಮಕ ಒಳತೋಟಗಳ ಅಥವಾ ಜಟಿಲಭಾವನೆ (Complexes) ಗಳ ಕ್ಷೇತ್ರಗಳನ್ನು ಕಂಡುಹಿಡಿಯಲು ಈ ಪರೀಕ್ಷೆಯನ್ನು ಬಳಸಲಾಗುತ್ತದೆ.

ಪರೀಕ್ಷಾರ್ಥಿಯ ವ್ಯಕ್ತಿತ್ವದ ಅರ್ಥ ವಿವರಣೆಗೆ

1) ಪ್ರತಿಕ್ರಿಯೆಯಾಗಿ ನೀಡಿದ ಪದ

2) ಉತ್ತರಿಸಲು ತೆಗೆದುಕೊಂಡ ಸಮಯ ಇವು ಆಧಾರವಾಗಿವೆ.

ಅಸಾಮಾನ್ಯ ಪ್ರತಿಕ್ರಿಯೆಗಳು ಅಹಿತಕರ ಅನುಭವಗಳನ್ನು ಸೂಚಿಸುತ್ತವೆ. ಪ್ರತಿಕ್ರಿಯೆ ತೋರಿಸದಿರುವುದು, ಅಥವಾ ಅದಕ್ಕಾಗಿ ಹೆಚ್ಚು ಸಮಯ ತೆಗೆದುಕೊಳ್ಳುವುದು ವ್ಯಕ್ತಿಯಲ್ಲಿರುವ ಸಂವೇಗಾತ್ಮಕ ತಡೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿವೆ. ಪದ ಸಂಯೋಜನೆ ಪರೀಕ್ಷೆಯು ಆಳವಾಗಿ ರೂಪಗೊಂಡಿರುವ ವ್ಯಕ್ತಿತ್ವ ಸಂರಚನೆಯನ್ನು ಸೂಚಿಸುತ್ತದೆ.

ವಾಕ್ಯ ಪೂರ್ಣಗೊಳಿಸುವ ಪರೀಕ್ಷೆ. ಈ ಪರೀಕ್ಷೆಯ ವಾಕ್ಯದ ಮೊದಲರ್ಧವನ್ನು ಒಳಗೊಂಡಿದ್ದು, ಪರೀಕ್ಷಾರ್ಥಿಯು ಅದನ್ನು ಪೂರ್ಣಗೊಳಿಸುವಂತೆ ನಿರೀಕ್ಷಿಸುತ್ತದೆ ಉದಾಹರಣೆಗೆ,

1. ನಮ್ಮ ತಂದೆಯು ....

2. ಅತ್ಯಂತ ಸುಖದಾಯಕ ಸಮಯ ....

3. ನನ್ನನ್ನು ಕೆರಳಿಸುವುದು ಯಾವುದೆಂದರೆ ....

ಪರೀಕ್ಷಾರ್ಥಿಯು ದೀರ್ಘವಾಗಿ ಆಲೋಚಿಸದೆ, ವೇಗವಾಗಿ ವಾಕ್ಯ ಪೂರ್ಣಗೊಳಿಸಬೇಕು. ಪದ ಸಂಯೋಜನೆ ಪರೀಕ್ಷೆಯಂತೆ ಸಹ ನಿರ್ದಿಷ್ಟ ವ್ಯಕ್ತಿಗಳಿಗೆ ಹಾಗೂ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಒಬ್ಬನ ಆಂತರಿಕ ಒಳತೋಟಗಳನ್ನೂ, ಮನೋಭಾವಗಳನ್ನು, ಒಲವಿಲ್ಲದ ಅಂಶಗಳನ್ನು (ವಿರೋಧಗಳು) ಪತ್ತೆ ಹಚ್ಚಲು ಉಪಯುಕ್ತವಾಗಿದೆ. (ಕಥೆ ಪೂರ್ಣಗೊಳಿಸುವ ಪರೀಕ್ಷೆಯು ಈ ಪರೀಕ್ಷೆಯ ಮಾರ್ಪಡಿಸಿದ ರೂಪವಾಗಿದೆ).

ರೋರ್ಷಾಕ್‌ನ ಮಸಿ ಗುರುತು ಪರೀಕ್ಷೆ : ಈ ಪರೀಕ್ಷಾ ಸಾಮಗ್ರಿಯಲ್ಲಿ ಹರ್ಮನ್ ರೋರ್ಷಾಕ್‌ರವರಿಂದ ಅಭಿವೃದ್ಧಿಗೊಳಿಸಲ್ಪಟ್ಟ 25 x 17 ಸೆಮೀ ಅಳತೆಯ ಬಿಳಿಯ ರಟ್ಟಿನ ತುಂಡುಗಳ ಮೇಲೆ ಮಸಿ ಗುರುತುಗಳನ್ನು ಮುದ್ರಿಸಲಾಗಿದೆ. ಈ ಮಸಿ ಗುರುತುಳ್ಳ ಕಾರ್ಡ್‌ಗಳನ್ನು ಪರೀಕ್ಷಾರ್ಥಿಗೆ ಒಂದು ಪ್ರಮಾಣೀಕೃತ ಅನುಕ್ರಮದಲ್ಲಿ ಒಂದು

ಸಲಕ್ಕೆ ಒಂದರಂತೆ ಪ್ರದರ್ಶಿಸಲಾಗುವುದು. ಆ ವ್ಯಕ್ತಿಯು ಕಾರ್ಡನ್ನು ನೋಡುತ್ತಿರುವಂತೆಯೇ ತನಗೆ ಅದರಲ್ಲಿ ಏನು ಕಾಣುತ್ತಿರುವಂತೆ ತೋರುವುದೋ ಅದನ್ನು ಹೇಳಬೇಕು. ಆತನು ತನಗಿಷ್ಟ ಬಂದಂತೆ ಒಂದು ಕಾರ್ಡನ್ನು ತಿರುಗಿಸಬಹುದು. ಪರೀಕ್ಷಕರು ಆ ವ್ಯಕ್ತಿ ನೀಡುವ ಉತ್ತರಗಳನ್ನು ಹಾಗೆಯೇ ಬರೆದುಕೊಳ್ಳುವರು. ಉತ್ತರಿಸಲು ಕಾಲಮಿತಿ ಇಲ್ಲವಾದರೂ ಉತ್ತರಿಸಲು ತೆಗೆದುಕೊಂಡ ಸಮಯವನ್ನು ದಾಖಲಿಸಬಹುದು. ಪರೀಕ್ಷೆಯ ನಂತರ ಪ್ರತಿಕ್ರಿಯೆಗಳನ್ನು ಅವು ಮಸಿ ಗುರುತಿನ ಯಾವ ಸ್ಥಳ ಅಥವಾ ಸ್ಥಾನಕ್ಕೆ ಮಹತ್ವ ನೀಡಿದೆ, ವಿಷಯ ವಸ್ತು ಏನು ಜನಪ್ರಿಯತೆ ಅಥವಾ ವಿಚಾರಗಳ ಹೊಸತನ ಇತ್ಯಾಧಿ ನಿರ್ಣಾಯಕಗಳ ಆಧಾರದ ಮೇಲೆ ಅಧ್ಯಯನ ಮಾಡಲಾಗುತ್ತದೆ. ಈ ಪರೀಕ್ಷೆಯು ವ್ಯಕ್ತಿತ್ವದ ಆಳವನ್ನು ಒಳಹೊಕ್ಕು ತಿಳಿಯಲು ಉಪಯುಕ್ತವಾಗಿದೆ. ಆದರೆ ಸರಿಯಾದ ಅರ್ಥ ವಿವರಣೆಗೆ ಮಾನವನ ವ್ಯಕ್ತಿತ್ವ ಗತಿಶೀಲ ಅಂಶಗಳನ್ನು ಕುರಿತ ಆಳವಾದ ಪರಿಜ್ಞಾನ ಅಗತ್ಯ.

**ಥೆಮ್ಯಾಟಿಕ್ ಅಪರ್‌ಸೆಪ್ಷನ್ ಪರೀಕ್ಷೆ** (Thematic Appreception Test) ಇದನ್ನು 1935ರಲ್ಲಿ ಮಾರ್ಗನ್ ಮತ್ತು ಮರ್ರೆ ಎಂಬುವರು ರೂಪಿಸಿ ಪರಿಚಯಮಾಡಿಸಿದರು. ಮೂಲತಃ ಈ ಪರೀಕ್ಷೆಯಲ್ಲಿ ಮುವ್ವತ್ತು ಕಾರ್ಡುಗಳ ಸಮೂಹವಿದ್ದು ಅದರಲ್ಲಿ ಹತ್ತು ಪುರುಷರಿಗಾಗಿ, ಹತ್ತು ಸ್ತ್ರೀಯರಿಗಾಗಿ ಮತ್ತು ಹತ್ತು ಇಬ್ಬರಿಗಾಗಿಯೂ ಇದ್ದವು. ಪ್ರತಿ ಕಾರ್ಡಿನಲ್ಲಿಯೂ ಕೆಲವು ಚಿತ್ರಗಳಿರುತ್ತವೆ (ಈಗ ಈ ಪರೀಕ್ಷೆಯನ್ನು ಪರಿಷ್ಕರಿಸಲಾಗಿದ್ದು ಒಟ್ಟು ಇಪ್ಪತ್ತು ಕಾರ್ಡುಗಳು ಮಾತ್ರ ಇದ್ದು ಹನ್ನೊಂದು ಕಾರ್ಡುಗಳನ್ನು ಲಿಂಗಭೇದವಿಲ್ಲದೆ ಎಲ್ಲ ವಯೋಮಿತಿಯವರಿಗೂ ಬಳಸಾಗುವುದು. ಉಳಿದ ಒಂಬತ್ತು ಕಾರ್ಡುಗಳಿಗೆ ಪರ್ಯಾಯಗಳಿದ್ದು ವಯಸ್ಸಿಗನುಗುಣವಾಗಿ ಆಯ್ದು ಬಳಸಲಾಗುವುದು)

ಟಿ.ಎ.ಟಿ. ಪರೀಕ್ಷೆಯ ಮೂಲಭಾವವು ರೋರ್ಷಾಕ್ ಮಸಿ ಗುರುತು ಪರೀಕ್ಷೆಗಿಂತ ಸರಳವಾಗಿದೆ. ಪರೀಕ್ಷಾರ್ಥಿಗೆ ಕಾರ್ಡುಗಳನ್ನು ಒಮ್ಮೆಗೆ ಒಂದರಂತೆ ಅನುಕ್ರಮದಲ್ಲಿ ತೋರಿಸಲಾಗುತ್ತದೆ. ಇದು ವೈಯಕ್ತಿಕ ಪರೀಕ್ಷೆಯಾಗಿದ್ದು ಮೌಖಿಕ ನಿರ್ವಹಣೆ ಮೂಲಕ ಪರೀಕ್ಷಿಸಲಾಗುವುದು. ಸೂಕ್ತ ಮನೋವೈಜ್ಞಾನಿಕ ಸನ್ನಿವೇಶಗಳಲ್ಲಿ ನಡೆಸಲಾಗುವ ಈ ಪರೀಕ್ಷೆಯನ್ನು ಎರಡು ಅವಧಿಗಳಲ್ಲಿ (ಅಧಿವೇಶನ) ನಿರ್ವಹಿಸಲಾಗುವುದು. ಏಕೆಂದರೆ ಇಪ್ಪತ್ತು ಕಾರ್ಡುಗಳು ಒಂದು ಅವಧಿಗೆ ಅತಿ ಹೆಚ್ಚೆನಿಸುತ್ತವೆ. ಆದರೆ ಒಂದು ಅವಧಿಗೂ ಮತ್ತೊಂದು ಅವದಿಗೂ ನಡುವೆ ಕನಿಷ್ಠ ಒಂದು ದಿನದ ಕಾಲಾಂತರ ಅಥವಾ ವಿರಾಮ ಇರಬೇಕು.

ಪರೀಕ್ಷಾರ್ಥಿಯು ತನಗೆ ತೋರಿಸಲ್ಪಟ್ಟ ಕಾರ್ಡುಗಳ ಸರಣಿಗೆ ಸಂಬಂಧಿಸಿದಂತೆ ವಿವರಣೆ ನೀಡುವುದು ಅಥವಾ ಕಥೆ ಹೇಳಬೇಕಾಗುವುದು. ಅವನಿಗೆ ಇದೊಂದು ಕಲ್ಪನಾಶಕ್ತಿಯ ಪರೀಕ್ಷೆ ಎಂದೂ, ಇದರಲ್ಲಿ ಸರಿ ಅಥವಾ ತಪ್ಪು ಪ್ರತಿಕ್ರಿಯೆ ಎಂದೇನಿಲ್ಲವೆಂದೂ ಹೇಳಲಾಗುವುದು. ಕಾಲಮಿತಿ ಏನೂ ಇಲ್ಲ. ಪರೀಕ್ಷಣದ ನಂತರ ಕತೆಯ ಮೂಲ, ಸ್ಥಳಗಳ ಬಗ್ಗೆ ಸಂಬಂಧ ಕಲ್ಪಿಸುವುದು, ವ್ಯಕ್ತಿಗಳ ಹೆಸರುಗಳು, ದಿನಾಂಕಗಳು, ನಿರ್ದಿಷ್ಟ ಮತ್ತು ಅಸಾಮಾನ್ಯ ಮಾಹಿತಿ ಕುರಿತು ವಿವರ ಪಡೆಯುವುದಕ್ಕಾಗಿ ಸಂದರ್ಶನ ನಡೆಸಬಹುದು. ಇದರಿಂದ ಪರೀಕ್ಷಾರ್ಥಿಯ ಆಂತರಿಕ ವ್ಯಕ್ತಿತ್ವವನ್ನು ತಿಳಿಯಲು, ಅರ್ಥ ವಿವರಣೆ ನೀಡಲು ಸಹಾಯ ಆಗುವುದು.

ಟಿ.ಏ.ಟಿ. ಒಬ್ಬನ ವ್ಯಕ್ತಿತ್ವದ ಸಾರಾಂಶವನ್ನು, ಎಂದರೆ-ಅಂತಃಶಕ್ತಿಗಳು, ಆವಶ್ಯಕತೆಗಳು, ರಸಭಾವಗಳು, ತುಮುಲಗಳು, ಸಂಕೀರ್ಣ ಭಾವನೆಗಳು ಮತ್ತು ಭ್ರಮೆಗಳು ಇತ್ಯಾದಿಗಳನ್ನು ಹೊರಗೆಳೆಯಲು ರೂಪಿಸಲಾಗಿದೆ. ಬದಲಿಗೆ ಮಸಿ ಗುರುತಿನ ಪರೀಕ್ಷೆಯು ವ್ಯಕ್ತಿತ್ವದ ಸಂರಚನೆಯನ್ನು ಪ್ರಕಟಿಸುವುದಕ್ಕಾಗಿ ತಯಾರಿಸಲಾಗಿದೆ. ಆದರೆ ವ್ಯಕ್ತಿತ್ವ ಮಾಪನದಲ್ಲಿ ಈ ಎರಡೂ ಪರೀಕ್ಷೆಗಳಿಗೆ ಮಹತ್ವವಿದೆ.

## ಮಗುವಿನ ವ್ಯಕ್ತಿತ್ವ ವಿಕಾಸದಲ್ಲಿ ಶಾಲೆ ಮತ್ತು ಶಿಕ್ಷಕರ ಪಾತ್ರ

ಪ್ರತಿ ಮಗುವಿಗೂ ತನ್ನದೇ ಆದ ವ್ಯಕ್ತಿತ್ವದ ಲಕ್ಷಣಗಳಿರುತ್ತವೆ. ಈ ಲಕ್ಷಣಗಳ ಮತ್ತು ಸಾಧ್ಯತೆಗಳ ವಿಕಾಸವು ವಿವಿಧ ಪರಿಸರಾತ್ಮಕ ಕಾರಕಗಳ ಪ್ರಭಾವದ ಫಲಿತಾಂಶವಾಗಿದೆ. ಅವೆಂದರೆ, ಕುಟುಂಬ, ಸಮುದಾಯ, ಸಂಗಡಿಗರು, ಸಮಾಜ ಮತ್ತು ಎಲ್ಲಕ್ಕೂ ಮುಖ್ಯವಾಗಿ ಶಾಲೆ. ವ್ಯಕ್ತಿತ್ವ ವಿಕಾಸದಲ್ಲಿ ಶಾಲೆಯು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಏಕೆಂದರೆ ಶಾಲೆಯು ವ್ಯವಸ್ಥಿತ, ಯೋಜಿತ ಧನಾತ್ಮಕ ಅನುಭವಗಳನ್ನು ಒದಗಿಸುವುದಕ್ಕಾಗಿಯೇ ಸ್ಥಾಪಿತವಾಗಿರುವ ಸಂಸ್ಥೆ ಅಥವಾ ಸಾಮಾಜಿಕ ಘಟಕ.

ಶಾಲೆಯಲ್ಲಿ ಈ ಕೆಳಗಿನ ಘಟಕಗಳು ಮಗುವಿನ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತವೆ.

i) ಪಠ್ಯಕ್ರಮ

ii) ಶಿಕ್ಷಕರು

iii) ಸಂಗಾತಿಗಳು ಮತ್ತು ಸಹಪಾಠಿಗಳು

ಮಗುವಿನ ಅವಶ್ಯಕತೆಗಳು ಹಾಗೂ ಸಾಮರ್ಥ್ಯಗಳನ್ನು ಗಮನದಲ್ಲಿರಿಸಿ ಪಠ್ಯಕ್ರಮ ರಚಿಸಲಾಗುತ್ತದೆ. ಅದರ ಗುರಿ ವಿದ್ಯಾರ್ಥಿಗಳ ವ್ಯಕ್ತಿತ್ವದ ಆರೋಗ್ಯಕರ ಸಮಗ್ರ ವಿಕಾಸಕ್ಕೆ ಸಹಾಯಕವಾಗುವ ಪಠ್ಯ ಹಾಗೂ ಸಹಪಠ್ಯ ಅನುಭವಗಳನ್ನು ಒದಗಿಸುವುದಾಗಿದೆ.

ಪಠ್ಯಕ್ರಮಕ್ಕಿಂತ ಹೆಚ್ಚಿನ ಮಹತ್ವದ ಪಾತ್ರ ಶಿಕ್ಷಕರದ್ದಾಗಿದೆ ಪಠ್ಯಕ್ರಮವನ್ನು ನಿರ್ವಹಿಸುವವರು ಶಿಕ್ಷಕರು. ಅವರು ನಿಗದಿತ ಪಠ್ಯಕ್ರಮವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದರೆ ಮಗುವಿನ ವಿಕಾಸ ಸಮರ್ಪಕವೂ ಆರೋಗ್ಯಕರವೂ ಆಗುತ್ತದೆ. ಇದಕ್ಕೆ ಬದಲಾಗಿ ಅತ್ಯುತ್ತಮ ರೀತಿಯ ಪಠ್ಯಕ್ರಮ ಮತ್ತು ಪಠ್ಯವಸ್ತುವಿದ್ದಾಗಲೂ ಶಿಕ್ಷಕರಿಗೆ ಅದನ್ನು ಕಾರ್ಯಗತಗೊಳಿಸಲಾಗದಿದ್ದರೆ ಮಕ್ಕಳಿಗೆ ಅದರ ಪ್ರಯೋಜನ ದೊರಕುವುದಿಲ್ಲ.

ಪಠ್ಯಕ್ರಮ ನಿರ್ವಹಣೆಯಲ್ಲದೆ, ಶಿಕ್ಷಕರ ವ್ಯಕ್ತಿತ್ವ, ವಿದ್ಯಾರ್ಥಿಗಳೊಂದಿಗೆ ಅವರು ವ್ಯವಹರಿಸುವ ರೀತಿ, ಅವರ ಜ್ಞಾನ, ಕೌಶಲ, ಸಂಬಂಧ, ಶಿಕ್ಷಕರ ಒಟ್ಟಾರೆ ವ್ಯಕ್ತಿತ್ವ ಮಗುವಿನ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತದೆ. ಶಿಕ್ಷಕರ ಮಾತಿನಲ್ಲಿ ಹಾಗೂ ಕೃತಿಯಲ್ಲಿ ಮಗುವಿಗೆ ಬಹಳ ಶ್ರದ್ಧೆ ಇರುತ್ತದೆ. ಆದ್ದರಿಂದ ಮಗು ತನ್ನ ಶಿಕ್ಷಕರೊಂದಿಗೆ ಏಕಾತ್ಮಕತೆ ಹೊಂದಿ ಅನುಕರಿಸುತ್ತದೆ. ಮಗುವಿಗೆ ಸಮರ್ಪಕವಾದ ಪಾತ್ರ ಮಾದರಿಗಳನ್ನು ಒದಗಿಸಬಲ್ಲ ಶಿಕ್ಷಕರು ಮಾತ್ರವೆ ಮಕ್ಕಳ ವ್ಯಕ್ತಿತ್ವವನ್ನು ರೂಪಿಸಬಲ್ಲರು.

ಮಗುವಿನ ವ್ಯಕ್ತಿತ್ವದ ಮೇಲೆ ಸಹಪಾಠಿಗಳು ಮತ್ತಿತರ ಸಂಗಡಿಗರೂ ಪ್ರಭಾವ ಬೀರುವರು. ಒಂದು ತರಗತಿಯಲ್ಲಿ ವಿದ್ಯಾರ್ಥಿ ನಾಯಕ (ಹಿರೇಮಣಿ) ಇತರ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ನೋಡಿಕೊಳ್ಳುವನು. ನಾಯಕನಿಗೆ ತಿಳುವಳಿಕೆ ಸಾಮರ್ಥ್ಯವಿದ್ದರೆ ಇತರ ಎಲ್ಲರೂ ಸಹಕರಿಸುತ್ತಾರೆ. ನಿರಂತರ ಅಂತರ್‌ಕ್ರಿಯೆ ಹಾಗೂ ಅಂತರ್‌ವ್ಯಕ್ತಿ ಸಂಬಂಧಗಳ ಪರಿಣಾಮವಾಗಿ ಸಾಮಾಜಿಕ ಗುಣಗಳನ್ನು ಮನೋಭಾವಗಳನ್ನೂ ಗಳಿಸುವುದು ಸಾಧ್ಯ. ಉತ್ತಮ ಸಂಗಾತಿಗಳು ಧನಾತ್ಮಕ ಪ್ರಭಾವ ಉಂಟುಮಾಡಿದರೆ ಅಪೇಕ್ಷಣೀಯವಲ್ಲದ ಸಂಗವು ಮಗುವಿನ ವ್ಯಕ್ತಿತ್ವವನ್ನು ಹಾಳು ಮಾಡುತ್ತದೆ.

ಶಿಕ್ಷಕರು ಬಹುಮುಖ ಪಾತ್ರ ನಿರ್ವಹಿಸಿ ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ವ್ಯಕ್ತಿತ್ವ ವಿಕಾಸ ಮಾಡಲು ಶ್ರಮಿಸಬೇಕು.



Scanned with OKEN Scanner

## ನೆನಪಿಡಬೇಕಾದ ಅಂಶಗಳು

1. ವ್ಯಕ್ತಿಯ ಎಲ್ಲ ಗುಣಗಳು ಮತ್ತು ಲಕ್ಷಣಗಳ ಒಟ್ಟು ಮೊತ್ತವೇ ವ್ಯಕ್ತಿತ್ವ.
2. ಅನುವಂಶೀಯತೆ, ಪರಿಸರ, ಪ್ರಕೃತಿ, ಸ್ವಭಾವ, ಆಸಕ್ತಿಗಳು, ಮನೋಭಾವಗಳು, ಪ್ರೇರಕಗಳು ವ್ಯಕ್ತಿತ್ವ ವಿಕಾಸದ ಮೇಲೆ ಪ್ರಭಾವ ಬೀರುವ ಪ್ರಮುಖ ಕಾರಕಗಳು.
3. ಶರೀರದ ಆಕೃತಿ, ಕುಟುಂಬ, ಶಾಲೆ ಮತ್ತು ಸಮುದಾಯಗಳಲ್ಲಿನ ಪರಿಸರಗಳು ಮಗುವಿನ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುವ ಘಟಕಗಳಾಗಿವೆ.
4. ವ್ಯಕ್ತಿತ್ವದ ಗುಣಲಕ್ಷಣಗಳು ಮತ್ತಿತರ ಭಾವನೆಗಳನ್ನು, ಸಂವೇಗಗಳನ್ನು ತಿಳಿಯಲು ವ್ಯಕ್ತಿತ್ವ ಪರೀಕ್ಷೆ ಮಾಡಬಹುದು.
5. ವ್ಯಕ್ತಿತ್ವವನ್ನು ಅಳತೆ ಮಾಡಲು ಹಲವು ಪರೀಕ್ಷೆಗಳು ಸಹಾಯ ಮಾಡುತ್ತವೆ.

## ಚಟುವಟಿಕೆಗಳು

1. ಮಕ್ಕಳ ಗುಣಲಕ್ಷಣಗಳನ್ನು ತಿಳಿಯಲು ಅವರು ಕೆಲಸ ಮಾಡುತ್ತಿರುವಾಗ ಆಟ ಆಡುವಾಗ ಮತ್ತಿತರ ಸನ್ನಿವೇಶಗಳಲ್ಲಿ ವೀಕ್ಷಿಸಿ.
2. ಯಾವುದಾದರೊಂದು ವ್ಯಕ್ತಿತ್ವ ಪರೀಕ್ಷೆಯನ್ನು ವಿವರವಾಗಿ ಅಧ್ಯಯನ ಮಾಡಿ ಅದನ್ನು ಬಳಸುವುದು ಹೇಗೆಂಬುದನ್ನು ತಿಳಿಯಿರಿ.
3. ನಿಮ್ಮ ಪ್ರಶಿಕ್ಷಕರ ಸಹಾಯದಿಂದ ವ್ಯಕ್ತಿತ್ವದ ಚಿತ್ರಣ (profile) ತಯಾರಿಸಲು ಕಲಿಯಿರಿ.

# ವ್ಯಕ್ತಿತ್ವ ಮತ್ತು ಹೊಂದಾಣಿಕೆ

ಹಿಂದಿನ ಅಧ್ಯಾಯದಲ್ಲಿ ವ್ಯಕ್ತಿತ್ವ ವಿಕಾಸವು ಒಂದು ಪ್ರಕ್ರಿಯೆ ಎಂದೂ ಅದು ವ್ಯಕ್ತಿ ತನ್ನ ಪರಿಸರದೊಂದಿಗೆ ಸಾಮರಸ್ಯ ಸಾಧಿಸುವ ಪ್ರಕ್ರಿಯೆ ಎಂದೂ ತಿಳಿದಿದ್ದೇವೆ. ಈ ಅಧ್ಯಾಯದಲ್ಲಿ ವ್ಯಕ್ತಿತ್ವದ ಹೊಂದಾಣಿಕೆ (ಸಮಾಯೋಜನೆ) ಯ ಅರ್ಥವನ್ನು ಉತ್ತಮ ಹೊಂದಾಣಿಕೆ ಆಗಿರುವ ವ್ಯಕ್ತಿತ್ವದ ಗುಣ ಲಕ್ಷಣಗಳನ್ನು ತಿಳಿಯೋಣ. ಅಪಸಮಾಯೋಜನೆಯ ಅರ್ಥ, ಮಕ್ಕಳಲ್ಲಿ ಅಪಸಮಾಯೋಜನೆಗೆ ಕಾರಣಗಳನ್ನು ತಿಳಿಯೋಣ. ಸಮಾಯೋಜನೆಯು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿರುವುದರಿಂದ ಮಾನಸಿಕ ಆರೋಗ್ಯದ ಪರಿಕಲ್ಪನೆ ಮತ್ತು ಮಕ್ಕಳ ಮಾನಸಿಕ ಆರೋಗ್ಯ ರಕ್ಷಣೆಯಲ್ಲಿ ಶಿಕ್ಷಕರ ಪಾತ್ರವನ್ನು ತಿಳಿಯೋಣ.

ವ್ಯಕ್ತಿತ್ವ ವಿಕಾಸವು ಒಂದು ನಿರಂತರ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ವ್ಯಕ್ತಿ ತನ್ನ ಪರಿಸರದ ಸನ್ನಿವೇಶಗಳನ್ನರಿತು ಸೂಕ್ತ ಪ್ರತಿಕ್ರಿಯೆಗಳನ್ನು ತೋರಿಸುವುದರಿಂದ ಪರಿಣಮಿಸುವ ಸಮಾಯೋಜನೆಗಳು ಒಳಗೊಂಡಿವೆ. ವ್ಯಕ್ತಿತ್ವದ ಹೊಂದಾಣಿಕೆ (ಸಮಾಯೋಜನೆ) ಎಂದರೆ ಒಂದೆಡೆ ವ್ಯಕ್ತಿಯ ಅವಶ್ಯಕತೆಗಳು ಮತ್ತು ಅಪೇಕ್ಷೆಗಳ ನಡುವೆ ಸಮಾಧಾನಕರ ಸಂಬಂಧವನ್ನುಂಟು ಮಾಡುವುದಾದರೆ ಮತ್ತೊಂದೆಡೆ ಅವಶ್ಯಕತೆಗಳನ್ನು ಪೂರೈಸಿಕೊಂಡು ಸನ್ನಿವೇಶದ ಬೇಡಿಕೆಗಳನ್ನು ಪೂರೈಸುವ ಸಾಮರ್ಥ್ಯವಾಗಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಸಮಾಯೋಜನೆಯು ವ್ಯಕ್ತಿ ತನ್ನ ಪರಿಸರದೊಂದಿಗೆ ಸಮರಸ ಸಂಬಂಧ ಕಾಪಾಡಿಕೊಳ್ಳಲು ಮಾಡುವ ಪ್ರಯತ್ನಗಳ ಪರಿಣಾಮವಾಗಿದೆ.



Scanned with OKEN Scanner

**ಉತ್ತಮ ಸಮಾಯೋಜಿತ ವ್ಯಕ್ತಿಯ ಗುಣಲಕ್ಷಣಗಳು :**

ಸಮಯೋಜಿತ ವ್ಯಕ್ತಿಯನ್ನು ಕೆಲವು ಗುಣಲಕ್ಷಣಗಳಿಂದ ಗುರ್ತಿಸಬಹುದು. ಉತ್ತಮ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಂಡಿರುವ ವ್ಯಕ್ತಿಯ ಕೆಲವು ಮುಖ್ಯ ಗುಣಲಕ್ಷಣಗಳು ಹೀಗಿವೆ.

- ಇತರರೊಂದಿಗೆ ಹೊಂದಿಕೊಳ್ಳಬಲ್ಲ ಮತ್ತು ಸ್ನೇಹಪರತೆಯಿಂದಿರುವುದು.
- ಪ್ರಸನ್ನತೆಯಿಂದ ಹಾಗೂ ಉತ್ಸಾಹದಿಂದ ಕೂಡಿರುವುದು.
- ಸಾಧಾರಣ ಪ್ರಮಾಣದ ಆಶಾಭಂಗವನ್ನು ಸಹಿಸಿಕೊಳ್ಳಬಲ್ಲನು.
- ಸಮಸ್ಯೆಗಳನ್ನು ನೇರವಾಗಿ ಬಿಡಿಸಲು ಯತ್ನಿಸುವುದು ಮತ್ತು ಗುರಿ ಸಾಧಿಸುವುದು.
- ಜೀವನದ ಬಗ್ಗೆ ಆಶಾವಾದದ ದೃಷ್ಟಿ ಹೊಂದಿರುವನು
- ವೈಯುಕ್ತಿಕ ಯೋಗ್ಯತೆಯ ಅರಿವಿದ್ದು, ಸಾಮಾನ್ಯ, ಧನಾತ್ಮಕ ಸ್ವ ಪರಿಕಲ್ಪನೆ ಇರುವುದು.
- ಸಂವೇಗಾತ್ಮಕ ಪಕ್ವತೆ ಪ್ರದರ್ಶಿಸುವುದು ಹಾಗೂ ಅಪೇಕ್ಷಿತ ರೀತಿಯಲ್ಲಿ ತನ್ನ ಸಂವೇಗಗಳನ್ನು ನಿಯಂತ್ರಿಸುವ ಹಾಗೂ ವ್ಯಕ್ತಪಡಿಸುವ ಸಾಮರ್ಥ್ಯ ಇರುವುದು.
- ವಿವೇಕಯುತ ಮನೋಭಾವ ಹೊಂದಿದ್ದು ಆರೋಗ್ಯ ಕಾಪಾಡಿಕೊಳ್ಳುವನು ಮತ್ತು ಒಳ್ಳೆಯ ಆರೋಗ್ಯದ ಅಭ್ಯಾಸಗಳನ್ನು ರೂಢಿಸಿಕೊಂಡಿರುವನು.
- ಆಲೋಚಿಸಬಲ್ಲನು, ತನ್ನದೇ ನಿರ್ಧಾರಗಳನ್ನು ಕೈಗೊಳ್ಳಬಲ್ಲ.
- ವೈವಿಧ್ಯಮಯ ಆಸಕ್ತಿಗಳನ್ನು ಹೊಂದಿದ್ದು ಕೆಲಸ, ವಿಶ್ರಾಂತಿ ಮತ್ತು ಮನರಂಜನೆಗಳಿಂದ ಕೂಡಿದ ಸಮತೋಲನವುಳ್ಳ ಜೀವನ ನಡೆಸುವನು.

ಇನ್ನೂ ಕೆಲವು ಗುಣಗಳನ್ನು ಪಟ್ಟಿ ಮಾಡಬಹುದು. ಅವೆಲ್ಲವೂ ಪರಿಸರದ ಸನ್ನಿವೇಶಗಳ ಬಗ್ಗೆ ವ್ಯಕ್ತಿಯ ಧನಾತ್ಮಕ ಪ್ರವೃತ್ತಿಯನ್ನು ಸೂಚಿಸುತ್ತವೆ. ಈ ಗುಣಲಕ್ಷಣಗಳು ಸಾರ್ವತ್ರಿಕವಲ್ಲವೆಂದು ನಾವು ನೆನಪಿಡಬೇಕು. ಅವು ಕೇವಲ ಸೂಚಕಗಳು.

ಪ್ರತಿ ವ್ಯಕ್ತಿಯೂ ಈ ಗುಣಗಳನ್ನು ಗಳಿಸಲು ಮತ್ತು ತನ್ಮೂಲಕ ತನ್ನ ಪರಿಸರದೊಂದಿಗೆ ಸಾಮರಸ್ಯ ಸಾಧಿಸಲು ಪ್ರಯತ್ನ ಮಾಡಬೇಕು. ಹೊಂದಾಣಿಕೆ ಮಾಡಿಕೊಳ್ಳುವುದು ಹಾಗೂ ಸಮತೋಲನ ಕಾಪಾಡಿಕೊಳ್ಳುವುದು ಕೆಲವು ವೇಳೆ ಬಹಳ ಕಠಿಣವಾಗಬಹುದು. ಒಬ್ಬ ವ್ಯಕ್ತಿ ಸಾಮರಸ್ಯ ಮತ್ತು ಸಮತೋಲನ ಸಾಧಿಸಿ ಸಂರಕ್ಷಿಸಲು ವಿಫಲನಾದರೆ ಅದು ಅಪಸಮಾಯೋಜನೆಯಲ್ಲಿ ಪರಿಣಮಿಸುತ್ತದೆ.

ಅಪಸಮಾಯೋಜನೆ ಎಂದರೆ ವ್ಯಕ್ತಿ ಮತ್ತು ಆತನ ಪರಿಸರಗಳ ನಡುವೆ ಸಾಮರಸ್ಯವಿಲ್ಲದಿರುವುದು ಎಂದರ್ಥ. ಇಂತಹ ಅಪಸಮಾಯೋಜನೆಯ ಸ್ಥಿತಿಯನ್ನು ಸಮನ್ವಯತೆ ಇಲ್ಲದ ವರ್ತನೆಗಳು ಸೂಚಿಸುತ್ತವೆ. ಹೊಂದಾಣಿಕೆಯ ಸಮಸ್ಯೆಗಳನ್ನೆದುರಿಸುತ್ತಿರುವ ವ್ಯಕ್ತಿ ಆತಂಕ, ತಳಮಳ ಮತ್ತು ಆಂತರಿಕ ಘರ್ಷಣೆಗಳನ್ನು ಬೆಳೆಸಿಕೊಳ್ಳುತ್ತಾನೆ. ಸಂಪೂರ್ಣ ವ್ಯಕ್ತಿತ್ವವೂ ಅಸಮಂಜಸತೆಯಿಂದ ಕೂಡಿರುತ್ತದೆ. ಇಂತಹ ಅಪಸಮಯೋಜಿತ ವ್ಯಕ್ತಿ ಅಸಾಮಾನ್ಯ ಸಂವೇಗಾತ್ಮಕ



Scanned with OKEN Scanner

ಪ್ರತಿಕ್ರಿಯೆಗಳನ್ನು ಆಕ್ರಮಣಶೀಲ ವರ್ತನೆ, ಹಿಂಜರಿಕೆ, ಹಠಮಾರಿತನ ಇತ್ಯಾದಿ ತೋರಿಸುವುದಲ್ಲದೆ ಪುಕ್ಕಲುತನ ಲಕ್ಷಣಗಳನ್ನು ಹೊಂದಿರುತ್ತಾನೆ.

ಚಿಕ್ಕ ಮಕ್ಕಳೂ ಸಹ ಅಪ ಸಮಾಯೋಜನೆಯ ಲಕ್ಷಣಗಳನ್ನು ಪ್ರದರ್ಶಿಸುತ್ತಾರೆ. ಪದೇ ಪದೇ ಕಂಡುಬರುವ ಕೆಲವು ಲಕ್ಷಣಗಳೆಂದರೆ ಭಯಗಳು, ಆತಂಕ, ಅಂಜುಬುರುಕುತನ, ಹಿಂದೆಗೆಯುವುದು, ಅತಿಯಾದ ಚಟುವಟಿಕೆ, ಜಡತೆ, ಉಗ್ಗುವಿಕೆಯೇ ಮೊದಲಾದ ವಾಗ್ದೋಷಗಳು, ಶಾಲೆ ತಪ್ಪಿಸುವುದು, ಪ್ರತಿಭಟನೆ, ಕಲಿಕೆಯಲ್ಲಿ ಹಿಂದುಳಿದಿರುವುದು. ಇತ್ಯಾದಿ ಇವು ಮತ್ತಿತರ ಅನೇಕ ಕ್ರಮತಪ್ಪಿದ ವರ್ತನಾವಿನ್ಯಾಸಗಳನ್ನು ನಾವು ನಿತ್ಯ ಜೀವನದಲ್ಲಿ ಚಿಕ್ಕ ಮಕ್ಕಳಲ್ಲಿ ಕಾಣಬಹುದು. ದುರ್ದೈವವೆಂದರೆ ಇಂತಹ ಮಾನಸಿಕ, ಸಾಮಾಜಿಕ ಮತ್ತು ಸಂವೇಗಾತ್ಮಕ ಕ್ರಮತಪ್ಪಿದ ವರ್ತನೆಗಳ ಬಗ್ಗೆ ಶಿಕ್ಷಕರು ಮತ್ತು ಪೋಷಕರು ಉಚಿತ ಗಮನವನ್ನಾಗಲಿ, ಲಕ್ಷ್ಯವನ್ನಾಗಲಿ ಕೊಡುತ್ತಿಲ್ಲ. ಇಂತಹ ಉದಾಸೀನತೆ ತೀವ್ರವಾದ ವ್ಯಕ್ತಿತ್ವದ ತೊಂದರೆಗಳಿಗೆ ಕಾರಣವಾಗುತ್ತದೆ.

ಶಿಕ್ಷಕರಾಗಿ ಮತ್ತು ಪೋಷಕರಾಗಿ ಮಕ್ಕಳಲ್ಲಿ ಕಂಡು ಬರುವ ಯಾವುದೇ ರೀತಿಯ ಕ್ರಮತಪ್ಪಿದ ವರ್ತನೆಯನ್ನು ವೀಕ್ಷಿಸುವುದರಲ್ಲಿ ಎಚ್ಚರಿಕೆಯಿಂದಿರಬೇಕು. ಇಂತಹ ವರ್ತನೆಗಳಿಗೆ ಪ್ರಮುಖ ಕಾರಣಗಳೇನೆಂಬುದು ನಮಗೆ ತಿಳಿದಿರುವುದು ಅಗತ್ಯ. ಇದರಿಂದ ಮಕ್ಕಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಮತ್ತು ಅವರೊಂದಿಗೆ ಸೂಕ್ತವಾಗಿ ವ್ಯವಹರಿಸಲು ಸಾಧ್ಯವಾಗುವುದು. ಮಕ್ಕಳಲ್ಲಿ ಅಪಸಮಾಯೋಜನೆಯನ್ನುಂಟು ಮಾಡುವಲ್ಲಿ ಕೆಲವು ಪ್ರಮುಖ ಕಾರಣಗಳು ಕೆಳಕಂಡಂತಿವೆ.

i. **ಅನುವಂಶೀಯ ಮತ್ತು ಜನನ ಪೂರ್ವ ಪರಿಸ್ಥಿತಿಗಳು :** ಬುದ್ಧಿಭ್ರಮಣೆ ಮತ್ತು ತೀವ್ರ ಹೊಂದಾಣಿಕೆ ಸಮಸ್ಯೆಯಿಂದ ಕೂಡಿರುವ ಪೋಷಕರ ಮಕ್ಕಳು ಇಂತಹ ವರ್ತನೆಗಳ ಪ್ರವೃತ್ತಿಯನ್ನು ಅನುವಂಶೀಯವಾಗಿ ಪಡೆಯಬಹುದು. ಗರ್ಭಿಣಿ ಸ್ತ್ರೀ ನಿರಂತರವಾಗಿ ಅನುಕೂಲಕರವಲ್ಲದ ಸಾಮಾಜಿಕ ಸಂವೇಗಾತ್ಮಕ ಸ್ಥಿತಿಯನ್ನು ಅನುಭವಿಸುತ್ತಿದ್ದರೆ ಮಗುವು ಅಸ್ಥಿರತೆ, ಅತಿಯಾದ ಚಟುವಟಿಕೆಗಳಂತಹ ಲಕ್ಷಣಗಳನ್ನು ಬೆಳೆಸಿಕೊಳ್ಳಬಹುದು.

ii. **ದೈಹಿಕ ಕಾರಣಗಳು :** ಆಗಾಗ್ಗೆ ಅನಾರೋಗ್ಯವುಂಟಾಗುವುದು, ಬಲಹೀನತೆ, ಜೀವಸತ್ವಗಳ ಕೊರತೆಯಿಂದ ಉದ್ಭವಿಸುವ ತೊಂದರೆಗಳು, ರಕ್ತಹೀನತೆ ಮುಂತಾದುವು ಆತಂಕ, ಕೋಪಸ್ವಭಾವ, ಖಿನ್ನತೆ ಮುಂತಾದ ವರ್ತನೆಗಳಲ್ಲಿ ಪರಿಣಮಿಸಬಹುದು. ದೈಹಿಕ ನ್ಯೂನತೆಗಳುಳ್ಳ ಮಕ್ಕಳೂ ಹೊಂದಾಣಿಕೆಯ ಸಮಸ್ಯೆಗಳನ್ನೆದುರಿಸುತ್ತಾರೆ. ಏಕೆಂದರೆ ನಿತ್ಯ ಜೀವನದ ಹಲವಾರು ಸನ್ನಿವೇಶಗಳು ಸರಳ ಸನ್ನಿವೇಶಗಳೂ ಸಹ ಅವರಿಗೆ ಸವಾಲುಗಳಾಗಿ ಇಂತಹ ಸನ್ನಿವೇಶಗಳನ್ನೆದುರಿಸಲು ತಾವು ಅಸಮರ್ಥರೆಂದು ಭಾವಿಸುತ್ತಾರೆ.

iii. **ಅವಶ್ಯಕತೆಗಳು :** ಪ್ರತಿ ಮಗುವಿಗೂ ಪ್ರಾಥಮಿಕ ಹಾಗೂ ಅನುಷಂಗಿಕ ಗುಂಪಿಗೆ ಸೇರಿದ ಹಲವಾರು ಅವಶ್ಯಕತೆಗಳಿರುತ್ತವೆ. ತೃಪ್ತಭಾವನೆ ಮತ್ತು ಸಂತೋಷ ಅನುಭವಿಸಬೇಕಾದರೆ ಅವಶ್ಯಕತೆಗಳ ಪೂರೈಕೆ ಬಹು ಮುಖ್ಯವೆಂದು ನಮಗೆಲ್ಲ ಅರಿವಾಗಿದೆ. ಅವಶ್ಯಕತೆ ಪೂರೈಕೆ ಮಗುವಿನ ಆರೋಗ್ಯಕರ ಬೆಳವಣಿಗೆ ಮತ್ತು ವಿಕಾಸಕ್ಕೆ ಸಾಧನವಾಗುತ್ತದೆ. ಅವಶ್ಯಕತೆಗಳ ಪೂರೈಕೆ ಆಗದಿದ್ದರೆ ಅಸಂತೃಪ್ತಿ, ಆಶಾಭಂಗ ಮತ್ತು ಘರ್ಷಣೆಗಳುಂಟಾಗುತ್ತದೆ. ಕೇವಲ ಪ್ರಾಥಮಿಕ ಅವಶ್ಯಕತೆಗಳ ಪೂರೈಕೆಯಾದರೆ ಸಾಲದು. ಮನೋವೈಜ್ಞಾನಿಕ ಅವಶ್ಯಕತೆಗಳಾದ ಪ್ರೀತಿ, ಸುರಕ್ಷತೆ, ಸ್ವಾತಂತ್ರ್ಯ, ಆಟ ಇವುಗಳೂ ಬಹಳ ಮುಖ್ಯ. ಈ ಅವಶ್ಯಕತೆಗಳಿಂದ ವಂಚಿತರಾದ ಮಕ್ಕಳು ಕ್ರಮತಪ್ಪಿದ ವರ್ತನೆ ಪ್ರದರ್ಶಿಸುವರು.



Scanned with OKEN Scanner

iv. ಸಮರ್ಪಕವಲ್ಲದ ಕೌಟುಂಬಿಕ ಅಥವಾ ಮನೆಯ ವಾತಾವರಣವು ಮಕ್ಕಳಲ್ಲಿ ಅಪಸಮಾ ಯೋಜನೆಗೆ ಒಂದು ಮುಖ್ಯ ಕಾರಣವಾಗಿದೆ. ಮನೆಯಲ್ಲಿ ಪ್ರತಿಕೂಲ ಪರಿಸರದ ಪರಿಸ್ಥಿತಿಗಳು ಒಡೆದ ಕುಟುಂಬಗಳು ಪೋಷಕರ ನಡುವೆ ಪದೇ ಪದೇ ಜಗಳಗಳು, ಮತ್ತು ಅಪಾರ್ಥಗಳು, ಗಮನ ಮತ್ತು ಪ್ರೀತಿಯ ಕೊರತೆ, ಪೋಷಕರ ಸರ್ವಾಧಿಕಾರಿ ಮನೋಭಾವ, ಅನುಕೂಲಕರವಲ್ಲದ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳು ಇವೆಲ್ಲವೂ ಮಕ್ಕಳಲ್ಲಿ ಕ್ರಮತಪ್ಪಿದ ವರ್ತನೆಗೆ ಕಾರಣವಾಗುತ್ತವೆ.

v. ನೆರೆಹೊರೆ, ಸಮುದಾಯ ಮತ್ತು ಸಂಗಾತಿಗಳು ಸಹ ಮಗುವಿನಲ್ಲಿ ಅಪಸಮಾಯೋಚಿತ ವರ್ತನೆಗೆ ಕಾರಣವಾಗಬಹುದು. ಉದಾಹರಣೆಗೆ ಕೊಳಚೆ ಪ್ರದೇಶದಲ್ಲಿ ಬೆಳೆಯುತ್ತಿರುವ ಮಗು ಕೇವಲ ಅಪೇಕ್ಷಣೀಯವಲ್ಲದ ಅನುಭವಗಳನ್ನು ಮಾತ್ರ ಪಡೆಯುತ್ತದೆ. ಇದರಿಂದಾಗಿ ಮಗು ಮೊಂಡುತನ, ಜಗಳಗಂಟಿತನ, ಬಾಲಾಪರಾಧ ಮುಂತಾದ ವರ್ತನೆಗಳನ್ನು ಬೆಳೆಸಿಕೊಳ್ಳಬಹುದು.

ಮಕ್ಕಳಲ್ಲಿ ಅಪಸಮಯೋಜನೆಯನ್ನು ಆದಷ್ಟು ಬೇಗನೆ ಗುರುತಿಸಿದ್ದರೆ ಇಂತಹ ವರ್ತನೆಗಳನ್ನು ನಿವಾರಿಸಲು ಸೂಕ್ತಕ್ರಮಗಳನ್ನು ಕೈಗೊಂಡು ಅವರು ಸಾಮಾನ್ಯ ಆರೋಗ್ಯವಂತ ವ್ಯಕ್ತಿಗಳಾಗಿ ವಿಕಾಸ ಹೊಂದುವಂತೆ ಮಾಡಬಹುದು. ಸಂತೋಷಯುತ, ಆರೋಗ್ಯಕರ ವ್ಯಕ್ತಿತ್ವ ವೈಯಕ್ತಿಕ ಹಾಗೂ ಸಾಮಾಜಿಕ ಸೌಖ್ಯಕ್ಕೆ ಅವಶ್ಯ ಈ ಸಂದರ್ಭಕ್ಕೆ ಸಂಬಂಧಿಸಿದಂತೆ ಮಾನಸಿಕ ಆರೋಗ್ಯ ಸಂರಕ್ಷಣೆ ಬಹುಮುಖ್ಯವಾಗುತ್ತದೆ. ಪ್ರತಿಯೊಬ್ಬ ಶಿಕ್ಷಕನೂ ಮಾನಸಿಕ ಆರೋಗ್ಯದ ಸ್ಪಷ್ಟ ಪರಿಕಲ್ಪನೆ ಹೊಂದಿರಬೇಕು ಇದರಿಂದ ಮಕ್ಕಳು ಮಾನಸಿಕ ಆರೋಗ್ಯವಂತರಾದ, ಸಮಯೋಜಿತ ವ್ಯಕ್ತಿಗಳಾಗಿ ವಿಕಾಸವಾಗಲು ಸಹಾಯಮಾಡಬಹುದು.

**ಮಾನಸಿಕ ಆರೋಗ್ಯ :**

ಆಧುನಿಕ ಶಿಕ್ಷಣ ಕಾರ್ಯದಲ್ಲಿ ಮಾನಸಿಕ ಆರೋಗ್ಯದ ಪರಿಕಲ್ಪನೆ ಹೆಚ್ಚಿನ ಮಹತ್ವ ಪಡೆದಿದೆ. ಏಕೆಂದರೆ ಮಗುವಿನ ಬೆಳವಣಿಗೆ, ವಿಕಾಸ ಮತ್ತು ಕಲಿಕೆಗಳ ಮೇಲೆ ಮಗುವಿನ ಬುದ್ಧಿಶಕ್ತಿಗಿಂತಲೂ ಭಾವನೆಗಳು ಮತ್ತು ಸಂವೇಗಗಳು ಹೆಚ್ಚಿನ ಪ್ರಭಾವ ಬೀರುತ್ತವೆಂದು ಶಿಕ್ಷಣ ತಜ್ಞರು ಮನಗಂಡಿದ್ದಾರೆ. ತರಗತಿಯ ವಾತಾವರಣ, ಚಟುವಟಿಕೆ ಆಧಾರಿತ ಕಲಿಕೆ, ಸೃಜನಾತ್ಮಕ ಚಟುವಟಿಕೆಗಳ ಮೂಲಕ ತೃಪ್ತಿ ಇತ್ಯಾದಿಗಳ ಬಗ್ಗೆ ಹೆಚ್ಚಿನ ಅರಿವು ಮೂಡುತ್ತಿದೆ. ಈ ಕಾರಕಗಳು ಶಿಕ್ಷಣದ ಮೂಲಕ ಮಾನಸಿಕ ಆರೋಗ್ಯಕ್ಕೆ ಹೆಚ್ಚಿನ ಒತ್ತು ಇರುವುದನ್ನು ಸೂಚಿಸುತ್ತವೆ.

ಮಾನಸಿಕ ಆರೋಗ್ಯ ಮತ್ತು ದೈಹಿಕ ಆರೋಗ್ಯ ಇವು ಪರಸ್ಪರ ಬೇರೆಯಲ್ಲ. ಆರೋಗ್ಯವೆಂದರೆ ಕೇವಲ ಅನಾರೋಗ್ಯವಿಲ್ಲದಿರುವಿಕೆ ಎಂದಲ್ಲ. ಆರೋಗ್ಯವೆಂದರೆ ದೇಹ ಮತ್ತು ಮನಸ್ಸು ಇವೆರಡೂ ಸುಸ್ಥಿಯಲ್ಲಿರುವುದು ಎಂದರ್ಥ. ಅಂತಹ ಸ್ಥಿತಿಯಲ್ಲಿ ವ್ಯಕ್ತಿ ತಾನು ಚೆನ್ನಾಗಿರುವೆನೆಂದೂ ಎಂದರ್ಥ. ಅಂತಹ ಸ್ಥಿತಿಯಲ್ಲಿ ವ್ಯಕ್ತಿ ತಾನು ಚೆನ್ನಾಗಿರುವೆನೆಂದೂ, ಆದ್ದರಿಂದ ದಕ್ಷತೆಯಿಂದಲೂ, ಸಾಮರಸ್ಯದಿಂದಲೂ ಮಾಡಬಲ್ಲೆನೆಂದು ಭಾವಿಸುತ್ತಾನೆ. ಹೀಗೆ, ಮಾನಸಿಕ ಆರೋಗ್ಯವು ವ್ಯಕ್ತಿಯ ದೈನಂದಿನ ಜೀವನದ ಧನಾತ್ಮಕ, ಸಕ್ರಿಯ ಗುಣಮಟ್ಟವನ್ನು ಸೂಚಿಸುತ್ತದೆ. ಅದು ವೈಯಕ್ತಿಕ ಹಾಗೂ ಸಾಮಾಜಿಕ ಅಂಶಗಳೆರಡನ್ನು ಒಳಗೊಂಡಿದೆ. ವ್ಯಕ್ತಿ ತನ್ನ ಆಕಾಂಕ್ಷೆಗಳು ಮತ್ತು ಗುರಿಗಳನ್ನು ಸಾಧಿಸಲು ಆತ್ಮ ವಿಶ್ವಾಸದಿಂದ ತನ್ನ ಸಾಮರ್ಥ್ಯಗಳಿಗನುಗುಣವಾಗಿ ಕಾರ್ಯ ನಿರ್ವಹಿಸುವ ಶಕ್ತಿ ಮಾತ್ರವಲ್ಲದೆ ಸಮಾಜದಲ್ಲಿ ಇತರರೊಂದಿಗೆ ಪರಿಣಾಮಕಾರಿಯಾಗಿ ಬಾಳುವ ಶಕ್ತಿಯನ್ನು ಮಾನಸಿಕ ಆರೋಗ್ಯ ಒಳಗೊಂಡಿದೆ.

ಮಗುವು ಸಾಮರಸ್ಯವನ್ನು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಂಡು ಮುಂದುವರೆಸುವಂತಹ ಸಂತಸದಾಯಕ ತರಗತಿ ವಾತಾವರಣವನ್ನು ಸೃಷ್ಟಿಸುವುದಕ್ಕಾಗಿ ಶಿಕ್ಷಕ ಮಾನಸಿಕ ಆರೋಗ್ಯ ಎಂದರೇನು. ಅದು ಏಕೆ ಇಷ್ಟು ಮಹತ್ವದ್ದಾಗಿದೆ



Scanned with OKEN Scanner

ಎಂದು ತಿಳಿದಿರಬೇಕಲ್ಲದೆ ತಾನೂ ಸಹ ಮಾನಸಿಕವಾಗಿ ಆರೋಗ್ಯವಂತನಾಗಿರಬೇಕು. ಮಾನಸಿಕವಾಗಿ ಆರೋಗ್ಯವಂತರಾಗಿ ಶಿಕ್ಷಕರು ಹೊಂದಿರಬೇಕಾದ ಕೆಲವು ಮುಖ್ಯ ವೈಯುಕ್ತಿಕ ಮತ್ತು ವೃತ್ತಿಪರ ಗುಣಗಳು ಕೆಳಕಂಡಂತಿವೆ.

**ಮಾನಸಿಕವಾಗಿ ಆರೋಗ್ಯವಂತ ಶಿಕ್ಷಕರ ಗುಣಲಕ್ಷಣಗಳು :**

- ಚುರುಕಾಗಿದ್ದು ವಿದ್ಯಾರ್ಥಿಗಳ ಮತ್ತು ತರಗತಿ ಚಟುವಟಿಕೆಗಳಲ್ಲಿ ಉತ್ಸಾಹ ಮತ್ತು ಆಸಕ್ತಿ ಇರುವುದು.
- ಇತರರೊಂದಿಗೆ ಆದರಪೂರ್ವಕ ಮತ್ತು ಸ್ನೇಹಯುತ ಸಂಬಂಧ ಬೆಳೆಸಿ, ಉಳಿಸಿಕೊಳ್ಳುವ ಸಾಮರ್ಥ್ಯ.
- ದಯೆ, ಅನುಕಂಪ, ನಿಷ್ಕಪಟ ಭಾವನೆ, ಮತ್ತು ನಿಷ್ಪಕ್ಷಪಾತದಿಂದ ವರ್ತಿಸುವ ಸಾಮರ್ಥ್ಯ.
- ಪ್ರಜಾಸತ್ತಾತ್ಮಕ ಮನೋಭಾವ
- ಸಂತೋಷಕರ, ಏಕರೂಪದ ವರ್ತನೆ
- ಹಾಸ್ಯ ಪ್ರವೃತ್ತಿ ಮತ್ತು ಪ್ರಸನ್ನತೆಯ ಮನೋಧರ್ಮ
- ಉತ್ತಮ ದೈಹಿಕ ಆರೋಗ್ಯ ಮತ್ತು ವೈವಿಧ್ಯಮಯ ಆಸಕ್ತಿಗಳು
- ಇತರರು ಮಾಡಿದ ಒಳ್ಳೆಯ ಕೆಲಸವನ್ನು ಮೆಚ್ಚುವುದು ಮತ್ತು ಪ್ರಶಂಸಿಸುವುದು.
- ತಾನು ಕಲಿಸುವ ವಿಷಯದ ಮೇಲಿನ ಪ್ರಭುತ್ವ.
- ಒಟ್ಟಾಗಿ ಸೇರಿ ಕೆಲಸಮಾಡುವ, ಸಹಕರಿಸುವ, ಹಂಚಿಕೊಳ್ಳುವ ಸಾಮರ್ಥ್ಯ.
- ಆತ್ಮಗೌರವ ಮತ್ತು ವೃತ್ತಿಯ ಬಗ್ಗೆ ಗೌರವ

**ಮಗುವಿನ ಮಾನಸಿಕ ಆರೋಗ್ಯದಲ್ಲಿ ಶಿಕ್ಷಕರ ಪಾತ್ರ :**

ಮೇಲೆ ಹೇಳಿದ ಗುಣಗಳನ್ನು ಹೊಂದಿರುವ ಶಿಕ್ಷಕನು ವಿದ್ಯಾರ್ಥಿಗಳಲ್ಲಿ ಸಮರ್ಪಕ ಕಲಿಕೆಯನ್ನೂ, ಆರೋಗ್ಯಕರ ವಿಕಾಸವನ್ನು ಉಂಟುಮಾಡಬಲ್ಲರು. ಶಿಕ್ಷಕರು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಮಕ್ಕಳಲ್ಲಿ ಸಂತೋಷ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಬಹುದು.

1. ಪ್ರಾಥಮಿಕ ಶಾಲೆಯಲ್ಲಿ ಪ್ರತಿ ಮಗುವಿಗೂ ಪ್ರೀತಿ ಮತ್ತು ಅಂಗೀಕಾರದ ಅವಶ್ಯಕತೆ ಇರುತ್ತದೆ. ಮಗುವು ಶಿಕ್ಷಕರಲ್ಲಿ ತಾಯಿ ಅಥವಾ ಪೋಷಕ ಪ್ರತಿನಿಧಿಯನ್ನು ಕಾಣುತ್ತದೆ. ಶಿಕ್ಷಕರು ಈ ಭಾವನೆಯನ್ನು ವಿನಿಮಯ ಮಾಡಬೇಕು. ಶಿಕ್ಷಕರು ಪ್ರತಿ ಮಗುವಿನ ಹೆಸರನ್ನೂ ತಿಳಿದಿದ್ದು. ಉತ್ತಮ ಬಾಂಧವ್ಯ ಏರ್ಪಡಿಸಿಕೊಳ್ಳಬೇಕು.
2. ಪ್ರತಿ ಮಗುವಿನಲ್ಲಿ ತಾನೂ ಸಮೂಹಕ್ಕೆ ಸೇರ್ಪಡೆಯಾಗಿದ್ದೇನೆ ಎಂಬ ಭಾವನೆಯನ್ನು ಬೆಳೆಸಬೇಕು. ಇದರಿಂದ ಮಗು ಅದು ತನ್ನ ಶಾಲೆ, ಶಾಲೆಯ ಚಟುವಟಿಕೆಗಳು ಮುಖ್ಯ ಎಂದು ತಿಳಿಯುವುದು
3. ಪ್ರತಿ ಮಗುವನ್ನೂ ಸಹಾನುಭೂತಿಯಿಂದ ನೋಡಬೇಕು. ಮಗುವನ್ನು ಅರ್ಥ ಮಾಡಿಕೊಳ್ಳುವುದರಿಂದ ಶಿಕ್ಷಕರ ಅಧಿಕಾರವನ್ನು ಒಪ್ಪಿಕೊಳ್ಳುತ್ತದೆ.



Scanned with OKEN Scanner

4. ವೈವಿಧ್ಯಮಯ ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳನ್ನು (ಜ್ಞಾನಾತ್ಮಕ, ಜ್ಞಾನೇತರ ಮತ್ತು ಸೃಜನಾತ್ಮಕ) ಒದಗಿಸುವುದರಿಂದ ಮಗು ಸುಲಭವಾಗಿ ಹೊಂದಾಣಿಕೆ ಮಾಡಿಕೊಳ್ಳುವುದಲ್ಲದೆ ತನ್ನ ಸಾಮರ್ಥ್ಯಗಳು ಹಾಗೂ ಪ್ರತಿಭೆಗಳನ್ನು ವ್ಯಕ್ತಪಡಿಸುವುದು.

5. ಶಿಕ್ಷಕರು ಮಕ್ಕಳಲ್ಲಿರುವ ವೈಯಕ್ತಿಕ ಭಿನ್ನತೆಗಳನ್ನು ಗೌರವಿಸಬೇಕು. ಅವರು ಭಿನ್ನ ಸಾಮರ್ಥ್ಯಗಳುಳ್ಳ ಮಕ್ಕಳ ಅವಶ್ಯಕತೆಗಳಿಗೆ ಬೇಡಿಕೆಗಳಿಗೆ ಹೊಂದುವಂತಹ ಕಲಿಕೆಯ ಚಟುವಟಿಕೆಗಳನ್ನು ಯೋಜಿಸಬೇಕು. ಇದರಿಂದ ಶಾಲೆಯ ಬಗ್ಗೆ ಆಕರ್ಷಣೆ ಮತ್ತು ಒಲವು ಉಂಟಾಗಿ ಶಾಲೆ ತಪ್ಪಿಸುವುದು, ಶಾಲೆ ಬಿಡುವುದು ತಪ್ಪುತ್ತದೆ.

6. ಶಾಲಾ ವಾರ್ಷಿಕ ಯೋಜನೆಯಲ್ಲಿ ನಾಟಕ, ಆಟಗಳು, ಕರಕುಶಲತೆ, ಕಲೆ ಮುಂತಾದ ಸಹ ಪಠ್ಯ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಿರಬೇಕು. ಇವು ಮಗುವಿನ ಸ್ವಯಂ ಅಭಿವ್ಯಕ್ತಿ ಮತ್ತು ಸಂವೇಗಾತ್ಮಕ ತೃಪ್ತಿಗೆ ಅನುಕೂಲವಾಗುತ್ತದೆ. ದಮನಕಾರಿ ವರ್ತನೆ, ವ್ಯಂಗ್ಯ, ಪರಿಹಾಸ್ಯ ಅಥವಾ ಬೆದರಿಕೆ ಮುಂತಾದವು ಮಕ್ಕಳನ್ನು ಇತರರಿಂದ ದೂರ ಸರಿಯುವಂತೆ, ಅಸಾಮಾಜಿಕವಾಗುವಂತೆ, ದುಃಖಿತರಾಗುವಂತೆ ಮಾಡುವುದರಿಂದ ಶಿಕ್ಷಕರು ಇಂತಹ ವರ್ತನೆಗಳನ್ನು ತಪ್ಪಿಸಬೇಕು.

7. ತಾರುಣ್ಯ ಪೂರ್ವದಲ್ಲಿ ಮಕ್ಕಳು ಸ್ನೇಹಕ್ಕೆ ತುಂಬಾ ಪ್ರಾಮುಖ್ಯತೆ ನೀಡುತ್ತಾರೆ. ಸಮೂಹ ನಿಷ್ಠೆ ಎಷ್ಟು ಮುಖ್ಯವಾಗುವುದೆಂದರೆ ಮಕ್ಕಳು ಇದಕ್ಕಾಗಿ ಪೋಷಕರಿಗೆ, ಶಿಕ್ಷಕರಿಗೆ ಅವಿಧೇಯರಾಗಿರುವಂತೆ ತೋರುತ್ತದೆ. ಶಿಕ್ಷಕರು ಇದನ್ನು ತಿಳಿದು ಮಕ್ಕಳಲ್ಲಿರುವ ಸಮೂಹ ಜೀವನದ ಅಪೇಕ್ಷೆಯನ್ನು ಸ್ಕೌಟ್ಸ್, ಗೈಡ್‌ಗಳನ್ನು ರೂಪಿಸಿಕೊಳ್ಳುವುದರ ಮೂಲಕ ಸರಿಯಾದ ಮಾರ್ಗದಲ್ಲಿ ಪ್ರವಹಿಸುವಂತೆ ಮಾಡಬಹುದು.

8. ಮಕ್ಕಳು ಆತ್ಮ ವಿಶ್ವಾಸ ಬೆಳೆಸಿಕೊಳ್ಳಲು ಮಾರ್ಗದರ್ಶನ ಮಾಡಬೇಕು ಹಾಗೆಯೇ ತನ್ನ ಯೋಗ್ಯತೆಯನ್ನರಿತು ಧನಾತ್ಮಕ ಸ್ವಪರಿಕಲ್ಪನೆಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡಬೇಕು.

ಮೇಲಿನ ಎಲ್ಲ ಕ್ರಮಗಳು ಚಿಕ್ಕ ಮಕ್ಕಳು ದೈಹಿಕವಾಗಿ, ಮಾನಸಿಕವಾಗಿ, ಸಾಮಾಜಿಕ ಸಂವೇಗಾತ್ಮಕವಾಗಿ ಬೆಳೆದು ವಿಕಾಸ ಹೊಂದಲು ಸಹಾಯ ಮಾಡುತ್ತದೆ.

## ನೆನಪಿಸಲ್ಪಡಬೇಕಾದ ಅಂಶಗಳು

- ಸಮಾಯೋಜನೆ ಎಂದರೆ ವ್ಯಕ್ತಿ ಮತ್ತು ಪರಿಸರಗಳ ನಡುವೆ ಸಾಮರಸ್ಯವುಳ್ಳ ಸಂಬಂಧ ಸ್ಥಾಪಿಸುವುದು ಎಂದರ್ಥ.
- ಅಪಸಮಾಯೋಜನೆ ಎಂದರೆ ವ್ಯಕ್ತಿ ಮತ್ತು ಪರಿಸರಗಳ ನಡುವೆ ಸಾಮರಸ್ಯವಿಲ್ಲದಿರುವುದು.
- ಮಾನಸಿಕ ಆರೋಗ್ಯವೆಂದರೆ ವ್ಯಕ್ತಿ ದಕ್ಷತೆಯಿಂದ, ಸಾಮರಸ್ಯದಿಂದ ಕೆಲಸ ಮಾಡಲು ಸಹಾಯಮಾಡುವ ದೇಹದ ಮತ್ತು ಮನಸ್ಸಿನ ಸುಸ್ಥಿತಿ.
- ಮಕ್ಕಳ ಮಾನಸಿಕ ಆರೋಗ್ಯ ರಕ್ಷಣೆಯ ಮಹತ್ವದ ಜವಾಬ್ದಾರಿ ತರಗತಿ ಶಿಕ್ಷಕರಿಗಿದೆ.



Scanned with OKEN Scanner

## ಅಭ್ಯಾಸ

1. ಉತ್ತಮವಾಗಿ ಹೊಂದಾಣಿಕೆ ಮಾಡಿಕೊಂಡಿರುವ ವ್ಯಕ್ತಿ ಅಥವಾ ಶಿಕ್ಷಕರ ಗುಣಲಕ್ಷಣಗಳನ್ನು ಪಟ್ಟಿಮಾಡಿ.
2. ಮಕ್ಕಳಲ್ಲಿ ಸಮಯೋಜಿತ ವ್ಯಕ್ತಿತ್ವದ ಲಕ್ಷಣಗಳನ್ನು ಗುರ್ತಿಸಲು ಎಚ್ಚರಿಕೆಯಿಂದ ವೀಕ್ಷಿಸಿ.
3. ಮಕ್ಕಳ ಮಾನಸಿಕ ಆರೋಗ್ಯ ರಕ್ಷಣೆಗಾಗಿ ಶಿಕ್ಷಕರು ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸಿ.
4. ಮಾನಸಿಕ ಆರೋಗ್ಯ ಎಂದರೇನು? ಅದರ ಪ್ರಾಮುಖ್ಯತೆ ಏನು?

# ಸಮಾಯೋಜನೆಗೆ ಅಡೆ ತಡೆಗಳು

ಹಿಂದಿನ ಅಧ್ಯಾಯದಲ್ಲಿ ನಾವು ಸಮಾಯೋಜನೆ ಎಂದರೆ ವ್ಯಕ್ತಿ ಮತ್ತು ಪರಿಸರದ ನಡುವಿನ ಸಾಮರಸ್ಯದ ಸಂರಕ್ಷಣೆ ಎಂದು ತಿಳಿದಿದ್ದೇವೆ. ಈ ಅಧ್ಯಾಯದಲ್ಲಿ ಸಮಾಯೋಜನೆಗೆ ಉಂಟಾಗುವ ಅಡತಡೆಗಳೇನು? ಒಬ್ಬ ವ್ಯಕ್ತಿ ತನ್ನ ಪರಿಸರದೊಂದಿಗೆ ಸಾಮರಸ್ಯ ಕಾಪಾಡಿಕೊಳ್ಳಲು ಹೇಗೆ ಪ್ರಯತ್ನಿಸುತ್ತಾನೆಂಬುದನ್ನು ತಿಳಿಯೋಣ. ಹೊಂದಾಣಿಕೆ ಸಮಸ್ಯೆಗಳನ್ನೆದುರಿಸುತ್ತಿರುವ ವ್ಯಕ್ತಿ ಬಳಸಿಕೊಳ್ಳುವ ರಕ್ಷಣಾತಂತ್ರಗಳನ್ನು ಈ ಅಧ್ಯಾಯದಲ್ಲಿ ತಿಳಿಯೋಣ.

ತನ್ನ ಪರಿಸರದೊಂದಿಗೆ ಸಾಮರಸ್ಯದ ಕೊರತೆಯಾದಾಗಲೆಲ್ಲ ವ್ಯಕ್ತಿ ಅದನ್ನು ಪುನಃ ಸ್ಥಾಪಿಸಲು ಸೂಕ್ತ ಅನುಕ್ರಿಯೆಗಳನ್ನೂ ಬಳಸುತ್ತಾನೆ. ಹೀಗೆ ಮಾಡಲು ವಿವಿಧ ರಕ್ಷಣಾತಂತ್ರಗಳನ್ನು ಬಳಸುತ್ತಾನೆ. ಸಮಸ್ಯಾತ್ಮಕ ಸನ್ನಿವೇಶವನ್ನು ಜಯಿಸಲು ಹೊಂದಾಣಿಕೆಯ ತಂತ್ರಗಳನ್ನು ಬಳಸುವಾಗ ನೇರ ವಿಧಾನಗಳನ್ನು ಹೀಗೆ ಬಳಸಬಹುದು.

1. ನೇರವಾಗಿ ಸಮಸ್ಯೆಯನ್ನೆದುರಿಸಿ ಬಿಡಿಸಿಕೊಳ್ಳುವುದು
2. ತನ್ನ ದಾರಿಯನ್ನು ಅಥವಾ ಮಾರ್ಗವನ್ನು ಬದಲಾಯಿಸಿಕೊಳ್ಳುವುದು.
3. ಗುರಿಯನ್ನೇ ಬದಲಾಯಿಸಿಕೊಳ್ಳುವುದು

ಆದರೆ ಈ ಕಾರ್ಯ ಅಷ್ಟು ಸುಲಭವಲ್ಲ. ಹೊಂದಾಣಿಕೆಯ ಮಾರ್ಗದಲ್ಲಿ ಅನೇಕ ಅಡೆತಡೆಗಳಿವೆ ಎಂಬುದು ವ್ಯಕ್ತಿಗೆ ಕಂಡು' ಬರುತ್ತದೆ.

ಇಂತಹ ಅಡೆತಡೆಗಳಲ್ಲಿ ಅತ್ಯಂತ ಮುಖ್ಯವಾದುವುಗಳೆಂದರೆ.

1. ಆಶಾಭಂಗ
2. ಘರ್ಷಣೆಗಳು
3. ಒತ್ತಡ

**ಆಶಾಭಂಗ :** ಹೀಗೆಂದರೆ ಒಬ್ಬ ವ್ಯಕ್ತಿಯ ಅವಶ್ಯಕತೆ ಪೂರೈಕೆಗೆ ಅಡ್ಡಿ ಅಥವಾ ತಡೆಯುಂಟಾಗುತ್ತಿದೆಯೆಂಬ ಭಾವನೆ. ಅವಶ್ಯಕತೆ ಪೂರೈಕೆಯಾಗದಿದ್ದಾಗ ಆಶಾಭಂಗವಾಗುತ್ತದೆ. ಆಶಾಭಂಗಕ್ಕೆ ಅನೇಕ ಕಾರಣಗಳಿವೆ. ಅವು ಆಂತರಿಕ ಅಥವಾ ಬಾಹ್ಯ ಕಾರಣಗಳಾಗಿರಬಹುದು. ವೈಯಕ್ತಿಕ ಅಥವಾ ಪರಿಸರಾತ್ಮಕವಾಗಿರಬಹುದು. ಒಬ್ಬ ವ್ಯಕ್ತಿಯ



Scanned with OKEN Scanner

ಅವಶ್ಯಕತೆಗಳು, ಆಕಾಂಕ್ಷೆಗಳು ಮತ್ತು ಇಚ್ಛೆಗಳು ಹಾಗೂ ಸಹಜ ಶಕ್ತಿಗಳು ಮತ್ತು ಸ್ವಯಂಶಿಸ್ತುಗಳ ನಡುವೆ ಅಂತರ ಹೆಚ್ಚಾಗಿದ್ದಾಗ ಆಶಾಭಂಗವಾಗುತ್ತದೆ. ಬಾಹ್ಯ ಹಾಗೂ ಪರಿಸರಾತ್ಮಕ ಕಾರಣಗಳು ದೈಹಿಕ, ಸಾಮಾಜಿಕ ಅಥವಾ ಆರ್ಥಿಕ ಸ್ವರೂಪದ್ದಿರಬಹುದು. ಅವು ಅತಿ ಅಲ್ಪವಾದ ಮಳೆ, ತಪ್ಪಿಹೋದ ಬಸ್ಸು ಅಥವಾ ಉಗಿಬಂಡಿ ಇತ್ಯಾದಿ ಆಗಿರಬಹುದು. ಅಥವಾ ಮಹತ್ವದ ಅಂಶಗಳಾದ ಕ್ಷಾಮ, ಅಗ್ನಿದುರಂತ ಇತ್ಯಾದಿ ಇರಬಹುದು. ಸಾಮಾಜಿಕ ಪದ್ಧತಿಗಳು, ಪರಂಪರೆಗಳು ಮತ್ತು ರೂಢಿ ರೀತಿಗಳೂ ಆಶಾಭಂಗ ಉಂಟು ಮಾಡಬಹುದು. ಆಧುನಿಕ ದಿನಗಳಲ್ಲಿ ಇಚ್ಛೆಗಳಿಗೂ ಅವುಗಳನ್ನು ಪಡೆಯುವ ಸಾಧನಗಳಿಗೂ ನಡುವಿನ ಅಂತರ ಹೆಚ್ಚಾಗುತ್ತಿದ್ದು ಆಶಾಭಂಗಗಳೂ ಹೆಚ್ಚಾಗುತ್ತಿವೆ.

**ಘರ್ಷಣೆಗಳು :** ಘರ್ಷಣೆಗಳು ದ್ವಂದ್ವಗಳಾಗಿದ್ದು ಒಬ್ಬ ವ್ಯಕ್ತಿ ಭಿನ್ನ ರೀತಿಯ ಕ್ರಿಯೆಗಳನ್ನು ನಿರೀಕ್ಷಿಸುವ ಎರಡು ಅಥವಾ ಹೆಚ್ಚಿನ ಗುರಿಗಳನ್ನು ಎದುರಿಸಬೇಕಾದಾಗ ನಿರ್ಧಾರ ಕೈಗೊಳ್ಳುವಲ್ಲಿ ಕಠಿಣತೆಯನ್ನು ಎದುರಿಸಿ ಆಂತರಿಕ ತುಮುಲ ಅಥವಾ ದ್ವಂದ್ವದ ಸನ್ನಿವೇಶಗಳಾಗಿರುತ್ತವೆ. ಇಂತಹ ಘರ್ಷಣೆಗಳು ಸರಳವಾಗಿರಬಹುದು, ಅಥವಾ ಸಂಕೀರ್ಣವಾಗಿರಬಹುದು. ಆದರೆ ಅವು ಅನಿವಾರ್ಯ. ವ್ಯಕ್ತಿ ಎರಡು ಪರ್ಯಾಯಗಳಲ್ಲಿ ಒಂದನ್ನು ಆಯ್ಕೆ ಮಾಡಬೇಕಾಗುವುದು. ಮತ್ತೊಂದನ್ನು ಕೈಬಿಡಬೇಕಾಗುವುದು. ಇಂತಹ ಅನೇಕ ದ್ವಂದ್ವಾತ್ಮಕ ಸನ್ನಿವೇಶಗಳು ಎದುರಾದಾಗ ಮನೋವೈಜ್ಞಾನಿಕ ಹಾನಿಯುಂಟಾಗಬಹುದು. ಮುಖ್ಯವಾಗಿ ಮೂರು ವಿಧದ ಘರ್ಷಣೆಗಳನ್ನು ಗುರ್ತಿಸಲಾಗಿದೆ. (ಪ್ರಶಿಕ್ಷರು ಉದಾಹರಣೆಗಾಗಿ ಈ ವಿಧಗಳನ್ನು ವಿವರಿಸಬಹುದು)

**ಒತ್ತಡ :** ವ್ಯಕ್ತಿಯ ಅತಿ ಮಹತ್ವದ ಕಾರ್ಯ ನಿರ್ವಹಣೆಗೆ ಬೆದರಿಕೆ ಒಡ್ಡುವಂತಹ ಸ್ಥಿತಿಯನ್ನು ಒತ್ತಡ ಎನ್ನಬಹುದು. ಅಂತಹ ವ್ಯಕ್ತಿ ಸಮಸ್ಯಾತ್ಮಕ ಸನ್ನಿವೇಶವನ್ನು ಎದುರಿಸಲಾರ. ಇದರಿಂದ ಆತ ಉದ್ವೇಗಕ್ಕೊಳಗಾಗಿ ಒತ್ತಡವನ್ನು ಅನುಭವಿಸುತ್ತಾನೆ. ಸ್ವಲ್ಪಮಟ್ಟಿನ ಒತ್ತಡ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಮತ್ತು ಸಫಲತೆ ಗಳಿಸಲು ಅಗತ್ಯವಾದರೂ ತೀವ್ರ ಒತ್ತಡದಿಂದ ಪರಿಸ್ಥಿತಿಯೊಂದಿಗೆ ಹೆಣಗಾಡುವುದು ಅಸಾಧ್ಯವಾಗಿ ಕಾರ್ಯನಿರ್ವಹಣೆಯು ಇಳಿಮುಖವಾಗುತ್ತದೆ. "ಒತ್ತಡವೆನ್ನುವುದು ವಿದ್ಯುಚ್ಛಕ್ತಿ ಇದ್ದಂತೆ. ಅದು ಒಂದು ದೀಪ ಬೆಳಗುವಂತೆ ಮಾಡಿ ಪ್ರಕಾಶಮಾನವಾದ ಬೆಳಕನ್ನು ನೀಡಬಲ್ಲದು. ಆದರೆ ಆ ದೀಪದ ಸಾಮರ್ಥ್ಯಕ್ಕಿಂತ ಮೀರಿದ ವಿದ್ಯುತ್ ಚಾಲಕ ಶಕ್ತಿ ಪ್ರವಹಿಸಿದಾಗ ದೀಪವೇ ಹತ್ತಿ ಉರಿಯುವುದು".

**ರಕ್ಷಣಾ ತಂತ್ರಗಳು :** ಒಬ್ಬ ವ್ಯಕ್ತಿ ಆಶಾಭಂಗದ ಸ್ಥಿತಿಯಲ್ಲಿದ್ದು, ದ್ವಂದ್ವಗಳನ್ನು ಅಥವಾ ಘರ್ಷಣೆಗಳನ್ನು ಪರಿಹರಿಸಿಕೊಳ್ಳಲಾಗದಿದ್ದಾಗ ಉದ್ವೇಗವನ್ನು ಅನುಭವಿಸುತ್ತಾನೆ. ಇದು ಅಸಮತೋಲನವನ್ನುಂಟು ಮಾಡುತ್ತದೆ. ಇಂತಹ ಅಸಮತೋಲನ ಸ್ಥಿತಿ ಆವ್ಯಕ್ತಿ ಉದ್ವೇಗವನ್ನು ದಾಟಿ ಸಮತೋಲನ ಸಾಧಿಸುವವರೆಗೆ ಮುಂದುವರೆಯುತ್ತದೆ.

ಘರ್ಷಣೆಗಳನ್ನು ಪರಿಹರಿಸಿಕೊಂಡು ಉದ್ವೇಗವನ್ನು ಹೋಗಲಾಡಿಸಿಕೊಳ್ಳಲು ವ್ಯಕ್ತಿ ರಕ್ಷಣಾ ಅಥವಾ ಹೊಂದಾಣಿಕೆಯ ತಂತ್ರಗಳನ್ನು ಬಳಸುತ್ತಾನೆ. ಇಂತಹ ತಂತ್ರಗಳನ್ನು ರಕ್ಷಣಾ ತಂತ್ರಗಳೆನ್ನಲು ಕಾರಣವೇನಂದರೆ ವ್ಯಕ್ತಿ ಹೆಚ್ಚುತ್ತಿರುವ ಉದ್ವೇಗ ಮತ್ತು ಒತ್ತಡಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಬಳಸುತ್ತಾನೆ. ಅವು ಪರೋಕ್ಷ ತಂತ್ರಗಳಾಗಿದ್ದು ತನಗರಿವಿಲ್ಲದೆ ಘರ್ಷಣೆಯಿಂದ ಪಾರಾಗಲು, ಉದ್ವೇಗಗಳನ್ನು ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಅವು ತಕ್ಷಣದಲ್ಲಿ ಉದ್ವೇಗಗಳನ್ನು ತೊಡೆದುಹಾಕುತ್ತವೆ ಅವುಗಳ ಪರಿಣಾಮ ಕೇವಲ ತಾತ್ಕಾಲಿಕವಾಗಿರಬಹುದು.

ನಮ್ಮ ನಿತ್ಯ ಜೀವನದಲ್ಲಿ ಬಳಸಲಾಗುವ ರಕ್ಷಣಾ ತಂತ್ರಗಳಲ್ಲಿ ಕೆಲವು ತಂತ್ರಗಳನ್ನು ಕೆಳಗೆ ವಿವರಿಸಲಾಗಿದೆ.



Scanned with OKEN Scanner

1. ಪರಿಹಾರ (Compensation) : ಒಂದು ಕ್ಷೇತ್ರದಲ್ಲಿ ಸಾಮರ್ಥ್ಯ ಅಥವಾ ಸಾಧನೆಯ ಕೊರತೆ ಇರುವ ವ್ಯಕ್ತಿ ಕೊರತೆ ಇಲ್ಲದಿರುವ ಮತ್ತೊಂದು ಕ್ಷೇತ್ರದಲ್ಲಿ ತನ್ನ ಶಕ್ತಿಯನ್ನು ನಿರ್ದೇಶಿಸಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಾನೆ. ಇದೇ ಪರಿಹಾರದ ತಂತ್ರ. ಇದರಿಂದಾಗಿ ವ್ಯಕ್ತಿ ತನ್ನ ಆತ್ಮ ಗೌರವವನ್ನು ಹೆಚ್ಚಿಸಿಕೊಳ್ಳುತ್ತಾನೆ. ಉದಾಹರಣೆಗೆ ಶೈಕ್ಷಣಿಕ ಸಾಧನೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಯು ಕಷ್ಟಪಟ್ಟು ಉತ್ತಮ ಕ್ರೀಡಾಪಟುವಾಗಬಹುದು ಅಥವಾ ಕಲೆಯ ಕ್ಷೇತ್ರದಲ್ಲಿ ತನ್ನ ಸಾಮರ್ಥ್ಯಗಳನ್ನು ಪ್ರದರ್ಶಿಸಬಹುದು. ಇದೇ ತಂತ್ರವನ್ನು ಮತ್ತೊಂದು ರೀತಿಯಲ್ಲಿ ಬಳಸಿ ಯಾವ ಕ್ಷೇತ್ರದಲ್ಲಿ ಕೊರತೆ ಅಥವಾ ದೌರ್ಬಲ್ಯವಿದೆಯೊ ಅದರಲ್ಲಿಯೇ ಕಠಿಣ ಶ್ರಮದಿಂದ ಸಾಧಿಸುವುದು. ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿ ತನ್ನ ಶಾಲಾ ಸಾಧನೆಯನ್ನು ಉತ್ತಮಪಡಿಸಿಕೊಳ್ಳಲು ತನ್ನೆಲ್ಲ ಶಕ್ತಿಯನ್ನು ನಿರ್ದೇಶಿಸಿ ಕಷ್ಟಪಟ್ಟು ಅಭ್ಯಾಸ ಮಾಡಬಹುದು. ಇಲ್ಲಿ ನಾವು ಗ್ರೀಸ್‌ದೇಶದ ಮಹಾನ್ ವಾಗ್ಮಿ ಡೆಮಾಸ್ತನೀಸನ ನಿದರ್ಶನವನ್ನು ಇಲ್ಲಿ ಸ್ಮರಿಸಬಹುದು. ಆತನು ಕೇವಲ ಪ್ರಬಲ ಇಚ್ಛಾಶಕ್ತಿ ಮತ್ತು ಕಠಿಣ ಪರಿಶ್ರಮದಿಂದ ತನಗಿದ್ದ ಉಗ್ಗುವಿಕೆಯನ್ನು ಪರಿಹರಿಸಿಕೊಂಡು ಪ್ರಸಿದ್ಧ ವಾಗ್ಮಿ ಎನಿಸಿದನು.

2. ಪ್ರಕ್ಷೇಪಣ : ಈ ತಂತ್ರ ಬಳಸುವ ವ್ಯಕ್ತಿ ತನ್ನಲ್ಲಿರುವ ಅಪೇಕ್ಷಣೀಯವಲ್ಲದ ಗುಣಲಕ್ಷಣಗಳ ಬಗ್ಗೆ ಆತಂಕ ಅನುಭವಿಸುತ್ತಿದ್ದು ಆತಂಕ ನಿವಾರಣೆಗಾಗಿ ಆ ಗುಣಲಕ್ಷಣಗಳನ್ನು ಇತರರಲ್ಲಿ ಕಾಣುತ್ತಾನೆ. ತನ್ನ ವೈಫಲ್ಯಗಳನ್ನು ಒಪ್ಪಿಕೊಳ್ಳುವ ಬದಲು ಇವೇ ವೈಫಲ್ಯಗಳು ಇತರರಲ್ಲಿವೆಯೆಂದು ತೋರಿಸಲು ಸುತ್ತಲಿರುವವರ ಗಮನ ಸೆಳೆಯುತ್ತಾನೆ. ಸುಳ್ಳು ಹೇಳುವ ವ್ಯಕ್ತಿ ಇತರರು ಅಸತ್ಯ ನುಡಿಯುತ್ತಿರುವರೆಂದು ದೂಷಿಸಬಹುದು. ಸಾಮಾನ್ಯವಾಗಿ ಗಮನ ಸೆಳೆಯುವ ಸಂಗತಿ ಎಂದರೆ ಯಾರು ಅತಿಯಾಗಿ ಇತರರನ್ನು ಟೀಕಿಸುವರೋ ಅಂತಹವರು ತಮ್ಮಲ್ಲಿರುವ ಲೋಪಗಳನ್ನು ಇತರರ ಮೇಲೆ ಪ್ರಕ್ಷೇಪಿಸುತ್ತಿರುತ್ತಾರೆ. ಹೀಗೆ, ನಮ್ಮ ವೈಫಲ್ಯಗಳಿಗೆ ನಾವೇ ಜವಾಬ್ದಾರರೆಂದು ಒಪ್ಪಿಕೊಳ್ಳದೆ ಇತರರನ್ನು ನಿಂದಿಸಿದಾಗ ಪ್ರಕ್ಷೇಪಣ ಮಾಡುತ್ತಿದ್ದೇವೆಂದು ತಿಳಿಯಬಹುದು. ಇದರಿಂದ ವ್ಯಕ್ತಿ ಸ್ವಲ್ಪಮಟ್ಟಿನ ಉದ್ವೇಗದಿಂದ ಮುಕ್ತನಾದೆಂತೆ ಭಾವಿಸಬಹುದು. ಆದರೆ ಅತಿಯಾದ ಪ್ರಕ್ಷೇಪಣದಿಂದ ತೊಂದರೆಗಳುಂಟಾಗುತ್ತವೆ.

3. ತರ್ಕ ಸಮ್ಮತವಾಗಿಸುವಿಕೆ (Rationalisisation) : ಇದೊಂದು ಅತಿ ಹೆಚ್ಚಾಗಿ ಬಳಕೆಯಲ್ಲಿರವ ತಂತ್ರವಾಗಿದೆ. ಒಬ್ಬ ವ್ಯಕ್ತಿ ಆತಂಕಕ್ಕೊಳಗಾದಾಗ ಮತ್ತು ತಪ್ಪು ಮಾಡಿದಾಗ ಉಂಟಾಗುವ ಉದ್ವೇಗವನ್ನು ಕಡಿಮೆ ಮಾಡಲು ಮತ್ತು ಆತಂಕವನ್ನು ಹೋಗಲಾಡಿಸಿಕೊಳ್ಳಲು ತನ್ನ ಕ್ರಿಯೆಗಳಿಗೆ ತೋರಿಕೆಗೆ ನ್ಯಾಯಸಮ್ಮತವೆನಿಸುವ ಕಾರಣಗಳನ್ನು ಕೊಟ್ಟು ನಿಜವಾದ ಕಾರಣಗಳನ್ನು ಮುಚ್ಚಿಡುತ್ತಾನೆ. ಹೀಗೆ ಮಾಡಲು ನಿಜವಾದ ಕಾರಣಗಳನ್ನು ಒಪ್ಪಿಕೊಳ್ಳುವುದು ಅತ್ಯಂತ ನೋವುಂಟುಮಾಡುವಂತಿರುವುದೇ ಕಾರಣ. ಪರೀಕ್ಷೆಯಲ್ಲಿ ಅನುತ್ತೀರ್ಣವಾದ ವಿದ್ಯಾರ್ಥಿಯು ತಾನು ಉತ್ತೀರ್ಣನಾಗದಿರಲು ಕಂಠಪಾಠಕ್ಕೆ ಆದ್ಯತೆ ನೀಡುವ ಇಂದಿನ ಪರೀಕ್ಷಾ ಪದ್ಧತಿಯೇ ಕಾರಣ ಎಂಬಂತಹ ಅನೇಕ ಕಾರಣಗಳನ್ನು ಮುಂದಿಡಬಹುದು.

ಈ ತಂತ್ರವು ಹುಳಿ ದ್ರಾಕ್ಷಿಯ ತಂತ್ರವನ್ನಾಗಲಿ, ಸಿಹಿ ನಿಂಬೆಯ ತಂತ್ರವನ್ನಾಗಲಿ ಹೋಲಬಹುದು. ಹುಳಿ ದ್ರಾಕ್ಷಿಯ ತಂತ್ರವಾದರೆ ಒಬ್ಬ ವ್ಯಕ್ತಿ ತಾನು ಸಾಧಿಸಲಾಗದುದು ಸಾಧಿಸಲು ಯೋಗ್ಯವಾದದ್ದಲ್ಲ ಎಂದು ಆಗ್ರಹ ಮಾಡಬಹುದು. ಸಿಹಿ ನಿಂಬೆಯ ತಂತ್ರವಾದಾಗ ಒಬ್ಬ ವ್ಯಕ್ತಿ ತಾನು ಅನಿವಾರ್ಯವಾಗಿ ಜೀವನ ನಡೆಸಬೇಕಾಗಿರುವ ಸನ್ನಿವೇಶವನ್ನೇ ಸಮರ್ಥಿಸಬಹುದು. ತನ್ನೆಲ್ಲ ಧನ ಅಥವಾ ಆಸ್ತಿಯನ್ನು ಕಳೆದುಕೊಂಡಿರುವ ವ್ಯಕ್ತಿ ಸರಳ ಜೀವನದ ಸುಖವನ್ನು ಕೊಂಡಾಡಬಹುದು. ಸಮರ್ಥನೆಯ ತಂತ್ರವು ಯಾವ ಸ್ವರೂಪದ್ದೇ ಆಗಿರಲಿ ಅದನ್ನು ಬಳಸುತ್ತಿರುವ



Scanned with OKEN Scanner

ವ್ಯಕ್ತಿ ತನ್ನನ್ನು ತಾನೇ ಮೋಸ ಪಡಿಸಿಕೊಳ್ಳುತ್ತಿದ್ದು ತನ್ನ ವರ್ತನೆಗಳು ಮತ್ತು ಕ್ರಿಯೆಗಳಿಗೆ ನಿಜವಾದ ಕಾರಣಗಳೊಂದಿಗೆ ಸಂಪರ್ಕವನ್ನೇ ಕಳೆದುಕೊಳ್ಳುತ್ತಾನೆಂಬುದನ್ನು ನಾವು ಮನಗಾಣಬೇಕು.

4. **ತಾದಾತ್ಮ್ಯ ಹೊಂದುವಿಕೆ :** ಈ ಹೊಂದಾಣಿಕೆಯ ತಂತ್ರವನ್ನು ಬಳಸುವ ವ್ಯಕ್ತಿ ಕೇವಲ ತೃಪ್ತಿ ಹೊಂದುವುದಕ್ಕಾಗಿ ಬೇರೊಬ್ಬ ಪ್ರಸಿದ್ಧ ಅಥವಾ ಯಶಸ್ವಿ ವ್ಯಕ್ತಿಯೊಂದಿಗೆ ತಾದಾತ್ಮ್ಯ ವ್ಯಕ್ತಪಡಿಸುತ್ತಾನೆ. ಮಕ್ಕಳು ತಮ್ಮನ್ನು ತಮ್ಮ ಪೋಷಕರೊಂದಿಗೆ ಅಥವಾ ಅಚ್ಚುಮೆಚ್ಚಿನ ಶಿಕ್ಷಕರೊಂದಿಗೆ ಸಮೀಕರಿಸಿಕೊಳ್ಳುವರು. ನಮ್ಮಲ್ಲಿ ಕೆಲವು ಗುಣಗಳಿಲ್ಲವೆನಿಸಿದಾಗ ಅಥವಾ ನಾವು ಕೆಲವು ಸಾಧನೆಗಳನ್ನು ಮಾಡಲಾಗುವುದಿಲ್ಲವೆನಿಸಿದಾಗ ಅಂತಹ ಗುಣಗಳಿರುವ ಮಾಡಿರುವ ವ್ಯಕ್ತಿಗಳೊಂದಿಗೆ ನಮ್ಮನ್ನು ನಾವೇ ಸಮೀಕರಿಸಿಕೊಳ್ಳುತ್ತೇವೆ. ತಾದಾತ್ಮ್ಯತೆಯು ವ್ಯಕ್ತಿ ಪೂಜೆಯ ಸ್ವರೂಪ ಹೊಂದಬಹುದು. ಈ ತಂತ್ರವು ಅಪೇಕ್ಷಣೀಯ ಅಭ್ಯಾಸಗಳನ್ನು, ನಡವಳಿಕೆಗಳನ್ನೂ ಗಳಿಸಲು ಸಹಾಯವಾಗುವವರೆಗೆ ಇದು ಒಳ್ಳೆಯದು. ಆದರೆ, ಅತಿಯಾದಾಗ ಇತರರ ಸಾಧನೆಗಳು ಮತ್ತು ಪ್ರಸಿದ್ಧಿಗಳ ನೆರಳಿನಲ್ಲಿ ಜೀವನ ನಡೆಸುವ ಪ್ರವೃತ್ತಿ ಬೆಳೆದು ತನ್ನ ಕೀರ್ತಿಯನ್ನು ಸಾಧಿಸಲು ತಾನೇ ಪ್ರಯತ್ನಿಸುವ ಪ್ರವೃತ್ತಿ ಮಾಯವಾಗುವುದು. ಜೊತೆಗೆ ತನ್ನ ಸ್ವಂತಿಕೆಯನ್ನೇ ಕಳೆದುಕೊಳ್ಳುವ ಭಯವೂ ಇರುತ್ತದೆ.

5. **ಪ್ರತಿಸ್ಥಾಪನೆ :** ಈ ತಂತ್ರ ಬಳಸುವ ವ್ಯಕ್ತಿ ತನ್ನ ಮೂಲ ಗುರಿಗಳನ್ನು, ಆಕಾಂಕ್ಷೆಗಳನ್ನು ಬದಲಿಸಿಕೊಳ್ಳುವನು. ವೈಫಲ್ಯವನ್ನು ತಪ್ಪಿಸುವುದಕ್ಕಾಗಿ ಈ ರೀತಿ ಮಾಡಲಾಗುತ್ತದೆ. ಮೂಲ ಗುರಿಗಳು ಅಥವಾ ಆಕಾಂಕ್ಷೆಗಳು ಸಾಧಿಸಲು ತುಂಬಾ ಕಠಿಣವೆನಿಸಿ ಸುಲಭವಾದ ಗುರಿಗಳನ್ನು, ಆಕಾಂಕ್ಷೆಗಳನ್ನು ಬದಲಿಸಿಕೊಳ್ಳಲಾಗುವುದು. ಎಂಜಿನಿಯರ್ ಆಗಬಯಸುವ ವಿದ್ಯಾರ್ಥಿಯೊಬ್ಬನು ಅಗತ್ಯ ಸಂಪನ್ಮೂಲಗಳ ಕೊರತೆಯಿಂದಾಗಿ ಡಿಪ್ಲೊಮಾ ಅಧ್ಯಯನ ಮಾಡಬಹುದು. ಈ ತಂತ್ರವು ವ್ಯಕ್ತಿತ್ವದ ಸಮತೋಲನಕ್ಕೆ ಹಾನಿಯುಂಟು ಮಾಡುವುದಿಲ್ಲ.

6. **ಹಗಲುಗನಸು ಅಥವಾ ಭ್ರಮೆ :** ಇದೊಂದು ಹಿಂಜರಿಕೆಯ ತಂತ್ರವಾಗಿದೆ. ನೈಜ ಸಮಸ್ಯೆಗಳೆದುರಾದಾಗ ವ್ಯಕ್ತಿ ಅವುಗಳನ್ನು ಧೈರ್ಯವಾಗಿ ಎದುರಿಸಿ ಪರಿಹರಿಸಿಕೊಳ್ಳಬೇಕು. ಹೀಗೆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಬದಲಾಗಿ ಅಪಜಯದ ಭಯದಿಂದ ಭ್ರಮಾಲೋಕಕ್ಕೆ ಜಾರಿಕೊಳ್ಳುತ್ತಾನೆ. ನಟನೆಯ ಅಥವಾ ಭ್ರಮೆಯ ಆ ಲೋಕದಲ್ಲಿ ಪ್ರತಿ ಕಾರ್ಯದಲ್ಲೂ ಯಶಸ್ಸೇ ದೊರೆಯುತ್ತದೆ.

   ಹಗಲು ಗನಸು ವ್ಯಕ್ತಿ ಸಮಸ್ಯೆಯಿಂದ ತಪ್ಪಿಸಿಕೊಂಡು, ವಿಶ್ರಮಿಸಿಕೊಳ್ಳಲು ಸಹಾಯಕವಾಗುವುದರಿಂದ ಅದೊಂದು ಹಿತಕರ ಅನುಭವ. ಆದರೆ ಅತಿಯಾಗಿ ಹಗಲುಗನಸು ಕಾಣುವುದರಿಂದ ವ್ಯಕ್ತಿ ನೈಜವಲ್ಲದ, ಊಹಾತ್ಮಕ ಯಶಸ್ಸಿನಿಂದ ತೃಪ್ತನಾಗಿ, ಜೀವನದ ಕಠಿಣ ಸತ್ಯಗಳೊಂದಿಗೆ ಸಂಪರ್ಕವನ್ನೇ ಕಳೆದುಕೊಳ್ಳಬಹುದು.

7. **ಉದಾತ್ತೀಕರಣ :** ಈ ತಂತ್ರ ಬಳಸುವವರು ತಮ್ಮ ಆಕಾಂಕ್ಷೆಗಳನ್ನು ಸಾಮಾಜಿಕವಾಗಿ ಅಪೇಕ್ಷಣೀಯ ಮಾರ್ಗಗಳಲ್ಲಿ ಪುನರ್ನಿರ್ದೇಶಿಸುತ್ತಾರೆ. ಸಾಮಾಜಿಕ ನಿರ್ಬಂಧಗಳು, ನಿಯಮಗಳು ಮತ್ತಿತರ ಕಾರಣಗಳಿಂದಾಗಿ ತಮ್ಮ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲಾಗದ ಅನೇಕರು ತಮ್ಮ ಶಕ್ತಿಯನ್ನು ಸಮಾಜಸೇವೆ, ಸಾಹಿತ್ಯ ಅಥವಾ ಕಲೆಯಲ್ಲಿ ಸಾಧನೆ ಮುಂತಾದ ಕಾರ್ಯಗಳಿಗೆ ಬಳಸುತ್ತಾರೆ. ಈ ರೀತಿಯ ಉದಾತ್ತೀಕರಣವು ಸಮಾಜಕ್ಕೆ ಲಾಭದಾಯಕವಾಗಿದೆ.

8. **ದಮನ :** ಒಬ್ಬ ವ್ಯಕ್ತಿಯ ಪ್ರಬಲ ಸಂವೇಗಾತ್ಮಕ ಅನಿಸಿಕೆಗಳನ್ನು ದುಃಖದಾಯಕವಾದ ಮತ್ತು ಅಹಿತಕರ ಅನುಭವಗಳನ್ನು, ನೆನಪುಗಳನ್ನು ಸುಪ್ತ ಮನಸ್ಸಿನೊಳಕ್ಕೆ ತಳ್ಳುವುದೇ ದಮನ ತಂತ್ರ. ಅವಮಾನದ ಭಾವನೆ,

ತಪ್ಪಿತಸ್ಥ ಭಾವನೆ ಅಥವಾ ತನಗೆ ಯೋಗ್ಯತೆ ಇಲ್ಲವೆಂಬ ಭಾವನೆಯಿಂದ ತಪ್ಪಿಸಿಕೊಳ್ಳಲು ಹೀಗೆ ಮಾಡಲಾಗುವುದು. ಆದರೆ ಇಂತಹ ಭಾವನೆಗಳು ಅಥವಾ ನೆನಪುಗಳು ಪೂರ್ಣವಾಗಿ ಮರೆತುಹೋಗುವುದಿಲ್ಲ. ದಮನ ಮಾಡಲ್ಪಟ್ಟ ಇಂತಹ ಭಾವನೆಗಳು ಜಾಗೃತ ಮನಸ್ಸನ್ನು ಕಲಕುವುದಲ್ಲದೆ ಬೇರೆ ಸಂದರ್ಭದಲ್ಲಿ ಮಾನಸಿಕ ಸಂಕೀರ್ಣತೆಗಳ ರೂಪದಲ್ಲಿ ಕಾಣಿಸಿಕೊಳ್ಳಬಹುದು.

ದಮನ (Repression) ಮತ್ತು ಅದುಮಿಡುವುದು (Suppression) ಇವೆರಡರ ನಡುವೆ ವ್ಯತ್ಯಾಸವಿದೆ. ದಮನವೆಂದರೆ ಹಿತಕರವಲ್ಲದ ನೆನಪುಗಳನ್ನು ತನಗರಿವಿಲ್ಲದೆಯೇ ಸುಪ್ತ ಮನಸ್ಸಿನೊಳಕ್ಕೆ ತಳ್ಳುವುದು. ಬದಲಾಗಿ ಅದುಮಿಡುವುದು ಎಂದರೆ ಯತ್ನ ಪೂರ್ವಕವಾಗಿ ಇಂತಹ ಆಲೋಚನೆಗಳನ್ನು ಸುಪ್ತ ಮನಸ್ಸಿಗೆ ತಳ್ಳುವುದು ಎಂದರ್ಥ.

ಮೇಲೆ ಹೇಳಿದ ತಂತ್ರಗಳು ಮಾತ್ರವಲ್ಲದೆ ಹಿಮ್ಮರಳುವಿಕೆ, ಅನಾರೋಗ್ಯದ ನಟನೆ, ಸ್ಥಾನಪಲ್ಲಟ, ನಾಚಿಕೆ, ಗಮನ ಸೆಳೆಯುವುದು ಇತ್ಯಾದಿ ಹಲವಾರು ರಕ್ಷಣಾ ತಂತ್ರಗಳಿವೆ.

ಈ ಎಲ್ಲ ತಂತ್ರಗಳನ್ನೂ ನಾವೆಲ್ಲರೂ ನಮ್ಮ ನಿತ್ಯ ಜೀವನದಲ್ಲಿ ಒಂದಲ್ಲ ಒಂದು ಸಂದರ್ಭದಲ್ಲಿ ಬಳಸುತ್ತೇವೆ. ನಾವು ಈ ಯಾವ ತಂತ್ರವನ್ನೂ ಬಳಸುವುದೇ ಇಲ್ಲವೆಂದು ಹೇಳಿ ನಮ್ಮನ್ನೇ ಮೋಸಗೊಳಿಸಿಕೊಳ್ಳಬಾರದು. ಅನೇಕ ಸಲ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ತಂತ್ರಗಳ ಬಳಕೆಯಾಗುತ್ತವೆ. ಇವುಗಳನ್ನು ವಿರಳವಾಗಿ ಬಳಸಿದಲ್ಲಿ ಆತಂಕ ನಿವಾರಿಸಿಕೊಳ್ಳಲು, ಮಾನಸಿಕ ತುಮುಲಗಳನ್ನು ಕಡಿಮೆ ಮಾಡಲು, ಸ್ವಯಂ ಕಲ್ಪನೆಯನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತವೆ. ಅವುಗಳನ್ನು ಆಗಾಗ್ಗೆ ಬಳಸಿದರೆ ಹಾನಿಕಾರಕವಾಗುತ್ತವೆ. ಈ ಎಲ್ಲ ರಕ್ಷಣಾ ತಂತ್ರಗಳು ಕಲಿತವುಗಳೇ ವಿನಃ ಸಹಜವಲ್ಲ. ಅವುಗಳನ್ನು ಕೇವಲ ಹಿತಕರ ಭಾವನೆ ಅನುಭವಿಸಲು ಮತ್ತು ಸಮಸ್ಯೆಗಳೊಂದಿಗೆ ಮುಂದುವರೆಯಲು ಮಾತ್ರ ಬಳಸಿದರೆ ಅದು ಸಮ್ಮತವೆನಿಸುತ್ತದೆ. ಬದಲಾಗಿ, ಅವುಗಳನ್ನು ಅತಿಯಾಗಿ ಬಳಸಿದರೆ ಹಾನಿಕರವಾಗುತ್ತದೆ. ಏಕೆಂದರೆ ಈ ತಂತ್ರಗಳು ನೈಜ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ. ಅವು ಸಮಸ್ಯೆಗಳನ್ನು ಕೇವಲ ತಾತ್ಕಾಲಿಕವಾಗಿ ಮರೆ ಮಾಡುತ್ತವೆ. ವ್ಯಕ್ತಿತ್ವದ ಹೊಂದಾಣಿಕೆಗೆ ಅತ್ಯುತ್ತಮ ಮಾರ್ಗವೆಂದರೆ ಸಮಸ್ಯೆಗಳನ್ನು ನೇರವಾಗಿ ಎದುರಿಸಿ, ಬಿಡಿಸುವ ಪ್ರಯತ್ನ ಮಾಡಿ, ಪರಿಹರಿಸಿಕೊಂಡು ಸಮಸ್ಥಿತಿಯನ್ನು ಸಂರಕ್ಷಿಸಿಕೊಳ್ಳುವುದೇ ಆಗಿದೆ.

### ನೆನಪಿಡಬೇಕಾದ ಅಂಶಗಳು

- ವ್ಯಕ್ತಿ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಮಾರ್ಗದಲ್ಲಿ ಅಡ್ಡಿಯುಂಟಾಗುತ್ತಿದೆಯೆಂಬ ಭಾವನೆಯೇ ಆಶಾಭಂಗ.
- ಎರಡು ಅಥವಾ ಅದಕ್ಕಿಂತ ಹೆಚ್ಚಿನ ಗುರಿಗಳನ್ನು ಎದುರಿಸಬೇಕಾದಾಗ ನಿರ್ಧಾರ ಕೈಗೊಳ್ಳುವುದು ಕಠಿಣವೆನಿಸುವ ಸನ್ನಿವೇಶಗಳನ್ನು ಘರ್ಷಣೆಗಳು ಅಥವಾ ಉಭಯ ಸಂಕಟಗಳು ಎನ್ನುತ್ತೇವೆ.
- ವ್ಯಕ್ತಿಯ ಮಹತ್ವದ ಕಾರ್ಯ ನಿರ್ವಹಣೆಗೆ ಬೆದರಿಕೆಯುಂಟಾದ ಸ್ಥಿತಿಯನ್ನು ಒತ್ತಡ ಎನ್ನುತ್ತೇವೆ.
- ಉಭಯ ಸಂಕಟಗಳಿಂದ ಪಾರಾಗಲು, ಉದ್ವೇಗಗಳಿಂದ ಮುಕ್ತರಾಗಲು ಹಾಗೂ ಪರಿಸರಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಹಲವು ತಂತ್ರಗಳನ್ನು ಬಳಸುತ್ತೇವೆ.
- ಪರಿಹಾರ, ಪ್ರಕ್ಷೇಪಣ, ತರ್ಕಸಮ್ಮತವಾಗಿಸುವಿಕೆ, ಸಮೀಕರಿಸಿಕೊಳ್ಳುವುದು, ಪ್ರತಿಸ್ಥಾಪನೆ, ಹಗಲುಗನಸು, ಉದಾತ್ತೀಕರಣ, ಹಿಮ್ಮರಳುವಿಕೆ, ದಮನ ಇವು ಕೆಲವು ಹೊಂದಾಣಿಕೆಯ ತಂತ್ರಗಳು.



Scanned with OKEN Scanner

- ಸಮಸ್ಯೆಗಳನ್ನು ಎದುರಿಸಿ ಪರಿಹಾರ ಕಂಡುಕೊಳ್ಳುವುದನ್ನು ಕಲಿಯುವುದು ಉತ್ತಮ. ಇದರಿಂದ ಉಭಯ ಸಂಕಟಗಳಿಂದ ಮತ್ತು ಒತ್ತಡಗಳಿಂದ ಶಾಶ್ವತ ಪರಿಹಾರ ಸಿಗುತ್ತದೆ.

## ಅಭ್ಯಾಸ

1. ವ್ಯಕ್ತಿತ್ವ ಅಪಸಮಾಯೋಜನೆಗೆ ಕಾರಣಗಳನ್ನು ವಿವರಿಸಿ.
2. ಹೊಂದಾಣಿಕೆಯ ತಂತ್ರಗಳೆಂದರೇನು? ಯಾವುದಾದರೂ ಎರಡು ತಂತ್ರಗಳ ಸಂಕ್ಷಿಪ್ತ ವಿವರ ಕೊಡಿ.
3. ರಕ್ಷಣಾ ತಂತ್ರಗಳೆಂದರೇನು? ಅವುಗಳನ್ನು ಹಾಗೇಕೆ ಕರೆಯಲಾಗಿದೆ?
4. ರಕ್ಷಣಾ ತಂತ್ರಗಳ ಬಳಕೆಗಿಂತ ನೇರ ವಿಧಾನ ಬಳಕೆ ಉತ್ತಮ. ಏಕೆ?

## ಸ್ವ ಪರಿಕಲ್ಪನೆ

ಈ ಅಧ್ಯಾಯದಲ್ಲಿ ನಾವು ವ್ಯಕ್ತಿತ್ವ ವಿಕಾಸದಲ್ಲಿ ಸ್ವಪರಿಕಲ್ಪನೆಯ ಅರ್ಥ ಮತ್ತು ಪ್ರಾಮುಖ್ಯವನ್ನು ತಿಳಿಯಲಿದ್ದೇವೆ. ಸ್ವ ಪರಿಕಲ್ಪನೆಯು ಅನೇಕ ಅಂಗಗಳನ್ನು ಹೊಂದಿದೆ. ಈ ಅಧ್ಯಾಯದಲ್ಲಿ ಸ್ವಬಿಂಬದ ಪರಿಕಲ್ಪನೆಯೂ ಸೇರಿದ್ದು ಅದನ್ನು ವಿಕಾಸ ಮಾಡುವುದು ಹೇಗೆಂಬುದನ್ನು ತಿಳಿಯಬಹುದು.

ಸ್ವ ಪರಿಕಲ್ಪನೆ ಎಂದರೆ ಒಬ್ಬ ವ್ಯಕ್ತಿ ತನ್ನನ್ನು ತಾನು ನೋಡುವ ದೃಷ್ಟಿ, ಪರಿದರ್ಶನ ಎನ್ನಬಹುದು. ಅದು ಯಾವುದೇ ಒಂದು ನಿರ್ದಿಷ್ಟ ಸಮಯದಲ್ಲಿ ಒಬ್ಬ ವ್ಯಕ್ತಿ ತನ್ನನ್ನು ಕುರಿತು ನೀಡಬಹುದಾದ ಸಂಪೂರ್ಣ ವರ್ಣನೆ. ಹೀಗೆಂದರೆ ಪ್ರತಿ ವ್ಯಕ್ತಿಯೂ ತನ್ನ ಸಾಮರ್ಥ್ಯಗಳು, ಇತಿಮಿತಿಗಳು ಹಾಗೂ ಹೆಬ್ಬಯಕೆಗಳನ್ನು ಕುರಿತು ಒಂದು ಕಲ್ಪನೆಯನ್ನು ಬೆಳೆಸಿಕೊಳ್ಳುತ್ತಾನೆ. ಇಲ್ಲಿ ವ್ಯಕ್ತಿ ತನ್ನ ಆತ್ಮ ಜ್ಞಾನದ ವಸ್ತುವಾಗುವುದೇ ಪ್ರಧಾನವಾಗಿದೆ. ಆದರೆ ತಾನು ಏನೆಂಬುದಾಗಿ ತನ್ನ ಮನಸ್ಸಿನಲ್ಲಿ ಊಹಿಸುತ್ತಾನೆಯೋ ಆ ಭಾವನೆಯೂ ಸೇರಿರುತ್ತದೆ. ಅದು ಆತನ ಪೂರ್ವಾನುಭವಗಳನ್ನು ಅವಲಂಬಿಸಿರುತ್ತದೆ. ಅನುಭವಗಳು ತೃಪ್ತಿದಾಯಕವಾಗಿದ್ದರೆ ಸ್ವಪರಿಕಲ್ಪನೆಯೂ ಧನಾತ್ಮಕವಾಗಿರುತ್ತದೆ. ಬದಲಾಗಿ ವ್ಯಕ್ತಿ ವೈಫಲ್ಯಗಳನ್ನು ಆಶಾಭಂಗಗಳನ್ನು ಎದುರಿಸಿದ್ದರೆ ಸ್ವಪರಿಕಲ್ಪನೆಯೂ ಋಣಾತ್ಮಕವಾಗಿರುತ್ತದೆ.

ಸ್ವ ಪರಿಕಲ್ಪನೆಯು ವ್ಯಕ್ತಿಯ ವರ್ತನೆಯನ್ನು ನಿರ್ದೇಶಿಸುವುದರಿಂದ ಅತ್ಯಂತ ಮುಖ್ಯವಾಗಿದೆ. ಅದು ವ್ಯಕ್ತಿತ್ವದ ಸಾಮಾನ್ಯ ಸ್ಥಿತಿ ಅಥವಾ ಕಾರ್ಯನಿರ್ವಹಣೆಯಲ್ಲಿ ದೋಷವನ್ನೂ ನಿರ್ಧರಿಸುತ್ತದೆ. ಆದ್ದರಿಂದ ಮಗು ಸರಿಯಾದ ಸ್ವ ಪರಿಕಲ್ಪನೆ ಬೆಳೆಸಿಕೊಳ್ಳಲು ಸಹಾಯಕವಾಗುವಂತಹ ಅನುಭವಗಳನ್ನು ಒದಗಿಸಬೇಕು. ಆತ್ಮ ವಿಶ್ವಾಸದಿಂದ ತನ್ನ ದೈನಂದಿನ ಜೀವನದ ಚಟುವಟಿಕೆಗಳನ್ನು ಮಾಡಬಲ್ಲ ಮಗು ಯಶಸ್ಸು ಗಳಿಸುವುದು ಸಾಧ್ಯವಾಗುತ್ತದೆ. ಯಶಸ್ಸಿನಿಂದ ಆತ್ಮಗೌರವ ಹಾಗೂ ಸಾಮಾಜಿಕ ಗೌರವಗಳು ಬೆಳೆಯುತ್ತವೆ. ನಿರಂತರವಾದ ಯಶಸ್ಸು ಆತ್ಮಾಭಿಮಾನವನ್ನು ಹೆಚ್ಚಿಸಿ, ಸ್ಪಷ್ಟವಾದ, ಧನಾತ್ಮಕ ಸ್ವಪರಿ ಕಲ್ಪನೆ ಮೂಡಿಸುತ್ತದೆ. ಇಂತಹ ವ್ಯಕ್ತಿಯು ಇತರರೊಂದಿಗೆ ಸಮರಸ ಸಂಬಂಧವನ್ನು ಸ್ಥಾಪಿಸಿಕೊಳ್ಳಬಲ್ಲವನಾಗಿ, ಉತ್ತಮ ಸಮಯೋಜಿತ ವ್ಯಕ್ತಿತ್ವ ಬೆಳೆಸಿಕೊಳ್ಳುವನು. ಇಂತಹ ವ್ಯಕ್ತಿಯು ತನ್ನ ಶಕ್ತಿ ಸಾಮರ್ಥ್ಯಗಳನ್ನು ಗರಿಷ್ಠ ಮಟ್ಟಕ್ಕೆ ಬೆಳೆಸಿಕೊಳ್ಳಬಹುದು.

ಇದಕ್ಕೆ ಬದಲಾಗಿ ಋಣಾತ್ಮಕ ಅನುಭವಗಳಿಗೊಳಗಾದ ಮಗು ತನ್ನಲ್ಲಿ ನ್ಯೂನತೆ ಅಥವಾ ಕೊರತೆ ಇದೆಯೆಂದು ಭಾವಿಸಿ, ಆತ್ಮ ವಿಶ್ವಾಸ ಮತ್ತು ಆತ್ಮಾಭಿಮಾನದ ಕೊರತೆ ಅನುಭವಿಸುತ್ತದೆ. ತನ್ನನ್ನು ತಾನು ಋಣಾತ್ಮಕ



Scanned with OKEN Scanner

ದೃಷ್ಟಿಕೋನದಿಂದ ನೋಡುವುದಲ್ಲದೆ ಆತ್ಮ ನಿಂದೆಯೂ ಪ್ರಧಾನವಾಗಿರುತ್ತದೆ. ಎಂದರೆ, ಇಂತಹ ಮಗುವಿನ ಸ್ವಪರಿಕಲ್ಪನೆ ಋಣಾತ್ಮಕವಾಗಿದ್ದು ತನ್ನನ್ನು ತಾನು ದುಃಖಿ, ದುರ್ಬಲ ಹಾಗೂ ನಿರುಪಯುಕ್ತ ಎಂದು ತಿಳಿಯುತ್ತದೆ.

ಇಂತಹ ಭಾವನೆಗೆ ಕಾರಣವೇನೆಂದರೆ ಈ ವ್ಯಕ್ತಿ ನೈಜ/ವಾಸ್ತವ ಅನುಭವಗಳೊಂದಿಗಿನ ಸಂಪರ್ಕ ಕಳೆದುಕೊಂಡಿರುತ್ತಾನೆ. ಸನ್ನಿವೇಶಗಳನ್ನು, ಅನುಭವಗಳನ್ನು ಗ್ರಹಿಸುವ ರೀತಿ ಆತನಿಗಿರುವ ಸ್ವ ಪರಿಕಲ್ಪನೆಯನ್ನು ಆಧರಿಸಿರುತ್ತದೆ. ತನ್ನ ಸ್ವ ಪರಿಕಲ್ಪನೆಗೆ ವಿರುದ್ಧವಾದ ಯಾವುದೇ ಅನುಭವಕ್ಕೆ ವಿಕೃತ ಗ್ರಹಿಕೆ ನೀಡಲಾಗುತ್ತದೆ. ತನ್ನ ಸ್ವ ಪರಿಕಲ್ಪನೆಗೆ ಅನುಗುಣವಾದ ಅನುಭವಗಳನ್ನು ಬೆದರಿಕೆಗಳೆಂದು ಪರಿಗಣಿಸಲಾಗುತ್ತವೆ. ವ್ಯಕ್ತಿ ತನಗೆ ಹೆಚ್ಚು ಹೆಚ್ಚು ಬೆದರಿಕೆಗಳಿವೆಯೆಂದು ಅನಿಸಿದಾಗಲೆಲ್ಲ ಅವನು ಇನ್ನೂ ಹೆಚ್ಚು ರಕ್ಷಣಾತ್ಮಕವಾಗಿ ವರ್ತಿಸಿ ವಾಸ್ತವ ಅನುಭವಗಳೊಂದಿಗೆ ಸಂಪರ್ಕವನ್ನೇ ಕಳೆದುಕೊಳ್ಳುತ್ತಾನೆ.

ಆದ್ದರಿಂದ ಪ್ರತಿ ಮಗುವಿಗೂ ಧನಾತ್ಮಕ ಅನುಭವಗಳನ್ನು ಒದಗಿಸಬೇಕಾದುದು ಅತ್ಯವಶ್ಯ. ಇದರಿಂದ ಅದು ವಾಸ್ತವಿಕತೆ ಆಧಾರಿತ, ಧನಾತ್ಮಕ ಸ್ವ-ಪರಿಕಲ್ಪನೆ ಬೆಳೆಸಿಕೊಳ್ಳುವುದು.

ಒಬ್ಬ ವ್ಯಕ್ತಿ ಬೆಳೆಸಿಕೊಳ್ಳುವ ಸ್ವಪರಿಕಲ್ಪನೆಯಿಂದ ಸ್ವ – ಬಿಂಬ ರೂಪುಗೊಳ್ಳುತ್ತದೆ. ಸ್ವ ಬಿಂಬವು ವ್ಯಕ್ತಿ ತಾನೇನು ಹಾಗೂ ತಾನೇನಾಗ ಬಯಸುತ್ತಾನೆ ಎಂಬುದರ ಮಾನಸಿಕ ಚಿತ್ರ. ಅದು ಒಬ್ಬನು ತಾನೇನೆಂದು ತಿಳಿದಿರುವ ತಾನು ಅದು ನೇರವಾಗಿ ವೀಕ್ಷಿಸಲ್ಪಟ್ಟ ಸ್ವ ವಿಷಯವಲ್ಲ. ಬದಲಾಗಿ, ಒಬ್ಬನ ವ್ಯಕ್ತಿತ್ವದ ಒಂದು ಸಂಕೀರ್ಣ ಪರಿಕಲ್ಪನೆ – ನಡತೆ, ಸ್ಥಾನಮಾನ, ದೇಹ, ಶಾರೀರಿಕ ರೂಪ ಇತ್ಯಾದಿ. ಅದು ವಸ್ತುನಿಷ್ಠ ಸತ್ಯಾಂಶಗಳಿಗಿಂತ ಬಹುಮಟ್ಟಿಗೆ ಭಿನ್ನವಾಗಿರಬಹುದು.

ಸ್ವ ಬಿಂಬವು ಎರಡು ಅಂಗಗಳನ್ನು ಹೊಂದಿದೆ.

(1) ತನ್ನ ವೈಯುಕ್ತಿಕ ಸಾಮಾಜಿಕ ಪರಿಸರದಿಂದ ಒಬ್ಬ ವ್ಯಕ್ತಿ ಕಲಿತ, ಮತ್ತು ತಾನು ನಿರ್ವಹಿಸಬೇಕಾದ ಪಾತ್ರಗಳ ಬಿಂಬ.

(2) ತಾನು ಸಾಧಿಸಿ ಗಳಿಸಬೇಕೆಂದಿರುವ ಭವಿಷ್ಯದ ಮಹತ್ವಾಕಾಂಕ್ಷೆಗಳು ಪ್ರತಿ ಮಗುವಿಗೂ ತನ್ನ ಸ್ವ ಬಿಂಬವನ್ನು ರೂಪಿಸಿಕೊಳ್ಳಲು ಸಹಾಯ ಮಾಡಿ ಅವಕಾಶಗಳನ್ನು ಕಲ್ಪಿಸಬೇಕು. ಮಗುವನ್ನು ಸುರಕ್ಷಿತ, ವಾತ್ಸಲ್ಯಮಯ ವಾತಾವರಣದಲ್ಲಿ ಬೆಳೆಸಬೇಕು. ಆಡಲು, ಮತ್ತು ಕಲಿಯಲು ಹೇರಳ ಅವಕಾಶಗಳನ್ನು ಕಲ್ಪಿಸಬೇಕು. ಮಗು ತನ್ನ ಪರಿಸರವನ್ನು ಅನುಭವಗಳನ್ನು ಅರಿಯುವಂತೆ ಮಾಡಬೇಕು. ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿ, ಅಭಿವ್ಯಕ್ತಿ ಮಾಡಲು ಸ್ವಾತಂತ್ರ್ಯ ನೀಡಬೇಕು. ಇದರಿಂದ ಮಗು ಆತ್ಮ ವಿಶ್ವಾಸ, ಮತ್ತು ಸ್ವಾಭಿಮಾನ ಗಳಿಸಲು ಸಾಧ್ಯವಾಗಿ, ತನ್ನ ಪಾತ್ರಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದು.

ನಿಧಾನವಾಗಿ, ಮಗು ತನ್ನ ಶಕ್ತಿ ಸಾಮರ್ಥ್ಯಗಳನ್ನು ತನ್ನ ಬಳಿ ಇರುವ ಸಂಪನ್ಮೂಲಗಳನ್ನು ತಿಳಿದು ತನ್ನ ಭವಿಷ್ಯದ ಆಕಾಂಕ್ಷೆಗಳನ್ನು ನಿರ್ಧರಿಸಲು ಮಾರ್ಗದರ್ಶನ ಮಾಡಬೇಕು. ಆದರೆ ಸ್ವ ಬಿಂಬವು ವಾಸ್ತವಿಕತೆಯ ಆಧಾರದ ಮೇಲಿದ್ದು, ವಸ್ತು ನಿಷ್ಠವೂ ಆಗಿರಬೇಕು. ಇಲ್ಲದಿದ್ದರೆ ವ್ಯಕ್ತಿತ್ವದ ಹೊಂದಾಣಿಕೆಗೆ ಅನುಕೂಲಕರವಲ್ಲದ ಭ್ರಮೆಯ ಲೋಕದಲ್ಲಿ ಜೀವಿಸುವ ಪ್ರವೃತ್ತಿ ಹೊಂದುವನು.

## ನೆನಪಿಡಬೇಕಾದ ಅಂಶಗಳು

* ವ್ಯಕ್ತಿ ತನ್ನನ್ನು ತಾನು ನೋಡುವ ದೃಷ್ಟಿ ಅಥವಾ ಪರಿದರ್ಶನವೇ ಸ್ವಪರಿಕಲ್ಪನೆ.



Scanned with OKEN Scanner

* ಸ್ವಬಿಂಬವು ವ್ಯಕ್ತಿ ತಾನೇನೆಂದು ಭಾವಿಸುತ್ತಾನೆಯೋ ಅದರ ಮಾನಸಿಕ ಚಿತ್ರ
* ಸ್ವಪರಿಕಲ್ಪನೆ ಅನುಭವಗಳ ಆಧಾರದ ಮೇಲೆ ಬೆಳೆಯುತ್ತದೆ.
* ಸ್ವಪರಿಕಲ್ಪನೆ ಮತ್ತು ಸ್ವ ಬಿಂಬಗಳ ವಸ್ತು ನಿಷ್ಠವಾಗಿದ್ದು, ವಾಸ್ತವಿಕತೆಯನ್ನು ಆಧರಿಸಿರಬೇಕು.

### ಅಭ್ಯಾಸಗಳು

1. ಸ್ವ ಪರಿಕಲ್ಪನೆ ಎಂದರೇನು? ಅದು ಹೇಗೆ ರೂಪಿತವಾಗುತ್ತದೆ?
2. ಸ್ವ ಪರಿಕಲ್ಪನೆ ಮತ್ತು ಸ್ವ ಬಿಂಬಗಳ ನಡುವಿನ ವ್ಯತ್ಯಾಸ ತಿಳಿಸಿ
3. ವಾಸ್ತವಿಕ ಸ್ವಯಂ ಹಾಗೂ ಆದರ್ಶ ಸ್ವಯಂಗಳ ನಡುವಿನ ವ್ಯತ್ಯಾಸವೇನು?
4. ವಾಸ್ತವಿಕತೆ ಆಧಾರಿತ ಸ್ವಪರಿಕಲ್ಪನೆ ಬೆಳೆಸಿಕೊಳ್ಳಲು ಮಗುವಿಗೆ ಸಹಾಯ ಮಾಡಲು ಶಿಕ್ಷಕರು ಯಾವ ಕ್ರಮ ಕೈಗೊಳ್ಳಬಹುದು?

## ಮಾರ್ಗದರ್ಶನ ಮತ್ತು ಸಲಹಾ ಸೇವೆ

ಈ ಅಧ್ಯಾಯದಲ್ಲಿ ನಾವು ಮಾರ್ಗದರ್ಶನ ಮತ್ತು ಸಮಾಲೋಚನೆಯ ಅರ್ಥವನ್ನು, ಪ್ರಾಥಮಿಕ ಶಾಲೆಗಳಲ್ಲಿ ಮಾರ್ಗದರ್ಶನದ ಅವಶ್ಯಕತೆಯನ್ನೂ ತಿಳಿಯೋಣ. ಶಾಲಾ ಜೀವನದ ಅವಧಿಯಲ್ಲಿ ಮಕ್ಕಳು ಎದುರಿಸುವ ಸಮಸ್ಯೆಗಳನ್ನು ಅರಿಯೋಣ. ಯಾವ ಕ್ಷೇತ್ರದಲ್ಲಿ ಮಕ್ಕಳಿಗೆ ಮಾರ್ಗದರ್ಶನ ಅವಶ್ಯವೆಂಬುದನ್ನು ತಿಳಿಯಲಿದ್ದೇವೆ. ಜೊತೆಗೆ ಸಾಧನೆಯ ಅಭಿಪ್ರೇರಣೆಯ ಪರಿಕಲ್ಪನೆಯನ್ನು ಅದರ ಪ್ರಾಮುಖ್ಯತೆಯನ್ನು ತಿಳಿಯೋಣ.

ವ್ಯಕ್ತಿತ್ವ ವಿಕಾಸವು ಪರಿಸರದ ಸನ್ನಿವೇಶಗಳಿಗೆ ಮತ್ತು ಒತ್ತಾಯಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವ ಪ್ರಕ್ರಿಯೆ ಎಂದು ಈಗಾಗಲೇ ತಿಳಿದಿದ್ದೇವೆ. ಸಾಮಾನ್ಯವಾಗಿ, ಎಲ್ಲ ವ್ಯಕ್ತಿಗಳೂ ತಮ್ಮ ಪರಿಸರದೊಂದಿಗೆ ಹೊಂದಾಣಿಕೆ ಮತ್ತು ಸಾಮರಸ್ಯ ಸಾಧಿಸಿಕೊಳ್ಳುವ ಶಕ್ತಿ ಇರುತ್ತದೆ ಆದರೆ ಕೆಲವರು ಸನ್ನಿವೇಶಗಳಿಗೆ ಸೂಕ್ತ ಅನುಕ್ರಿಯೆಗಳನ್ನು ತೋರುವ ಪ್ರಕ್ರಿಯೆಯಲ್ಲಿ ಅಡೆತಡೆಗಳನ್ನು ಎದುರಿಸಬಹುದು. ಅಡೆತಡೆಗಳಿದ್ದಾಗ ಒಬ್ಬ ವ್ಯಕ್ತಿ ಪರಿಸರದ ಪರಿಸ್ಥಿತಿಗಳನ್ನು ಬದಲಾಯಿಸುವುದರ ಮೂಲಕ ಅಥವಾ ಪರಿಸರದ ಪರಿಸ್ಥಿತಿಗಳನ್ನು ಬದಲಾಯಿಸುವುದರ ಮೂಲಕ ಅಥವಾ ಪರಿಸರದ ಅಗತ್ಯಗಳಿಗೆ ಹೊಂದುವಂತೆ ತನ್ನನ್ನೇ ಬದಲಾಯಿಸಿಕೊಳ್ಳುವುದರ ಮೂಲಕ ಸಾಮರಸ್ಯವನ್ನು ಪುನಃ ಸ್ಥಾಪಿಸಲು ಯತ್ನಿಸಬಹುದು. ತನ್ನ ಸ್ವಂತ ಪ್ರಯತ್ನದಿಂದ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಸ್ಥಿತಿಯನ್ನು ಮುಟ್ಟಿದಾಗ ಮಾರ್ಗದರ್ಶನ ಪಡೆಯಬೇಕಾಗುವುದು. ಹೀಗೆ, ವ್ಯಕ್ತಿಗೆ ತನ್ನ ಹೊಂದಾಣಿಕೆಯ ಸಮಸ್ಯೆಗಳನ್ನು ಬಿಡಿಸಿಕೊಳ್ಳಲು ಒದಗಿಸುವ ಸಹಾಯವೇ ಮಾರ್ಗದರ್ಶನ.

**ಮಾರ್ಗದರ್ಶನದ ಅರ್ಥ ಮತ್ತು ಪರಿಕಲ್ಪನೆ :**

ವ್ಯಕ್ತಿ ತನ್ನ ವಿವಿಧ ರೀತಿಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮತ್ತು ಜೀವನದಲ್ಲಿ ಸಾಮರಸ್ಯ ಸ್ಥಾಪಿಸಿಕೊಳ್ಳಲು ಒದಗಿಸುವ ವೈಯಕ್ತಿಕ ಸಹಾಯವೇ ಮಾರ್ಗದರ್ಶನ. ಜೋನ್ಸ್ ಎಂಬುವರು ಮಾರ್ಗದರ್ಶನವು ಒಬ್ಬ ವ್ಯಕ್ತಿಗೆ

ಜೀವನದ ಗುರಿಗಳನ್ನು ರೂಪಿಸಿಕೊಳ್ಳಲು, ಹೊಂದಾಣಿಕೆ ಮಾಡಿಕೊಳ್ಳಲು, ಗುರಿ ಸಾಧನೆಯ ಮಾರ್ಗದಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮತ್ತೊಬ್ಬ ವ್ಯಕ್ತಿ ನೀಡುವ ವೈಯುಕ್ತಿಕ ಸಹಾಯ ಎಂದು ವ್ಯಾಖ್ಯೆ ನೀಡಿದ್ದಾರೆ.

ಮಾರ್ಗದರ್ಶನ ನಿರ್ದೇಶನವಲ್ಲ. ನಿರ್ದೇಶನವೆಂದರೆ ಒಬ್ಬರ ದೃಷ್ಟಿಕೋನವನ್ನು ಮತ್ತೊಬ್ಬರ ಮೇಲೆ ಹೇರುವುದಾಗಿದೆ. ನಿರ್ದೇಶನವು ಮತ್ತೊಬ್ಬರಿಗಾಗಿ ನಿರ್ಧಾರ ಅಥವಾ ನಿರ್ಣಯ ಮಾಡುವುದಾಗಿದೆ. ಆದರೆ ಮಾರ್ಗದರ್ಶನವು ಸಮರ್ಥ ಸಲಹೆ ನೀಡುವವರು ಯಾವುದೇ ವಯಸ್ಸಿನ ವ್ಯಕ್ತಿಯೊಬ್ಬನಿಗೆ ತನ್ನ ನಿರ್ಧಾರಗಳನ್ನು ತಾನೇ ಮಾಡುವಂತೆ, ತನ್ನದೇ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳುವಂತೆ, ತನ್ನ ಜೀವನವನ್ನು ತಾನೇ ನಿರ್ದೇಶಿಸಿಕೊಳ್ಳುವಂತೆ ತನ್ನ ಭಾರ ತಾನೇ ಹೊರುವಂತೆ ಮಾಡಲು ಒದಗಿಸುವ ಸಹಾಯವಾಗಿದೆ.

ಮಾರ್ಗದರ್ಶನದ ಒಂದು ಸರಳ ಆದರೆ ಅತ್ಯಂತ ಪ್ರಾಯೋಗಿಕವಾದ ವ್ಯಾಖ್ಯೆ ಹೀಗಿದೆ. ಜಾನ್ ತನ್ನೊಳಗೆ ತಾನೇ ನೋಡಿಕೊಂಡು ತನ್ನನ್ನು ತಾನೇ ನೋಡಿಕೊಳ್ಳಲು ಸಹಾಯ ಮಾಡುವುದು.

ಸಲಹಾ ಸೇವೆಯು ಎಲ್ಲ ಮಾರ್ಗದರ್ಶನ ಕಾರ್ಯಕ್ರಮಗಳ ಕ್ಲಿಷ್ಟಾಂಶ (Crux) ಆಗಿದೆ. ಮಾರ್ಗದರ್ಶನ ಕಾರ್ಯಕ್ರಮದ ಯಶಸ್ಸು ಅಥವಾ ವೈಫಲ್ಯಗಳು ಸಮಾಲೋಚನೆಯ ಸೇವೆಯಿಂದಲೇ ನಿರ್ಧಾರಿತ ವಾಗುತ್ತದೆ. ಸಲಹಾಸೇವೆಯನ್ನು ಸಲಹಾ ಮತ್ತು ಮಾರ್ಗದರ್ಶನಾರ್ಥಿ ಈ ಇಬ್ಬರ ನಡುವಿನ ಗತಿಶೀಲ ಮತ್ತು ವೈಯುಕ್ತಿಕ ಸಂಬಂಧಗಳ ಮೂಲಕ ನಡೆಸಲಾಗುತ್ತದೆ. ಮಾರ್ಗದರ್ಶನಕ್ಕಾಗಿ ಬಂದ ವ್ಯಕ್ತಿ ಸಮಸ್ಯೆ ಎದುರಿಸುತ್ತಿದ್ದು ಸಲಹಾಕಾರರು ಆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಹಾಯ ಮಾಡುತ್ತಾರೆ. ಮಾರ್ಗದರ್ಶನಾರ್ಥಿ ಎದುರಿಸುತ್ತಿರುವ ಶೈಕ್ಷಣಿಕ, ವೈಯುಕ್ತಿಕ ಅಥವಾ ಔದ್ಯೋಗ್ಗಿಕ ಕ್ಷೇತ್ರದ ಹೊಂದಾಣಿಕೆಯ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ನಡೆಯುವ ಪ್ರಕ್ರಿಯೆಯೇ ಸಲಹಾಸೇವೆ. ವ್ಯಕ್ತಿ ತನ್ನ ಸಮಸ್ಯೆಯನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಂಡು, ಅದರ ಪರಿಹಾರದ ಕಡೆಗೆ ತನ್ನನ್ನು ತಾನೇ ನಿರ್ದೇಶಿಸಿಕೊಳ್ಳಲು ಮಾಡುವ ಸಹಾಯವೇ ಸಮಾಲೋಚನೆ.

ಪ್ರಾಥಮಿಕ ಶಾಲಾ ಹಂತದಲ್ಲಿ ವಿವಿಧ ಶಾಲಾ ವಿಷಯಗಳನ್ನು ಕಲಿಯುವುದರಲ್ಲಿ ಹಾಗೂ ಸಾಮಾಜಿಕ ಸಂವೇಗಾತ್ಮಕ ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಪ್ರಾಥಮಿಕ ಶಾಲಾ ಮಕ್ಕಳ ಕೆಲವು ಮುಖ್ಯ ಸಮಸ್ಯೆಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದು.

1. ಅಪೂರ್ಣ ಸಾಧನೆ (Under Achivement) ಯು ಶಾಲಾ ಮಕ್ಕಳಲ್ಲಿ ಕಂಡು ಬರುವ, ಅತಿ ಹೆಚ್ಚಿನ ಸವಾಲಾಗಿರುವ ಒಂದು ಸಮಸ್ಯೆಯಾಗಿದೆ. ಅಪೂರ್ಣ ಸಾಧನೆಯ ಮಗು ಒಂದು ಅಥವಾ ಹೆಚ್ಚಿನ ಶಾಲಾ ವಿಷಯಗಳಲ್ಲಿ ಸ್ಥಿರವಾಗಿ ತನ್ನ ಸಾಮರ್ಥ್ಯಕ್ಕಿಂತ ಕಡಿಮೆ ಅಂಕಗಳನ್ನು ಗಳಿಸುತ್ತಿರುತ್ತಾನೆ. ಇಂತಹ ವಿದ್ಯಾರ್ಥಿಯು ಬೌದ್ಧಿಕವಾಗಿ ಸಾಧಾರಣ ಮಟ್ಟದಲ್ಲಿ ಅಥವಾ ಉತ್ತಮ ಮಟ್ಟದಲ್ಲಿದ್ದು ಕಲಿಯಲು ಹಾಗೂ ಸಾಧಿಸಲು ಅಗತ್ಯವಾದ ಶಕ್ತಿ ಹೊಂದಿರುತ್ತಾನೆ. ಆದರೆ ಅಭಿಪ್ರೇರಣೆ ಮತ್ತು ಆಸಕ್ತಿಗಳ ಕೊರತೆ, ಅವಧಾನ ಇಲ್ಲದಿರುವುದು, ಇಚ್ಛಾಶಕ್ತಿಯ ಕೊರತೆ ಇತ್ಯಾದಿ ಕಾರಕಗಳಿಂದಾಗಿ ತನ್ನ ಸಾಮರ್ಥ್ಯಕ್ಕಿಂತ ತುಂಬಾ ಕಡಿಮೆ ಮಟ್ಟದಲ್ಲಿ ಅಂಕಗಳಿಸುತ್ತಾನೆ.

2. ನಿಧಾನವಾಗಿ ಕಲಿಯುವುದು ಶಾಲಾ ಮಕ್ಕಳಲ್ಲಿರುವ ಮತ್ತೊಂದು ಸಮಸ್ಯೆ. ನಿಧಾನವಾಗಿ ಕಲಿಯುವ ಮಗು ಪಠ್ಯವಸ್ತುವನ್ನು ಅಥವಾ ಕೋರ್ಸನ್ನು ಕಲಿತು ಮುಗಿಸುವುದರಲ್ಲಿ ಸಾಧಾರಣಮಟ್ಟದ ಮಕ್ಕಳಿಗಿಂತ ನಿಧಾನವಾಗಿರುತ್ತದೆ. (ಹೆಚ್ಚುಕಾಲ ತೆಗೆದುಕೊಳ್ಳುತ್ತದೆ) ನಿಧಾನವಾಗಿ ಕಲಿಯುವವರು ಕ್ರೀಡಾಕೌಶಲಗಳಲ್ಲಿಯೂ ಹಿಂದಿರುವುದರಿಂದ ಇತರ ಮಕ್ಕಳು ಇವರನ್ನು ದೂರವಿರಿಸಬಹುದು. ಪದೇ ಪದೇ ಆಗುವ ಅಪಜಯ,

ಭಾಗವಹಿಸಲು ಸಾಮರ್ಥ್ಯವಿಲ್ಲದಿರುವುದು ಇವು ಸಂವೇಗಾತ್ಮಕ ಸಮಸ್ಯೆಗಳನ್ನುಂಟು ಮಾಡಿ ಸಾಮಾಜಿಕ ಹೊಂದಾಣಿಕೆಯ ಸಮಸ್ಯೆಗಳೂ ಉದ್ಭವಿಸುತ್ತವೆ.

3. ದೈಹಿಕ ದೋಷಗಳು ಅಥವಾ ನ್ಯೂನತೆಗಳೂ ಸಹ ಹೊಂದಾಣಿಕೆಯ ಸಮಸ್ಯೆಗಳಿಗೆ ಕಾರಣವಾಗುತ್ತವೆ. ಯಾವುದೇ ರತಿಯ ದೈಹಿಕ ದೋಷವಿರುವ ಮಕ್ಕಳು ದೈನಂದಿನ ಚಟುವಟಿಕೆಗಳನ್ನು ಮಾಡುವಲ್ಲಿ ಸವಾಲುಗಳನ್ನೆದುರಿಸಬೇಕಾಗುತ್ತದೆ. ಉದಾಹರಣೆಗೆ, ದೃಷ್ಟಿ ದೋಷವುಳ್ಳ ಮಗು ಸರಿಯಾಗಿ ನೋಡಲು ಅಥವಾ ಓದಲು ಸಾಧ್ಯವಿಲ್ಲದುದರಿಂದ ಕಲಿವಿನಲ್ಲಿ ಸಾಮಾನ್ಯ ಮಟ್ಟದ ಪ್ರಗತಿ ಸಾಧಿಸಲಾಗುವುದಿಲ್ಲ. ಶಿಕ್ಷಕರು ಸಮಸ್ಯೆಯನ್ನು ಗುರ್ತಿಸಿ ಸಲಹೆ ನೀಡುವವರೆಗೆ ಅದು ಮುಂದುವರೆಯುತ್ತದೆ. ಈ ರೀತಿಯ ತೊಂದರೆ ಶ್ರವಣದೋಷ ಇರುವ ಮಕ್ಕಳಲ್ಲಿ ಇನ್ನೂ ಹೆಚ್ಚಾಗಿರುವುದು. ಏಕೆಂದರೆ ಶ್ರವಣದೋಷ ಗುರ್ತಿಸುವುದು ಬಹಳ ಕಠಿಣ. ಮೂಳೆ ನ್ಯೂನತೆಯಿಂದ ಚಲನದೋಷ ಇರುವ ಮಗು ಚಲನೆಯಲ್ಲಿ ಸಮಸ್ಯೆಯನ್ನೆದುರಿಸುವುದಲ್ಲದೆ ಸರಳವಾದ ದೈಹಿಕ ಕೆಲಸಗಳೂ ಸಹ ಸವಾಲನ್ನೊಡ್ಡುತ್ತವೆ. ಈ ಮಕ್ಕಳು ಅನವಶ್ಯ ಸಹಾನುಭೂತಿ, ಅನುಕಂಪ ಅಪಹಾಸ್ಯವನ್ನೆದುರಿಸ ಬೇಕಾಗುವುದಲ್ಲದೆ ಇತರರಿಗಿಂತ ಭಿನ್ನವಾಗಿ ಕಾಣಲ್ಪಡುತ್ತಾರೆ. ಇದರಿಂದಾಗಿ ನಾಚಿಕೆ, ಒಂಟಿತನದ ಭಾವನೆ, ಆಶಾಭಂಗಗಳುಂಟಾಗಿ, ಅಪೂರ್ಣ ಸಾಧನೆಯಲ್ಲಿ ಪರಿಣಮಿಸಬಹುದು.

4. ಶೈಕ್ಷಣಿಕ ಮತ್ತು ಶಾರೀರಿಕ ಸಮಸ್ಯೆಗಳಲ್ಲದೆ ಕೆಲವು ಮಕ್ಕಳು ವರ್ತನಾತ್ಮಕ ಸಮಸ್ಯೆಗಳನ್ನು ಹೊಂದಿರುತ್ತಾರೆ. ಚಾರಿತ್ರ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳಾದ ಕದಿಯುವುದು, ಸುಳ್ಳು ಹೇಳುವುದು, ಆಕ್ರಮಣ ಪ್ರವೃತ್ತಿ ಚಿಕ್ಕ ಮಕ್ಕಳನ್ನು ಪೀಡಿಸುವುದು, ನಿಯೋಜಿತ ಕಾರ್ಯಗಳನ್ನು, ಮನೆಗೆ ಕೊಟ್ಟು ಕೆಲಸಗಳನ್ನು ಮಾಡದಿರುವುದು, ಗಣಿತದಂತಹ ಕೆಲವು ಶಾಲಾ ವಿಷಯಗಳನ್ನು ತಪ್ಪಿಸುವುದು. ಶಾಲೆಗೆ ತಡವಾಗಿ ಬರುವುದು, ಅನಿಯಮಿತ ಹಾಜರಿ ಇತ್ಯಾದಿ. ಬಾಲಾಪರಾಧವೂ ಮತ್ತೊಂದು ಮುಖ್ಯ ಸಮಸ್ಯೆಯಾಗಿದೆ.

ಶಾಲಾ ಮಕ್ಕಳಲ್ಲಿರುವ ಈ ಸಮಸ್ಯೆಗಳಿಗೆ ಹಲವು ಕಾರಣಗಳಿವೆ. ಈ ಸಮಸ್ಯೆಗಳನ್ನು ಜಯಿಸಿ ಸಾಮಾನ್ಯ, ಆತ್ಮ ವಿಶ್ವಾಸವುಳ್ಳ ಸಾಮಾಜಿಕ ವ್ಯಕ್ತಿಗಳಾಗಿ ಬೆಳೆಯಬೇಕಾದರೆ ಮಾರ್ಗದರ್ಶನ ಅತ್ಯವಶ್ಯ.

ಮಕ್ಕಳು ಎದುರಿಸುವ ವಿವಿಧ ರೀತಿಯ ಸಮಸ್ಯೆಗಳಿಗೆ ವಿವಿಧ ರೀತಿಯ ಮಾರ್ಗದರ್ಶನ ಸೇವೆಗಳಿವೆ.

1. ಶೈಕ್ಷಣಿಕ ಮಾರ್ಗದರ್ಶನ
2. ಔದ್ಯೋಗಿಕ ಮಾರ್ಗದರ್ಶನ
3. ವೈಯಕ್ತಿಕ ಮಾರ್ಗದರ್ಶನ

ಪ್ರಾಥಮಿಕ ಶಾಲಾ ಮಟ್ಟದಲ್ಲಿ ಶೈಕ್ಷಣಿಕ ಮತ್ತು ವೈಯುಕ್ತಿಕ ಮಾರ್ಗದರ್ಶನವು ಔದ್ಯೋಗಿಕ ಮಾರ್ಗದರ್ಶನಕ್ಕಿಂತ ಹೆಚ್ಚು ಅವಶ್ಯವಾಗಿದೆ.

ಶೈಕ್ಷಣಿಕ ಮಾರ್ಗದರ್ಶನವೆಂದರೆ ಮಕ್ಕಳ ಸಾಮರ್ಥ್ಯಗಳ ಬೆಳವಣಿಗೆ ಹಾಗೂ ಸಾಧನೆಯ ಮಟ್ಟ ತಲುಪುವಲ್ಲಿ ಅಶೈಕ್ಷಣಿಕ ಮಾರ್ಗದರ್ಶನವೆಂದರೆ ಮಕ್ಕಳಿಡುವ ಸಹಾಯದ ಪ್ರಕ್ರಿಯೆ.

ವೈಯುಕ್ತಿಕ ಮಾರ್ಗದರ್ಶನವು ಮಕ್ಕಳು ಆತ್ಮವಿಶ್ವಾಸ ಮತ್ತು ಧೈರ್ಯವನ್ನು ಬೆಳೆಸಿಕೊಂಡು ಜೀವನದ ವಾಸ್ತವತೆಗಳನ್ನೂ ಸಮಸ್ಯೆಗಳನ್ನೂ ಎದುರಿಸುವಂತೆ, ಅವುಗಳೊಂದಿಗೆ ಹೋರಾಡುವಂತೆ ಮಾಡಲು ನೀಡುವ ಸಹಾಯ.

ಮಾರ್ಗದರ್ಶನವು ಒಂದು ಬೇರೆಯಾದ ಚಟುವಟಿಕೆ, ಶಾಲಾ ಜೀವನದಿಂದ ಭಿನ್ನವಾಗಿದ್ದು, ಹೆಚ್ಚುವರಿ ಕಾರ್ಯವೆಂದು ನಾವು ಭಾವಿಸಬಾರದು. ಇಂದು, ಮಾರ್ಗದರ್ಶನವು ಹೆಚ್ಚು ಹೆಚ್ಚು ಅವಶ್ಯವಾಗುತ್ತಿದ್ದು, ಯಾವುದೇ ಶಾಲೆಯು ಮಾರ್ಗದರ್ಶನ ಸೇವೆಯನ್ನು ವ್ಯವಸ್ಥೆಗೊಳಿಸುವ ನೀತಿಯನ್ನು ಅಳವಡಿಸಬೇಕು. ಶಾಲೆಗಳಲ್ಲಿ ಮಾರ್ಗದರ್ಶನದ ಅವಶ್ಯಕತೆಯನ್ನು ಈ ಕೆಳಕಂಡ ಕಾರಕಗಳು ಸೂಚಿಸುತ್ತವೆ.

1. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವು ಶಾಲೆಗಳ ಸಂಖ್ಯೆಯಲ್ಲದೆ ದಾಖಲಾತಿಯಲ್ಲಿಯೂ ಅಗಾಧ ಹೆಚ್ಚಳವನ್ನುಂಟುಮಾಡಿದೆ. ವೈವಿಧ್ಯಮಯ ಕೌಟುಂಬಿಕ ಮತ್ತು ಸಾಮಾಜಿಕ ಆರ್ಥಿಕ ಹಿನ್ನೆಲೆಗಳಿಂದ ಮಕ್ಕಳು ಶಾಲೆಗೆ ಬರುತ್ತಾರೆ. ಇದರಿಂದ ವ್ಯಕ್ತಿಭಿನ್ನತೆಗಳ ವ್ಯಾಪ್ತಿಯು ಹೆಚ್ಚಾಗಿದೆ. ಪ್ರಥಮ ತಲೆಮಾರಿನ ವಿದ್ಯಾರ್ಥಿಗಳು, ನಿಧಾನವಾಗಿ ಕಲಿಯುವವರು, ಅಪೂರ್ಣ ಸಾಧನೆಯವರು, ಪ್ರತಿಭಾವಂತರು ಎಲ್ಲರೂ ಒಂದು ತರಗತಿಯಲ್ಲಿ ಇರುತ್ತಾರೆ. ವೈವಿಧ್ಯತೆಯುಳ್ಳ ಮಕ್ಕಳ ಅವಶ್ಯಕತೆ ಪೂರೈಸಲು ಹೊಂದುವಂತಹ ಶೈಕ್ಷಣಿಕ ಕಾರ್ಯಕ್ರಮವನ್ನು ಶಿಕ್ಷಕರು ರೂಪಿಸಬೇಕಾಗುತ್ತದೆ. ಒಳ್ಳೆಯ ಮಾರ್ಗದರ್ಶನ ಕಾರ್ಯಕ್ರಮದಿಂದ ಮಾತ್ರವೇ ಇದು ಸಾಧ್ಯ.

2. ಕಾಲದೊಂದಿಗೆ ಶಿಕ್ಷಣ ಗುರಿಗಳು ಮತ್ತು ಉದ್ದೇಶಗಳೂ ಬದಲಾಗಿವೆ. ಬದಲಾಗುತ್ತಿರುವ ಗುರಿಗಳಿಗನುಗುಣವಾಗಿ ಶೈಕ್ಷಣಿಕ ಕಾರ್ಯಕ್ರಮವೂ ಬದಲಾಗಬೇಕು. ಮಗುವಿನ ಸಮಗ್ರ ಸಂಪೂರ್ಣ ವ್ಯಕ್ತಿತ್ವದ ವಿಕಾಸಕ್ಕೆ ಸಹಾಯಕವಾದ ಶಿಶು-ಕೇಂದ್ರಿತ ಶಿಕ್ಷಣ ಕಾರ್ಯಕ್ರಮ ಅಗತ್ಯವಾಗಿದೆ. ಮಕ್ಕಳ ವೈಯಕ್ತಿಕ ಅವಶ್ಯಕತೆಗಳು ಮತ್ತು ಅಂತರ್ಗತ ಶಕ್ತಿಗಳು ಎಷ್ಟು ವೈವಿಧ್ಯಮಯವಾಗಿವೆಯೆಂದರೆ ಚೆನ್ನಾಗಿ ರೂಪಿಸಲ್ಪಟ್ಟ ಮಾರ್ಗದರ್ಶನ ಕಾರ್ಯಕ್ರಮದ ಆಧಾರದ ಮೇಲೆ ಮಾತ್ರ ಅವುಗಳನ್ನು ಪೂರೈಸಬಹುದಾಗಿದೆ.

3. ಮಾನವ ಚಟುವಟಿಕೆಯ ಎಲ್ಲ ರಂಗಗಳಲ್ಲಯೂ ಕಾರ್ಯಕ್ಷೇತ್ರವು ಹಲವೂ ಮಾರ್ಪಾಡುಗಳಿಗೊಳಗಾಗಿದೆ. ಕೌಶಲ ಮತ್ತು ವಿಶೇಷ ಪರಿಣತಿಯ ಅಗತ್ಯವಿದೆ. ಇದರಿಂದ ಮಾನವ ಶಕ್ತಿಯ ಅಭಿವೃದ್ಧಿ ಮತ್ತು ಪರಿಣಾಮಕರ ಬಳಕೆಗೆ ಸಹಾಯವಾಗುತ್ತದೆ. ಇದಿಲ್ಲದೆ ಮಾನವ ಸಂಪನ್ಮೂಲದ ಅಭಿವೃದ್ಧಿ ಸಾಧ್ಯವಿಲ್ಲ. ಜನಸಂಖ್ಯೆಯು ಸಮಾಜದ ಮೇಲೆ ಭಾರವಾಗುತ್ತದೆ. ಬೇರೆ ಬೇರೆ ಮಕ್ಕಳು ಬೇರೆ ಬೇರೆ ಕಾರ್ಯಕ್ಷೇತ್ರಗಳಲ್ಲಿ ಅಂತಸ್ಥ ಶಕ್ತಿಗಳನ್ನೂ, ಅಭಿಕ್ಷಮತೆಗಳನ್ನೂ ಹೊಂದಿರುತ್ತಾರೆ. ಪರಿಣತ ಮಾರ್ಗದರ್ಶನವು ಮಕ್ಕಳಲ್ಲಿ ಹುದುಗಿರುವ ಶಕ್ತಿಗಳನ್ನು, ಲಭ್ಯವಿರುವ ಸಂಪನ್ಮೂಲಗಳನ್ನು ಗುರ್ತಿಸಿ ಇವೆರಡನ್ನೂ ಸಮನ್ವಯಗೊಳಿಸಿ ರಾಷ್ಟ್ರದ ಪ್ರಗತಿಗೆ ಉತ್ತೇಜನ ನೀಡಲು ಸಹಾಯಕವಾಗುವುದು.

ಸಾಮೂಹಿಕ ಮಾರ್ಗದರ್ಶನವು ಮಕ್ಕಳಿಗೆ ಮಾರ್ಗದರ್ಶನ ಒದಗಿಸುವ ಒಂದು ತಂತ್ರವಾದರೂ ಸಹ ವೈಯುಕ್ತಿಕ ಮಾರ್ಗದರ್ಶನವೇ ಯುಕ್ತವಾಗಿದೆ. ಉತ್ತಮ ಮಾರ್ಗದರ್ಶನ ಸೇವೆಯು ಶಿಶುಕೇಂದ್ರಿತವೂ ನಿರಂತರವೂ, ಸರಳವೂ, ನಿವಾರಕವೂ, ಚಿಕಿತ್ಸಾತ್ಮಕವೂ, ಮಿತವ್ಯಯಕಾರಿಯೂ ಆಗಿದ್ದು ಮಗುವಿಗೆ ಆತ್ಮನಿರ್ದೇಶನ ಮಾಡಿಕೊಳ್ಳಲು ಸಹಾಯ ಮಾಡಬೇಕು.

ವ್ಯವಸ್ಥಿತವಾದ, ವ್ಯಾಪಕವಾದ ಶಾಲಾ ಮಾರ್ಗದರ್ಶನ ಸೇವೆಯಲ್ಲಿ ಈ ಕೆಳಕಂಡ ಸೇವೆಗಳು ಸೇರಿವೆ.

i. **ಮಾಹಿತಿ ಸಂಗ್ರಹಣ ಸೇವೆ :** ಸಲಹೆ ನೀಡುವವರು ಮುಖ್ಯೋಪಾಧ್ಯಾಯರು ಮತ್ತು ವರ್ಗಶಿಕ್ಷಕರ ಸಹಾಯದಿಂದ ಮಗುವಿನ ಬಗ್ಗೆ ಸಾಮಾನ್ಯ ವಿವರಗಳು, ಶೈಕ್ಷಣಿಕ ಮಾಹಿತಿ, ಮನೋವೈಜ್ಞಾನಿಕ ಮಾಹಿತಿ, [illegible] ಹಿನ್ನೆಲೆ ಇತ್ಯಾದಿ ಎಲ್ಲ ವೈಯಕ್ತಿಕ ವಿವರಗಳನ್ನೂ ಸಂಗ್ರಹಿಸುವರು.

Scanned with OKEN Scanner

ii. **ಸಲಹಾ ಸೇವೆ :** ಮಾರ್ಗದರ್ಶನ ನೀಡುವವರು ಸಂಗ್ರಹಿಸಿದ ವೈಯುಕ್ತಿಕ ವಿವರಗಳನ್ನು ಸಮಸ್ಯೆಯುಳ್ಳ ವ್ಯಕ್ತಿ ತನ್ನ ಅವಶ್ಯಕತೆಗಳು, ಅಂತಸ್ಥ ಶಕ್ತಿಗಳು, ಸಂಪನ್ಮೂಲಗಳು, ಇತಿ ಮಿತಿಗಳು ಮುಂತಾದುವುಗಳನ್ನು ಅರ್ಥ ಮಾಡಿಕೊಳ್ಳಲು ಸಮರ್ಥರನ್ನಾಗಿಸಲು ಬಳಸುವರು. ಇದರಿಂದಾಗಿ ಸ್ವಯಂ ನಿರ್ದೇಶನ ಸಾಧ್ಯವಾಗುವುದು ಈ ಸೇವೆಯನ್ನು ಸ್ನೇಹಮಯ ವಾತಾವರಣದಲ್ಲಿ ವೈಯುಕ್ತಿಕ ಸಂದರ್ಶನಗಳ ಮೂಲಕ ಒದಗಿಸಲಾಗುವುದು.

iii. **ಸ್ಥಾನೀಕರಣ ಸೇವೆ (Placement Service) :** ಈ ಸೇವೆಯ ವಿದ್ಯಾರ್ಥಿಗಳಿಗೆ ಸೂಕ್ತವಾದ ವಿಶೇಷ ಶಾಲೆಗಳು ಅಥವಾ ಕಾರ್ಯಕ್ರಮಗಳಿಗೆ ದಾಖಲಾತಿ ಪಡೆಯಲು ಮಾಡುವ ಸಹಾಯವನ್ನೊಳಗೊಂಡಿದೆ.

iv. **ಅನುಸರಣಾ ಸೇವೆ (Flollow up Service) :** ಈ ಸೇವೆಯ ಮುಖ್ಯ ಉದ್ದೇಶ ಸಲಹೆಯ ನಂತರ ಮಕ್ಕಳು ಸಾಧಿಸಿರುವ ಪ್ರಗತಿ ಅಥವಾ ಗಳಿಕೆಯನ್ನು ಜಾಗರೂಕತೆಯಿಂದ ಗಮನಿಸುವುದಾಗಿದೆ. ಇದರಿಂದಾಗಿ ಅಗತ್ಯವಿದ್ದರೆ ಮರು ಸಮಾಲೋಚನೆ ನಡೆಸಿ, ಮಾರ್ಗದರ್ಶನವು ನಿರಂತರ ಪ್ರಕ್ರಿಯೆಯಾಗುವಂತೆ ಮಾಡಲು ಸಾಧ್ಯವಾಗುತ್ತದೆ.

**ವೈಯಕ್ತಿಕ ಅಭ್ಯಾಸಗಳು ಮತ್ತು ಅಧ್ಯಯನ ಅಭ್ಯಾಸಗಳಿಗಾಗಿ ಮಾರ್ಗದರ್ಶನ :**

ಶೈಕ್ಷಣಿಕ ಮಾರ್ಗದರ್ಶನವು ಮಕ್ಕಳ ಕಲಿವಿನ ಸಮಸ್ಯೆಗಳನ್ನು ಗುರ್ತಿಸುವುದು, ಸಾಧನೆ/ಗಳಿಕೆಯ ಮಟ್ಟವನ್ನು ಹೆಚ್ಚಿಸುವುದು ಇತ್ಯಾದಿ ಅನೇಕ ಅಂಗಗಳನ್ನೊಳಗೊಂಡಿದೆ. ಮಗು ಸರಿಯಾದ ಅಧ್ಯಯನದ ಅಭ್ಯಾಸಗಳನ್ನು ಗಳಿಸಲು ಸಹಾಯ ಮಾಡುವುದರಿಂದ ಶೈಕ್ಷಣಿಕ ಮಾರ್ಗದರ್ಶನವನ್ನು ಇನ್ನೂ ಉತ್ತಮವಾಗಿ ಮಾಡಬಹುದು. ಅಧ್ಯಯನದ ಅಭ್ಯಾಸಗಳಲ್ಲಿ ಟಿಪ್ಪಣಿ ಬರೆದುಕೊಳ್ಳುವುದು, ಓದುವ ಸರಿಯಾದ ರೀತಿಯನ್ನು ಕಲಿಯುವುದು, ಕಂಠಪಾಠ ಮಾಡುವ ಮತ್ತು ಅಭ್ಯಾಸ ಮಾಡುವ ವಿಧಾನಗಳು ಮತ್ತು ವೇಳಾಹಂಚಿಕೆಯ ವಿವರ ತಯಾರಿಸುವುದು ಇವೆಲ್ಲ ಸೇರಿವೆ.

ಅಧ್ಯಯನದ ಅಭ್ಯಾಸಗಳಲ್ಲಿ ಓದುವಿಕೆ ಒಂದು ಮುಖ್ಯ ಅಂಗವಾಗಿದೆ. ಮಕ್ಕಳು ತಮ್ಮ ಪಾಠಗಳನ್ನು ಗಿಳಿಗಳಂತೆ ಪುನರುಚ್ಚರಿಸದೆ ಅರ್ಥಮಾಡಿಕೊಂಡು ಓದುವಂತೆ ಮಾರ್ಗದರ್ಶಿಸಬೇಕು. ಚಿಕ್ಕ ಮಕ್ಕಳು ಬಾಯ್ದೆರೆದು ಓದುವಂತೆ ಉತ್ತೇಜಿಸಬೇಕು ಮತ್ತು ಬೆಳೆದು ದೊಡ್ಡವರಾದಂತೆ ಮೌನ ಓದನ್ನು ಅಭ್ಯಾಸಮಾಡಬೇಕು. ಮನಸ್ಸನ್ನು ಕೇಂದ್ರಿಕರಿಸುವುದು ಸುಲಭವಾಗುವುದಕ್ಕಾಗಿ ಪ್ರಶಾಂತವಾಗಿರುವ ಸ್ಥಳದಲ್ಲಿ, ಸಾಕಷ್ಟು ಬೆಳಕಿನಲ್ಲಿ ಓದುವಂತೆ ಮಾರ್ಗದರ್ಶಿಸಬೇಕು. ಮುಂದಿನ ತರಗತಿಗಳಿಗೆ ಹೋದಂತೆಲ್ಲ ಟಿಪ್ಪಣಿ ತಯಾರಿಸುವುದು, ಶಬ್ದಕೋಶ, ವಿಶ್ವಕೋಶಗಳನ್ನು ಪರಾಮರ್ಶಿಸುವುದನ್ನು ಕಲಿಸಬೇಕು.

ಕಂಠಪಾಠ ಮಾಡುವ ಅಥವಾ ಕಂಠಪಾಠಕ್ಕಾಗಿ ಅಳವಡಿಸಿಕೊಳ್ಳುವ ವಿಧಾನವು ಕಲಿವಿನ (ಶಾಲಾ) ಸಾಧನೆಯಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಯಾಂತ್ರಿಕ ಕಲಿಕೆಗೆ ಬದಲಾಗಿ ಅರ್ಥಪೂರ್ಣ ಕಲಿಕೆಯನ್ನು ಉತ್ತೇಜಿಸಬೇಕು. ಪಾಠಭಾಗ ಅಥವಾ ವಸ್ತುವಿನ ಸ್ವರೂಪದ ಆಧಾರದ ಮೇಲೆ ಬಿಡಿ ಅಥವಾ ಇಡಿ ವಿಧಾನ, ಕಾಲಾಂತರ ಅಥವಾ ನಿರಂತರ ಅಭ್ಯಾಸ, ಸಮಯದ ಹಂಚಿಕೆ, ವಿಶ್ರಾಂತಿಗೆ ಅವಕಾಶ ಇತ್ಯಾದಿಗಳನ್ನು ಅಳವಡಿಸಿಕೊಳ್ಳಬೇಕು. ಸೂಕ್ತ ವಿಧಾನಗಳನ್ನು ಅಳವಡಿಸಿಕೊಳ್ಳಲು ಮಕ್ಕಳಿಗೆ ಮಾರ್ಗದರ್ಶನ ಅಗತ್ಯ ಸರಿಯಾದ ಅಧ್ಯಯನ ಅಭ್ಯಾಸ ಗಳಿಸಲು ಎಲ್ಲ ಮಕ್ಕಳಿಗೂ ಮಾರ್ಗದರ್ಶನ ಅವಶ್ಯ. (ವಿವರಗಳಿಗಾಗಿ ಇದೇ ಪುಸ್ತಕದ 4ನೇ ಘಟಕವನ್ನು ನೋಡಿ)

ಮಾರ್ಗದರ್ಶನವನ್ನು ಯೋಜಿಸಿ ಒದಗಿಸುವ ಮೊದಲು ಸಮಸ್ಯೆಯ ಸ್ವರೂಪ ಮತ್ತು ಕಾರಣಗಳನ್ನು ಗುರ್ತಿಸಿಕೊಳ್ಳಬೇಕು ಒದಗಿಸುವ ಮಾರ್ಗದರ್ಶನವು ಸಂಗ್ರಹಿಸಲ್ಪಟ್ಟ ವ್ಯವಸ್ಥಿತ ಮಾಹಿತಿಗಳನ್ನು ಆಧರಿಸಿರಬೇಕು. ಸಲಹಾ ಸೇವೆಯ ಅವಧಿಗಳು ಪೂರ್ವಯೋಜಿತವೂ, ಹರಿತ ಹಂತವಾಗಿ ಸಾಗುವಂತೆಯೂ ಇರಬೇಕು. ಪೂರ್ವ ಸಿದ್ಧತೆ ಇಲ್ಲದೆ ನಡೆಯಬಾರದು.



Scanned with OKEN Scanner

ವೈಯುಕ್ತಿಕ ಅಥವಾ ಮನೋವೈಜ್ಞಾನಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪೂರ್ವಯೋಜನೆ ಇಲ್ಲದೆ ಸಮಾಲೋಚನೆ ನಡೆಸಬಹುದು. ಬಹುತೇಕ ವೈಯುಕ್ತಿಕ ಸಮಸ್ಯೆಗಳಿಗೆ ಅನುಕೂಲಕರವಲ್ಲದ ಕೌಟುಂಬಿಕ ಪರಿಸ್ಥಿತಿಗಳೇ ಕಾರಣವಾಗಿರುತ್ತವೆ. ಅಪೇಕ್ಷಣೀಯವಲ್ಲದ ಸಮ ವಯಸ್ಕ ಗುಂಪಿನ ಪ್ರಭಾವವೂ ಸಮಸ್ಯಾತ್ಮಕ ವರ್ತನೆಗಳಿಗೆ ಬಾಲಾಪರಾಧವೂ ಸೇರಿದಂತೆ ಎಡೆಮಾಡುತ್ತದೆ. ಶಿಕ್ಷಕರು ಮಕ್ಕಳನ್ನು ಗುರ್ತಿಸಿ ಸಮಾಲೋಚನೆಯನ್ನು ಏರ್ಪಡಿಸಬೇಕು. ಸಮಾಲೋಚನೆ ಅತ್ಯಂತ ಸ್ನೇಹಮಯ ವಾತಾವರಣದಲ್ಲಿ ನಡೆಸಬೇಕು. ಹೀಗಾದಾಗ ಮಗು ಯಾವುದೇ ಭಯವಿಲ್ಲದ ತನ್ನ ಸಮಸ್ಯೆಯ ಬಗ್ಗೆ ಮುಕ್ತವಾಗಿ ಮಾತನಾಡುವುದು. ಸಮಾಲೋಚನೆಯ ಅವಧಿಗಳು ಮುಂದುವರೆದಂತೆಲ್ಲ ಮಗು ತನ್ನ ಸಮಸ್ಯೆಗಳನ್ನು ವಿಶ್ಲೇಷಿಸಿ ಪರಿಹರಿಸಿಕೊಳ್ಳುವ ಮತ್ತು ವೈಯುಕ್ತಿಕ ಸಾಮಾಜಿಕ ಹೊಂದಾಣಿಕೆ ಮಾಡುಕೊಳ್ಳುವ ಸಾಮರ್ಥ್ಯಗಳಿಸುವುದು.

**ಸಲಹಾಸೇವೆ ನೀಡುವವರಾಗಿ ಶಿಕ್ಷಕರು :**

ವಿಶಾಲ ಅರ್ಥದಲ್ಲಿ ಪ್ರತಿಯೊಬ್ಬ ತರಗತಿ ಶಿಕ್ಷಕರೂ ಮಾರ್ಗದರ್ಶನ ಸಮಾಲೋಚಕರೆಂದೇ ಭಾವಿಸಲಾಗಿದೆ. ಮಕ್ಕಳು ಶಾಲೆಯಲ್ಲಿರುವಷ್ಟು ಕಾಲವೂ ಶಿಕ್ಷಕರು ಅವರೊಂದಿಗಿರುವುದರಿಂದ ವಿದ್ಯಾರ್ಥಿಗಳನ್ನು, ಅವರ ಸಮಸ್ಯೆಗಳನ್ನು ಗ್ರಹಿಸಬಲ್ಲರು. ತನ್ನ ವಿದ್ಯಾರ್ಥಿಗಳ ಸಮರ್ಪಕ ವಿಕಾಸದ ಬಗ್ಗೆ ಕಾಳಜಿ ಇರುವ ಉತ್ತಮ ಶಿಕ್ಷಕರು ಮಕ್ಕಳ ಸಮಸ್ಯೆಗಳನ್ನೂ ಲೋಪಗಳನ್ನೂ ಸೂಕ್ಷ್ಮವಾಗಿ ಗ್ರಹಿಸುವರು. ಸಾಮಾನ್ಯ ಪರಿಸ್ಥಿತಿಗಳನ್ನು ಕಲಿಕೆಗೆ ಸಂಬಂಧಿಸಿದ ಹಾಗೂ ವೈಯುಕ್ತಿಕ–ಸಾಮಾಜಿಕ ಹೊಂದಾಣಿಕೆಗೆ ಸಂಬಂಧಿಸಿದ ದೈನಂದಿನ ಸಮಸ್ಯೆಗಳ ಬಗ್ಗೆ ಶಿಕ್ಷಕರೇ ಮಾರ್ಗದರ್ಶನ ನೀಡಬಹುದು.

ಆದರೆ, ಸರಿಯಾದ ತರಬೇತಿ, ಜ್ಞಾನ ಮತ್ತು ಕೌಶಲಗಳಿಲ್ಲದೆ ಎಲ್ಲ ಶಿಕ್ಷಕರೂ ಪರಿಣಾಮಕಾರಿ ಸಲಹೆಗಾರರಾಗುವುದು ಸಾಧ್ಯವಿಲ್ಲ.

ವಿಶೇಷ ತರಬೇತಿ ಇಲ್ಲದೆಯೂ ಶಾಲಾ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಶಿಕ್ಷಕರು ಮಹತ್ವದ ಪಾತ್ರ ವಹಿಸಬೇಕಾಗುವುದು. ಮಾರ್ಗದರ್ಶನದ ಅವಶ್ಯಕತೆ ಇರುವ ಮಗುವಿನ ಶೈಕ್ಷಣಿಕ ಹಿನ್ನೆಲೆ ಮತ್ತು ಸಾಧನೆಯ ಬಗ್ಗೆ ಸಮಾಲೋಚಕರಿಗೆ ಅಗತ್ಯವಾದ ಮಾಹಿತಿಗೆ ಶಿಕ್ಷಕರೇ ಪ್ರಧಾನ ಆಕರವಾಗಿರುತ್ತಾರೆ. ವಾಸ್ತವದಲ್ಲಿ, ಸಮಸ್ಯೆಯುಳ್ಳ ಮಗುವನ್ನು ಗುರ್ತಿಸಿ ಸಮಾಲೋಚಕರ ಬಳಿ ಕಳುಹಿಸುವವರು ಶಿಕ್ಷಕರೇ. ಶಿಕ್ಷಕರು ಪೋಷಕರನ್ನು ಭೇಟಿ ಮಾಡಿ ಅವರ ಮಕ್ಕಳ ಬಗ್ಗೆ ಮಾಹಿತಿ ಸಂಗ್ರಹಿಸಿ ಒದಗಿಸಬೇಕು. ತರಗತಿ ಶಿಕ್ಷಕರು ಸಮಾಲೋಚನೆಯ ನಂತರದ ಸೇವೆಯ ಹಂತದಲ್ಲಿ ಹೆಚ್ಚಿನ ಮಟ್ಟದ ಸಹಾಯ ಮಾಡಿದರೆ ಮಗು ನಿರೀಕ್ಷಿತ ಪ್ರಗತಿಯನ್ನು ಸಾಧಿಸಬಲ್ಲದು.

**ಸಾಧನೆಯ / ಗಳಿಕೆಯ ಅಭಿಪ್ರೇರಣೆ :**

ಕೆಲವು ವೇಳೆ ನಿತ್ಯಜೀವನದಲ್ಲಿ ವ್ಯಕ್ತಿಗೆ ಕಠಿಣತೆಯಾಗಲಿ, ಸವಾಲಾಗಿರುವ ಸನ್ನಿವೇಶವಾಗಲಿ ಎದುರಾಗುವುದು. ಏನನ್ನಾದರೂ ಸಾಧಿಸುವುದಕ್ಕಾಗಿ ಅಥವಾ ಗುರಿ ಸಾಧನೆಗಾಗಿ ಇಂತಹ ಸನ್ನಿವೇಶವನ್ನು ಎದುರಿಸಬೇಕಾಗುವುದು. ಸವಾಲನ್ನೆದುರಿಸುವುದರಿಂದ ತೃಪ್ತಿಸಿಗುವುದೆಂಬ ನಿರೀಕ್ಷೆ, ಇದ್ದು, ಆದಕಾರಣ ಅದನ್ನು ಎದುರಿಸಿದರೆ, ಆ ವ್ಯಕ್ತಿಯಲ್ಲಿ ಸಾಧನೆಯ ಅಭಿಪ್ರೇರಣೆ ಇದೆ ಎಂದರ್ಥ. ಸವಾಲಾಗಿರುವ ಕೆಲಸವು ಗಣಿತದಲ್ಲಿನ ಕಠಿಣ ಸಮಸ್ಯೆಗೆ ಉತ್ತರ ಕಂಡುಕೊಳ್ಳುವುದಾಗಿರಬಹುದು ಅಥವಾ ಕ್ಲಿಷ್ಟವಾದ ವಾಕ್ಯವೃಂದ (ಪಠ್ಯಭಾಗ) ವನ್ನು ಕಲಿಯುವುದಾಗಿರಬಹುದು. ಸಾಧನೆಯ ಅಭಿಪ್ರೇರಣೆ ಇರುವ ವಿದ್ಯಾರ್ಥಿಯು ಕೇವಲ ಸಾಧನೆಗಾಗಿಯೇ ಸಂತೋಷದಿಂದ ಪ್ರಯತ್ನ ಮಾಡುವನು.



Scanned with OKEN Scanner

ಹೀಗೆ, ಸಾಧನೆಯ ಅಭಿಪ್ರೇರಣೆಯು ಸವಾಲೆಸೆಯುವಂತಹ ಮತ್ತು ಕಠಿಣವಾದ ಕೆಲಸಗಳ ಮೇಲೆ ಪ್ರಭುತ್ವ ಸಾಧಿಸುವುದರಿಂದ ತೃಪ್ತಿ ಹೊಂದುವುದನ್ನು ನಿರೀಕ್ಷಿಸುವ ಅಂತಃ ಶಕ್ತಿ ಎಂದು ವ್ಯಾಖ್ಯೆ ಮಾಡಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ ಅದು ಸಾಧನೆ ಮಾಡಬೇಕೆಂಬ ಇಚ್ಛೆ ಅಥವಾ ಅಪೇಕ್ಷೆ.

ಸಾಧನೆಯ ಅಭಿಪ್ರೇರಣೆಯು ಮನೋವೈಜ್ಞಾನಿಕ ಅವಶ್ಯಕತೆಯಾದ ಸಾಧನೆಯ ಅಗತ್ಯಕ್ಕೆ ನಿಕಟ ಸಂಬಧ ಹೊಂದಿದೆ. ವೈಯುಕ್ತಿಕ ದೃಢ ನಿಶ್ಚಯವನ್ನು ಬೆಳೆಸುವುದರಿಂದ ಈ ಕಾರಕವನ್ನು ಕಲಿಕೆಯಲ್ಲಿ ಅತಿ ಮುಖ್ಯವೆಂದು ಕಂಡುಕೊಳ್ಳಲಾಗಿದೆ. ತರಗತಿ ಕಲಿಕೆಯಲ್ಲಿ ಇದರ ಪ್ರಾಮುಖ್ಯತೆಯನ್ನು ಶಿಕ್ಷಕರು ತಿಳಿಯಬೇಕು. ಇಂತಹ ಸಾಧನೆಯ ಅಭಿಪ್ರೇರಣೆಯುಳ್ಳ ಮಕ್ಕಳು ಸಂತೋಷವಾಗಿ ಶ್ರಮವಹಿಸುತ್ತಾರೆ. ಅವರು ತಮ್ಮ ಗುರಿ ಹಾಗೂ ಸನ್ನಿವೇಶಗಳು ತಮ್ಮ ವಶದಲ್ಲಿವೆಯೆಂಬ ದೃಢ ನಿಶ್ಚಯ ಹೊಂದಿರುತ್ತಾರೆ. ತಮ್ಮ ವೈಫಲ್ಯಗಳಿಗೆ ಯಾವುದೇ ಬಾಹ್ಯ ಕಾರಕಗಳನ್ನಾಗಲಿ ಶಕ್ತಿಗಳನ್ನಾಗಲಿ ನಿಂದಿಸುವುದಿಲ್ಲ. ಎಂದರೆ, ತಮ್ಮ ಯಶಸ್ಸು ಅಥವಾ ವೈಫಲ್ಯಗಳಿಗೆ ತಾವೇ ಜವಾಬ್ದಾರರೆಂದು ನಂಬಿರುತ್ತಾರೆ. ಆದ್ದರಿಂದ, ಅವರು ಯಾವಾಗಲೂ ಉನ್ನತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಾರೆ. ಅವರು ಯಾವಾಗಲೂ ವಿಜಯಿಗಳೇ ವಿನಃ ಸೋಲುವವರಲ್ಲ. ಇಂತಹ ಮಕ್ಕಳನ್ನು ಗುರ್ತಿಸಲು ಶಿಕ್ಷಕರು ಯತ್ನಿಸಬೇಕು ಹಾಗೂ ಉತ್ತಮ ಸಾಧನೆ ಮಾಡುವಂತೆ ಉತ್ತೇಜಿಸಬೇಕು. ಹೀಗೆ ಮಾಡಿದಾಗ ಸಮಾಜವೇ ಜಯಗಳಿಸಿದಂತೆ.

ಎಲ್ಲ ಮಕ್ಕಳೂ ಅಷ್ಟೇ ಅಂಶದಲ್ಲಿ/ಪ್ರಮಾಣದಲ್ಲಿ ಸಾಧನೆಯ ಅಪೇಕ್ಷೆ ಹೊಂದಿರುವುದಿಲ್ಲವೆಂಬುದನ್ನೂ ಸಹ ಶಿಕ್ಷಕರು ತಿಳಿದಿರಬೇಕು. ಅನೇಕ ಮಕ್ಕಳು ಕೆಳಮಟ್ಟದ ಸಾಮರ್ಥ್ಯವನ್ನು ಪ್ರದರ್ಶಿಸುತ್ತಾರೆ ಹಾಗೂ ಅವರ ಶಕ್ತಿಯ ಗರಿಷ್ಠ ಮಟ್ಟದಷ್ಟು ಕೆಲಸ ಮಾಡುವುದಿಲ್ಲ. ಅವರ ವಿಧಿಗೆ ಅದೃಷ್ಟ, ಅನಿರೀಕ್ಷಿತತೆ ಮತ್ತಿತರ ಬಾಹ್ಯಕಾರಕಗಳು ಜವಾಬ್ದಾರಿ ಎಂದು ನಂಬಿರುತ್ತಾರೆ. ಸಾಕಷ್ಟು ಪ್ರಯತ್ನ ಮಾಡುವುದಿಲ್ಲವಾದ ಕಾರಣ ಅವರು ಸೋಲುವರು ಹಾಗೂ ಅಪೂರ್ಣ/ಕಡಿಮೆ ಮಟ್ಟದ ಸಾಧನೆ ಮಾಡುವರು.

ತಮ್ಮ ತರಗತಿಯಲ್ಲಿರುವ ಅನೇಕ ಮಕ್ಕಳು ಈ ವರ್ಗಕ್ಕೆ ಸೇರಿದ್ದು ಸಾಧನೆಯ ಅಭಿಪ್ರೇರಣೆಯ ಕೊರತೆ ಇರುವುದೆಂಬುದನ್ನು ಶಿಕ್ಷಕರು ಗಮನಿಸುತ್ತಾರೆ. ಈ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮತ್ತು ಸಮಾಲೋಚನೆ ಅಗತ್ಯವಿರುತ್ತದೆ. ಒಮ್ಮೆ ಇಂತಹ ಮಕ್ಕಳನ್ನು ಶಿಕ್ಷಕರು ಗುರ್ತಿಸಿದ ಕೂಡಲೇ ಅವರ ಬಗ್ಗೆ ಸಾಕಷ್ಟು ವಿವರಗಳನ್ನು ಸಂಗ್ರಹಿಸಿ ಸಮಾಲೋಚನೆಯ ಅವಧಿಗಳನ್ನು ವ್ಯವಸ್ಥೆ ಮಾಡಬೇಕು. ಸಲಹೆ ನೀಡುವವರು ಅಂತಹ ಮಕ್ಕಳೊಂದಿಗೆ ವೈಯುಕ್ತಿಕವಾಗಿ ಅಂತರ್ ಕ್ರಿಯೆಯ ಅವಧಿಗಳನ್ನು ನಡೆಸಿ ಅವರಿಗೆ ತಮ್ಮ ಅಂತಸ್ಥ ಶಕ್ತಿಗಳನ್ನು ಗುರಿಗಳನ್ನು ಮತ್ತು ಸಾಧನಗಳನ್ನು ತಿಳಿಯುವಂತಹ ಸಲಹೆಗಳನ್ನು ನೀಡಬೇಕು. ನಿರಂತರ ಮೌಲ್ಯಮಾಪನದ ರೂಪದಲ್ಲಿ ಸಮಾಲೋಚನೆಯ ನಂತರದ ಕಾರ್ಯ ಮುಂದುವರೆಸಬೇಕು. ಸಾಧನೆಯ ಅಭಿಪ್ರೇರಣೆಯ ಕೊರತೆ ಇರುವ ಮಕ್ಕಳ 'ಅಹಂ' ಅನ್ನೂ ವಿಶ್ವಾಸವನ್ನೂ ಬಲಗೊಳಿಸಬೇಕು. ಇಲ್ಲದಿದ್ದರೆ ಕೊನೆಗೆ ಸೋಲುವುದು ಸಮಾಜವೇ ವಿನಃ ವ್ಯಕ್ತಿಯಲ್ಲ ಎಂಬುದು ಸಮಾಲೋಚಕರ ಮನಸ್ಸಿನಲ್ಲಿರಬೇಕು. ಈ ಅರ್ಥದಲ್ಲಿ/ಸಂದರ್ಭದಲ್ಲಿ ಮಾರ್ಗದರ್ಶನ ಕಾರ್ಯಕ್ರಮ ಸಂಘಟಿಸುವುದು ಅವಶ್ಯವಾಗುತ್ತದೆ. ಇದು ಮಕ್ಕಳು ಇಚ್ಛಾಶಕ್ತಿ ಗಳಿಸಲು ಮತ್ತು ವಾಸ್ತವಿಕತೆಯ ಅಭಿಮುಖರಾಗಲು ಸಹಾಯ ಮಾಡುತ್ತದೆ. ಮಾರ್ಗದರ್ಶನವು ಮಕ್ಕಳಿಗೆ ವ್ಯವಸ್ಥಿತವಾಗಿ ಕೆಲಸ ಮಾಡಲು ಮತ್ತು ಗುರಿಸಾಧಿಸುವುದನ್ನು ಕಲಿಯಲು ಸಹಾಯ ಮಾಡಬೇಕು. ಮಾರ್ಗದರ್ಶನವು ಮಕ್ಕಳು ಸವಾಲುಗಳನ್ನೆದುರಿಸುವ ಇಚ್ಛೆಯನ್ನು ಬೆಳೆಸಿಕೊಳ್ಳಲು, ಕಠಿಣವಾದ ಕಾರ್ಯನಿರ್ವಹಿಸುವುದರ ಮೇಲೆ ಪ್ರಭುತ್ವ ಸಾಧಿಸಲು ಮತ್ತು ಯಶಸ್ಸು ಗಳಿಸಲು ಸಹಾಯ ಮಾಡಬೇಕು.



Scanned with OKEN Scanner

## ನೆನಪಿಡಬೇಕಾದ ಅಂಶಗಳು

- ಮಾರ್ಗದರ್ಶನವು ಒಬ್ಬ ವ್ಯಕ್ತಿಯು ತನ್ನ ಹೊಂದಾಣಿಕೆಯ ಸಮಸ್ಯೆಗಳೊಂದಿಗೆ ಹೋರಾಡಿ ತನ್ನ ನಿರ್ಧಾರವನ್ನು ತಾನೇ ಕೈಗೊಂಡು ಪರಿಹರಿಸಿಕೊಳ್ಳಲು ನೀಡುವ ಸಹಾಯ.
- ಸಲಹಾ ಸೇವೆಯು ಮಾರ್ಗದರ್ಶನಾರ್ಥಿಗೆ ತನ್ನ ಶೈಕ್ಷಣಿಕ ಹಾಗೂ ಹೊಂದಾಣಿಕೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಹಾಯ ಮಾಡುವ ಪ್ರಕ್ರಿಯೆ.
- ಶೈಕ್ಷಣಿಕ, ಔದ್ಯೋಗಿಕ ಮತ್ತು ವೈಯಕ್ತಿಕ ಎಂಬ ಮಾರ್ಗದರ್ಶನದ ಮೂರು ವಿಧಗಳಿವೆ.
- ಪ್ರಾಥಮಿಕ ಶಾಲಾ ಹಂತದಲ್ಲಿ ಶೈಕ್ಷಣಿಕ ಮತ್ತು ವೈಯಕ್ತಿಕ ಮಾರ್ಗದರ್ಶನ ಅಗತ್ಯ.
- ಅಪೂರ್ಣ ಸಾಧನೆ, ನಿಧಾನ ಕಲಿಕೆ, ಕೆಲವು ವಿಷಯಗಳಲ್ಲಿ ಕಲಿವಿನ ಕ್ಲಿಷ್ಟತೆಗಳು - ಇತ್ಯಾದಿ ಹಲವು ಸಮಸ್ಯೆಗಳನ್ನು ಪ್ರಾಥಮಿಕ ಶಾಲಾಮಕ್ಕಳು ಎದುರಿಸುತ್ತಾರೆ.
- ಮಕ್ಕಳಲ್ಲಿ ಸಂವೇಗಾತ್ಮಕ ಮತ್ತು ವರ್ತನಾತ್ಮಕ ಸಮಸ್ಯೆಗಳಿವೆ.
- ಮಕ್ಕಳಿಗೆ ಸಮಾಲೋಚನೆ ನೀಡುವವರಿಗೆ ವಿಶಿಷ್ಟ ತರಬೇತಿ ಅಗತ್ಯ.
- ವ್ಯವಸ್ಥಿತವಾದ, ವೈಜ್ಞಾನಿಕ ಮಾರ್ಗದರ್ಶನ ನೀಡುವ ಸಾಮರ್ಥ್ಯ ಪಡೆಯಲು ತರಗತಿ ಶಿಕ್ಷಕರು ಮಾರ್ಗದರ್ಶನ ಮತ್ತು ಸಮಾಲೋಚನೆಯಲ್ಲಿ ತರಬೇತಿ ಪಡೆಯಬೇಕು.

## ಅಭ್ಯಾಸ

ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.

1. ಮಾರ್ಗದರ್ಶನ ಎಂದರೇನು? ಪ್ರಾಥಮಿಕ ಶಾಲೆಯಲ್ಲಿ ಮಾರ್ಗದರ್ಶನ ಏಕೆ ಅಗತ್ಯ?
2. ಸಲಹಾ ಸೇವೆ ಎಂದರೇನು? ಉತ್ತಮ ಸಲಹಾ ಸೇವೆಯ ಗುಣಲಕ್ಷಣಗಳನ್ನು ತಿಳಿಸಿ.
3. ಮಾರ್ಗದರ್ಶನದ ಮೂರು ವಿಧಗಳಾವುವು? ಶೈಕ್ಷಣಿಕ ಮಾರ್ಗದರ್ಶನ ಎಂದರೇನು?
4. ಮಾರ್ಗದರ್ಶನಾರ್ಥಿಗೆ ಒದಗಿಸಬೇಕಾದ ವಿವಿದ ಮಾರ್ಗದರ್ಶನ ಸೇವೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
5. ಈ ಕೆಳಗಿನ ಕ್ಷೇತ್ರಗಳಲ್ಲಿ ಮಕ್ಕಳು ಎದುರಿಸುವ ಸಮಸ್ಯೆಗಳೇನು?
   (1) ಕಲಿಕೆ (2) ವೈಯಕ್ತಿಕ ಮತ್ತು ಸಾಮಾಜಿಕ ಹೊಂದಾಣಿಕೆ
6. ವಿದ್ಯಾರ್ಥಿಗಳಲ್ಲಿ ಸರಿಯಾದ ಅಧ್ಯಯನದ ಅಭ್ಯಾಸಗಳನ್ನು ಬೆಳೆಸಲು ಕ್ರಮಗಳನ್ನು ಸೂಚಿಸಿ.
7. ಸಾಧನೆಯ ಅಭಿಪ್ರೇರಣೆ ಎಂದರೇನು? ಅದರ ಮಹತ್ವವೇನು?
8. ಮಕ್ಕಳಲ್ಲಿ ಸಾಧನೆಯ ಅಭಿಪ್ರೇರಣೆ ಬೆಳೆಸಲು ಯಾವ ಕ್ರಮಗಳನ್ನು ಕೈಗೊಳ್ಳುವಿರಿ?

## ಚಟುವಟಿಕೆ

1. ಒಂದು ಪ್ರಾಥಮಿಕ ಶಾಲೆಯಲ್ಲಿ ನಡೆಯುವ ಸಲಹಾಸೇವೆಯ ಅಧಿವೇಶನ ವೀಕ್ಷಿಸಿ ವರದಿ ತಯಾರಿಸಿ.



Scanned with OKEN Scanner

## *Reference Books*


1. **Norman Sprinthal and Richard C Sprinthal** – 1990
   *Educational Psychology* — 5th Edition
   Publishing Company – Mc Grahill

2. **B. Kuppuswamy** – 1984
   *Advanced Educational Psychology*
   Sterling Publishers Pvt. Ltd.

3. **R.N. Sharma** – 1992
   *Educational Psychology and Guidance*
   Surjeet Publications

4. **S. Dandapani** – 2000
   *Advanced Educational Psychology*
   Anmol Publications Pvt Ltd. New Delhi

5. **Frank S Freeman** – 1965
   *Theory and Practice of Psychological Testing*
   Oxford and IBH Publishing Co.

6. **Dr. S.P. Kulshrestha** – 1979
   *Educational Psychology*
   International Publishing House

7. **K.S. Rastogi** – 1978
   *Educational Psychology*
   Rastogi Publications, Meerut




Scanned with OKEN Scanner

ಘಟಕ – 7

# ಸಮೂಹದಲ್ಲಿ ಕಲಿಯುವವರ ವರ್ತನೆಗಳು

> ಈ ವಿಭಾಗವು ನಮಗೆ ಸಮೂಹದ ಅರ್ಥ ಸಮೂಹದ ವಿಧಗಳು ಮತ್ತು ಸಮೂಹ ಜೀವನದ ಅವಶ್ಯಕತೆ ಇವುಗಳನ್ನು ಅರಿಯಲು ಸಹಾಯ ಮಾಡುತ್ತದೆ. ಜೊತೆಗೆ ಸಮೂಹದ ಲಕ್ಷಣಗಳನ್ನೂ ಅರಿಯುತ್ತೇವೆ ತರಗತಿ ಒಂದು ಸಮೂಹವಾಗಿದ್ದು ಅದರ ಮಹತ್ವ ತಿಳಿಯುತ್ತದೆ. ಒಂದು ಸಮೂಹವು ಸ್ವಭಾವತಃ ಗತಿಶೀಲವಾಗಿರುವುದರಿಂದ ಸಮೂಹದ ಸದಸ್ಯರ ನಡುವಿನ ಅಂತರ್‌ವ್ಯಕ್ತಿ ಸಂಬಂಧಗಳನ್ನು ತಿಳಿಯಬೇಕು. ಇದಕ್ಕಾಗಿ ನಾವು ಸಮಾಜಮಿತಿಯ ಪಾತ್ರವನ್ನೂ ತಿಳಿಯೋಣ.

**ಸಮೂಹದ ಅರ್ಥ ಮತ್ತು ಸ್ವರೂಪ :**

ಶಿಕ್ಷಣವು ಒಂದು ಸಾಮಾಜಿಕ ಪ್ರಕ್ರಿಯೆ ಶಾಲೆಗಳಲ್ಲಿ ನಡೆಯುವ ಶೈಕ್ಷಣಿಕ ಕಾರ್ಯಕ್ರಮಗಳ ಸಾರ್ಥಕತೆಯು ತರಗತಿ ಒಂದು ಸಮೂಹವಾಗಿ ಹೇಗೆ ಕಾರ್ಯನಿರ್ವಹಿಸುವುದೆಂಬುದನ್ನು ಅವಲಂಬಿಸಿದೆ ಶಾಲೆಯಲ್ಲಿ ಮಾತ್ರವಲ್ಲದೆ, ಹೊರಗೂ ಸಹ ನಾವು ಸಮೂಹಗಳಲ್ಲಿ ಕೆಲಸ ಮಾಡಬೇಕಾಗಿದೆ. ಒಂದು ಸಮೂಹದ ಸಫಲ ಕಾರ್ಯನಿರ್ವಹಣೆ ಆ ಸಮೂಹದ ಸದಸ್ಯರ ನಡುವೆ ಇರುವ ಪರಸ್ಪರ ಅರ್ಥ ಮಾಡಿಕೊಳ್ಳುವಿಕೆಯನ್ನು ಆಧರಿಸಿದೆ.

ಶೈಕ್ಷಣಿಕ ಮನೋವಿಜ್ಞಾನದಲ್ಲಿ ಸಮೂಹದ ಪ್ರಕ್ರಿಯೆಗಳ ಅಧ್ಯಯನ ಮತ್ತು ತರಗತಿಯನ್ನು ಒಂದು ಸಮೂಹವಾಗಿ ನಡೆಸಿಕೊಳ್ಳುವುದು ಇತ್ತೀಚೆಗೆ ಅತಿ ಮುಖ್ಯ ಕ್ಷೇತ್ರಗಳಾಗಿ ಹೊರಹೊಮ್ಮಿದೆ. ಸಮೂಹದ ಪ್ರಕ್ರಿಯೆಗಳು ಅಂತರ್‌ವ್ಯಕ್ತಿ ಸಂಬಂಧ ಮತ್ತು ಸಮೂಹದ ಕಾರ್ಯದ ಮೇಲೆ ಅದರ ಪ್ರಭಾವ, ಇವುಗಳ ಅಧ್ಯಯನದ ಪ್ರಾಮುಖ್ಯತೆಯನ್ನು ಮನೋವಿಜ್ಞಾನಿಗಳೂ, ಶಿಕ್ಷಣತಜ್ಞರೂ ಮನಗಂಡಿದ್ದಾರೆ. ತರಗತಿ ಶಿಕ್ಷಕರು ಆ ತರಗತಿ ಸಮೂಹದ ನಾಯಕರೂ ಆಗಿರುವುದರಿಂದ್ದ ಮಕ್ಕಳನ್ನು ಪರಿಣಾಮಕಾರಿಯಾಗಿ ಕಲಿಯುವಂತೆ ಪ್ರೇರೇಪಿಸುವ ಆಸಕ್ತಿ ಕಾಯ್ದುಕೊಳ್ಳುವಂತೆ ಮಾಡುವ ಹಾಗೂ ಮುನ್ನುಗ್ಗುವ ಸ್ವಭಾವ ಮತ್ತು ಜವಾಬ್ದಾರಿಯ ಭಾವನೆಯನ್ನು ಬೆಳೆಸುವ ಸಲುವಾಗಿ ಸಮೂಹದ ರಚನೆ ಮತ್ತು ಕಾರ್ಯಗಳನ್ನು ತಿಳಿದಿರಬೇಕು.

ಸಮೂಹ ಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳುವ ಮೊದಲು ನಾವು ಸಮೂಹ ಎಂದರೇನೆಂಬುದನ್ನು ತಿಳಿಯಬೇಕು. 'ಸಮೂಹ' ಕ್ಕೆ ಹಲವು ರೀತಿಯಲ್ಲಿ ವ್ಯಾಖ್ಯೆ ನೀಡಲಾಗಿದೆ. ಒಬ್ಬ ಸಾಮಾಜಿಕ ಮನೋವಿಜ್ಞಾನಿಯ ಪ್ರಕಾರ "ಸಮೂಹವೆಂದರೆ ಪರಸ್ಪರರು ಒಂದು ನಿಶ್ಚಿತ ಸ್ಥಾನ ಹಾಗೂ ಪಾತ್ರ ಸಂಬಂಧಗಳನ್ನು ಹೊಂದಿದ್ದು, ಸಮೂಹಕ್ಕೆ ಪ್ರಮುಖವಾಗಿರುವ ವಿಷಯಗಳಲ್ಲಿಯಾದರೂ ಪ್ರತಿ ಸದಸ್ಯರ ವರ್ತನೆಯನ್ನು ನಿಯಂತ್ರಿಸುವ, ತನ್ನದೇ ಆದ ನಿಗದಿತ ಮೌಲ್ಯಗಳು ಅಥವಾ ಪ್ರಮಾಣಕಗಳನ್ನು ಹೊಂದಿರುವ ಒಂದು ಸಾಮಾಜಿಕ ಘಟಕ".



Scanned with OKEN Scanner

ಇದನ್ನು ಸಮೂಹದ ಒಂದು ಸಮಗ್ರ ವ್ಯಾಖ್ಯೆ ಎನ್ನಬಹುದು. ಈ ವ್ಯಾಖ್ಯೆಯಿಂದ ಒಂದು ಸಮೂಹವು ಈ ಕೆಳಗಿನ ಲಕ್ಷಣಗಳನ್ನು ಹೊಂದಿದೆ ಎಂದು ತಿಳಿಯಬಹುದು.

- ಅದು ಹಲವು ಸದಸ್ಯರಿಂದ ಕೂಡಿದ ಒಂದು ಸಾಮಾಜಿಕ ಘಟಕ.
- ಸಮೂಹದ ಸದಸ್ಯರು ಪರಸ್ಪರರೊಂದಿಗೆ ನಿಶ್ಚಿತ ಸ್ಥಾನ ಮತ್ತು ಪಾತ್ರ ಸಂಬಂಧ ಹೊಂದಿರುವರು – ಎಂದರೆ, ಸಮೂಹವು ತನ್ನದೇ ಆದ ಸಂರಚನೆ ಹೊಂದಿರುವುದು.
- ಸದಸ್ಯರಿಗಾಗಿ ನಿಯಮಾವಳಿಗಳನ್ನು ಹೊಂದಿದೆ.
- ತನ್ನದೇ ಆದ ಗುರಿಗಳಿದ್ದು, ಸದಸ್ಯರು ಅವನ್ನು ಸಾಧಿಸಲು ಶ್ರಮಿಸುವರು.
- ಹಲವಾರು ಮೌಲ್ಯಗಳನ್ನು ಹೊಂದಿದೆ.
- ಇತರ ಸಮೂಹಗಳು ಮತ್ತು ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿರುತ್ತದೆ.

ಮಾನವನು ಸಮಾಜ ಜೀವಿಯಾದುದರಿಂದ ಅನಾದಿ ಕಾಲದಿಂದಲೂ ಅವನು ಹಲವಾರು ಸಮೂಹಗಳನ್ನು (ಚಿಕ್ಕ ದೊಡ್ಡ, ಸಾಧಾರಣ, ಔಪಚಾರಿಕ, ಅನೌಪಚಾರಿಕ) ಸ್ಥಾಪಿಸಿಕೊಂಡಿದ್ದಾನೆ. ಸಮೂಹ ಜೀವನದಿಂದ ಅನೇಕ ಪ್ರಯೋಜನಗಳಿವೆ. ಸಮೂಹವು ಒಬ್ಬ ವ್ಯಕ್ತಿ ತನ್ನ ಪ್ರಾಥಮಿಕ ಹಾಗೂ ಮನೋವೈಜ್ಞಾನಿಕ ಅವಶ್ಯಕತೆಗಳೆಲ್ಲವನ್ನೂ ಪೂರೈಸಿಕೊಳ್ಳಲು ಸಹಾಯ ಮಾಡುತ್ತದೆ. ಸಮೂಹದ ಪ್ರಯತ್ನ ಹಾಗೂ ಚಟುವಟಿಕೆಗಳಿಂದಲೇ ಸಮಾಜವು ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದೆ. ಸಹಜವಾಗಿಯೇ ಚಿಕ್ಕಮಕ್ಕಳೂ ಸಹ ಆಟದ ಗುಂಪಿನಂತಹ ತಮ್ಮ ತಮ್ಮ ಸಮೂಹಗಳನ್ನು ರೂಪಿಸಿಕೊಳ್ಳುತ್ತಾರೆ. ಸಮೂಹಗಳು ಅನೇಕ ವಿಧಗಳಾಗಿರಬಹುದು. ಉದಾ: ಕುಟುಂಬದಂತಹ ಪ್ರಾಥಮಿಕ ಸಮೂಹ, ಆಟದಗುಂಪುಗಳು, ಗ್ರಾಮ ಸಮುದಾಯ ಹಾಗೂ ಅನುಷಂಗಿಕವಾದ (Secondary) ವಿಶೇಷ ಆಸಕ್ತಿ ಆಧಾರಿತ ಸಮೂಹಗಳಾದ ಸಂಘ ಸಂಸ್ಥೆಗಳು.

ಯಾವುದೇ ವಿಧದ ಸಮೂಹವಾದರೂ ಅದು ಮೇಲೆ ಹೇಳಿದ ಎಲ್ಲ ಲಕ್ಷಣಗಳನ್ನೂ ಹೊಂದಿರಬೇಕು. ಸಮೂಹವು ಜನಸಂದಣಿಗಿಂತ ಭಿನ್ನವಾಗಿದೆ. ಜನಸಂದಣಿಯು (crowd) ಯಾವುದೇ ರೀತಿಯಲ್ಲಿ ಪರಸ್ಪರರಲ್ಲಿ ಮನೋವೈಜ್ಞಾನಿಕ ಸಂಬಂಧವಿರದ ಜನರ ಗುಂಪಾಗಿದೆ. ಮಾರುಕಟ್ಟೆಯಲ್ಲಿರುವ ಜನ, ಅಪಘಾತ ಸ್ಥಳದಲ್ಲಿ ನೆರೆದಿರುವ ಜನ, ಸಮೂಹವೆನಿಸುವುದಿಲ್ಲ.

**ತರಗತಿ_ಒಂದು ಸಮೂಹ**

ಶಿಕ್ಷಕರಾಗಿ ನಾವು ಸಮೂಹಗಳು ಮತ್ತು ಸಾಮೂಹಿಕ ಚಟುವಟಿಕೆಗಳ ಬಗ್ಗೆ ವಿಶೇಷವಾಗಿ ಆಸಕ್ತರಾಗಿದ್ದೇವೆ. ತರಗತಿಯು ಒಂದು ಸಮೂಹವಾಗಿದೆ. ತರಗತಿಯು ಕಲಿಯಲು ಮತ್ತು ವ್ಯಕ್ತಿತ್ವ ವಿಕಾಸ ಮಾಡಿಕೊಳ್ಳಲು ಒಂದೆಡೆ ಸೇರಿರುವ ಸಮಾನ ಲಕ್ಷಣಗಳುಳ್ಳ ಮಕ್ಕಳ ಸಮೂಹ. ಸಮೂಹವಾಗಿ ತರಗತಿಯು ತನ್ನದೇ ಆದ ಸಂರಚನೆಯನ್ನು ಹೊಂದಿದೆ. ಅದು ಕಾರ್ಯಶೀಲವಾಗಿದ್ದು, ಸದಸ್ಯರು ತಮ್ಮ ಗುರಿ ಸಾಧಿಸಲು ಸಹಾಯ ಮಾಡುತ್ತದೆ.

ಒಂದು ಶಾಲೆಯ ನೀತಿ ನಿಯಮಾವಳಿಗಳ ಆಧಾರದ ಮೇಲೆ ಆ ಶಾಲೆಯ ತರಗತಿ ಸಮೂಹದ ರಚನೆ ಕಂಡುಬರುತ್ತದೆ. ಸಾಂಸ್ಕೃತಿಕ ಕಾರಕಗಳೂ ಸಹ ತರಗತಿಯ ಸಂರಚನೆಯ ಮೇಲೆ ಪ್ರಭಾವ ಬೀರುತ್ತವೆ. ತರಗತಿ ಸಮೂಹದ ಸಂರಚನೆಯ ಮೇಲೆ ಪ್ರಭಾವ ಬೀರುವ ಇತರ ಅಂಶಗಳೆಂದರೆ ವಿದ್ಯಾರ್ಥಿಗಳ, ಶಿಕ್ಷಕರ ಹಾಗೂ ಅಧಿಕಾರಿಗಳ ಅವಶ್ಯಕತೆಗಳು.



Scanned with OKEN Scanner

ತರಗತಿ ಸಮೂಹದ ಸಂರಚನೆಯು ಅಲ್ಲಿರುವ ವಿದ್ಯಾರ್ಥಿಗಳ ನಡುವಿನ ಅಂತರ್‌ವ್ಯಕ್ತಿ ಸಂಬಂಧಗಳನ್ನು ಮತ್ತು ಅಂತರ್‌ಕ್ರಿಯೆಗಳನ್ನು ಸೂಚಿಸುತ್ತದೆ. ಸಮೂಹದಲ್ಲಿನ ಸಂಬಂಧಗಳನ್ನು ನಾವು ಅದರ ಕಾರ್ಯಗಳ ದೃಷ್ಟಿಯಿಂದ ಅರ್ಥಕೊಳ್ಳಬಹುದು.

ತರಗತಿ ಸಮೂಹದ ಅತಿ ಮುಖ್ಯ ಕಾರ್ಯವೆಂದರೆ ಕಲಿವಿನ ಕೆಲಸವನ್ನು ಮುಂದುವರೆಸುವುದೇ ಆಗಿದೆ. ಕಲಿಕೆಯ ಪ್ರಕ್ರಿಯೆಯ ಕಾಲದಲ್ಲಿ ಮಕ್ಕಳು ಹೇಗೆ ಅಂತರ್‌ಕ್ರಿಯೆ ನಡೆಸುತ್ತಾರೆ, ಸಮಸ್ಯೆಗಳನ್ನು ಪರಿಹರಿಸುತ್ತಾರೆ, ಸಹಕರಿಸುತ್ತಾರೆ ಹಾಗೂ ಪರಸ್ಪರರಿಗೆ ಸಹಾಯ ಮಾಡುತ್ತಾರೆಂಬುದು ಅವರ ನಡುವಿನ ಅಂತರ್‌ವ್ಯಕ್ತಿ ಸಂಬಂಧಗಳನ್ನು ಸೂಚಿಸುತ್ತದೆ. ತರಗತಿಯ ಮತ್ತೊಂದು ಕೆಲಸ ನಿರ್ಧಾರ ಕೈಗೊಳ್ಳುವುದಾಗಿದೆ. ಈ ನಿರ್ಧಾರಗಳನ್ನು ಯಾರು ಕೈಗೊಳ್ಳುತ್ತಾರೆ, ನಿರ್ಧಾರಗಳು ಪ್ರಜಾಸತ್ತಾತ್ಮಕವಾಗಿವೆಯೇ ಅಥವಾ ಅಧಿಕಾರಶಾಹಿತತ್ವವನ್ನಾಧರಿಸಿದೆಯೇ ಎಂಬುದು ಸಮೂಹದ ಸಂಬಂಧಗಳನ್ನು ನಿಶ್ಚಯಿಸುತ್ತದೆ. ಶಿಕ್ಷಕರು ನಿರ್ಧಾರಗಳನ್ನು ಹೇರುತ್ತಾರೆಯ ಅಥವಾ ವಿದ್ಯಾರ್ಥಿಗಳೂ ತಮ್ಮ ಅನಿಸಿಕೆಗಳನ್ನು ತಿಳಿಸುತ್ತಾರೆಯೋ ಎಂಬುದು ಪರಸ್ಪರ ಸಂಬಂಧಗಳ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. ಪ್ರತಿ ಮಗುವೂ ಸಾಮಾಜಿಕ ಒಪ್ಪಿಗೆ ಪಡೆಯುವುದಕ್ಕಾಗಿ ತನ್ನಿಂದ ನಿರೀಕ್ಷಿಸಲ್ಪಡುವ ಪಾತ್ರಗಳಿಗನುಸಾರವಾಗಿ ಕ್ರಿಯೆ-ಪ್ರತಿಕ್ರಿಯೆಗಳನ್ನು ಸೂಚಿಸುತ್ತದೆ.

ಸಮೂಹ ಸಂಬಂಧಗಳು ಕೇವಲ ಒಂದು ಸಮೂಹದಲ್ಲಿರುವ ವ್ಯಕ್ತಿಗಳಿಗೆ ಸೀಮಿತವಾಗಿರುವುದಿಲ್ಲ. ತರಗತಿಯು ಇತರ ಹಲವು ಸಮೂಹಗಳೊಂದಿಗೆ ಸಂಬಂಧಗಳನ್ನು ಬೆಳೆಸಿ ಮುಂದುವರೆಸಬೇಕಾಗುವುದು. ಕೆಲವು ಸಮೂಹಗಳು ಶಾಲೆಯ ಒಳಗೇ ಇರುತ್ತವೆ – ಉದಾ: ಇತರ ತರಗತಿಗಳು ಒಂದು ತರಗತಿಯು ವಿವಿಧ ಶಾಲಾ ಕಾರ್ಯಕ್ರಮಗಳಲ್ಲಿ ಇತರ ತರಗತಿಗಳೊಟ್ಟಿಗೆ ಕಾರ್ಯನಿರ್ವಹಿಸಬೇಕಾಗುವುದು. ಇಂತಹ ಯಾವುದೇ ಕಾರ್ಯಕ್ರಮಗಳ ಸಫಲತೆ ಮತ್ತು ಪ್ರಯೋಜನೀಯತೆಗಳು ಸಮೂಹ ಸಂಬಂಧಗಳ ವಿನ್ಯಾಸವನ್ನೇ ಅವಲಂಬಿಸಿರುತ್ತದೆ.

ಒಂದು ಸಮೂಹವಾಗಿ ತರಗತಿಯು ಸಮುದಾಯದೊಂದಿಗೆ ಸಂಬಂಧವಿರಿಸಿಕೊಳ್ಳಬೇಕಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಶಾಲಾ ಚಟುವಟಿಕೆಗಳಲ್ಲಿ ಸಮುದಾಯದ ಸಹಕಾರ ಮತ್ತು ಸಹಭಾಗಿತ್ವಗಳು ಹೆಚ್ಚಿನ ಮಹತ್ವಗಳಿಸುತ್ತಿವೆ (ಸಮುದಾಯದತ್ತ ಶಾಲೆ). ತರಗತಿ ಹಾಗೂ ಶಾಲೆಗಳು ಸಮುದಾಯ ಆಧಾರಿತ ಕಾರ್ಯಕ್ರಮಗಳಾದ ನೈರ್ಮಲ್ಯ ಕಾರ್ಯಾಚರಣೆ, ಸಾಕ್ಷರತಾ ಆಂದೋಳನ, ಸಾಂಸ್ಕೃತಿಕ ಚಟುವಟಿಕೆಗಳು, ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕಾಗಿದೆ. ತರಗತಿಯು ಸಮುದಾಯದೊಡನೆ ಉತ್ತಮ ಬಾಂಧವ್ಯ ಏರ್ಪಡಿಸಿಕೊಂಡಲ್ಲಿ ಶಾಲಾ ಕಾರ್ಯಕ್ರಮಗಳಲ್ಲಿ ಪೋಷಕರ ಸಹಭಾಗಿತ್ವ ಮತ್ತು ಆಸಕ್ತಿಗಳನ್ನು ಬೆಳೆಸಿ ಪೋಷಿಸಬಹುದು.

ಹೀಗೆ, ಒಂದು ಸಮೂಹವಾಗಿ ತರಗತಿಯು ಸಂರಚನೆ ಮತ್ತು ಕಾರ್ಯನಿರ್ವಹಿಸುವಿಕೆಯು ಪ್ರತಿ ವಿದ್ಯಾರ್ಥಿಯು ಮಾತ್ರವಲ್ಲದೆ ಇಡೀ ಸಮೂಹದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

**ತರಗತಿ ಸಮೂಹದ ಪ್ರಕ್ರಿಯೆಗಳು :**

ಒಂದು ಸಮೂಹವು ನಿರ್ದಿಷ್ಟ ಗುಣಲಕ್ಷಣಗಳನ್ನೂ ಸಂರಚನೆಯನ್ನೂ ಹೊಂದಿರುತ್ತದೆಂಬುದನ್ನು ತಿಳಿದಿದ್ದೇವೆ. ಸಮೂಹದ ಗುರಿಸಾಧಿಸಲು ಅಥವಾ ಕೆಲಸ ನಿರ್ವಹಿಸಲು ಅಲ್ಲಿನ ಸದಸ್ಯರು ಪರಸ್ಪರರೊಂದಿಗೆ ಸಂಬಂಧ ಬೆಳೆಸಿಕೊಂಡು ಕಾರ್ಯನಿರ್ವಹಿಸಬೇಕು. ಒಂದು ಸಮೂಹದ ಪ್ರಯೋಜನೀಯತೆಯು ಅದರಲ್ಲಿನ ಅಂತರ್‌ವ್ಯಕ್ತಿ ಸಂಬಂಧಗಳಿಂದ ನಿರ್ಧಾರಿತವಾಗುತ್ತದೆ. ಸಮೂಹದ ಸದಸ್ಯರು ಒಟ್ಟಾಗಿಯೇ ಇರುವಂತಾಗಲು ಮಹತ್ವದ ಪಾತ್ರ ವಹಿಸುವ ಸಂಘಟನ ಮತ್ತು ಅಂತರ್‌ಕ್ರಿಯೆಗಳನ್ನು ಸತತವಾಗಿ ಕಾಣುವ ಸಮೂಹದ ಗತಿಶೀಲ ಸ್ವರೂಪವನ್ನು ತಿಳಿಯೋಣ. ಅಲ್ಲದೆ, ಸಮೂಹದ ಸದಸ್ಯರು ಒಟ್ಟಾಗಿರುವುದಕ್ಕೆ ಪೂರಕವಾದ ಸಮೂಹ ವಾತಾವರಣ ಹೇಗಿರಬೇಕೆಂಬುದನ್ನೂ ತಿಳಿಯೋಣ.

ತರಗತಿ ಸಮೂಹದಲ್ಲಿ ಪ್ರತಿ ವಿದ್ಯಾರ್ಥಿಯೂ ತನ್ನ ವೈಯುಕ್ತಿಕ ವಿಕಾಸಕ್ಕಾಗಿ ಮತ್ತು ಇಡೀ ಸಮೂಹದ ಸಫಲತೆಗಾಗಿ ತನ್ನದೇ ಪಾತ್ರ ನಿರ್ವಹಿಸಿ, ತನ್ನ ಕೊಡುಗೆ ನೀಡಬೇಕಾಗುತ್ತದೆ. ಸಮೂಹವು ಯಾವಾಗಲೂ ಗತಿಶೀಲವಾಗಿರುವುದೇ ವಿನಃ ನಿಶ್ಚಲ ಸ್ಥಿತಿಯಲ್ಲಿರುವುದಿಲ್ಲ. ಅಲ್ಲಿ ಸದಸ್ಯರ ನಡುವೆ ನಿರಂತರ ಸಂವಹನ ಮತ್ತು ಅಂತರ್‌ಕ್ರಿಯೆಗಳು ನಡೆಯುತ್ತಿರುವುದಲ್ಲದೆ, ವ್ಯಕ್ತಿ ಮತ್ತು ಸನ್ನಿವೇಶಗಳ ನಡುವೆಯೂ ಅಂತರ್‌ಕ್ರಿಯೆ ನಡೆಯುತ್ತಿರುತ್ತದೆ. ಗತಿಶೀಲ ಸಮೂಹ ಸನ್ನಿವೇಶದಲ್ಲಿ ಕಲಿವನ್ನು ಉತ್ತಮವಾಗಿ ಉತ್ತೇಜಿಸಬಹುದು. ಇದಕ್ಕಾಗಿ ಶಿಕ್ಷಕರು ತಮ್ಮ ತರಗತಿಯಲ್ಲಿ ಕಂಡುಬರುವ ಅಂತರ್‌ಕ್ರಿಯೆಯ ಪ್ರಕ್ರಿಯೆಗಳನ್ನು ಗ್ರಹಿಸಬೇಕು.

ತರಗತಿ ಸಮೂಹದಲ್ಲಿ ಕಲಿವಿನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಾಗ ವಿದ್ಯಾರ್ಥಿಗಳು ಪರಸ್ಪರರಲ್ಲಿ ಮುಕ್ತವಾಗಿ ಅಂತರ್‌ಕ್ರಿಯೆಯಲ್ಲಿ ತೊಡಗುತ್ತಾರೆ. ಇಂತಹ ಅಂತರ್‌ವ್ಯಕ್ತಿ ಅಂತರ್‌ಕ್ರಿಯೆ ನಡೆಯಲು ಸಂವಹನ ಅತ್ಯವಶ್ಯ. ಪರಿಣಾಮಕಾರಿ ಅಂತರ್‌ಕ್ರಿಯೆ ನಡೆಯಬೇಕಾದರೆ ವಿದ್ಯಾರ್ಥಿಗಳು ಸಂವಹನದ ವಿವಿಧ ಪ್ರಕಾರಗಳನ್ನು ಕೌಶಲಗಳನ್ನು ಗಳಿಸಬೇಕು. ಇಂದಿನ ತರಗತಿಗಳಲ್ಲಿ ಪ್ರತಿ ವಿದ್ಯಾರ್ಥಿಯೂ ಕಲಿಕೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಕ್ಕೆ ಒತ್ತು ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಸುಮ್ಮನೆ ಕುಳಿತು ಕೇಳುವವರಾಗಿರಬಾರದೆಂದು ನಿರೀಕ್ಷಿಸಲಾಗುತ್ತಿದೆ. ಶಿಕ್ಷಕರು ವಿದ್ಯಾರ್ಥಿಗಳ ನಡುವೆ ಸಕ್ರಿಯ ಅಂತರ್‌ಕ್ರಿಯೆಯನ್ನು ಉತ್ತೇಜಿಸಬೇಕು.

ನೆಡ್ ಫ್ಲಾಂಡರ್ಸ್ ಎಂಬ ಅಮೆರಿಕದ ಶಿಕ್ಷಣತಜ್ಞರು ತರಗತಿಯಲ್ಲಿ ನಡೆಯುವ ಅಂತರ್‌ಕ್ರಿಯೆಯ ಪ್ರಕ್ರಿಯೆಯನ್ನು ಅಧ್ಯಯನ ಮಾಡಿ ವಿಶ್ಲೇಷಿಸಿದ್ದಾರೆ. ಆ ಅಧ್ಯಯನವು ತರಗತಿಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ನಡೆಯುವ ಅಂತರ್‌ಕ್ರಿಯೆಯನ್ನೇ ಕುರಿತಾಗಿದೆ.

ಫ್ಲಾಂಡರ್ಸ್‌ರವರ ಅಂತರ್‌ಕ್ರಿಯೆ ವಿಶ್ಲೇಷಣಾ ಪದ್ಧತಿಯು ತರಗತಿಯಲ್ಲಿ ಏನು ನಡೆಯುವುದೆಂಬುದನ್ನು ತಿಳಿಯಲು ಸಹಾಯಕವಾಗಿದೆ. ಬಹುಪಾಲು ಸಮಯ ಶಿಕ್ಷಕರೇ ಮಾತನಾಡುವರೆ? ಅಥವಾ ವಿದ್ಯಾರ್ಥಿಗಳು ಮಾತನಾಡಲು ಅವಕಾಶ ನೀಡುವರೆ? ಅಥವಾ ಅವರು ತಮ್ಮ ಶಿಕ್ಷಕರು ಹೇಳಿದ್ದನ್ನು ಕೇಳಿ ಒಪ್ಪಿಕೊಳ್ಳುವರೆ? ವಿದ್ಯಾರ್ಥಿಗಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸ್ವಾತಂತ್ರ್ಯವಿದೆಯೆ? ಇತ್ಯಾದಿ.

ತರಗತಿಯಲ್ಲಿನ ಅಂತರ್‌ಕ್ರಿಯೆಯ ಸ್ವರೂಪವನ್ನು ತಿಳಿಯುವುದು ಬಹಳ ಮುಖ್ಯ. ಏಕೆಂದರೆ ಇದರಿಂದ ತರಗತಿಯ ವಾತಾವರಣವನ್ನು ತಿಳಿಯುವುದಲ್ಲದೆ ವಿದ್ಯಾರ್ಥಿಗಳ ಕಲಿಕೆ ಪರಿಣಾಮಕಾರಿಯಾಗಿದೆಯೇ, ಇಲ್ಲವೇ ಎಂಬುದನ್ನು ತಿಳಿಯಬಹುದು. ವಿದ್ಯಾರ್ಥಿಗಳ ಅನಿಸಿಕೆ, ಅಭಿಪ್ರಾಯಗಳನ್ನು ಉತ್ತೇಜಿಸಿ ಒಪ್ಪಿಕೊಂಡಾಗ ಹಾಗೂ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಿದಾಗ ಕಲಿಕೆ ಉತ್ತಮ ಮಟ್ಟದ್ದಾಗಿರುವುದೆಂದು ಹಲವು ಅಧ್ಯಯನಗಳು ತೋರಿಸಿಕೊಟ್ಟಿವೆ.

ಒಂದು ಸಮೂಹದ ಸದಸ್ಯರ ನಡುವೆ ನಿರಂತರ ಅಂತರ್‌ಕ್ರಿಯೆಯು ಅವರಲ್ಲಿ ಅನುಬಂಧ ಬೆಳೆದು ಒಟ್ಟಾಗಿಯೇ ಇರುವಂತೆ ಮತ್ತು ಸಾಮರಸ್ಯದಿಂದ ಬಾಳ್ವೆ ನಡೆಸುವಂತೆ ಮಾಡುತ್ತದೆ. ಹೀಗೆ ಸದಾ ಒಟ್ಟಾಗಿಯೇ ಇದ್ದು ಸಾಮರಸ್ಯದೊಡನೆ ಕೆಲಸಮಾಡಿ ಬಾಳ್ವೆ ನಡೆಸುವಂತೆ ಮಾಡುವ ಪ್ರವೃತ್ತಿಯೇ ಸಂಲಗ್ನತೆ. ಒಂದು ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಲಗ್ನತೆಯು ಕಲಿವಿನ ಚಟುವಟಿಕೆಗಳು ಸುಸೂತ್ರವಾಗಿ ನಡೆಯಲು ಅತಿ ಮುಖ್ಯವಾಗಿದೆ. ಈ ರೀತಿಯ ಸಂಲಗ್ನತೆಯ ಕೊರತೆಯಿಂದ ಸ್ಪರ್ಧೆ, ದ್ವೇಷಭಾವನೆಗಳುಂಟಾಗಿ ಗುರಿ ಸಾಧನೆಗೆ ಅಡ್ಡಿಯುಂಟಾಗುತ್ತದೆ.

ತರಗತಿಯಲ್ಲಿ ಸಮೂಹ ಸಂಲಗ್ನತೆಯು ಕೆಲವು ಮುಖ್ಯ ಅಂಶಗಳು ಅಥವಾ ಘಟಕಗಳನ್ನು ಅವಲಂಬಿಸಿರುತ್ತದೆ. [illegible] ಮಕ್ಕಳು ತಮ್ಮ ವೈಯುಕ್ತಿಕ ಲಾಭಗಳಿಗಿಂತ ಸಮೂಹದ ಒಳಿತೇ ಹೆಚ್ಚೆಂದು ಭಾವಿಸಿದಾಗ ಸಂಲಗ್ನತೆ

ನಿಶ್ಚಿತವಾಗಿರುತ್ತದೆ. ಹೀಗೆಂದರೆ, ಸ್ವಯಂಕೇಂದ್ರಿತ ಮನೋಭಾವ ಸಮೂಹದ ಸಂಲಗ್ನತೆಗೆ ಅನುಕೂಲಕರವಲ್ಲ ಎಂದರ್ಥ. ಮಕ್ಕಳು ಬೆಳೆದಂತೆಲ್ಲ ಸಾಮಾಜಿಕ ಅಥವಾ ಸಾಮೂಹಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಇದರಿಂದ ಅವರು ತಮ್ಮ ಸ್ವ-ಆಸಕ್ತಿಗಿಂತ ಗುಂಪಿನ ಹಿತಾಸಕ್ತಿ ಹೆಚ್ಚು ಮುಖ್ಯವೆಂದು ಅರಿಯುವರು.

ಎರಡನೆಯದಾಗಿ, ಸ್ಪರ್ಧೆಗಿಂತಲೂ ಸಹಕಾರವು ಸಂಲಗ್ನತೆಯನ್ನು ಹೆಚ್ಚಿಸುತ್ತದೆ. ಸಮೂಹದ ಗುರಿಸಾಧನೆ ಅಥವಾ ಉತ್ಪಾದಕತೆಗೆ ಸಹಕಾರಿ ಚಟುವಟಿಕೆ ಸ್ಪರ್ಧೆಗಿಂತ ಹೆಚ್ಚು ಸಹಾಯಕವೆಂಬುದನ್ನು ಹಲವು ಅಧ್ಯಯನಗಳು ತೋರಿಸಿವೆ. ಸ್ಪರ್ಧೆಯ ಅಂಶ ಪ್ರವೇಶಿಸಿದಾಗ ಒಬ್ಬ ವಿದ್ಯಾರ್ಥಿಯು ಇತರರನ್ನು ಹಿಮ್ಮೆಟ್ಟಿ ತಾನು ಗುರಿಸಾಧಿಸಲು ಪ್ರಯತ್ನಿಸುತ್ತಾನೆ. ಇದರಿಂದಾಗಿ ದ್ವೇಷಭಾವನೆ ಉಂಟಾಗುವುದು. ಸಹಕಾರವು ಸಂಲಗ್ನತೆಯನ್ನು ನಿಶ್ಚಯಿಸುವುದು ಮಾತ್ರವಲ್ಲದೆ ಸ್ನೇಹವನ್ನೂ ಉತ್ತೇಜಿಸುತ್ತದೆ. ಮೂರನೆಯದಾಗಿ, ಸಮೂಹದ ಸಂಲಗ್ನತೆಯು ಒಬ್ಬ ಸದಸ್ಯನು ಸಮೂಹದಿಂದ ಪಡೆಯುವ ಅವಶ್ಯಕತೆ ಪೂರೈಕೆಯ ಪ್ರಮಾಣ ಮತ್ತು ಗುಣಮಟ್ಟಗಳನ್ನು ಅವಲಂಬಿಸಿದೆ. ಪ್ರತಿ ವಿದ್ಯಾರ್ಥಿಗೂ ತನ್ನದೇ ಆದ ಅವಶ್ಯಕತೆಗಳಿರುತ್ತವೆ ಮತ್ತು ತನ್ನ ಸಮೂಹದಲ್ಲಿ ಕೆಲಸಮಾಡುವುದರ ಮೂಲಕ ಈ ಅವಶ್ಯಕತೆಗಳನ್ನು ಪೂರೈಸಿಕೊಳ್ಳ ಬಯಸುತ್ತಾನೆ. ತನ್ನ ಅವಶ್ಯಕತೆಗಳನ್ನು ಸಾಮೂಹಿಕ ಚಟುವಟಿಕೆಗಳ ಮೂಲಕ ಪೂರೈಸಿಕೊಳ್ಳುವುದು ಸಾಧ್ಯವಾದರೆ ತನ್ನನ್ನು ತಾನು ಸಮೂಹದೊಂದಿಗೆ ಗುರ್ತಿಸಿಕೊಂಡು ಸಹಕರಿಸುತ್ತಾನೆ. ಇಲ್ಲದಿದ್ದರೆ, ಆ ವಿದ್ಯಾರ್ಥಿಯು ಸಮೂಹದಿಂದ ಹೊರಗಿರುವುದಕ್ಕೆ ಇಚ್ಛಿಸಬಹುದು.

ಉತ್ತಮ ಸಂವಹನ ಮತ್ತು ಅಂತರ್‌ಕ್ರಿಯೆಯೂ ಸಹ ಸಮೂಹವು ಒಟ್ಟಾಗಿರುವುದಕ್ಕೆ ಪೂರಕವಾಗಿದೆ. ಯಾವ ತರಗತಿಯಲ್ಲಿ ವಿದ್ಯಾರ್ಥಿಗಳು ಮುಕ್ತವಾಗಿ ಪರಸ್ಪರರೊಂದಿಗೆ ಸಂವಹನ ಮಾಡುತ್ತಾರೆಯೋ ಅಲ್ಲಿ ಸಂಲಗ್ನತೆ ಹಾಗೂ ಮಿತ್ರತ್ವ ಬೆಳೆಸುವುದು ಸುಲಭ. ಸಂವಹನ ಇಲ್ಲದ ಸಮೂಹದಲ್ಲಿ ಸಂಲಗ್ನತೆ ಸಾಧ್ಯವಿಲ್ಲ.

ಶಿಕ್ಷರ ಮನೋಭಾವ, ತರಗತಿ ಪರಿಸರ ಮತ್ತಿತರ ಕೆಲವು ಅಂಶಗಳೂ ಸಮೂಹದ ಸದಸ್ಯರು ಒಟ್ಟಾಗಿರುವುದರ ಮೇಲೆ ಪ್ರಭಾವ ಬೀರುತ್ತವೆ. ಶಿಕ್ಷಕರು ವಿದ್ಯಾರ್ಥಿಗಳ ಚಟುವಟಿಕೆಗಳ ಮೇಲೆ ಪರೋಕ್ಷ ಪ್ರಭಾವ ಬೀರಬೇಕು ಹಾಗೂ ಕಲಿಕೆಗೆ ನೆರವಾಗಬೇಕು. ಬದಲಿಗೆ, ಶಿಕ್ಷಕರೇ ಪ್ರಧಾನವಾಗಿದ್ದು ವಿದ್ಯಾರ್ಥಿಗಳು ನಿಷ್ಕ್ರಿಯರಾಗಿದ್ದರೆ ಪರಿಣಾಮವೂ ಋಣಾತ್ಮಕವಾಗುವುದು.

## ನೆನಪಿನಲ್ಲಿಡಬೇಕಾದ ಅಂಶಗಳು

- ಸಮೂಹವು ಹಲವಾರು ವ್ಯಕ್ತಿಗಳನ್ನೊಳಗೊಂಡ ಒಂದು ಸಾಮಾಜಿಕ ಘಟಕ.
- ಸಮೂಹವು ನಿರ್ದಿಷ್ಟ ಲಕ್ಷಣಗಳನ್ನು ಹೊಂದಿರುತ್ತದೆ.
- ತರಗತಿಯು ಸಮೂಹದ ಎಲ್ಲ ಗುಣಲಕ್ಷಣಗಳನ್ನೂ ಹೊಂದಿದೆ. ಸಂಲಗ್ನತೆ
- ಸಮೂಹದ ಸದಸ್ಯರು ಪರಸ್ಪರರೊಂದಿಗೆ ಸದಾ ಸೇರಿರುವ ಪ್ರವೃತ್ತಿ ಸಂಲಗ್ನತೆ.
- ಸಂಲಗ್ನತೆಯು ಸಂವಹನ, ಸಾಮಾಜಿಕ ಮನೋಭಾವ ಮತ್ತು ಸದಸ್ಯರ ನಡುವಿನ ಸಹಕಾರಗಳನ್ನವಲಂಬಿಸಿದೆ.

NAVACHETANA EDUCATIONS



Scanned with OKEN Scanner

## ಅಭ್ಯಾಸ

1. ಸಮೂಹ ಎಂದರೇನು? ಸಮೂಹದ ಲಕ್ಷಣಗಳನ್ನು ತಿಳಿಸಿ.

2. ಸಂಲಗ್ನತೆ ಎಂದರೇನು? ಅದರ ಪ್ರಾಮುಖ್ಯತೆ ಏನು?

# ಸಮೂಹದ ವಿನ್ಯಾಸಗಳ ಅಧ್ಯಯನ

ಹಿಂದಿನ ಅಧ್ಯಾಯಗಳಲ್ಲಿ ನಾವು ಸಮೂಹದ ಅರ್ಥ ಮತ್ತು ತರಗತಿ ಸಮೂಹದ ಪ್ರಾಮುಖ್ಯತೆಯನ್ನು ತಿಳಿದೆವು. ಸಮೂಹದ ಸದಸ್ಯರು ಒಟ್ಟಾಗಿರಬೇಕಾದ ಅಗತ್ಯ ಹಾಗೂ ಅಂತರ್‌ವ್ಯಕ್ತಿ ಅಂತರ್‌ಕ್ರಿಯೆಗಳ ಅಗತ್ಯವನ್ನೂ ತಿಳಿದೆವು. ಮಕ್ಕಳು ಸಮೂಹ ಜೀವನಕ್ಕೆ ಹೊಂದಿಕೊಳ್ಳಲು ಸಹಾಯ ಮಾಡುವುದಕ್ಕಾಗಿ ಶಿಕ್ಷಕರು ತರಗತಿ ಸಮೂಹ, ಅದರ ವಿನ್ಯಾಸಗಳನ್ನು ಅಧ್ಯಯನ ಮಾಡಬೇಕು. ಈ ಅಧ್ಯಾಯದಲ್ಲಿ ನಾವು ಸಮೂಹದ ವಿನ್ಯಾಸದ ಅಧ್ಯಯನದ ಅವಶ್ಯಕತೆ ಏನು? ಸಮೂಹದ ಸ್ವರೂಪವನ್ನು ಪ್ರಕ್ರಿಯೆಗಳನ್ನು ಅಧ್ಯಯನ ಮಾಡುವುದು ಹೇಗೆಂಬುದನ್ನು ತಿಳಿಯಲಿದ್ದೇವೆ. ಸಮಾಜಮಿತಿಯ ಅರ್ಥ ಮತ್ತು ವಿಧಾನವನ್ನೂ ಶಿಕ್ಷಕರಿಗೆ ಅದರ ಪ್ರಯೋಜನವೇನೆಂಬುದನ್ನೂ ತಿಳಿಯೋಣ.

ಮಗುವಿನಲ್ಲಿ ಸಾಮಾಜಿಕ ಸಾಮರ್ಥ್ಯಗಳನ್ನೂ, ಕೌಶಲಗಳನ್ನೂ ಬೆಳೆಸುವ ಜವಾಬ್ದಾರಿ ಶಿಕ್ಷಕರದಾಗಿದೆ. ಆದ್ದರಿಂದ ತರಗತಿಯಲ್ಲಿ ನಡೆಯುವ ಸಮೂಹ ಪ್ರಕ್ರಿಯೆಗಳನ್ನು ಅಧ್ಯಯನ ಮಾಡುವುದು ಅಗತ್ಯವೆಂದು ಶಿಕ್ಷಕರು ಭಾವಿಸುತ್ತಾರೆ. ಶಿಕ್ಷಕರು ತಮ್ಮ ಗುಂಪನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ವಿವಿಧ ವಿಧಾನಗಳನ್ನು ಅನುಸರಿಸಬಹುದು. ಸಾಮಾನ್ಯವಾಗಿ ಬಳಕೆಯಲ್ಲಿರುವುದು ವೀಕ್ಷಣಾ ವಿಧಾನ. ಯೋಜಿತ, ವ್ಯವಸ್ಥಿತ ವೀಕ್ಷಣೆಯ ಮೂಲಕ ಸಮೂಹ ವರ್ತನೆಯನ್ನು ಪರಿಣಾಮಕಾರಿಯಾಗಿ ಗ್ರಹಿಸಬಹುದು. ಇದಕ್ಕಾಗಿ ಮೊದಲು ಶಿಕ್ಷಕರು ಏನನ್ನು ವೀಕ್ಷಿಸಬೇಕೆಂದು ನಿರ್ಧರಿಸಬೇಕು. ಉದಾಹರಣೆಗೆ, ಒಂದು ಗುಂಪು ಚಟುವಟಿಕೆಯಲ್ಲಿ ವಿದ್ಯಾರ್ಥಿಗಳ ಸಹಭಾಗಿತ್ವದ ಸ್ವರೂಪವನ್ನು ವೀಕ್ಷಿಸಬೇಕೆಂದು ನಿರ್ಧರಿಸಿದಲ್ಲಿ ಅದಕ್ಕಾಗಿ ಸೂಕ್ತ ಸನ್ನಿವೇಶಗಳನ್ನು ಒದಗಿಸಲು ಆಲೋಚಿಸಬೇಕು ಅಥವಾ ಕೃತಕ ಸನ್ನಿವೇಶವನ್ನೂ ಸೃಷ್ಟಿಸಿ ವೀಕ್ಷಿಸಬಹುದು. ವೀಕ್ಷಣೆಗಾಗಿ ಒಂದು ತಪಶೀಲು ಪಟ್ಟಿಯನ್ನಾಗಲಿ, ತಾಳೆಪಟ್ಟಿಯನ್ನಾಗಲಿ ಸಾಧನವನ್ನಾಗಿ ತಯಾರಿಸಿಕೊಳ್ಳಬೇಕು. ವೀಕ್ಷಣೆಯ ನಂತರ ವೀಕ್ಷಿಸಿದ ಅಂಶಗಳನ್ನು ಬರೆದು ದಾಖಲಿಸಬೇಕು.

ದಾಖಲೆಯನ್ನು ಎಚ್ಚರಿಕೆಯಿಂದ ವಿಶ್ಲೇಷಿಸಿ ವೀಕ್ಷಿಸಿದ ಅಂಶಗಳನ್ನು ಅರ್ಥಮಾಡಿಕೊಂಡು ಮಗುವಿನ ಸಾಮಾಜಿಕ ಸಾಮರ್ಥ್ಯಗಳ ಬಗ್ಗೆ ತೀರ್ಮಾನ ಕೈಗೊಳ್ಳಬೇಕು.

**ಸಮಾಜಮಿತಿ :** ಸಮೂಹವನ್ನು ಅಧ್ಯಯನ ಮಾಡಲು ಬಳಸುವ ವಿಶಿಷ್ಟ ವಿಧಾನವೇ ಸಮಾಜಮಿತಿ. 1934ರಲ್ಲಿ ಮೊರೆನೊ ಎಂಬುವರು ಈ ತಂತ್ರವನ್ನು ರೂಪಿಸಿದರು. ಅಂದಿನಿಂದಲೂ ಈ ತಂತ್ರವು ಸಮೂಹದ ಆಂತರಿಕ ಸಂರಚನೆ, ಸ್ವರೂಪವನ್ನು ಅಧ್ಯಯನ ಮಾಡಲು ಆಗಾಗ್ಗೆ ಬಳಸುತ್ತಿರುವ ವಿಧಾನವಾಗಿ ಮುಂದುವರೆದಿದೆ. ಈ ತಂತ್ರವು ನಮಗೆ ಒಂದು ಸಮೂಹದ ಸ್ವರೂಪ, ರಚನೆ ಮತ್ತು ಅಂತರ್‌ವ್ಯಕ್ತಿ ಸಂಬಂಧಗಳ ತಿಳುವಳಿಕೆ ನೀಡುತ್ತದೆ. ಈ ತಂತ್ರದ ಸಹಾಯದಿಂದ ನಾವು 'ತಾರೆ' ಗಳನ್ನೂ 'ತಿರಸ್ಕೃತ'ರನ್ನೂ 'ಒಬ್ಬಂಟಿ'ಗಳನ್ನೂ, ಉಪಗುಂಪುಗಳನ್ನೂ, ಜೋಡಿಗಳನ್ನೂ, ಸರಪಳಿ ಸಂಬಂಧಗಳನ್ನೂ ಗುರ್ತಿಸಬಹುದು. ಈ ತಂತ್ರವನ್ನು ಬಳಸುವ ಕ್ರಮ ಈ ಕೆಳಕಂಡಂತಿದೆ.

ಒಂದು ಸಮೂಹದ ಪ್ರತಿ ಸದಸ್ಯನಿಗೂ ತನ್ನ ತರಗತಿ ಶಾಲೆಯ ಚಟುವಟಿಕೆಗಳಿಗೆ ಸಂಬಂಧಿಸಿದ ಒಂದು ಪ್ರಶ್ನೆಯನ್ನು ಕೇಳಿ, ಅದಕ್ಕುತ್ತರವಾಗಿ ತನಗಿಷ್ಟವಾದ ಮೂರು ಆಯ್ಕೆಗಳನ್ನು ಇಚ್ಛೆಯ ಅನುಕ್ರಮದಲ್ಲಿ ಬರೆದು



Scanned with OKEN Scanner

ತಿಳಿಸುವಂತೆ ಸೂಚಿಸಲಾಗುವುದು. (ಇದಕ್ಕೆ ಮೊದಲು ಸಮೂಹದ ಪ್ರತಿ ಸದಸ್ಯನಿಗೂ ಕ್ರಮಸಂಖ್ಯೆಯೊಂದನ್ನು ನೀಡಿರಬೇಕು) ಉದಾಹರಣೆಗೆ ಪ್ರಶ್ನೆ ಹೀಗಿರಬಹುದು - ನಿನ್ನ ತರಗತಿಯ ನಾಯಕ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಬಯಸುತ್ತೀಯೆ? ಇಚ್ಛೆಯ ಅನುಕ್ರಮದಲ್ಲಿ ಮೂರು ಹೆಸರುಗಳನ್ನು ಬರೆದು ತಿಳಿಸು.

ಹೀಗೆ ಇತರ ಸನ್ನಿವೇಶ ಅಥವಾ ಚಟುವಟಿಕೆಗಳು ಹೀಗಿರಬಹುದು - ಪಕ್ಕದಲ್ಲಿ ಕುಳಿತುಕೊಳ್ಳಲು, ಊಟ ಹಂಚಿಕೊಳ್ಳಲು, ಅಭ್ಯಾಸ ಮಾಡಲು, ಪ್ರಯೋಗ ನಡೊಸಲು ಇತ್ಯಾದಿ.

ಶಿಕ್ಷಕರು ಒಮ್ಮೆಗೆ ಒಂದು ಪ್ರಶ್ನೆಯನ್ನು ಮುಂದಿಟ್ಟು ಮಕ್ಕಳ ಪ್ರತಿಕ್ರಿಯೆಗಳನ್ನು ಲಿಖಿತರೂಪದಲ್ಲಿ ಸಂಗ್ರಹಿಸುವರು. ಇದಕ್ಕಾಗಿ, ಮಕ್ಕಳಿಗೆ ತಾವೇನು ಮಾಡಬೇಕೆಂದು ಸ್ಪಷ್ಟವಾಗಿ ತಿಳಿಸಿರಬೇಕು. ಪ್ರತಿ ವಿದ್ಯಾರ್ಥಿಯೂ ಆಯ್ಕೆ ಮಾಡಬೇಕು. ಯಾವುದೇ ವಿದ್ಯಾರ್ಥಿ ಎಲ್ಲ ಹೆಸರುಗಳನ್ನೂ ಬರೆಯುವಂತಿಲ್ಲ. ಆದರೆ ಮೂರಕ್ಕಿಂತ ಕಡಿಮೆ ಹೆಸರುಗಳನ್ನು ಸೂಚಿಸಲು ಅವಕಾಶ ನೀಡಬಹುದು.

ಮಕ್ಕಳಿಂದ ಪ್ರತಿಕ್ರಿಯೆಗಳನ್ನು ಸಂಗ್ರಹಿಸಿದ ನಂತರ ಆ ಮಾಹಿತಿಯನ್ನು ವರ್ಗೀಕರಿಸಿ ಪಟ್ಟಿ ಮಾಡಬೇಕು. ಪಟ್ಟಿಯ ನಮೂನೆಯೊಂದನ್ನೂ ಮುಂದೆ ನೀಡಲಾಗಿದೆ. ಇದನ್ನು ಮ್ಯಾಟ್ರಿಕ್ಸ್ (ಮಾತೃಕೆ) ಎನ್ನುತ್ತೇವೆ.

ಪ್ರತಿ ವಿದ್ಯಾರ್ಥಿ ವ್ಯಕ್ತ ಪಡಿಸಿರುವ ಇಚ್ಛೆಯ ಹೆಸರುಗಳನ್ನು ಪಟ್ಟಿಯಲ್ಲಿ ನಮೂದಿಸಿಕೊಳ್ಳಬೇಕು. ಪ್ರತಿ ವಿದ್ಯಾರ್ಥಿ ಪಡೆದಿರುವ ಒಟ್ಟು ಆಯ್ಕೆಗಳನ್ನು ದಾಖಲಿಸಬೇಕು.

ಮುಂದಿನ ಹಂತದಲ್ಲಿ ಪಟ್ಟಿ ಮಾಡಲ್ಪಟ್ಟ ಮಾಹಿತಿಯನ್ನು ಸಮಾಜ ಆಲೇಖದ ರೂಪದಲ್ಲಿ ನಿರೂಪಿಸಬೇಕು. ಸಮಾಜಮಿತಿಯದತ್ತಾಂಶಗಳನ್ನು ಆಲೇಖದ ರೂಪದಲ್ಲಿ ವ್ಯಕ್ತಪಡಿಸುವುದೇ ಸಮಾಜ ಆಲೇಖ. ಅದು ಸಮೂಹದಲ್ಲಿನ ಅಂತರ್‌ವ್ಯಕ್ತಿ ಸಂಬಂಧಗಳನ್ನು ಪ್ರತಿನಿಧಿಸುತ್ತದೆ.

ಸಮಾಜ ಆಲೇಖ ರಚಿಸುವುದು ಹೇಗೆ?

ಒಂದು ಸಮಾಜ ಆಲೇಖ ರಚಿಸಲು ಸಣ್ಣ ತ್ರಿಭುಜಗಳು ಅಥವಾ ಚೌಕ, ವೃತ್ತಗಳನ್ನೂ ಬಾಣದ ಗುರುತುಗಳನ್ನೂ ಬಳಸಲಾಗುತ್ತದೆ. ಅತ್ಯಂತ ಜನಪ್ರಿಯ ವ್ಯಕ್ತಿ ಅಥವಾ ಅತಿ ಹೆಚ್ಚು ಜನ ಇಚ್ಛೆಪಟ್ಟಿರುವ ಮಗು ತಾರೆ ಎನಿಸುತ್ತದೆ. ಇದನ್ನೇ ಕೇಂದ್ರವಾಗಿಟ್ಟುಕೊಂಡು ಈ ಪ್ರಾರಂಭದ ಬಿಂದುವಿನಿಂದ ಆಯ್ಕೆಗಳನ್ನು ಬಾಣದ ಗುರುತುಗಳ ಸಹಾಯದಿಂದ ಸೂಚಿಸಲಾಗುತ್ತದೆ. ಮ್ಯಾಟ್ರಿಕ್ಸ್ ಪಟ್ಟಿಯಲ್ಲಿ ನಮೂದಾಗಿರುವ ಅಂಶಗಳನ್ನು ಬಳಸಿ ಸಮಾಜ ಆಲೇಖ ರಚಿಸಲಾಗುವುದು.

ಮಾತೃಕೆ ಪಟ್ಟಿಯ ಒಂದು ಉದಾಹರಣೆ :

**ಈ ಮಾತೃಕೆಯಲ್ಲಿ ಎ, ಬಿ, ಸಿ, ಡಿ, ಇ ಮತ್ತು ಎಫ್ ಈ ಸಮೂಹದ ಸದಸ್ಯರುಗಳಿಗೆ ನೀಡಿರುವ ಸಂಕೇತಗಳಾಗಿವೆ. ಅಡ್ಡ ಸಾಲಿನಲ್ಲಿ ಆಯ್ಕೆ ಮಾಡಿದವರನ್ನು ನಮೂದಿಸಿದೆ. ಪ್ರತಿ ಸದಸ್ಯರ ಎದುರಿನಲ್ಲಿ ನಮೂದವರನ್ನು ನಮೂದಿಸಿದೆ. ಪ್ರತಿ ಸದಸ್ಯರ ಎದುರಿನಲ್ಲಿ ನಮೂದಾಗಿರುವ 1, 2, 3 ಎಂಬ ಸಂಖ್ಯೆಗಳು ಇಚ್ಛೆಯ ಅನುಕ್ರಮವನ್ನು ಸೂಚಿಸುತ್ತವೆ.**



Scanned with OKEN Scanner

| ಆಯ್ಕೆಯಾದವರು → / ಆಯ್ಕೆಮಾಡಿದವರು ↓ | ಎ | ಬಿ | ಸಿ | ಡಿ | ಇ | ಎಫ್ |
|---|---|---|---|---|---|---|
| ಎ | | (1) | (2) | | (3) | |
| ಬಿ | | | (1) | (2) | | (3) |
| ಸಿ | (3) | (1) | | (2) | | |
| ಡಿ | | | (1) | | (3) | (2) |
| ಇ | (3) | | (2) | (1) | | |
| ಎಫ್ | (2) | | (3) | | (1) | |
| ಒಟ್ಟು | 3 | 2 | 5 | 3 | 3 | 2 |

ಮೇಲಿನ ಮ್ಯಾಟ್ರಿಕ್ಸ್‌ನಿಂದ ರಚಿತವಾದ ಸಮಾಜ ಆಲೇಖ ಹೀಗಿದೆ




ಸಮಾಜ ಆಲೇಖ - 1

**ಸಮಾಜ ಆಲೇಖ – 2**




ಮೇಲಿನ ಸಮಾಜ ಆಲೇಖದಲ್ಲಿ ಲಕ್ಷ್ಮೀ ತಾರೆ ಆಗಿದ್ದಾಳೆ. ಆಶಾ ಒಬ್ಬಂಟಿ, ಮೇರಿ ಹಾಗೂ ಶಾಂತಿ ಸಹ ಒಬ್ಬಂಟಿಗರೇ. ಏಕೆಂದರೆ ಅವರಿಬ್ಬರೂ ಇತರರ ಬಗ್ಗೆ ತಮ್ಮ ಇಚ್ಛೆ ವ್ಯಕ್ತ ಪಡಿಸಿದ್ದರೂ ಅವರನ್ನು ಯಾರೂ ಆಯ್ಕೆ ಮಾಡಿಲ್ಲ. ಅನಿತಾ ಮತ್ತು ಸುನೀತಾ ಸಹಜವಾಗಿ ಜೋಡಿಗಳು. ಲಕ್ಷ್ಮಿ, ಮುಮ್ತಾಜ್ ಮತ್ತು ವಿದ್ಯಾ ಇವರುಗಳ ಉಪಗುಂಪನ್ನು ಕಾಣಬಹುದು.

ಒಂದು ಸಮಾಜ ಆಲೇಖವನ್ನು ಹೀಗೆಯೇ ಅರ್ಥೈಸಲಾಗುತ್ತದೆ. ಇದಕ್ಕಿಂತ ದೊಡ್ಡ ಸಮೂಹದಲ್ಲಿ ಅತಿ ಹೆಚ್ಚು ಸದಸ್ಯರಿಂದ ಆಯ್ಕೆಯಾದವರು, ಅತಿ ಕಡಿಮೆ ಸದಸ್ಯರಿಂದ ಆಯ್ಕೆಯಾದವರನ್ನು ಸೂಚಿಸಲು ಆಲೇಖದ ಮೇಲೆ ವೃತ್ತಗಳನ್ನು ಎಳೆಯಬಹುದು.

ಸಮಾಜ ಆಲೇಖವು ಶಿಕ್ಷಕರಿಗೆ ತರಗತಿ ಸಮೂಹದ ಅಂತರ್‌ವ್ಯಕ್ತಿ ಗತಿಶೀಲತೆಯನ್ನು ವಿಶ್ಲೇಷಿಸುವ ಸಾಮರ್ಥ್ಯ ನೀಡುತ್ತದೆ. ಸಮೂಹದಲ್ಲಿ ಪ್ರಬಲ ವ್ಯಕ್ತಿಗಳನ್ನು, ಉಪ ಗುಂಪುಗಳನ್ನು ಒಂಟಿಯಾದವರನ್ನು ಮತ್ತಿತರ ಸಾಮಾಜಿಕ ಒಪ್ಪಿಗೆ ಮತ್ತು ತಿರಸ್ಕಾರಗಳ ಸ್ವರೂಪಗಳನ್ನು ಗುರ್ತಿಸಲೂ ಸಹ ಅದು ಸಹಾಯವಾಗಿದೆ. ಮೊರೆನೋರವರ ಪ್ರಕಾರ ಸಮೂಹದ ಸುಸಂಬದ್ಧತೆಯನ್ನು ಆ ಸಮೂಹದಲ್ಲಿರುವ ಒಬ್ಬಂಟಿಗರು, ಪರಸ್ಪರ ಜೋಡಿಗಳು ಮತ್ತು ವಿನಿಮಯವಾಗದ ಆಯ್ಕೆಗಳು ಸೂಚಿಸುತ್ತವೆ.

ಸಮಾಜಮಿತಿ ತಂತ್ರದ ಮತ್ತೊಂದು ಪ್ರಕಾರವೆಂದರೆ ಯಾರೆಂದು ಊಹಿಸುವ ತಂತ್ರ, ಇದರಲ್ಲೂ ಶಿಕ್ಷಕರು ತರಗತಿಯಲ್ಲಿರುವ ವಿವಿಧ ರೀತಿಯ ವ್ಯಕ್ತಿಗಳ ಸಂಕ್ಷಿಪ್ತ ವಿವರಗಳನ್ನು ಸಿದ್ಧಪಡಿಸಬೇಕು. ಈ ವರ್ಣನೆಗಳನ್ನು ಸಮೂಹದ ಮುಂದಿಡಲಾಗುತ್ತದೆ. ಪ್ರತಿ ಮಗುವೂ ಆ ಸಮೂಹದಲ್ಲಿರುವ ಯಾವ ವ್ಯಕ್ತಿಗೆ ಆ ವರ್ಣನೆ ಅತ್ಯಂತ ಸಮರ್ಪಕವಾಗಿ ಹೊಂದುವುದೋ ಅವರನ್ನು ಊಹಿಸಬೇಕು.

**ಉದಾಹರಣೆಗೆ :**

1. ಅವನು ದಯಾಪರನೂ, ಉಪಕಾರಿಯೂ ಆಗಿದ್ದಾನೆ. ಯಾವಾಗಲೂ ಯಾರನ್ನೂ ನೋಯಿಸುವುದಿಲ್ಲ. ಓದುವುದರಲ್ಲೂ ಮುಂದಾಗಿದ್ದಾನೆ.

2. ಕೆಲವೇ ಸ್ನೇಹಿತರನ್ನು ಹೊಂದಿದ್ದಾನೆ. ಶಾಂತ ಸ್ವಭಾವದನಾಗಿದ್ದು, ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ ಇತ್ಯಾದಿ

**ಸಮಾಜ ಮಿತಿಯ ದತ್ತಾಂಶಗಳನ್ನು ಸಂಗ್ರಹಿಸುವಾಗ ಈ ಕೆಳಗಿನ ಅಂಶಗಳನ್ನು ನೆನಪಿಡಬೇಕು.**

1. ತರಗತಿಯಲ್ಲಿರುವ ವಿದ್ಯಾರ್ಥಿಗಳಿಗೆ ಪರಸ್ಪರ ಪರಿಚಯವಿರಬೇಕು, ಆದ್ದರಿಂದ ಶಾಲೆ ಪ್ರಾರಂಭವಾದ ಮೂರು ನಾಲ್ಕು ವಾರಗಳವರೆಗೆ ಸಮಾಜ ಮಿತಿತಂತ್ರ ಬಳಸಬಾರದು.

2. ಸಮಾಜ ಮಿತಿ ನಿರ್ವಹಿಸುವ ಮೊದಲು ಸ್ಪಷ್ಟ ಸೂಚನೆ ನೀಡಿರಬೇಕು.

3. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಒಳ್ಳೆಯ ಬಾಂಧವ್ಯ ಇರಬೇಕು.

4. ಸಮಾಜಮಿತಿಯ ಮಾಹಿತಿಯನ್ನು ತಕ್ಷಣದಲ್ಲಿ ಪಡೆಯಬೇಕು. ಮೊದಲೇ ಸೂಚನೆ ನೀಡಿರಬಾರದು. ಸುಮಾರು ಹದಿನೈದು ನಿಮಿಷಗಳಲ್ಲಿ ಮಾಹಿತಿ ಸಂಗ್ರಹಣೆ ಮುಗಿಸಬೇಕು.

ಸರಿಯಾಗಿ ಉಪಯೋಗಿಸಿದಲ್ಲಿ ಸಮಾಜಮಿತಿಯು ಶಿಕ್ಷಕರಿಗೆ ಸಾಕಷ್ಟು ಉಪಯುಕ್ತವಾಗಿದೆ ಶಿಕ್ಷಕರಿಗೆ ಈ ಕೆಳಗಿನ ಅಂಶಗಳನ್ನು ತಿಳಿಯಲು ಸಹಾಯಕವಾಗಿದೆ.

- ✦ ತನ್ನ ವಿದ್ಯಾರ್ಥಿಗಳ ನಡುವಿನ ಅಂತರ್‌ವ್ಯಕ್ತಿ ಸಂಬಂಧಗಳನ್ನು ವ್ಯವಸ್ಥಿತ ರೀತಿಯಲ್ಲಿ ತಿಳಿಯಬಹುದು.
- ✦ 'ನಕ್ಷತ್ರ' ಗಳನ್ನು ಗುರ್ತಿಸಿ ವಿದ್ಯಾರ್ಥಿಗಳಲ್ಲಿರುವ ನಾಯಕತ್ವದ ಗುಣಗಳನ್ನು ತಿಳಿಯಲು.
- ✦ 'ಒಬ್ಬಂಟಿ' ಅಥವಾ 'ತಿರಸ್ಕೃತ' ಯಾರೆಂದು ತಿಳಿದು ಆ ಮಗುವನ್ನು ಸಮಾಜೀಕರಿಸಲು ಸೂಕ್ತಕ್ರಮಗಳನ್ನು ಕೈಗೊಳ್ಳಲು.
- ✦ ಉಪಗುಂಪುಗಳಿದ್ದರೆ ಅವುಗಳಿಗೆ ಆಧಾರವೇನೆಂದು ತಿಳಿಯಲು. ಉಪಗುಂಪುಗಳು ಮಗುವಿನ ಸಾಮಾಜಿಕ ವಿಕಾಸಕ್ಕೆ ಹಾನಿಕಾರಕವಲ್ಲದಿದ್ದಲ್ಲಿ ಒಪ್ಪಬಹುದು. ಇಲ್ಲದಿದ್ದರೆ ಅದನ್ನು ಉತ್ತೇಜಿಸಬಾರದು.
- ✦ ಸಂಲಗ್ನತೆ ಇರುವ ಸಮೂಹವೇ ಅಥವಾ ಲಿಂಗಭಿನ್ನತೆ ಅಥವಾ ಇತರ ಯಾವುದೇ ಅಂಶಗಳ ಆಧಾರದ ಮೇಲೆ ಭಾಗವಾಗಿದೆಯೇ?

ಈ ಜ್ಞಾನವು ಶಿಕ್ಷಕರು ತಮ್ಮ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಅಥವಾ ವಿಪರೀತ ವರ್ತನೆಎಗಳಿಗೆ ಕಾರಣಗಳನ್ನು ಕಂಡುಕೊಂಡು, ಮಕ್ಕಳಲ್ಲಿ ಸಾಮಾಜಿಕ ವಿಕಾಸವನ್ನು ಹೆಚ್ಚಿಸುವಂತಹ ಚಟುವಟಿಕೆಗಳನ್ನೂ ಅನುಭವಗಳನ್ನೂ ರೂಪಿಸಲು ಸಹಾಯಕವಾಗಿದೆ.

## ನೆನಪಿಡಬೇಕಾದ ಅಂಶಗಳು

- ★ ಶಿಕ್ಷಕರಿಗೆ ತರಗತಿ ಸಮೂಹದ ವಿನ್ಯಾಸದ ಅಧ್ಯಯನ ಅತ್ಯವಶ್ಯ.
- ★ ಸಮೂಹದ ಸ್ವರೂಪವನ್ನು ಸಾಮಾನ್ಯ ತಂತ್ರವಾದ ವೀಕ್ಷಣೆಯ ಮೂಲಕವೂ ಅಧ್ಯಯನ ಮಾಡಬಹುದು ಅಥವಾ ನಿರ್ದಿಷ್ಟ ತಂತ್ರವಾದ ಸಮಾಜ ಮಿತಿಯಿಂದಲೂ ಅಧ್ಯಯನ ಮಾಡಬಹುದು.



Scanned with OKEN Scanner

★ ಸಮಾಜಮಿತಿಯು ಸಮೂಹದ ಸ್ವರೂಪ, ರಚನೆ ಮತ್ತು ಅಂತರ್‌ವ್ಯಕ್ತಿ ಸಂಬಂಧಗಳನ್ನು ಅಧ್ಯಯನ ಮಾಡುವ ತಂತ್ರವಾಗಿದೆ.

★ ಬಹುತೇಕ ಸಮೂಹಗಳಲ್ಲಿ ನಕ್ಷತ್ರಗಳೂ, ತಿರಸ್ಕೃತರೂ, ಒಬ್ಬಂಟಿಗಳೂ, ಉಪಗುಂಪುಗಳೂ ಇರುತ್ತವೆ.

★ ಸಮಾಜ ಆಲೇಖವು ಸಮೂಹದಲ್ಲಿನ ಸಂಬಂಧಗಳನ್ನು ಪ್ರತಿನಿಧಿಸುವ ಆಲೇಖವಾಗಿದೆ.

**ಚಟುವಟಿಕೆ**

ಒಂದು ಪ್ರಾಥಮಿಕ ಶಾಲಾ ತರಗತಿಯ ಸಮಾಜ ಮಿತಿ ಅಧ್ಯಯನ ಮಾಡಿ, ಸಮಾಜ ಆಲೇಖ ರಚಿಸಿ.

**ಅಭ್ಯಾಸಗಳು**

1. ಶಿಕ್ಷಕರಿಗೆ ಸಮಾಜಮಿತಿ ಅಧ್ಯಯನದ ಅಗತ್ಯವನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಸಮಾಜಮಿತಿ ಎಂದರೇನು?
3. ಸಮಾಜ ಆಲೇಖ ಎಂದರೇನು? ಶಿಕ್ಷಕರಿಗೆ ಅದು ಹೇಗೆ ಉಪಯುಕ್ತವಾಗಿದೆ?
4. ಒಂದು ಸಮೂಹವನ್ನು ಅಧ್ಯಯನ ಮಾಡಲು ವೀಕ್ಷಣೆಗಿಂತ ಸಮಾಜಮಿತಿ ಉತ್ತಮ ಏಕೆ?

## ತರಗತಿ ನಾಯಕತ್ವ

ನಾವು ಸಮೂಹದ ಅರ್ಥ ಮತ್ತು ಸ್ವರೂಪವನ್ನು ತಿಳಿದಿದ್ದೇವೆ. ಸಮಾಜ ಮಿತಿಯ ಸಹಾಯದಿಂದ ಸಮೂಹ ಪ್ರತಿಕ್ರಿಯೆಗಳನ್ನು ಹೇಗೆ ಅಧ್ಯಯನ ಮಾಡಬಹುದೆಂಬುದನ್ನು ತಿಳಿದಿದ್ದೇವೆ. ಕಾರ್ಯೋನ್ಮುಖ ಸಮೂಹವಾಗಲಿ, ಗುರಿ ಸಾಧನೆಗಾಗಿರುವ ಸಮೂಹವಾಗಲಿ, ಸಮೂಹದ ಕಾರ್ಯಕ್ಷಮತೆ ನಾಯಕತ್ವವನ್ನು ಅವಲಂಬಿಸಿದೆ. ಈ ಅಧ್ಯಾಯವು ನಮಗೆ ನಾಯಕತ್ವದ ಪ್ರಾಮುಖ್ಯತೆ ತಿಳಿಯಲು, ನಾಯಕರಿಗಿರಬೇಕಾದ ಗುಣಗಳು ಮತ್ತು ತರಗತಿ ಸಮೂಹದ ಸಫಲ ನಾಯಕರಾಗಿ ಶಿಕ್ಷಕರ ಕಾರ್ಯ ತಿಳಿಯಲು ಸಹಾಯ ಮಾಡುತ್ತದೆ.

ನಾಯಕರು ಒಂದು ಸಮೂಹದ ಕೇಂದ್ರ ಬಿಂದುವಾಗಿರುವುದು ಮಾತ್ರವಲ್ಲದೆ ಅವರು ಸಮೂಹದ ಸದಸ್ಯರ ಕಾರ್ಯಗಳನ್ನು ನಿರ್ದೇಶಿಸಿ ಮುನ್ನಡೆಸುವವರೂ ಆಗಿರುತ್ತಾರೆ. ಅವರು ತಮ್ಮ ಸಮೂಹದ ಮೇಲೆ ನಿಯಂತ್ರಣವನ್ನು ಹೊಂದಿರುತ್ತಾರೆ. ನಾಯಕರು ಸದಸ್ಯರೊಂದಿಗೆ ಹೇಗೆ ವ್ಯವಹರಿಸುತ್ತಾರೆಂಬುದರ ಆಧಾರದ ಮೇಲೆ ಸಮೂಹದ ವಾತಾವರಣ ನಿರ್ಧರಿಸಲ್ಪಡುತ್ತದೆ.

ತರಗತಿಯಲ್ಲಿ ಒಬ್ಬ ವಿದ್ಯಾರ್ಥಿ ನಾಯಕನೂ ಇರುತ್ತಾರೆ. ಆದರೆ ತರಗತಿಯ ನಿಜವಾದ ನಾಯಕ ಶಿಕ್ಷಕರೇ. ಶಿಕ್ಷಕರು ಜ್ಞಾನ, ಶಕ್ತಿ, ಕೌಶಲ ಮತ್ತು ವಯಸ್ಸಿನಲ್ಲಿ ಮಕ್ಕಳಿಗಿಂತ ಉನ್ನತ ಮಟ್ಟದಲ್ಲಿರುವುದರಿಂದ ಅವರನ್ನು ನಾಯಕನೆಂದು ಒಪ್ಪಿಕೊಳ್ಳುತ್ತಾರೆ. ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಶಿಕ್ಷಕರ ನಿಯಂತ್ರಣಕ್ಕೆ ಒಳಪಟ್ಟು, ಅವರ ನಿರ್ದೇಶನವನ್ನು ಅನುಸರಿಸುವರು. ಅವರ ಅಧಿಕಾರವನನ್ನು ಒಪ್ಪಿಕೊಳ್ಳುವರು.



Scanned with OKEN Scanner

ಶಿಕ್ಷಕ ನಾಯಕರಾಗಲಿ, ವಿದ್ಯಾರ್ಥಿನಾಯಕರಾಗಲಿ, ಸಮೂಹದ ಕಾರ್ಯವು ನಾಯಕರು ಯಾವ ವಿಧದ ನಿಯಂತ್ರಣ ಹೊಂದಿದ್ದಾರೆಂಬುದನ್ನು ಅವಲಂಬಿಸಿದೆ. ಮೂರು ವಿಧದ ನಾಯಕತ್ವವನ್ನು ಗುರುತಿಸಲಾಗಿದೆ.

ಅವು ಯಾವುವೆಂದರೆ, ಸರ್ವಾಧಿಕಾರಿ, ಪ್ರಜಾಸತ್ತಾತ್ಮಕ ಹಾಗೂ ತಾಟಸ್ಥ್ಯ ಧೋರಣೆಯುಳ್ಳ ನಾಯಕತ್ವ.

ಸರ್ವಾಧಿಕಾರಿ ನಾಯಕರು ತಮ್ಮ ಕಾರ್ಯ ವಿಧಾನದಲ್ಲಿ ಅಧಿಕಾರಶಾಹಿ ಮನೋಭಾವ ತೋರುತ್ತಾರೆ. ಸಮೂಹದ ಎಲ್ಲ ನಿರ್ಣಯಗಳನ್ನು ಅವರೇ ಕೈಗೊಳ್ಳುತ್ತಾರೆ. ಅವರೇ ಸದಸ್ಯರು ಮಾಡಬೇಕಾದುದನ್ನು ನಿರ್ದೇಶಿಸುವರೇ ವಿನಃ ಸದಸ್ಯರಿಗೆ ಸ್ವಲ್ಪವೂ ಸ್ವಾತಂತ್ರ್ಯ ನೀಡುವುದಿಲ್ಲ. ಶಿಕ್ಷಕರು ಸರ್ವಾಧಿಕಾರಿಗಳಾಗಿದ್ದಲ್ಲಿ ತರಗತಿಯ ವಾತಾವರಣವು ರಕ್ಷಣಾತ್ಮಕವಾಗಿರುವುದು. ವಿದ್ಯಾರ್ಥಿಗಳು ಭಯದ ವಾತಾವರಣದಲ್ಲಿ ಕೆಲಸ ಮಾಡುತ್ತಿದ್ದು, ಮಾತನಾಡಲೂ ಅಥವಾ ಪ್ರಶ್ನೆ ಕೇಳಲು ಹಿಂಜರಿಯುತ್ತಾರೆ. ಕಲಿಕೆಗೆ ಇಂತಹ ವಾತಾವರಣವು ಸಹಾಯಕವಲ್ಲ.

ಪ್ರಜಾಸತ್ತಾತ್ಮಕ ನಾಯಕರು ತೆರೆದ ಮನಸ್ಸಿನವರಾಗಿದ್ದು ಇತರರ ಭಾವನೆಗಳನ್ನು ಆಕಾಂಕ್ಷೆಗಳನ್ನು ಸೂಕ್ಷ್ಮವಾಗಿ ಗ್ರಹಿಸುತ್ತಾರೆ. ಅವರು ತಮ್ಮ ಅಭಿಪ್ರಾಯಗಳನ್ನು ಅಥವಾ ಇಚ್ಛೆಯನ್ನು ಇತರರ ಮೇಲೆ ಹೇರುವುದಿಲ್ಲ. ನಿರ್ಧಾರಗಳನ್ನು ಬಹುಮತದ ಆಧಾರದ ಮೇಲಾಗಲಿ, ಒಮ್ಮತದಿಂದಾಗಲಿ ಕೈಗೊಳ್ಳಲಾಗುತ್ತದೆ. ಅವರು ಸಮೂಹದಲ್ಲಿ ಪ್ರತಿಯೊಬ್ಬರೂ ತಾವು ಮುಖ್ಯವೆಂದು ಭಾವಿಸುವಂತೆ ಮಾಡುತ್ತಾರೆ. ಆದ್ದರಿಂದ ಅವರ ಅಧಿಕಾರವನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಒಬ್ಬ ಪ್ರಜಾಸತ್ತಾತ್ಮಕ ಶಿಕ್ಷಕರು ತರಗತಿಯಲ್ಲಿ ಅನುಮೋದಕ ಅಥವಾ ಮುಕ್ತ ವಾತಾವರಣವನ್ನು ನೆಲೆಗೊಳಿಸಬಲ್ಲರು. ಇಂತಹ ಪರಿಸರದಲ್ಲಿ ಮಕ್ಕಳು ಅಂತರ್‌ಕ್ರಿಯೆ ನಡೆಸಲು ಸ್ವತಂತ್ರರೆಂದು ಭಾವಿಸುವರು ಮತ್ತು ಸಂತಸದಿಂದ ಕಲಿಯುವರು. ತಮ್ಮ ಶಿಕ್ಷಕರಿಗೆ ಸ್ವ ಇಚ್ಛೆಯಿಂದ ವಿಧೇಯರಾಗಿರುತ್ತಾರೆ.

ನಾಯಕತ್ವದ ಮೂರನೆಯ ವಿಧ ತಾಟಸ್ಥ್ಯ ಧೋರಣೆಯ ನಾಯಕತ್ವ. ಹೀಗೆಂದರೆ ಸಮೂಹದ ಯಾರ ಕೆಲಸದಲ್ಲಿಯೂ ಮಧ್ಯೆ ಪ್ರವೇಶಿಸದಿರುವುದು ಎಂದರ್ಥ. ಇಂತಹ ಶಿಕ್ಷಕರು ವಿದ್ಯಾರ್ಥಿಗಳಿಗೆ ಸಂಪೂರ್ಣ ಸ್ವಾತಂತ್ರ ನೀಡುವರು. ಮಾರ್ಗದರ್ಶಿಸುವುದೂ ಇಲ್ಲ. ಸಲಹೆ ನೀಡುವುದೂ ಇಲ್ಲ. ಸಮೂಹದ ಮೇಲೆ ಯಾವ ರೀತಿಯ ಶಿಸ್ತನ್ನೂ ಹೇರುವುದಿಲ್ಲ, ಮಾತ್ರವಲ್ಲದೆ ಕೆಲಸ ಮಾಡದ ಅಥವಾ ಸರಿಯಾಗಿ ವರ್ತಿಸದ ಮಕ್ಕಳನ್ನು ಎಚ್ಚರಿಸುವುದೂ ಇಲ್ಲ. ಇಂತಹ ನಾಯಕರು ಗೌರವಿಸಲ್ಪಡುವುದಿಲ್ಲ. ಇಂತಹ ಶಿಕ್ಷಕರ ಇರವನ್ನೂ ಸಹ ಮಕ್ಕಳು ನಿರ್ಲಕ್ಷಿಸಬಹುದು. ಇಂತಹ ನಾಯಕರಿರುವ ಸಮೂಹದಲ್ಲಿ ಯಾವ ಉಪಯುಕ್ತ ಕೆಲಸವೂ ನಡೆಯಲಾರದು.

ಮೇಲಿನ ವಿವರಗಳಿಂದ ಸ್ಪಷ್ಟವಾಗಿರುವಂತೆ, ಪ್ರಜಾಸತ್ತಾತ್ಮಕ ರೀತಿಯ ನಾಯಕತ್ವವು ಅತ್ಯುತ್ತಮವಾದುದು. ಇಂತಹ ಶಿಕ್ಷಕನಾಯಕರು ಮಾತ್ರವೇ ತರಗತಿಯ ಕಲಿಕೆಯ ಪ್ರಕ್ರಿಯೆಗಳನ್ನು ಸಫಲವಾಗಿ ಮುನ್ನಡೆಸಬಲ್ಲರು. ತನ್ನನ್ನೂ ಸೇರಿದಂತೆ ಸಮೂಹದ ಎಲ್ಲ ಸದಸ್ಯರ ನಡುವೆ ಒಳ್ಳೆಯ ಸಂವಹನ ಸಾಧ್ಯವಾಗುವಂತಹ ವಾತಾವರಣವನ್ನು ಸೃಷ್ಟಿಸುವುರು. ಆದರೂ ಎಲ್ಲ ಸಮಯದಲ್ಲೂ ನಾಯಕತ್ವವನ್ನು ತಮ್ಮ ಹಿಡಿತದಲ್ಲಿರಿಸಿಕೊಳ್ಳುವರು. ಇಂತಹ ಶಿಕ್ಷಕರು ಸಂಭವನೀಯ ವಿದ್ಯಾರ್ಥಿ ನಾಯಕರನ್ನು ಗುರ್ತಿಸಿ ತರಬೇತಿ ನೀಡಬಲ್ಲರು.

ಉತ್ತಮ ಶಿಕ್ಷಕ ನಾಯಕರಲ್ಲಿ ಕೆಳಕಂಡ ಗುಣಗಳಿರಬೇಕು.

* ಬೌದ್ಧಿಕ ಶ್ರೇಷ್ಠತೆ ಇರಬೇಕು.
* ಸಂಘಪ್ರಿಯರಾಗಿದ್ದು, ಸಹೋದ್ಯೋಗಿಗಳು ಮತ್ತಿತರರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬಲ್ಲವರಾಗಿರಬೇಕು.



Scanned with OKEN Scanner

* ಸ್ನೇಹಪರರಾಗಿರಬೇಕು.
* ಆತ್ಮವಿಶ್ವಾಸವುಳ್ಳವರಾಗಿರಬೇಕು.
* ನಂಬಲರ್ಹರಾಗಿರಬೇಕು.
* ಆಶಾವಾದಿಗಳಾಗಿರಬೇಕು
* ಸಂವೇಗಾತ್ಮಕ ಸ್ಥಿರತೆ ಇರಬೇಕು.
* ಬಹಿರ್ಮುಖತೆ ಇರಬೇಕು
* ಸಚ್ಚಾರಿತ್ರ್ಯ ಉಳ್ಳವರಾಗಿದ್ದು ಇತರರಿಗೆ ಮಾದರಿಯಾಗುವಂತಿರಬೇಕು
* ಸಂವಹನ ಸಾಮರ್ಥ್ಯ ಹೊಂದಿದ್ದು, ವಿದ್ಯಾರ್ಥಿಗಳಲ್ಲಿ ಉತ್ತಮ ಸಂವಹನವನ್ನು ಉತ್ತೇಜಿಸುವವರಾಗಿರಬೇಕು.
* ನಿಯಂತ್ರಿಸುವ ಮತ್ತು ಆಜ್ಞಾಪಿಸುವ ಸಾಮರ್ಥ್ಯ ಹೊಂದಿದ್ದು ನಿರ್ಧಾರ ಕೈಗೊಳ್ಳುವವರಾಗಿರಬೇಕು.
* ತಾನು ಕಲಿಸುವ ವಿಷಯದ ಮೇಲೆ ಪ್ರಭುತ್ವವಿರಬೇಕು.

ಇಂತಹ ಶಿಕ್ಷಕರು ತಮ್ಮ ತರಗತಿಯ ಯಶಸ್ವೀ ನಾಯಕರಾಗಿ ಕಾರ್ಯ ನಿರ್ವಹಿಸಬಲ್ಲರು.

ಎಲ್ಲ ಶಿಕ್ಷಕರಲ್ಲಿಯೂ ನಾಯಕತ್ವದ ಗುಣಗಳಿರಬೇಕೆಂದು ನಿರೀಕ್ಷಿಸಲಾಗುವುದಿಲ್ಲ. ಒಬ್ಬ ಉತ್ತಮ ಶಿಕ್ಷಕರು ಉತ್ತಮ ನಾಯಕರಾಗಿಲ್ಲದಿರಬಹುದು. ಆದ್ದರಿಂದ ಶಿಕ್ಷಕರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಿ ಪೋಷಿಸುವುದು ಅವಶ್ಯ. ಶಿಕ್ಷಕ ಶಿಕ್ಷಣ ಸಂಸ್ಥೆಗಳು ಶಿಕ್ಷಕ ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಗುಂಪು ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸಲು ಹೇರಳವಾದ ಅವಕಾಶಗಳನ್ನೊದಗಿಸಬೇಕು. ತರಗತಿ ನಾಯಕರಾಗಿ ಶಿಕ್ಷಕರೂ ಸ್ವತಃ ತಮ್ಮ ಜವಾಬ್ದಾರಿಗಳನ್ನು ಮನಗಂಡು, ಅದಕ್ಕನುಗುಣವಾಗಿ ಕಾರ್ಯನಿರ್ವಹಿಸಬೇಕು.

## ನೆನಪಿಡಬೇಕಾದ ಅಂಶಗಳು

- ನಾಯಕರು ಒಂದು ಸಮೂಹದ ಕೇಂದ್ರ ಬಿಂದುವಾಗಿದ್ದು, ಅದನ್ನು ಗುರಿಸಾಧನೆಯತ್ತ ಮುನ್ನಡೆಸುತ್ತಾರೆ.
- ಮೂರು ವಿಧದ ನಾಯಕರಿರುತ್ತಾರೆ ಸರ್ವಾಧಿಕಾರಿ, ಪ್ರಜಾಸತ್ತಾತ್ಮಕ ಹಾಗೂ ತಟಸ್ಥ ಧೋರಣೆಯ ನಾಯಕರು.
- ಶಿಕ್ಷಕರೇ ತರಗತಿಯ ನಿಜವಾದ ನಾಯಕರು.
- ಶಿಕ್ಷಕ ನಾಯಕರು ಕೆಲವು ನಿರ್ದಿಷ್ಟ ಗುಣಲಕ್ಷಣಗಳನ್ನು ಹೊಂದಿರಬೇಕು.
- ತ್ಯಾತಿಯೊನ್ನು ಶಿಕ್ಷಕರೂ ನಾಯಕತ್ವದ ಕೌಶಲಗಳನ್ನು ಗಳಿಸಬೇಕು.

## ಅಭ್ಯಾಸಗಳು

**ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.**

1. ನಾಯಕರೆಂದರೆ ಯಾರು? ನಾಯಕತ್ವದ ವಿಧಗಳನ್ನು ಹೆಸರಿಸಿ.

2. ಪ್ರಜಾಸತ್ತಾತ್ಮಕ ನಾಯಕತ್ವವು ಅತ್ಯುತ್ತಮವೆಂದು ಏಕೆ ಪರಿಗಣಿಸಲಾಗಿದೆ.

3. ಉತ್ತಮ ಶಿಕ್ಷಕ ನಾಯಕರ ಗುಣಗಳನ್ನು ಪಟ್ಟಿಮಾಡಿ

## ಚಟುವಟಿಕೆ

ತರಗತಿಯಲ್ಲಿ ಒಬ್ಬ ಶಿಕ್ಷಕರನ್ನು ವೀಕ್ಷಿಸಿ ಅವರಲ್ಲಿರುವ ನಾಯಕತ್ವದ ಗುಣಗಳನ್ನು ವರ್ತನೆಯನ್ನು ಕುರಿ ಟಿಪ್ಪಣಿ ತಯಾರಿಸಿ.

## *Reference books*


1. Educational Psycholocy in the class room
   by Hanry Clay Lingaren - 1956.

2. Advanced Educational Psychology
   Edited by B. Kuppuswamy - 1964

3. A text book of advanced educational psychology by S. Dandapani.
   Anmol Publications Pvt. Lt. - 2000.




Scanned with OKEN Scanner

## ಘಟಕ – 8

# ಪ್ರಾಯೋಗಿಕ ವಿಭಾಗ

ಈ ಭಾಗದಲ್ಲಿ ವಿದ್ಯಾರ್ಥಿ ಶಿಕ್ಷಕರಿಗೆ, ಅವರು ಮಾಡಬೇಕಾದ ಕೆಲವು ಪ್ರಯೋಗಗಳ ಬಗ್ಗೆ ತಿಳುವಳಿಕೆಕೊಡಲಾಗಿದೆ. ಕಲಿಕೆ, ಸ್ಮೃತಿ ಮತ್ತು ಅವಧಾನ ಈ ಕ್ಷೇತ್ರಗಳಿಂದ ಕೆಲವು ಸುಲಭ ಪ್ರಯೋಗಗಳನ್ನು ಸೂಚಿಸಲಾಗಿದೆ. ಅವರು ಕೆಲವು ಬುದ್ಧಿಶಕ್ತಿ, ಪ್ರವರ್ತಿ, ವ್ಯಕ್ತಿತ್ವ ಒರೆಗಳನ್ನೂ, ಆಸಕ್ತಿ ಪ್ರಶ್ನಾವಳಿಗಳನ್ನು ಪರೀಕ್ಷಿಸಿ ಉಪಯೋಗಿಸಬೇಕಾಗುತ್ತದೆ. ಇವುಗಳಲ್ಲಿ ಕೆಲವನ್ನು ಪ್ರಶಿಕ್ಷಕರೇ ಪ್ರದರ್ಶಿಸುತ್ತಾರೆ ಮತ್ತು ಕೆಲವನ್ನು ವಿದ್ಯಾರ್ಥಿ ಶಿಕ್ಷಕರು ಮಾಡಬೇಕಾಗುತ್ತದೆ. ವಿದ್ಯಾರ್ಥಿಗಳು ತಾವು ಮಾಡಿದ ಪ್ರಯೋಗಗಳ ವರದಿಯನ್ನು ತಯಾರು ಮಾಡಬೇಕು. ಇದಕ್ಕಾಗಿ ಸಲಹೆಗಳನ್ನೂ, ಮಾದರಿಯನ್ನೂ ಕೊಡಲಾಗಿದೆ.

### ಪಠ್ಯವಸ್ತುವನ್ನು ಮುದ್ರಿಸಬೇಕು

*ಸೂಚನೆ : ಪ್ರಾಯೋಗಿಕದ 'A' ಭಾಗವನ್ನು ಪ್ರಶಿಕ್ಷಕರು ತೆಗೆದುಕೊಳ್ಳುತ್ತಾರೆ. ಇದು ಪ್ರದರ್ಶನದ ರೂಪದಲ್ಲಿರುತ್ತದೆ. ಇದಕ್ಕೆ ಬೇಕಾದ ಸಾಮಗ್ರಿಗಳ ವಿವರಣೆಯನ್ನು ಅವರು ಉತ್ತಮ ಶೈಕ್ಷಣಿಕ ಮನೋವಿಜ್ಞಾನದ ಪುಸ್ತಕಗಳಿಂದ ಪಡೆಯಬೇಕು. ಪ್ರಾಯೋಗಿಕ ಮನೋವಿಜ್ಞಾನದ ಮಹತ್ವ ಮತ್ತು ವರದಿಯನ್ನು ತಯಾರಿಸುವ ರೀತಿಯನ್ನು ಇಲ್ಲಿ ಕೊಡಲಾಗಿದೆ. ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಆಧಾರ ಗ್ರಂಥಗಳು ಸಹಾಯಕವಾಗಬಹುದು.*

**ಮನೋ ವಿಜ್ಞಾನದಲ್ಲಿ ಪ್ರಯೋಗಗಳ ಪ್ರಾಮುಖ್ಯತೆ :**

ಬಹಳ ಮುಖ್ಯವಾದ ಪ್ರಾಮುಖ್ಯತೆಯೆಂದರೆ ಅದು ಮನೋವೈಜ್ಞಾನಿಕ ವಿಷಯಗಳು, ಕಲ್ಪನೆಗಳು ಮತ್ತು ನಿಯಮಗಳು ಇವುಗಳ ಜ್ಞಾನವನ್ನು ಹೆಚ್ಚಿಸುತ್ತದೆ. ಮತ್ತು ಹೆಚ್ಚು ಅರ್ಥಪೂರ್ಣವನ್ನಾಗಿ ಮಾಡುತ್ತದೆ. ಆಧುನಿಕ ಮನೋ ವಿಜ್ಞಾನವನ್ನು ಶಿಕ್ಷಣ, ಕೈಗಾರಿಕೆ, ಸಂವಿಧಾನ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ವ್ಯಾಪಕವಾಗಿ ಬಳಸಲಾಗಿದೆ. ಈ ಎಲ್ಲ ವಿಭಾಗಗಳೂ ಮನೋವಿಜ್ಞಾನದ ಮೇಲೆ ಸ್ವಲ್ಪ ಮಟ್ಟಿಗಾದರೂ ಅವಲಂಬಣೆಯನ್ನು ಪಡೆದಿವೆ. ಅಧ್ಯಾಪಕರಾಗಿ ನಾವು ಶೈಕ್ಷಣಿಕ ಮನೋವಿಜ್ಞಾನವನ್ನು ಪ್ರಯೋಗಗಳ ಮೂಲಕ ಉತ್ತಮ ಮಟ್ಟದಲ್ಲಿ ಅರ್ಥೈಸಿಕೊಳ್ಳಬಹುದು. ನಿಮಗೆ ಈಗಾಗಲೇ ಮನೋವಿಜ್ಞಾನವು ಬೋಧನೆಯಲ್ಲಿ, ಕಲಿಕೆಯಲ್ಲಿ, ಮೌಲ್ಯಮಾಪನದಲ್ಲಿ ಮತ್ತು ಕಲಿಯುವವರನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಹೇಗೆ ಉಪಯುಕ್ತವಾಗುತ್ತದೆ ಎಂಬುದು ತಿಳಿದಿದೆ. ನಾವು ಕೆಲವು ವೇಳೆ ಅಧ್ಯಾಪಕರನ್ನು ಸಾಮಾಜಿಕ ಮನೋವಿಜ್ಞಾನಿಗಳೆಂದು ಕರೆಯುವುದುಂಟು.

ಈ ನಿಮ್ಮ ತರಬೇತಿಯಲ್ಲಿ ನೀವು ಕೆಲವು ಸರಳ ಪ್ರಯೋಗಗಳನ್ನು ವೀಕ್ಷಿಸುತ್ತೀರಿ ಮತ್ತು ಮಾಡುತ್ತೀರಿ. ಇವುಗಳ ಫಲಿತಾಂಶಗಳ ಪ್ರಭಾವ ಶಿಕ್ಷಣದ ಮೇಲೆ ನೇರವಾಗಿ ಇರುತ್ತದೆ.



Scanned with OKEN Scanner

**ಗಮನದಲ್ಲಿಡಬೇಕಾದ ಕೆಲವು ಅಂಶಗಳು :**

1. ನೀವು ಮಾಡಬೇಕಾದ ಪ್ರಯೋಗದ ಬಗ್ಗೆ ನಿಮಗೆ ಸಂಪೂರ್ಣ ತಿಳುವಳಿಕೆ ಇರಬೇಕು. ನಿಮಗೆ ಕ್ರಮ ಸರಿಯಾಗಿ ಗೊತ್ತಿರಬೇಕು. ಉದ್ದೇಶಗಳ ಅರಿವೂ ಇರಬೇಕು.

2. ನೀವು ಪ್ರಯೋಗವನ್ನು ಸರಿಯಾಗಿ ಮಾಡಿದರೆ ನಿಮಗೆ ಅಲ್ಲಿನ ಮಾನಸಿಕ ಪ್ರಕ್ರಿಯೆಗಳ ಅರಿವು ಉಂಟಾಗುತ್ತದೆ.

3. ಯಾವುದೇ ಮನೋವೈಜ್ಞಾನಿಕ ಪ್ರಯೋಗದಲ್ಲಿ ವೀಕ್ಷಣೆ ಮುಖ್ಯ ಪಾತ್ರವನ್ನು ವಹಿಸುತ್ತದೆ. ಆಂತರಿಕ ವೀಕ್ಷಣೆಯಿಂದ ನಿಮ್ಮ ಅಂತರಾವ ಲೋಕನ ಸಾಮರ್ಥ್ಯ ಹೆಚ್ಚುತ್ತದೆ. ಇದರಿಂದ ನಿಮ್ಮ ದೈನಂದಿನ ಮಾನಸಿಕ ವರ್ತನೆಗಳನ್ನು ಪರಿಚಯಿಸಿ ಕೊಳ್ಳುವುದು ಸಾಧ್ಯವಾಗುತ್ತದೆ. ಇದರಿಂದ ನಿಮ್ಮ ಸ್ವ-ವಿಶ್ಲೇಷಣೆ ಸಾಧ್ಯವಾಗುತ್ತದೆ. ಇದರಿಂದ ನಿಮಗೆ ಮಕ್ಕಳನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗುತ್ತದೆ.

4. ಇತ್ತೀಚೆಗೆ ಬುದ್ಧಿಶಕ್ತಿ ಪರೀಕ್ಷೆಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿರುವುದರಿಂದ ಇದರ ನೇರ ಪರಿಚಯ ಬೇಕಾಗುತ್ತದೆ.

5. ಒಬ್ಬ ಪ್ರಾಯೋಗಿಕ ಮನೋವೈಜ್ಞಾನಿಕ ವಿದ್ಯಾರ್ಥಿಯಾಗಿ ನಿಮಗೆ ತರಗತಿಗೆ ಸಂಬಂಧಪಟ್ಟ ಪ್ರಯೋಗಗಳನ್ನು ಕೈಗೊಳ್ಳಲು ಸಾಧ್ಯಾವಾಗುತ್ತದೆ. ನಿಮಗೆ ವೃತ್ತಿ ಸಂಬಂಧ ತಿಳುವಳಿಕೆ ದೊರಕಿದಂತಾಗುತ್ತದೆ.

6. ಅನೇಕ ವೇಳೆ ನೀವು ಮಾಡಿದ ಪ್ರಯೋಗಗಳಿಂದ ತೀರ್ಮಾನಗಳಿಗೆ ಬರುವ ಮತ್ತು ಅರ್ಥೈಸಿಕೊಳ್ಳುವ ಕ್ರಮ ತಿಳಿಯದೆ ಹೋಗಬಹುದು. ಆಗ ತಜ್ಞರಿಂದ ಸಲಹೆ ಪಡೆಯ ಬೇಕಾಗುತ್ತದೆ.

**ವರದಿ ತಯಾರು ಮಾಡಬೇಕಾದಾಗ ಅನುಸರಿಸಬೇಕಾದ ಹಂತಗಳು :**

ವರದಿಯನ್ನು ಯಾವಾಗಲೂ ನೀವೇ ತಯಾರು ಮಾಡುವುದು ಒಳ್ಳೆಯದು. ಏಕೆಂದರೆ ಆಗ ನಿಮಗೆ ಪ್ರಯೋಗದ ಮಹತ್ವ ಪೂರ್ಣವಾಗಿ ಅರಿವಾಗುತ್ತದೆ.

ಹಂತಗಳು ಈ ಕೆಳಗಿನವದಾಗಿರಬಹುದು.

1. ಪ್ರಯೋಗದ ಶೀರ್ಷಿಕೆ
2. ಉದ್ದೇಶಗಳು
3. ಬೇಕಾದ ಸಾಮಗ್ರಿಗಳು
4. ಕ್ರಮ: ಇಲ್ಲಿ ಪ್ರಯೋಗ ನಡೆಸುವ ಬಗ್ಗೆ ವಿವರಗಳನ್ನು ಕೊಡಬೇಕು.
5. ವಿಶ್ಲೇಷಣೆ : ಪ್ರಯೋಗದ ಮೂಲಕ ಪಡೆದ ಮಾಹಿತಿಯನ್ನು ವಿಶ್ಲೇಷಿಸುವ ಕ್ರಮ ಮತ್ತು ತಂತ್ರಗಳು
6. ಶೈಕ್ಷಣಿಕ ನಿಹಿತಾರ್ಥಗಳು

ವಿದ್ಯಾರ್ಥಿಯ ರುಜು

ಪ್ರಶಿಕ್ಷಕರ ರುಜು

ಶ್ರೇಣಿ



Scanned with OKEN Scanner

ಒಂದು ಮಾದರಿ :

1. ಪ್ರಯೋಗದ ಶೀರ್ಷಿಕೆ

   ಅವಧಾನದ ಕೇಂದ್ರಿಕರಣವನ್ನು ಅಧ್ಯಯನಿಸುವುದು.

2. ಉದ್ದೇಶಗಳು

   1. ಒಂದು ವಸ್ತುವಿನ ಮೇಲೆ ಬಹಳಕಾಲದವರೆಗೆ ಅವಧಾನವನ್ನು ಕೇಂದ್ರಿಕರಿಸುವುದು ಕಷ್ಟ ಎಂಬುದನ್ನು ವಿದ್ಯಾರ್ಥಿಗಳ ಅರಿವಿಗೆ ತರುವುದು.
   2. ಒಬ್ಬ ವ್ಯಕ್ತಿ ಎಷ್ಟು ಕಾಲದವರೆಗೆ ಅವಧಾನವನ್ನು ಕೇಂದ್ರೀಕರಿಸಬಲ್ಲ ಎಂಬುದನ್ನ ಕಂಡುಹಿಡಿಯುವುದು.
   3. ಒಂದು ನಿಗದಿತ ಕಾಲದಲ್ಲಿ (ಉದಾ : ೧ನಿ) ಎಷ್ಟು ಸಾರಿ ಅವಧಾನ ವಿಚಲಿತಗೊಳ್ಳುತ್ತದೆ ಎಂದು ಕಂಡುಹಿಡಿಯುವುದು.
   4. ಈ ಘಟನೆಯ ಮಹತ್ವವನ್ನು ಅರಿಯುವುದು.
   5. ಒಬ್ಬ ವ್ಯಕ್ತಿಯ ಅವಧಾನನವನ್ನು ಉತ್ತಮ ಪಡಿಸಲು ತೆಗೆದು ಕೊಳ್ಳಬೇಕಾದ ಕ್ರಮಗಳ ಬಗ್ಗೆ ಚಿಂತಿಸುವುದು.

3. ಬೇಕಾದ ಸಾಮಗ್ರಿಗಳು

   1. ಯಾವಾದದರೂ ಒಂದು ಸಾಮಾನ್ಯ ವಸ್ತು

      ಉದಾ : ಪೆನ್ಸಿಲ್, ಪೆನ್ನು ಅಥವಾ ಕಲ್ಲಿನಚೂರು
   2. ಒಂದು ನಿಲು ಗಡಿಯಾರ
   3. ನಿಮಗೆ ಸಹಾಯ ಮಾಡುವ ಒಬ್ಬ ಜೊತೆಗಾರ

4. ಕ್ರಮ

   1. ಒಂದು ಪೆನ್ನಿಲ್ಲನ್ನೊ, ಪೆನ್ನನ್ನೊ ನಿಮ್ಮ ಕಣ್ಣ ಮುಂದೆ ಹಿಡಿದುಕೊಳ್ಳಿ. ಅದರ ಮೇಲೆ ನಿಮ್ಮ ಅವಧಾನವನ್ನು 1 ನಿಮಿಷದವರೆಗೆ ಕೇಂದ್ರೀಕರಿಸಿ. ನಿಮ್ಮ ಜೊತೆಗಾರರಿಗೆ ಸಮಯವನ್ನು ಗುರುತಿಸಿಕೊಳ್ಳಲು ಹೇಳಿ. 1 ನಿಮಿಷ ಆದ ತಕ್ಷಣ ನಿಮಗೆ ಸೂಚನೆ ನೋಡಲು ಹೇಳಿ.
   2. ಆ ಒಂದು ನಿಮಿಷದಲ್ಲಿ ಎಷ್ಟು ಬಾರಿ ನಿಮ್ಮ ಅವಧಾನ ವಿಚಲನೆಗೊಂಡಿತು ಎಂಬುದನ್ನು ನಿಮ್ಮ ಬೆರಳನ್ನು ಎತ್ತುವುದರಿಂದ ತಿಳಿಸಿ. ನಿಮ್ಮ ಜೊತೆಗಾರ ಇದನ್ನು ಗುರುತಿಸಿ ಕೊಳ್ಳಬೇಕು. ಅವನು ಯಾವುದೇ ರೀತಿ ನಿಮ್ಮನ್ನು ತೊಂದರೆ ಮಾಡಬಾರದು.
   3. ಮತ್ತೊಮ್ಮೆ ಇದೆ ಪ್ರಯೋಗ ಮಾಡಿ. ಆದರೆ ಈ ಬಾರಿ ವಸ್ತುವನ್ನು ನೋಡುತ್ತಿರುವಾಗ ಅದರ ಬಗ್ಗೆ ಮಾನಸಿಕವಾಗಿ ಪ್ರಶ್ನೆಗಳನ್ನು ಕೇಳಿಕೊಳ್ಳಿ - ಅದರ ಗಾತ್ರ, ಬಣ್ಣ, ಉದ್ದ, ದಪ್ಪ - ಉಪಯೋಗ ಇವುಗಳ ಬಗ್ಗೆ. ಎಷ್ಟು ಬಾರಿ ವಿಚಲನ ಹೊಂದಿದಿರಿ ತಿಳಿಸುತ್ತಾ ಬನ್ನಿ. ಎರಡೂ ಸಂದರ್ಭದಲ್ಲಿ ನಿಮ್ಮ ಜೊತೆಗಾರ ಮಾಹಿತಿ ಕೊಡಲಿ.



Scanned with OKEN Scanner

4. ನಿಮ್ಮ ಪಾತ್ರಗಳನ್ನು ಬದಲಿಸಿಕೊಂಡು ಪ್ರಯೋಗವನ್ನು ಮುಂದುವರೆಸಿ.
5. ವಿಶ್ಲೇಷಣೆ : ಫಲಿತಾಂಶಗಳನ್ನು ಈ ಕೆಳಕಂಡಂತೆ ಪಟ್ಟಿಮಾಡಬಹುದು:

ಪ್ರಯೋಗ 1

| | |
|---|---|
| 1 ನಿಮಿಷದ ನಂತರ ವಿಚಲನೆಗಳು | 7 |

ಪ್ರಯೋಗ 2

| | |
|---|---|
| 1 ನಿಮಿಷದ ನಂತರ ವಿಚಲನೆಗಳು | 4 |

**6. ತೀರ್ಮಾನಗಳು**

1. ಬಹಳ ಕಾಲದವರೆಗೆ ಅನುಧಾನವನ್ನು ಕೇಂದ್ರೀ ಕರಿಸಲಾಗುವುದಿಲ್ಲ.
2. 2ನೇ ಪ್ರಯೋಗದಲ್ಲಿನ ಕಡಿಮೆ ವಿಚಲನೆಯು (4) ನಾವು ವಸ್ತುವಿನೊಡನೆ ಅರ್ಥವನ್ನು ಸೇರಿಸಿಕೊಂಡರೆ ವಿಚಲನೆಗಳು ಕಡಿಮೆಯಾಗುತ್ತವೆ ಎಂಬುದನ್ನು ಸೂಚಿಸುತ್ತದೆ.

**7. ಶೈಕ್ಷಣಿಕ ನಿಹಿತಾರ್ಥಗಳು**

ಅದ್ಯಾಪಕರು ಬಹುಕಾಲದವರೆಗೆ ಮಕ್ಕಳ ಅವಧಾನ ಇರುವಂತೆ ಮಾಡಬೇಕಾದರೆ ಬೋಧನೆಯಲ್ಲಿ ಹೊಸ ದೃಷ್ಟಿ ಕೋನಗಳನ್ನು ತರಬೇಕು, ಚಿಂತನಶೀಲ ಪ್ರಶ್ನೆಗಳನ್ನು ಬಳಸಬೇಕು, ಒಂದು ಹೊಸತನ ತರಬೇಕು.

*(ಸೂಚನೆ : ಇದೇ ರೀತಿ ವರದಿಯನ್ನು ನೀವು ಮಾಡುವ ಅಥವಾ ವೀಕ್ಷಿಸುವ ಇತರ ಪ್ರಯೋಗಗಳಿಗೆ ಬರೆಯಬಹುದು)*

## Reference books


1. Experimental Psychology – An Introduction – Benton J. Underwood – Times of India Press – 1949
2. A first course in experimental Psychology – B.R. Bugelski – Henry Holt and Company – 1960
3. Experimental Psychology – Leo Postmen and James P. Egan –Harper and Row, New york 1949
4. A Students manual of Experiments in Psychology Qulitative and quantitative — S. Jalota - Asia Publishing House 1963
5. Experimental Psychology — Methodology — D' Am to — Mc Graw Hill New york 1970.
6. Fundamentals of Experimental Psychology—W.N. Dandekar, School and College Book House, Kolhapur
7. Introduction to experimental Psychology —Valentine — University Tutorial Press London — 1953.




Scanned with OKEN Scanner

# ಪ್ರಶ್ನ ಪತ್ರಿಕೆಯ ನಮೂನೆ

## ನೀಲಿ ನಕ್ಷೆ

ಘಟಕ / ವಸ್ತುವಿಗೆ / ಪ್ರಾಮುಖ್ಯತೆ / ಪ್ರಾತಿನಿಧ್ಯ

| ಘಟಕ ಕ್ರಮಸಂಖ್ಯೆ | ವಿಷಯ ವಸ್ತು | ಅಂಕಗಳು / ಶೇಕಡಾ |
|---|---|---|
| 1. | ಶೈಕ್ಷಣಿಕ ಮನೋವಿಜ್ಞಾನಕ್ಕೆ ಪೀಠಿಕೆ | 10% |
| 2. | ಬೆಳವಣಿಗೆ ಮತ್ತು ವಿಕಾಸ ಮನೋವಿಜ್ಞಾನ | 15% |
| 3. | ಕಲಿವಿನ ಪ್ರಕ್ರಿಯೆಗಳು ಹಾಗೂ ಸಿದ್ಧಾಂತಗಳು | 15% |
| 4. | ಕಲಿವಿನ ಮೇಲೆ ಪ್ರಭಾವ ಬೀರುವ ಅಂಶಗಳು | 10% |
| 5. | ಕಲಿಯುವವರಲ್ಲಿ ವೈಯಕ್ತಿಕ ಭಿನ್ನತೆಗಳು | 20% |
| 6. | ವ್ಯಕ್ತಿತ್ವ ಮತ್ತು ಹೊಂದಾಣಿಕೆ | 20% |
| 7. | ಸಮೂಹದಲ್ಲಿ ಕಲಿಯುವವರ ವರ್ತನೆಗಳು | 10% |
| | ಒಟ್ಟು | **100** |

| ಉದ್ದೇಶಗಳಿಗೆ ಪ್ರಾಮುಖ್ಯತೆ | |
|---|---|
| ಉದ್ದೇಶಗಳು | ಶೇಕಡಾ ಅಂಕ |
| ಜ್ಞಾನ | 40% |
| ಗ್ರಹಿಕೆ | 36% |
| ಅನ್ವಯ | 24% |

| ಪ್ರಶ್ನೆಗಳ ವಿಧಗಳ ಪ್ರಾಮುಖ್ಯತೆ | |
|---|---|
| ಪ್ರಬಂಧ ರೀತಿಯ ಪ್ರಶ್ನೆಗಳು | 40% |
| ಟಿಪ್ಪಣಿ ರೂಪದ ಪ್ರಶ್ನೆಗಳು | 35% |
| ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು | 15% |
| ಅತಿ ಸಂಕ್ಷಿಪ್ತ ಉತ್ತರದ / ವಸ್ತುನಿಷ್ಠ ಪ್ರಶ್ನೆಗಳು | 10% |
| ಒಟ್ಟು | **100** |

# ಪ್ರಶ್ನೆ ಪತ್ರಿಕೆ ನಮೂನೆ

# ಶಿಕ್ಷಣ 2 : ಆಧುನಿಕ ಶಿಕ್ಷಣದಲ್ಲಿ ಮನೋವಿಜ್ಞಾನ

## ಡಿ.ಇಡಿ. – ಪ್ರಥಮ ವರ್ಷ

ಅವಧಿ : 3 ಗಂಟೆಗಳು　　　　　　　　　　　　　　　　　　　ಗರಿಷ್ಠ ಅಂಕ : 100

**I.** ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.　　　　　　　　　　　　　　10 x 4 = 40

1) a. ಪ್ರಾರಂಭಿಕ ಕೌಮಾರ್ಯ (ಉತ್ತರ ಬಾಲ್ಯ) ಹಂತದಲ್ಲಿ ದೈಹಿಕ, ಚನಲಾತ್ಮಕ ಮತ್ತು ಬೌದ್ಧಿಕ ವಿಕಾಸದ ಮುಖ್ಯ ಲಕ್ಷಣಗಳನ್ನು ವಿವರಿಸಿ.

b. ಮೇಲಿನ ಈ ಜ್ಞಾನವನ್ನು ನಿಮ್ಮ ತರಗತಿಯಲ್ಲಿ ಹೇಗೆ ಬಳಸುವಿರೆಂದು ತಿಳಿಸಿ.　　　　6 + 4

2) a. ಕ್ರಿಯಜನ್ಯ ಅನುಬಂಧನ (ಸೋಪಾಧಿಕ) ಕಲಿಕೆಯ ಸಿದ್ಧಾಂತವನ್ನು ವಿವರಿಸಿ.

b. ತರಗತಿಯಲ್ಲಿ (ಸೋಪಾಧಿಕ) ಕಲಿಕೆಯನ್ನು ಅನ್ವಯಿಸಬಹುದಾದ ನಾಲ್ಕು ಸನ್ನಿವೇಶಗಳ ಉದಾಹರಣೆ ಕೊಡಿ.　　　　6 + 4

3) a. ಕಲಿವಿನ ನ್ಯೂನತೆಯುಳ್ಳ ಮಗುವಿನ ಗುಣಲಕ್ಷಣಗಳೇನು?

b. ನಿಮ್ಮ ತರಗತಿಯಲ್ಲಿ ಬರಹ ನ್ಯೂನತೆಯುಳ್ಳ ಮಗುವಿದ್ದರೆ ಯಾವ ಕ್ರಮಕೈಗೊಳ್ಳುವಿರಿ?　6 + 4

4) a. ಮಾರ್ಗದರ್ಶನ ಎಂದರೇನು? ಇತ್ತೀಚೆಗೆ ಶಾಲೆಗಳಲ್ಲಿ ಮಾರ್ಗದರ್ಶನದ ಅಗತ್ಯ ಹೆಚ್ಚುತ್ತಿರಲು ಕಾರಣಗಳೇನು?

b. ಮಕ್ಕಳಲ್ಲಿ ಈ ಕೆಳಗಿನವುಗಳನ್ನು ವಿಕಾಸಗೊಳಿಸಲು ಯಾವ ಕ್ರಮ ಕೈಗೊಳ್ಳುವಿರಿ?

i) ಅಧ್ಯಯನದ ಅಭ್ಯಾಸಗಳು

ii) ಮಕ್ಕಳಲ್ಲಿ ಸಾಧನೆಯ ಅಭಿಪ್ರೇರಣೆ　　　　6 + 4

**II.** ಈ ಕೆಳಗಿನ ಪ್ರಶ್ನೆಗಳನ್ನು ಸಂಕ್ಷಿಪ್ತವಾಗಿ ಉತ್ತರಿಸಿ.　　　　　　5 x 7 = 35

1. ತರಗತಿ ಶಿಕ್ಷಕರಿಗೆ ಶೈಕ್ಷಣಿಕ ಮನೋವಿಜ್ಞಾನದ ಜ್ಞಾನ ಹೇಗೆ ಉಪಯುಕ್ತವಾಗಿದೆ?
2. ವಿಕಾಸ ಮತ್ತು ಪಕ್ವತೆಗಳ ನಡುವಿನ ಸಂಬಂಧವನ್ನು ಒಂದು ಸೂಕ್ತ ಉದಾಹರಣೆಯೊಂದಿಗೆ ವಿವರಿಸಿ.
3. ಅವಧಾನ ಎಂದರೇನು? ತರಗತಿಯಲ್ಲಿ ಅವಧಾನವನ್ನು ಹೇಗೆ ಗಳಿಸುವಿರಿ?
4. ಬುದ್ಧಿ ಶಕ್ತಿ ಎಂದರೇನು? ಯಾವುದಾದರೊಂದು ವಿಧದ ಬುದ್ಧಿಶಕ್ತಿ ಪರೀಕ್ಷೆಯನ್ನು ವಿವರಿಸಿ.



Scanned with OKEN Scanner

5. ಪ್ರಾಥಮಿಕ ಶಾಲೆಯ ಮಗುವಿನಲ್ಲಿ ಸೃಜನಶೀಲತೆಯನ್ನು ಹೇಗೆ ಪೋಷಿಸಿ ಉತ್ತೇಜಿಸುವಿರಿ?

6. ರಕ್ಷಣಾತ್ಮಕ ತಂತ್ರಗಳಿಗೆ ಆ ಹೆಸರು ಬರಲು ಕಾರಣವೇನು? ಉದಾಹರಣೆಯೊಂದಿಗೆ ಒಂದು ತಂತ್ರವನ್ನು ವಿವರಿಸಿ.

7. ಸಮಾಜ ಮಿತಿ ಎಂದರೇನು? ಈ ತಂತ್ರದ ಬಳಕೆಯ ಪ್ರಕ್ರಿಯನ್ನು ವಿವರಿಸಿ.

**III. ಕೆಳಗಿನ ಪ್ರಶ್ನೆಗಳನ್ನು ಅತಿ ಸಂಕ್ಷಿಪ್ತವಾಗಿ ಉತ್ತರಿಸಿ.** 3 x 5 = 15

1. ವೀಕ್ಷಣೆಗೆ ಹೋಲಿಸಿದಂತೆ ವ್ಯಕ್ತಿ ಅಧ್ಯಯನದ ಪ್ರಯೋಜನಗಳೇನು?

2. ಬಂಡೂರಾ ಅವರ ಮಾಡೆಲಿಂಗ್ ಸಿದ್ಧಾಂತದ ಮುಖ್ಯ ಲಕ್ಷಣಗಳೇನು?

3. ಮಕ್ಕಳಲ್ಲಿ ಗರಿಷ್ಠ ಮಟ್ಟದ ಕಲಿವಿನ ವರ್ಗಾವಣೆಯನ್ನು ಉಂಟು ಮಾಡಬಲ್ಲ ಮೂರು ಸನ್ನಿವೇಶಗಳ ಉಧಾಹರಣೆ ಕೊಡಿ.

4. ಸ್ವ ಪರಿಕಲ್ಪನೆ ಎಂದರೇನು? ಅದು ಏಕೆ ಮುಖ್ಯವಾಗಿದೆ?

5. ಸತತವಾಗಿ ಹಗಲು ಗನಸು ಕಾಣುತ್ತಿರುವ ಮಗುವಿನೊಂದಿಗೆ ಹೇಗೆ ವ್ಯವಹರಿಸುವಿರಿ?

**IV. ಕೆಳಗಿನ ಪ್ರಶ್ನೆಗಳನ್ನು ಒಂದು ಪದ ಅಥವಾ ಪದಗುಚ್ಛ ಬಳಸಿ ಉತ್ತರಿಸಿ.** 1 x 10 = 10

1. ಭಿನ್ನತೆಯ ಮನೋವಿಜ್ಞಾನ ಎಂದರೇನು?

2. ಶೈಕ್ಷಣಿಕ ಮನೋವಿಜ್ಞಾನ ಒಂದು ಅನ್ವಯಿಕ ಶಾಖೆ. ಏಕೆ?

3. ಗಂಟೆಯ ದೀರ್ಘ ಸದ್ದನ್ನು ಕೇಳಿದೊಡನೆ ಪ್ರಾರ್ಥನೆ ಸಭೆಯಲ್ಲಿ ಬಂದು ಸೇರುವ ಮಕ್ಕಳನ್ನು ವೀಕ್ಷಿಸದಾಗ ನಿಮಗೆ ತಿಳಿಯುವುದೇನು?

4. ಒಂದನೇ ತರಗತಿಯ ಮಗುವಿಗೆ ಮೌನವಾಗಿ ಓದುವುದು ಸಾಧ್ಯವಿಲ್ಲ. ಏಕೆ?

5. ಎರಡು ವಿಧದ ಅಭಿಪ್ರೇರಣೆಯನ್ನು ಹೆಸರಿಸಿ.

6. ಎಬ್ಬಿಂಗ್‌ಹಾಸ್ ರವರ ಪ್ರಮುಖ ಕೊಡುಗೆ ಏನು?

7. ಪ್ರಕ್ಷೇಪಣಾ ತಂತ್ರವನ್ನು ಹಾಗೆ ಕರೆಯುವುದೇಕೆ?

8. ಸಮೂಹ ಸಂಲಗ್ನತೆ ಎಂದರೇನು?

9. ಉಪಗುಂಪು ಅಪಾಯಕಾರಿಯಾಗಬಲ್ಲದು ಎಂಬುದಕ್ಕೆ ಒಂದು ಕಾರಣ ಕೊಡಿ.

10. ಶಿಕ್ಷಕರೇ ತರಗತಿಯ ನಿಜವಾದ ನಾಯಕರು ಏಕೆ?



Scanned with OKEN Scanner

# ಆಧುನಿಕ ಶಿಕ್ಷಣದಲ್ಲಿ ಮನೋವಿಜ್ಞಾನ

## ನೀಲಿನಕ್ಷೆ - ನಮೂನೆ

ಗರಿಷ್ಠ ಅಂಕಗಳು : 100

| ಕ್ರಮ ಸಂಖ್ಯೆ | ಉದ್ದೇಶಗಳು → / ವಿಷಯ ವಸ್ತು ↓ | ಜ್ಞಾನ | | | | ಗ್ರಹಿಕೆ | | | | ಅನ್ವಯ | | | | ಒಟ್ಟು | |
|---|---|---|---|---|---|---|---|---|---|---|---|---|---|---|---|
| | | ಪ್ರಬಂಧ | ಟಿಪ್ಪಣಿ | ಸಂಕ್ಷಿಪ್ತ ಉತ್ತರ | ವಸ್ತು ನಿಷ್ಠ | ಪ್ರಬಂಧ | ಟಿಪ್ಪಣಿ | ಸಂಕ್ಷಿಪ್ತ ಉತ್ತರ | ವಸ್ತು ನಿಷ್ಠ | ಪ್ರಬಂಧ | ಟಿಪ್ಪಣಿ | ಸಂಕ್ಷಿಪ್ತ ಉತ್ತರ | ವಸ್ತು ನಿಷ್ಠ | ಪ್ರಶ್ನೆ ಗಳು | ಅಂಕ ಗಳು |
| 1. | ಶೈಕ್ಷಣಿಕ ಮನೋವಿಜ್ಞಾನಕ್ಕೆ ಪೀಠಿಕೆ | - | 1(5) | - | 1(1) | - | - | 1(3) | 1(1) | - | - | - | - | 4 | 10 |
| 2. | ಬೆಳವಣಿಗೆ ಮತ್ತು ವಿಕಾಸ ಮನೋವಿಜ್ಞಾನ | 1(6)a | - | - | - | - | 1(5) | b | - | 1(4)b | - | - | - | 2 | 15 |
| 3. | ಕಲಿಕೆಯ ಪ್ರಕ್ರಿಯೆಗಳು ಹಾಗೂ ಸಿದ್ಧಾಂತಗಳು | - | - | 1(3) | - | 1(6)a | - | b | - | 1(4)b | - | - | 2(2) | 4 | 15 |
| 4. | ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು | - | - | - | 2(2) | - | 1(5) | - | - | - | - | 1(3) | - | 4 | 10 |
| 5. | ಕಲಿಯುವವರಲ್ಲಿ ವೈಯಕ್ತಿಕ ಭಿನ್ನತೆಗಳು | - | 1(5) | - | - | 1(10) | - | - | - | - | 1(5) | - | - | 3 | 20 |
| 6. | ವ್ಯಕ್ತಿತ್ವ ಮತ್ತು ಹೊಂದಾಣಿಕೆ | 1(10) | - | 1(3) | - | - | 1(5) | - | 1(1) | - | - | - | - | 4 | 19 |
| 7. | ಸಮೂಹದಲ್ಲಿ ಕಲಿಯುವವರ ವರ್ತನೆಗಳು | - | 1(5) | - | - | - | - | - | - | - | - | 1(-3) | 3(3) | 5 | 11 |
| | | ಜ್ಞಾನ – 40 | | | | ಗ್ರಹಿಕೆ – 36 | | | | ಅನ್ವಯ – 24 | | | | 26 | 100 |

(ಆವರಣದಲ್ಲಿ ಕೊಟ್ಟಿರುವ ಸಂಖ್ಯೆಗಳು ಆ ಪ್ರಶ್ನೆಯ ಅಂಕವನ್ನು ಸೂಚಿಸುತ್ತವೆ.)



Scanned with OKEN Scanner

# ಕೆಲವು ಪ್ರಸಿದ್ಧ ಮನೋವಿಜ್ಞಾನಿಗಳು



E.L. Thorndike

## ಥಾರನ್‌ಡೈಕ್, ಎಡ್‌ವರ್ಡ್ (1874-1949)

ಅಮೇರಿಕದ ಅತ್ಯಂತ ಪ್ರಖ್ಯಾತ ಶೈಕ್ಷಣಿಕ ಮನೋವಿಜ್ಞಾನಿಗಳಲ್ಲಿ ಒಬ್ಬರು. ಇವರು ಹಾರ್ವರ್ಡ್ ವಿಶ್ವವೃದ್ಯಾಲಯದಲ್ಲಿ ವಿಲಿಯಂ ಜೇಮ್ಸ್ ಅವರ ಶಿಷ್ಯರಾಗಿದ್ದರು. ನಂತರ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರ ವೃತ್ತಿಯ ಪ್ರಾರಂಭದಲ್ಲಿ ಪ್ರಾಣಿಗಳ ಮೇಲೆ ಕಲಿವಿಗೆ ಸಂಬಂಧಪಟ್ಟ ಅನೇಕ ಪ್ರಯೋಗಗಳನ್ನು ಮಾಡಿದರು. ಮೂರು ಬಹು ಮುಖ್ಯ ಕಲಿವಿನ ನಿಯಮಗಳನ್ನು ಪ್ರತಿಪಾದಿಸಿದರು. (ಸಿದ್ಧತೆ, ಅಭ್ಯಾಸ ಮತ್ತು ಪರಿಣಾಮ)

## ವಾಟ್‌ಸನ್. ಜಾನ್ .ಬಿ (1878-1958)

ವರ್ತನ ಸಿದ್ಧಾಂತವನ್ನು ಪ್ರತಿಪಾದಿಸಿದವರು. ಒಂದು ಕಾಲದಲ್ಲಿ ಮನೋವಿಜ್ಞಾನದ ಸ್ವಂತ ಪ್ರಧಾನ, ಮಾನಸಿಕ ಮತ್ತು ಅಂತರಾವ ಲೋಕನದ ಕಟು ಟೀಕಾಕಾರರಾಗಿದ್ದವರು. ವಾಟ್‌ಸನ್ ಎಲ್ಲ ಮಾನವ ವರ್ತನೆ ರೂಪಿಸುವುದರಲ್ಲಿ ಪರಿಸರದ ಪ್ರಭಾವವಿರುತ್ತದೆ ಎಂದು ನಂಬಿದ್ದರು. ಐವಾನ್ ಪಾವಲೋನ್ ಅವರ ಸಾಂಪ್ರದಾಯಿಕ ಅನುಬಂಧನದ ಕಲ್ಪನೆಯ ಬಗ್ಗೆ ಬಹಳವಾಗಿ ಬೆಂಬಲಿಸಿದ್ದವರು. ಜಾನ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯದಲ್ಲಿ ಮನೋವಿಜ್ಞಾನವನ್ನು ಬೋಧಿಸುತ್ತಿದ್ದರು.



J.B. Watson



B.F. Skinner

## ಸ್ಕಿನ್ನರ್ .ಬಿ.ಎಫ್ (1904-1990)

ಮನೋವಿಜ್ಞಾನದ ಬಹು ಮುಖ್ಯ ಮತ್ತು ಗೌರವಾನ್ವಿತ ವರ್ತನಾ ಸಿದ್ಧಾಂತಿಗಳು. ಕ್ರಿಯಾಜನ್ಯ ಅನುಬಂಧನದ ಜನಕರು. ಥಾರನ್‌ಡೈಕ್‌ರ ಪರಿಣಾಮ ನಿಯಮವನ್ನು ಉಪಯೋಗಿಸಿಕೊಂಡು ಅನುಬಂಧನವು, ಅನುಕ್ರಿಯೆಗಳನ್ನು ಉಂಟಾಗುವಂತೆ ಮಾಡಿದಾಗ ಮತ್ತು ಅವುಗಳನ್ನು ಮರು ಪುಷ್ಟೀಕರಣಗೊಳಿಸಿದಾಗ ಉಂಟಾಗುತ್ತದೆ ಎಂದು ಪ್ರತಿಪಾದಿಸಿದವರು. ಅನುಕ್ರಿಯೆಯ ವಿಶ್ಲೇಷಣೆಯು ಅವರ ಪ್ರಮುಖ ಕ್ಷೇತ್ರವಾಗಿತ್ತು. ಶಿಕ್ಷಣಕ್ಕೆ ಅವರ ಬಹು ಮುಖ್ಯ ಕೊಡುಗೆ ಕಾರ್ಯಕ್ರಮಾನ್ವಯ ಬೋಧನೆ ಮತ್ತು ವರ್ತನಾ ಪರಿವರ್ತನೆ.



Scanned with OKEN Scanner



Jean Piaget

## ಜೀನ್ ಪಿಯಾಜೆ (1896 - 1980)

ಇವರು ಸ್ವಿಟ್‌ಜರ್‌ಲೆಂಡಿನಲ್ಲಿರುವ ನಾಶ್ಚೆಲ್ ಎಂಬ ಊರಿನಲ್ಲಿ 1886ರಲ್ಲಿ ಜನಿಸಿದರು. ಮಗುವಾಗಿದ್ದಾಗಲೇ ಅವರು ಅತ್ಯಂತ ಕುತೂಹಲಕಾರಿ, ಅಭ್ಯಾಸ ನಿಷ್ಠೆ, ಪ್ರತಿಭಾವಂತರಾಗಿದ್ದರು. ನಂತರ ಹದಿನೆಂಟನೆ ವಯಸ್ಸಿನಲ್ಲಿಯೇ ಪಿ.ಹೆಚ್.ಡಿ. ಪದವಿಯನ್ನು ಜೈವಿಕ ವಿಜ್ಞಾನ ಕ್ಷೇತ್ರದಲ್ಲಿ ಪಡೆದರು. 28ನೇ ವಯಸ್ಸಿನ ಒಳಗೆ 29ವಿಷಯಗಳ ಮೇಲೆ ಸಂಶೋಧನಾ ವರದಿಗಳನ್ನು ಪ್ರಕಟಿಸಿದರು. ಪ್ರಾರಂಭದಲ್ಲಿ ಜೈವಿಕ ವಿಜ್ಞಾನದಲ್ಲಿ ಆಸಕ್ತರಾಗಿದ್ದರೂ ನಂತರ ಸಮಾಜಶಾಸ್ತ್ರ, ಧರ್ಮಶಾಸ್ತ್ರ ಮತ್ತು ತತ್ವಶಾಸ್ತ್ರದಲ್ಲಿ ಆಸಕ್ತರಾದರು. ಜ್ಞಾನದ ಅಧ್ಯಯನ ಕ್ಷೇತ್ರವಾದ ಎಪಿಸ್ಟೆಮಾಲಜಿಯಲ್ಲಿ ವಿಶೇಷ ಒಲವು ತೋರಿದರು. ಈ ಕ್ಷೇತ್ರದಲ್ಲಿ ಜೀವಶಾಸ್ತ್ರದ ತತ್ವಗಳನ್ನು ಬಳಸಬಹುದೆಂದು ತೋರಿಸಿಕೊಟ್ಟರು. ಮಕ್ಕಳ ಬೌದ್ಧಿಕ ಬೆಳವಣಿಗೆಯ ಬಗ್ಗೆ ಅನೇಕ ಪುಸ್ತಕಗಳನ್ನೂ,ಲೇಖನಗಳನ್ನೂ ಬರೆದರು. 1940ರಲ್ಲಿ ಜಿನೀವದಲ್ಲಿನ ಮನೋವಿಜ್ಞಾನ ಪ್ರಯೋಗಾಲಯದಲ್ಲಿ ಮುಖ್ಯಸ್ಥರಾದರು. ಪಿಯಾಜೆಯವರು ಮಕ್ಕಳ ಬೌದ್ಧಿಕ ಬೆಳವಣಿಗಾ ಕ್ಷೇತ್ರದಲ್ಲಿ ಅದ್ವಿತೀಯ ಪಂಡಿತರೆಂದು ಪರಿಗಣಿಸಲ್ಪಟ್ಟಿದ್ದಾರೆ.

## ಬ್ರೂನರ್, ಜೆರೋಮ್ (1915 - )



Jerome Brimer

ಜೆರೋಮ್ ಬ್ರೂನರ್ ಅವರು 1915ರಲ್ಲಿ ನ್ಯೂಯಾರ್ಕಿನಲ್ಲಿ ಜನಿಸಿದರು. 1937ರಲ್ಲಿ ಡ್ಯೂಕ್ ವಿಶ್ವವಿದ್ಯಾಲಯದಿಂದ ಪದವಿ ಪಡೆದು ನಂತರ ಅದೇ ವಿಶ್ವವಿದ್ಯಾನಿಲಯದ ಮನಶಾಸ್ತ್ರ ಸಂಸ್ಥೆ ಸಂಶೋಧಕರಾಗಿ ಸೇರಿದರು. 1941ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ ಪಡೆದರು. ಅವರು ಯಾವಾಗಲೂ ವಿಜ್ಞಾನದ ಮೂಲ ನಿಯಮವನ್ನು ಮನಸ್ಸಿನಲ್ಲಿ ಇಟ್ಟು ಕೊಂಡಿರುತ್ತಿದ್ದರು. "ತೀರ್ಮಾನಗಳನ್ನು ಪಡೆಯಬೇಕಾಗಿರುವ ಮಾಹಿತಿಯನ್ನು ಮೊದಲು ಚೆನ್ನಾಗಿ ವೀಕ್ಷಿಸಿ. ಮಕ್ಕಳು ಶಾಲೆಯಲ್ಲಿ ಹೇಗೆ ಕಲಿಯುತ್ತಾರೆ ಎಂಬುದನ್ನು ತಿಳಿಯಲು ಅವರನ್ನು ಆ ಸನ್ನಿವೇಶದಲ್ಲಿ ವೀಕ್ಷಿಸಿ.ಪಂಜರದಲ್ಲಿಟ್ಟಿರುವ ಇಲಿಗಳು ಮತ್ತು ಪಾರಿವಾಳಗಳನ್ನಲ್ಲ. ಇದೇ ಅವರ ಧೃಡ ನಿಲುವಾಗಿತ್ತು. 1960 ಅವರು "ಶಿಕ್ಷಣದ ಪ್ರಕ್ರಿಯೆ" ಎಂಬ ಮಹತ್ವಪೂರ್ಣ ಪುಸ್ತಕವನ್ನು ಪ್ರಕಟಿಸಿದರು. ಈ ಪುಸ್ತಕದಲ್ಲಿ ಮೂರು ಮುಖ್ಯ ಅಂಶಗಳ ಬಗ್ಗೆ ಹೇಳಿದ್ದಾರೆ. ಮೊದಲನೆಯದು ಶಾಲೆಗಳಲ್ಲಿ ಒಂದು ವಿಷಯದ ಸಾಮಾನ್ಯ ತಿಳುವಳಿಕೆ ಅಥವಾ ರಚನೆಯ ಬಗ್ಗೆ ಬೋಧಿಸಬೇಕೇ ಹೊರತು ಬರೀ ಸಂಗತಿಗಳನ್ನಲ್ಲ. ಎರಡನೆಯದುಯಾವುದೇ ವಿಷಯವನ್ನು ಪ್ರಾಮಾಣಿಕವಾಗಿ ಹೇಳಿಕೊಟ್ಟಿದ್ದೇ ಆದರೆ ಮಕ್ಕಳು ಅವರು ಬೆಳವಣಿಗೆಯ ಯಾವುದೇ ಹಂತದಲ್ಲಿದ್ದರೂ ಸಹ ಕಲಿಯುತ್ತಾರೆ. ಮೂರನೆಯದಾಗಿ ಬೋಧನೆಯಲ್ಲಿ ಸಮಸ್ಯಾ ಪರಿಹಾರಾತ್ಮಕ ಪದ್ಧತಿಯನ್ನು ಬಳಸಿದರೆ ಮಕ್ಕಳು ಒಳನೋಟದಿಂದ ಕಲಿಯುತ್ತಾರೆ. ಅವರಲ್ಲಿ ಆತ್ಮ ಸ್ಫೂರ್ತಿ ಉಂಟಾಗುತ್ತದೆ ಮತ್ತು ಇದರ ಮೇಲೆ ಅವರು ಭರವಸೆ ಇಡುತ್ತಾರೆ.



Alfred Binet

## ಆಲ್‌ಫ್ರೆಟ್ ಬಿನೆ (1857-1911)

ಅಲ್‌ಫ್ರೆಡ್ ಬಿನೆ ಅಮೇರಿಕದಲ್ಲಿನ ನೈಸ್ ಎಂಬಲ್ಲಿ 1857 ರಲ್ಲಿ ಜನಿಸಿದರು. ಪ್ರಾಯೋಗಿಕ ಮನೋವಿಜ್ಞಾನಿಯಾಗಿ ಒರೆಗಳ ನಿರ್ಮಾಣ ಕ್ಷೇತ್ರದಲ್ಲಿ ಬಹಳ ಉಪಯುಕ್ತವಾದ ಕೆಲಸವನ್ನು ಮಾಡಿದ್ದಾರೆ. ಸೈಮನ್ ಎಂಬುವರ ಜೊತೆಗೂಡಿ 1905 ರಲ್ಲಿ ಮೊಟ್ಟಮೊದಲನೆಯ ಬುದ್ಧಿಶಕ್ತಿ ಒರೆಯನ್ನು ನಿರ್ಮಿಸಿದರು. ಇದಕ್ಕೆ ಬಿನೆ ಸೈಮನ್ ಅಳತೆ ಸಾಧನ ಎಂದು ಕರೆಯುತ್ತಾರೆ. ಇದನ್ನು 1908ರಲ್ಲಿ ಮತ್ತು 1911ರಲ್ಲಿ ಸಂಸ್ಕರಿಸಲಾಯಿತು. ಇವರು 1908ರಲ್ಲಿ ಮಾನಸಿಕ ವಯಸ್ಸಿನ ಕಲ್ಪನೆಯನ್ನು ಹೊರತಂದರು. ಪ್ರಸಿದ್ಧವಾದ ಸ್ಟಾನ್‌ಫರ್ಡ್ - ಬಿನೆ ಬುದ್ಧಿಶಕ್ತಿ ಒರೆ 1911 ರಲ್ಲಿ ಲೆವಿಸ್ ಎಮ್. ಟರ್ಮನ್ ಅವರಿಂದ ಪ್ರಕಟಿಸಲಾಯಿತು. ಬುದ್ಧಿಶಕ್ತಿ ಗುಣಾಂಕ ಮಾನಸಿಕ ವಯಸ್ಸು ಮತ್ತು ಕ್ರಮಗತ ವಯಸ್ಸಿನ ನಡುವಿನ ಪ್ರಮಾಣವೆಂದು ಎಂದು ಟರ್ಮನ್ ಪ್ರತಿಪಾದಿಸಿದನು.



David Wechsler

## ಡೇವಿಡ್ ವೆಷಲರ್ (1896 - 1981)

ಇವರು ಏಳು ಮಕ್ಕಳಲ್ಲಿ ಒಬ್ಬರಾಗಿ 1986ರಲ್ಲಿ ರುಮೇನಿಯದಲ್ಲಿನ ಲೆಸ್‌ಪೆಡಿಯಲ್ಲಿ ಜನಿಸಿದರು. ಬುದ್ಧಿಶಕ್ತಿ ಮತ್ತು ಬುದ್ಧಿಶಕ್ತಿ ಒರೆ ನಿರ್ಮಾಣ ಕ್ಷೇತ್ರದಲ್ಲಿ ಇವರು ಪ್ರಮುಖರೆಂದು ಹೆಸರು ಪಡೆದರು. 1939ರಲ್ಲಿ ಪ್ರಾರಂಭಿಸಿ ವೆಷಲರ್-ಬೆಲುವೆ ಒರೆಯನ್ನು ಪ್ರಕಟಿಸಿದರು. ಅವರು ಬುದ್ಧಿಶಕ್ತಿಯನ್ನು ವ್ಯಕ್ತಿಯ ವೈಯುಕ್ತಿಕ ವಾಸ್ತವಿಕ ಚಿಂತನೆ, ಉದ್ದೇಶ ಪೂರಿತ ಕ್ರಿಯೆ ಮತ್ತು ಪರಿಣಾಮಕಾರಿ ವ್ಯವಹಾರ – ಇವುಗಳ ಜಾಗತಿಕ ಕಲ್ಪನೆ ಎಂದು ಸೂತ್ರಿಸಿದರು.

## ಟರ್ಮನ್, ಲೀವೆಸ್ .ಎಮ್ (1877-1956)



Lewis Terman

ಇವರು 1910 ರಿಂದ 1942ರ ವರಗೆಗೆ ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಇವರು ಸ್ಟಾನ್‌ಫರ್ಡ್-ಬಿನೆ ಬುದ್ಧಿಶಕ್ತಿ ಒರೆಗಳ ನಿರ್ಮಾಪಕರೂ ಆಗಿದ್ದರು. ಈ ಒರೆಯನ್ನು ಅಮೆರಿಕನ್ ಶಾಲಾ ಮಕ್ಕಳ ಮಾದರಿಯ ಮೇಲೆ ಆದರ್ಶೀಕರಿಸಿದರು. ಇದರಲ್ಲಿ ಅನೇಕ ಹೊಸ ಪ್ರಶ್ನೆಗಳಿದ್ದವು. ಒರೆಯನ್ನು ಬುದ್ಧಿಶಕ್ತಿ ಗುಣಾಂಕ (1.Q) ದ ಆಧಾರದ ಮೇಲೆ ರೂಪಿಸಿ ಮಾಡಲಾಯಿತು. ಬಿನೆಯವರು ಮಾಡಿದಂತೆ ಮಾನಸಿಕ ವಯಸ್ಸಿನ ಆಧಾರದ ಮೇಲೆ ಮಾಡಲಿಲ್ಲ. ಟರ್ಮನ್ ಪ್ರತಿಭಾವಂತ ಮಕ್ಕಳ (ಬು.ಗು. 140ಕ್ಕಿಂತ ಹೆಚ್ಚು) ಅಧ್ಯಯನಕ್ಕೂ ಹೆಸರುವಾಸಿಯಾಗಿದ್ದಾರೆ. ಶಾಲೆ ಮತ್ತು ನಂತರದ ಜೀವನದಲ್ಲಿನ ಯಶಸ್ಸು, ಬುದ್ಧಿಶಕ್ತಿಯು ಮಟ್ಟದೊಡನೆ ಧನಾತ್ಮಕ ಸಂಬಂಧ ಪಡೆದಿದೆ ಎಂದು ಪ್ರತಿಪಾದಿಸಿದರು.



Scanned with OKEN Scanner

**ಪಾವ್‌ಲವ್, ಐವಾನ್ ಪೆಟ್ರೋವಿಚ್ (1849-1936)**

ಒಬ್ಬ ರಷ್ಯಾದೇಶದ ಮನೋವಿಜ್ಞಾನಿ. ಅವರ ಜೀವನದ ಕೆಲವು ಮುಖ್ಯ ಚಟುವಟಿಕೆಗಳಿಗೆ ಸಂಬಂಧಪಟ್ಟ ಸ್ವಯಂ ಪ್ರೇರಿತ ಸಿದ್ಧಾಂತ, ಮನೋವಿಜ್ಞಾನದ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿದೆ. ಅವರ ಪ್ರಯೋಗಶಾಲೆ ನಿಯಂತ್ರಿತ, ನಾಯಿಗೆ ಆಹಾರ ಕೊಟ್ಟು, ಜೊತೆಗೇ ಗಂಟೆ ಹೊಡೆಯುವ ಮತ್ತು ಮುಂದುವರೆದ ಅನುಬಂಧನ ಪ್ರಯೋಗಗಳು ಕಲಿಕೆಯ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿವೆ. 1904ರಲ್ಲಿ ಅವರು ಜೀರ್ಣಕ್ರಿಯಾ ಗ್ರಂಥಿಗಳ ಮೇಲೆ, ಶರೀರಶಾಸ್ತ್ರ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಮಾಡಿದ ಅಧ್ಯಯನಗಳಿಗೆ ನೊಬೆಲ್ ಪಾರಿತೋಷಕ ದೊರಕಿದೆ.

**ಬರ್ಟ್, ಸಿರಿಲ್ (1883-1971)**

ಇವರು ಒಬ್ಬ ಇಂಗ್ಲೆಂಡಿನ ಶಿಕ್ಷಣ ಮತ್ತು ಮನೋವಿಜ್ಞಾನ ತಜ್ಞರು. ಇವರು ಮುಖ್ಯವಾಗಿ ಶಿಕ್ಷಣದಲ್ಲಿ ಮತ್ತು ಮಾನಸಿಕ ಪರೀಕ್ಷಣದಲ್ಲಿ ಹೆಚ್ಚಿನ ಮತ್ತು ಗಮನೀಯ ಕೊಡಗೆಗಳನ್ನು ಸಲ್ಲಿಸಿದ್ದಾರೆ. ಆವರು ಬಿನೆ ಬುದ್ಧಿಶಕ್ತಿ ಒರೆಗಳನ್ನು ಆಂಗ್ಲ ಮಕ್ಕಳಿಗೆ ಹೊಂದುವಂತೆ ಭಾಷಾಂತರಿಸಿದ್ದಾರೆ. ಇವರು ಬಾಲಪರಾಧ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳ ಮೇಲೆ ಸಾಕಷ್ಟು ಪ್ರಕಟನೆಗಳನ್ನು ತಂದಿದ್ದಾರೆ. ಮನಸ್ಸಿನ ಅಂಶಗಳು (1941), ಬಾಲಾಪರಾಧಿ (1965), ಹಿಂದುಳಿದ ಮಗು (1950) ಇವು ಇದರ ಪ್ರಮುಖ ಪ್ರಕಟನೆಗಳು.

**ಎ ಬಿ ನ್‌ಗ್ಹಾಸ್, ಹರ್‌ಮನ್ (1850-1909)**

ಪ್ರಾಯೋಗಿಕ ಮನೋವಿಜ್ಞಾನದ ಅಧ್ಯಯನದಲ್ಲಿ ಪ್ರಮುಖರು. 1980ರಲ್ಲಿ ಜರ್ಮನಿಯಲ್ಲಿ ಮೊಟ್ಟಮದಲನೆಯ ಮುಖ್ಯವಾದ ಮನೋವಿಜ್ಞಾನ ಸಂಚಿಕೆಯನ್ನು ಹೊರತಂದರು. ಮಾನಸಿಕ ಘಟನೆಗಳಿಗೆ ಪ್ರಮಾಣಾತ್ಮಕ ಅಳತೆ, ಅದರಲ್ಲೂ ಸ್ಮೃತಿಗೆ ಸಂಬಂಧಪಟ್ಟಂತೆ ಹೊರತಂದಿರುವುದು ಅವರ ಮುಖ್ಯ ಕೊಡುಗೆ.

**ವರ್ದಿಮರ್, ಮ್ಯಾಕ್ಸ್ (1880-1943)**

ಇವು ಜೆಸ್ಟಾಲ್ಟ್ ಪಂಥಕ್ಕೆ ಸೇರಿದ ಮನೋವಿಜ್ಞಾನದ ವಿಭಾಗದ ಸ್ಥಾಪಕರು. ಇವರು ರಚನಾತ್ಮಕ ಮನೋವಿಜ್ಞಾನಿಗಳನ್ನೂ ಮತ್ತು ಅವರ ವಾದವಾದ ಎಲ್ಲ ಮನೋವಿಜ್ಞಾನಿಕ ಘಟನೆಗಳನ್ನು ಚಿಕ್ಕಚಿಕ್ಕ ಭಾಗಗಳಾಗಿ ವಿಂಗಡಿಸಬಹುದೆಂಬುದನ್ನೂ ಟೀಕಿಸಿದ್ದರು. ಸಮಗ್ರತೆ, ಭಾಗಗಳ ಒಟ್ಟುಗೂಡುವಿಕೆಗಿಂತ ಹೆಚ್ಚಿನದು ಎಂದು ಹೇಳಿದರು. ಒಂದು ಮನೋವೈಜ್ಞಾನಿಕ ಘಟನೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಎಲ್ಲ ಭಾಗಗಳನ್ನು ಒಟ್ಟಿಗೆ ತೆಗೆದುಕೊಂಡು ಅಧ್ಯಯನ ಮಾಡಬೇಕು ಎಂದು ಸೂಚಿಸಿದರು. ಇದೇ ಜೆಸ್ಟಾಲ್ಟ್ - ಸಮಗ್ರ ವಿನ್ಯಾಸ. ಇದೊಂದು ಜರ್ಮನ್ ಪದ.

**ಕೋಫ್ಕ್, ಕರ್ಟ್ (1886-1941)**

ಜೆಸ್ಟಾಲ್ಟ್ ಮನೋವಿಜ್ಞಾನ ಸ್ಥಾಪಕರಲ್ಲಿ ಒಬ್ಬರು. ಮೊದಲನೆ ಮಹಾಯುದ್ಧದಲ್ಲಿ ಅವರು ಮೆದುಳಿಗೆ ಗಾಯಗೊಂಡಿರುವ ರೋಗಿಗಳ ಅಧ್ಯಯನ ಮಾಡಿದರು. ಮನಸ್ಸಿನ ಬೆಳವಣಿಗೆ (1921), ಜೆಸ್ಟಾಲ್ಟ್ ಮನೋವಿಜ್ಞಾನ (1935) ಅವರು ಬರೆದ ಪುಸ್ತಕಗಳಲ್ಲಿ ಮುಖ್ಯವಾದುವು.



Scanned with OKEN Scanner

## ಕೊಹೆಲರ್, ವುಲ್ಫ್‌ಗ್ಯಾಂಗ್ (1890-1967)

ಜೆಸ್ಟಾಲ್ಟ್ ಮನೋವಿಜ್ಞಾನ ಸ್ಥಾಪಕರಲ್ಲಿ ಅತ್ಯಂತ ಕಿರಿಯವರು. ಅವರು ಜೆಸ್ಟಾಲ್ಟ್ 'ಮನೋವಿಜ್ಞಾನಿ' (1929), 'ಮನೋವಿಜ್ಞಾನದಲ್ಲಿ ಚಲನಾತ್ಮಕತೆ' (1940) ಎಂಬ ಪುಸ್ತಕಗಳನ್ನು ಬರೆದಿದ್ದಾರೆ.

## ಬಂಡೂರ, ಆಲ್ಬರ್ಟ್

ಸಾಮಾಜಿಕ ಕಲಿವಿನ ಸಿದ್ಧಾಂತದ ಪ್ರಾರಂಭಿಕರು. ಕಲಿವು ಪುನರ್ಬಲನ ತತ್ವಗಳಿಂದ ಮಾತ್ರವಲ್ಲ, ಮಾದರೀಕರಣದಿಂದಲೂ ಆಗಬಹುದು ಎಂದು ಈ ಸಿದ್ಧಾಂತ ತಿಳಿಸುತ್ತದೆ. ಜನರು ಇನ್ನೊಬ್ಬರನ್ನು ವೀಕ್ಷಿಸಿ ಹೊಸ ಅನುಕ್ರಿಯೆಗಳನ್ನು ಕಲಿಯುತ್ತಾರೆ ಎಂದು ಹೇಳಿದರು. ಇವರು ಕೆನಡಾದೇಶದ ಮನೋವಿಜ್ಞಾನಿ. ಅಮೆರಿಕದ, ಕ್ಯಾಲಿಫೋರ್ನಿಯದಲ್ಲಿರುವ ಸ್ಟಾನ್‌ಫೋರ್ಡ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದರು.

❋❋❋

# Glossary

| | | |
|---|---|---|
| 1. | Attention | – The Concentration of consciousness upon one object rather than another (Dumville) |
| 2. | Attitude | – A pre-disposition to react in a particular way a mental outlook. |
| 3. | Achievement Motivation | – An intrinsic motive to achieve |
| 4. | Case histroy | – Assembled data which re-constructs an individual's past in order to understand his present. |
| 5. | Cohesiveness | – Positive forces that holds a group together |
| 6. | Counselling | – A broad name for a wide variety of procedures for individuals to achieve adjustment. |
| 7. | Conditioning | – Process of learning whereby stimuli and responses become associated through training. |
| 8. | Educational Quotient | – The ratio of educational age to chronological age EA/CA x100. It is an index of educational achievement. |
| 9. | Guidance | – A variety of services which have the common objective of helping a person to become self – directed. |
| 10. | Introspection | – Observation by an individual of his own mental processes. |
| 11. | Inventory | – A Questionnaire having a number of items – representing a variety of situations which help to know the individuals generalised mode of response. |
| 12. | Insight | – The Situation as a whole is perceived by the learner and then he tries to put the factors together to solve the problem. – a flash. |
| 13. | Level of aspiration | – A self imposed standard against which a person judges his own performance. It may indicate his level of confidence. |



Scanned with OKEN Scanner

14. Maturation – Phase development which is related to the unfolding of the genetic characteristics.

15. Modelling – Identification with a personal model in imitation of a model.

16. Perception – The process of recognising or identifying something. Grasping the meaning of stimuli.

17. Programmed Learning – Learning that takes place through programming, through continuous reinforcing.

18. Rating scale – It is a device used to evaluate situations or characteristics that can occur or be present in varying degrees.

19. Reinforce – Strengthen through proper stimulus.

20. Self-concept – A person's view of himself – a full description of himself a person is capable of at a given time.

21. Self-image – The self one thinks oneself to be – a Complex concept of one's personality.

22. Sociometry – A technique used for studying relationship among the members of a group. Devised and propounded by Moreno.

23. Special education – Education designed to help learners with special needs to achieve highest possible self sufficiency.

24. Speech reading – Process of understanding a spoken message by observing the speaker's lip movement, facial expressions and gestures,

25. Self learning material – Material that helps the learner to learn independently.

26. Zygote – First of the pre-natal stages of development. It is formed at conception and results from the fertilisation of an egg by the sperm cell.

***



Scanned with OKEN Scanner

# Bibliography



| | Author | Name of the Book | Publisher/yr. of publication |
|---|---|---|---|
| 1. | Arnold Gesell Francis .L | The Child from five to ten | Harper and Row - 1963 |
| 2. | Arden .N Fanderson | Educational Psychology | MCGraw Hill and Co -1967 |
| 3. | Arthur Jersild etal. | Child Psychology | Prentrice Hall - 1978 |
| 4. | Dandapani .S | Advanced Educational Psychology. | Anmol Publications New Delhi - 2000 |
| 5. | Don. C. Dinkmeyer | Child Development the Emerging Self | Prentrice Hall - 1967 |
| 6. | Elizabeth Hurlock | Child Development | Mc Graw Hill - 1975 |
| 7. | Gene .R. Medinnus Ronald .C. Johnson | Child and adolescent Psychology | Johnwiley and Sons - 1980 |
| 8. | J.M. Fuster | Psychological Counselling in India | Macmillan and Co - 1964 |
| 9. | James .L. Mursell | Psychology for modern education | Sterling Publishers New Delhi - 1968 |
| 10. | Jean Piaget | The Origin of intelligence in the Child | Routledge and Kegan, London - 1966 |
| 11. | John .L. Phillips Jr. | The origin of intellect – Piaget's Theory | W.H. Frasman and Co. - 1969 |
| 12. | John .P. Decec co and William Crawford | The Psychology of learning and instruction. | Prentrice Hall - 1988 |
| 13. | Kamat .V.V. | Measuring intelligence of Indian children | Oxford univ Press. - 1940 |
| 14. | Kuppuswamy .B | Psychology and life | Media promoters and Pubishers Bombay - 1981 |
| 15. | Norman .A. Sprinthal and Richard .C. Sprinthal | Educational Psychology A developmental approach | Mc Graw Hill international edition - 1990. |
| 16. | Raymond .B. Cattel | Personality | Mc Graw Hill Book Company - 1950 |
| 17. | Robert .M.W. Travers. | Educational Psychology | Mac Millian and Co. -1973 |
| 18. | Robert .S. Ellis | Educational Psychology | Affiliated Fast west Press Pvt New Delhi - 1969 |





Scanned with OKEN Scanner

| | Author | Name of the Book | Publisher/yr. of publication |
|---|---|---|---|
| 19. | Ross Stranger | Psychology of Personality | Mac Graw Hill Co - 1948 |
| 20. | Samuel .A. Kirk | Educating exceptional children | oxford Publishing Co., - 1970. |
| 21. | Sharma .R.A. | Fundamentals of Educational Psychology | R. Lall Book Dept. Meerut - 1996 |
| 22. | Sharma .R.A. | Programmed Instruction | R. Lell Book Depot New Delhi - 1990 |
| 23. | Susan Isaacs | Children and Parents | Routledge and Kegan paul - 1948 - London |
| 24. | Susan Isaacs | The children we teach | university of London Press - 1961 |
| 25. | Uday Shankar | Exceptional Children | Sterling Publication - 1984 |
| 26. | Wendell Johnsen Spencer Brown etal | Speech handicapped school children | Harper and Brothers New York - 1962 |

Scanned with OKEN Scanner

# ಪರಾಮರ್ಶನ ಗ್ರಂಥಗಳು


| ಲೇಖಕರು | ಪುಸ್ತಕದ ಹೆಸರು | ಪ್ರಕಾಶಕರು |
|---|---|---|
| 1. ಡಾ|| ಕಾಶೀನಾಥ್ ಮತ್ತು ಇತರರು | ಬೋಧನಾಕಲಿಕೆ ಪ್ರಕ್ರಿಯೆಯಲ್ಲಿ ಮನೋ ವಿಜ್ಞಾನ | ಯುವಜನ ಸಾಹಿತ್ಯಾಧ್ಯಯನ ವೇದಿಕೆ. ಇಳಕಲ್ಲ. |
| 2. ಕೆ.ಜಿ. ಕುಲಕರ್ಣಿ | ಶೈಕ್ಷಣಿಕ ಮನೋವಿಜ್ಞಾನ | ವಿಜಯ ಪಬ್ಲಿಕೇಷನ್ಸ್, ಗದಗ |
| 3. ಎ.ವಿ. ಗೋವಿಂದರಾವ್ | ಶಿಕ್ಷಣದಲ್ಲಿ ಮನೋವಿಜ್ಞಾನ | ಮುಗಳಿ ಪ್ರಕಾಶನ, ಮೈಸೂರು |
| 4. ಎಚ್.ಎಸ್. ಉಮೇಶ್ | ಶೈಕ್ಷಣಿಕ ಮನೋವಿಜ್ಞಾನ | ಚಿತ್ತಾರ ಪ್ರಕಾಶನ ಮೈಸೂರು. |
| 5. ಎಂ. ಬಸವಣ್ಣ | ಶೈಕ್ಷಣಿಕ ಮನೋವಿಜ್ಞಾನ | ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ್ಯ, ಬೆಂಗಳೂರು. |
| 6. ಎ.ಎಸ್. ಧರಣೇಂದ್ರಯ್ಯ | ವಿಕಾಸ ಮನೋವಿಜ್ಞಾನ | ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |
| 7. ಪ್ರೊ. ಪಿ. ನಟರಾಜ್ | ವಿಕಾಸ ಮನೋವಿಜ್ಞಾನ | ಶ್ರೀನಿವಾಸ ಪ್ರಕಾಶನ, ಮೈಸೂರು |
| 8. ಬಿ.ಜಿ. ಮರಿಯಪ್ಪ | ಮನಶ್ಶಾಸ್ತ್ರ | ವಿದ್ಯಾರಣ್ಯ ಪ್ರಕಾಶನ, ಮೈಸೂರು |
| 9. ಡಾ|| ಎನ್. ಎಸ್. ವೀರಪ್ಪ | ಶಿಕ್ಷಣದಲ್ಲಿ ಮನೋವಿಜ್ಞಾನ | ಡಿ.ವಿ.ಕೆ. ಮೂರ್ತಿ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು |
| 10. ಡಾ|| ಎನ್. ಎಸ್. ವೀರಪ್ಪ | ಶಿಕ್ಷಣಶಾಸ್ತ್ರದ ಪಾರಿಭಾಷಿಕ ನಿಘಂಟು | ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು |
| 11. ಎಚ್. ಸೊರೆನ್‌ಸನ್ ಅನುವಾದ ಟಿ.ವಿ. ತಿಮ್ಮೇಗೌಡ | ಶಿಕ್ಷಣದಲ್ಲಿ ಮನೋವಿಜ್ಞಾನ | ಪ್ರಸಾರಾಂಗ ಮಾನಸಗಂಗೋತ್ರಿ, ಮೈಸೂರು |
| 12. ಎಚ್.ಎಂ. ಚಂದ್ರಾಚಾರ್ | ಶೈಕ್ಷಣಿಕ ಮನೋವಿಜ್ಞಾನ | ಅಶ್ವಿನಿ ಪ್ರಕಾಶನ ರಾಣೆಬೆನ್ನೂರು |
| 13. ಡಾ|| ಹೆಚ್.ವಿ. ಶಿವಕರಿಕರ ಮತ್ತು ಡಾ|| ಓ. ಬಸವಕುಮಾರಯ್ಯ | ಶೈಕ್ಷಣಿಕ ಮನೋವಿಜ್ಞಾನ | ಹಂಪಿ ಪ್ರಕಾಶನ ತರಳುಬಾಳು ಬಡಾವಣೆ, ದಾವಣಗೆರೆ |


Scanned with OKEN Scanner

# ಪದಸೂಚಿ

ಅನ್ವೇಷಣೆ – Quest
ಅಸಾಮಾನ್ಯ – Unusual
ಅರ್ಪಣಾ ಮನೋಭಾವ – Devotion
ಅಧಿಕ ಸಾಧನೆ – Overachievement
ಅಪೂರ್ಣ ಸಾಧನೆ – Underachievement
ಅಪೂರ್ಣ ಸಾಧಕ – underachiever
ಅಲ್ಪ ತೃಪ್ತ – Engaging
ಅಪಯಮಾಯೋಜನೆ – Maladjustment
ಅನುಕರಣೆ – Conformity
ಅನುಸರಣಾ ಸೇವೆ – Follow-up Service
ಭವಿಷ್ಯಸುವುದು – Prediction
ಅವಿರತ ಯತ್ನ – Perseverance
ಏಕ ಪ್ರಕಾರವಾದ – Steady
ಕಾರಕಗಳು – Factors
ಕೂಟಯುಗ – Gang age
ಗತಿ – Motor
ಕರಕೌಶಲ – Manual Dexterity
ಕಲ್ಪನೆ – Idea
ಕ್ರೋಢೀಕರಣ – Consolidation
ಚತುರ – Indonesia
ತೀರ್ಮಾನಗಳು – Inferences
ನಿರರ್ಗಳತೆ – Fluency
ನಮ್ಯತೆ – Flexibility
ದೂರದೃಷ್ಟಿ – Vision
ಪಾರಿಭಾಷಿಕ ಪದಗಳು – Terminologies
ವಿಚಲನಾ ಶೀಲತೆ – Variability
ಪ್ರತ್ಯಕ್ಷಾನುಭವ – Perception

ಪ್ರತ್ಯೇಕಿಸುವಿಕೆ – Separation
ಬಹುಮಾಧ್ಯಮ – Multimedia
ಬುದ್ಧಿಶಕ್ತಿ ಸೂಚ್ಯಾಂಕ – Intelligence Quotient (I
ಬಾಂಧವ್ಯ ಭಾವನೆ – Belongings
ಮನೋಗತ ಮಾಡಿಕೊಳ್ಳುವಿಕೆ – Assimilation
ಮೌಲಿಕತೆ – Originality
ಮೆದುಳನ್ನು ಕಾರ್ಯಪಟುತ್ವಗೊಳಿಸುವಿಕೆ – Brain Storming
ವಿನ್ಯಾಸ – Pattern
ವೇಗವರ್ಧನ – Acceleration
ವೀಕ್ಷಣಾ ಅನುಸೂಚಿ – observation Schedule
ಶೈಕ್ಷಣಿಕ ಸಂಹಿತಾರ್ಥಗಳು – Educational implifications
ಸ್ಥಳಾವಕಾಶ ಒದಗಿಸುವುದು – Accommodation
ಸ್ಕೀಮಾ – Schema
ಸಾಂಸರ್ಗಿಕ – Contagious
ಸ್ವಾಯತ್ತತೆ – Autonomous
ಸಮರೂಪತೆ – Symmetry
ಸಂಕಲ್ಪ – Determination
ಸಂವೇಗಾತ್ಮಕ ಸೂಚ್ಯಂಕ – Emotional quotient
ಸಂಕ್ಷಿಪ್ತ ಮಾಹಿತಿ – Skeletal Outline
ಹೊಂದಿಕೊಳ್ಳುವಿಕೆ – Adaptation
ಸಂಪದ್ಭರಿತ ಕಾರ್ಯಕ್ರಮ – Enrichment Programme
ಪ್ರಕ್ರಿಯೆ – Process
ಸಿದ್ಧಾಂತಗಳು – Theories
ಪ್ರಬುದ್ಧತೆ ಪರಿಪಕ್ವತೆ – Hatervity
ಉದ್ದೀಪನ – Stimulus
ಅನುಕ್ರಿಯೆ – Response

| | |
|---|---|
| ಅನುಬಂಧನ | Conditioning |
| ಒಳನೋಟ | Insight |
| ಪರಿಹಾರಾತ್ಮಕ ಕಾರ್ಯಕ್ರಮ | Remedial Programme |
| ಅಭಿಪ್ರೇರಣೆ | Motivation |
| ಪ್ರಕ್ಷೇಪಣಾ ತಂತ್ರಗಳು | Projective techniques |
| ವಿಭೇಧಾತ್ಮಕ | Differential |
| ಅಪಸಮಾಯೋಜನೆ | Maladjustment |
| ಆಶಾಭಂಗ | Frustration |
| ಮಾನಸಿಕ ಘರ್ಷಣೆಗಳು | Conflicts |
| ಆತಂಕ | Anxiety |
| ಉದ್ವೇಗ | Tension |
| ಮಾನಸಿಕ ಒತ್ತಡ | Stress |
| ಸರ್ವೇಕ್ಷಣ, ಸಮೀಕ್ಷೆ | Survey |
| ಸಲಹಾ ಸೇವೆ | Counselling |


ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ
ನಿರ್ದೇಶನಾಲಯ, ಬೆಂಗಳೂರು–
ಗ್ರಂಥಾಲಯ
ಪ. ಸಂಖ್ಯೆ PB-727
ದಿನಾಂಕ...........